ಶುಕ್ರವಾರ, ಸೆಪ್ಟೆಂಬರ್ 19, 2025| ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕಥಕಳಿ ಪ್ರದರ್ಶನ

ತಮಿಳುನಾಡಿನ ಚೆನ್ನೈನಲ್ಲಿ ಗುರುವಾರ ನಡೆದ ಸಾಂಸ್ಕೃತಿಕ ಉತ್ಸವದಲ್ಲಿ ಕಲಾವಿದರೊಬ್ಬರು ಕಥಕಳಿ ಪ್ರದರ್ಶನ ನೀಡಿದರು

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ

ಸೌಂದರ್ಯ ಮತ್ತು ಸಂಪ್ರದಾಯ
ಸಂಗಮಿಸುವ ಆ ಒಂದು ಕ್ಷಣ!

ರೇಷ್ಮೆ ಮತ್ತು ಆಭರಣ
@ ಒಂದೇ ಸ್ಥಳದಲ್ಲಿ

ಹೊಸೂರ್
ದಿ ಚೆನ್ನೈ ಸಿಲ್ಕ್ಸ್ & ಶ್ರೀ ಕುಮರನ್ ಜ್ಯುವೆಲರ್ಸ್

ದಸರಾ
ಮತ್ತು
ದೀಪಾವಳಿ
ಹಬ್ಬದ ಮಾರಾಟ

ನಮ್ಮ ಬ್ರಾಂಡ್ ನ್ಯೂ ಫ್ಯಾಷನೇಬಲ್ ಬಟ್ಟೆ ಹಾಗೂ
ಸಾಂಪ್ರದಾಯಕ ಕರಕುಶಲತೆಯಲ್ಲಿ ಅರಳಿರುವ ಅತ್ಯಾಕರ್ಷಕ
ಆಭರಣಗಳ ಸಂಗ್ರಹಗಳ ಜೊತೆಗೆ ಈ ವರ್ಣರಂಜಿತ
ಹಬ್ಬದ ಋತುವನ್ನು ಸಂಭ್ರಮದಿಂದ ಆಚರಿಸಿರಿ.

ಆಭರಣಗಳ ಮೇಲೆ
ವಿಶೇಷ ರಿಯಾಯಿತಿ

ಫ್ಲ್ಯಾಟ್
₹2000*
ಆಫರ್ ತಲಾ 8 ಗ್ರಾಮ್
ಚಿನ್ನಾಭರಣಗಳಿಗೆ

ಈ ಕೊಡುಗೆ 22.09.2025 ರಿಂದ 05.10.2025 ರವರೆಗೆ
ಹೊಸೂರ್ ಮತ್ತು ಮೈಸೂರು ಶಾಖೆಗಳಲ್ಲಿ ಮಾತ್ರ ಲಭ್ಯ

1 ಮಹಡಿ ಲಕ್ಷ ರೇಷ್ಮೆ ಸೀರೆಗಳು

ದಸರಾ ಹಬ್ಬದ
ಶುಭಾಶಯಗಳು

2 ವಿಶಾಲವಾದ ಮಹಡಿಗಳಲ್ಲಿ ಅತಿ ಹೆಚ್ಚು ಆಭರಣಗಳ ಸಂಗ್ರಹಗಳು

MORE SPACE COLLECTIONS

ಏಷ್ಯದ ಬೃಹತ್ ಟೆಕ್ಸ್‌ಟೈಲ್ ಶೋರೂಮ್ ಚೆನ್ನೈ ಸಿಲ್ಕ್ಸ್
ರೇಷ್ಮೆ ಉತ್ಪಾದನೆ ಮತ್ತು ಮಾರಾಟ ಕೇಂದ್ರ
ಇದೀಗ @ ಕಾಂಚಿಪುರಂ – ಶ್ರೀ ಕುಮರನ್ ತಂಗಮಳಿಗೈನ ಎರಡನೇ ಮಹಡಿ

ಸ್ಥಳ
ತಲುಪಲು
ಸ್ಕ್ಯಾನ್ ಮಾಡಿ

ಇಲೆಕ್ಟ್ರಾನಿಕ್ ಸಿಟಿಯಿಂದ 30 ನಿಮಿಷ

ದಿ ಚೆನ್ನೈ ಸಿಲ್ಕ್ಸ್™
ಸಂಭ್ರಮಾಚರಣೆಗಳು ಆರಂಭವಾಗಲಿ!

ಭಾರತದ ಅತ್ಯಂತ ವಿಶ್ವಾಸಾರ್ಹ ಜ್ಯುವೆಲರ್ಸ್
ಶ್ರೀ ಕುಮರನ್ ಜ್ಯುವೆಲರ್ಸ್
ಚಿನ್ನ • ವಜ್ರ • ಪ್ಲಾಟಿನಂ • ಬೆಳ್ಳಿ

ಹೊಸೂರ್ (ಟೆಕ್ಸ್‌ಟೈಲ್ & ಜ್ಯುವೆಲ್ಲರಿ) : ಬೆಂಗಳೂರು ಹೆದ್ದಾರಿ. 9677761978 9167527777
ಗ್ರಾಹಕ ಸೇವಾ ಕೇಂದ್ರ : ಎಎಸ್‌ಎಲ್ ಪ್ಲಾಜಾ, ಬಸ್ ನಿಲ್ದಾಣದ ಎದುರು, ಹೊಸೂರ್. 7845750888
ಮೈಸೂರು (ಜ್ಯುವೆಲ್ಲರಿ) : ಬಿ ಎನ್ ರಸ್ತೆ, ಲಷ್ಕರ್ ಮೊಹಲ್ಲಾ (ಸಬರ್ಬನ್ ಬಸ್ ನಿಲ್ದಾಣದ ಬಳಿ). 0821–2418916, 9491685000
ಕಾಂಚಿಪುರಂ (ಜ್ಯುವೆಲ್ಲರಿ & ಸಿಲ್ಕ್) : ವೆಸ್ಟ್ ರಾಜಾ ಸ್ಟ್ರೀಟ್. 044 27234916, 9566743916, 9003796888

ಕರ್ನಾಟಕ • ತೆಲಂಗಾಣ • ತಮಿಳನಾಡು • ಪುದುಚೆರಿ

ಆರ್.ವಿ. ಟೂರ್ಸ್ ಅಂಡ್ ಟ್ರಾವೆಲ್ಸ್ ಪ್ರೈ. ಲಿ.

ದಸರಾ-ದೀಪಾವಳಿ ಸ್ಪೆಷಲ್ ಧಮಾಕಾ ಆಫರ್

25 YEARS OF TRUST

Book now @ 9154225655

ಕಾಶಿ-ಅಯೋಧ್ಯ-ಪ್ರಯಾಗ್‌ರಾಜ್

3 Nights / 4 Days

Only @ 25,999/-

with Flight | AC Vehicle | AC Room | Breakfast

Domestic Tour Packages

ಶಿರಡಿ 2N / 3D (ಫ್ಲೈಟ್ ಪ್ಯಾಕೇಜ್) ₹24,999/-

ನೇಪಾಳ-ಮುಕ್ತಿನಾಥ 4N / 5D (ಫ್ಲೈಟ್ ಪ್ಯಾಕೇಜ್) ₹49,999/-

ಗುಜರಾತ್ 5N / 6D (ಫ್ಲೈಟ್ ಪ್ಯಾಕೇಜ್) ₹36,999/-

ಅಂಡಮಾನ್ 4N / 5D (ಫ್ಲೈಟ್ ಪ್ಯಾಕೇಜ್) ₹45,999/-

International Tour Packages

ಸಿಂಗಾಪುರ್-ಮಲೇಷಿಯಾ 4N / 5D (ಫ್ಲೈಟ್ ಪ್ಯಾಕೇಜ್) ₹89,999/-

ಬ್ಯಾಂಕಾಕ್-ಪಟ್ಟಾಯ 4N / 5D (ಫ್ಲೈಟ್ ಪ್ಯಾಕೇಜ್) ₹45,999/-

ಶ್ರೀಲಂಕಾ 5N / 6D (ಫ್ಲೈಟ್ ಪ್ಯಾಕೇಜ್) ₹57,000/-

ದುಬೈ 4N / 5D (ಫ್ಲೈಟ್ ಪ್ಯಾಕೇಜ್) ₹97,500/-

ಗುವಾಹಟಿ	3N/4D (ಫ್ಲೈಟ್ ಪ್ಯಾಕೇಜ್)	34,999/-	ಫುಕೆಟ್-ಕ್ರಾಬಿ	4N/5D (ಫ್ಲೈಟ್ ಪ್ಯಾಕೇಜ್)	69,999/-
ಒಡಿಶಾ	4N/5D (ಫ್ಲೈಟ್ ಪ್ಯಾಕೇಜ್)	27,999/-	ಬಾಲಿ	4N/5D (ಫ್ಲೈಟ್ ಪ್ಯಾಕೇಜ್)	79,999/-
ಗ್ಯಾಂಗ್ಟಾಕ್-ಡಾರ್ಜಿಲಿಂಗ್	4N/5D (ಫ್ಲೈಟ್ ಪ್ಯಾಕೇಜ್)	35,999/-	ಮಾಲ್ಡೀವ್ಸ್	4N/5D (ಫ್ಲೈಟ್ ಪ್ಯಾಕೇಜ್)	85,999/-
ಶ್ರೀನಗರ-ಕಾಶ್ಮೀರ	4N/5D (ಫ್ಲೈಟ್ ಪ್ಯಾಕೇಜ್)	39,999/-	ಆಂಸ್ಟರ್ಡ್ಯಾಮ್	3N/4D (ಸ್ಪೆಷಲ್ ಪ್ಯಾಕೇಜ್)	85,999/-
ತಮಿಳುನಾಡು-ರಾಮೇಶ್ವರಂ	4N/5D (ಫ್ಲೈಟ್ ಪ್ಯಾಕೇಜ್)	29,999/-	ವಿಯೆಟ್ನಾಂ	4N/5D (ಸ್ಪೆಷಲ್ ಪ್ಯಾಕೇಜ್)	99,999/-
ಗೋವಾ	3N/4D (ಫ್ಲೈಟ್ ಪ್ಯಾಕೇಜ್)	19,999/-	ಆಸ್ಟ್ರೇಲಿಯಾ-ನ್ಯೂಜಿಲೆಂಡ್	15N/16D (ಫ್ಲೈಟ್ ಪ್ಯಾಕೇಜ್)	5,30,000/-
ಕೇರಳ	3N/4D (ಫ್ಲೈಟ್ ಪ್ಯಾಕೇಜ್)	25,999/-	ಯುರೋಪ್	12N/13D (ಫ್ಲೈಟ್ ಪ್ಯಾಕೇಜ್)	2,99,999/-
ರಾಜಸ್ಥಾನ	4N/5D (ಫ್ಲೈಟ್ ಪ್ಯಾಕೇಜ್)	27,999/-	ಜಪಾನ್	9N/10D (ಫ್ಲೈಟ್ ಪ್ಯಾಕೇಜ್)	3,50,000/-

Note: +5% GST for Domestic & +5% GST +5% TCS for International Tour Packages Applicable

9154225673,9154225675

R.V. TOURS AND TRAVELS PVT. LTD.

VARSHA ARCADA, 313, Bellary Rd, next to SUB-REGISTAR OFFICE, Near CBI Office, Ganganagar, Bengaluru- 560032

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೇನೆ ಸೇರಿ ದೇಶ ಸೇವೆ ಮಾಡಿ

ಸೇನಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾಣ್ ಗುರುವಾರ ರಾಂಚಿಯಲ್ಲಿ ಶಾಲಾ ಮಕ್ಕಳೊಂದಿಗೆ ಸಂವಾದ ನಡೆಸಿ, 'ಸೇನೆಯಲ್ಲಿ ಸ್ವಜನ ಪಕ್ಷಪಾತಕ್ಕೆ ಅವಕಾಶವಿಲ್ಲ. ದೇಶ ಸೇವೆ ಮಾಡಲು ನೀವು ಸೇನೆಗೆ ಸೇರಬೇಕು' ಎಂದು ಹುರಿದುಂಬಿಸಿದರು

ತಾರಾ ಜೋಡಿ

ಮುಂಬೈನ ನೀತಾ ಮುಕೇಶ್ ಅಂಬಾನಿ ಕಲ್ಚರಲ್ ಸೆಂಟರ್‌ನಲ್ಲಿ ನಡೆದ 'ನೆಟ್‌ಫ್ಲಿಕ್ಸ್' ಸರಣಿಯೊಂದರ ಪ್ರೀಮಿಯರ್‌ನಲ್ಲಿ ಬಾಲಿವುಡ್ ತಾರಾ ದಂಪತಿ ಕಾಜೋಲ್ - ಅಜಯ್ ದೇವಗನ್ ಪಾಲ್ಗೊಂಡಿದ್ದರು

ಸೆನ್ಸೆಕ್ಸ್ 83,013 | ನಿಫ್ಟಿ 25,423 | $/₹88.20 | ಚಿನ್ನ (Std. 10g) ₹1,15,200 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,33,700 (ಬೆಂಗಳೂರು)

'ಹಿಂದೂ ಕ್ರೈಸ್ತ' ಉಲ್ಲೇಖಕ್ಕೆ ತಡೆ

ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ- ಶೈಕ್ಷಣಿಕ ಸಮೀಕ್ಷೆಗಾಗಿ ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿರುವ ಜಾತಿ ಪಟ್ಟಿಯಲ್ಲಿ ಹಿಂದೂ ಜಾತಿ ಹೆಸರಿನ ಮುಂದೆ ಕ್ರಿಶ್ಚಿಯನ್ ಪದ, ಹೊಸ ಜಾತಿಗಳ ಉಲ್ಲೇಖದ ಬಗ್ಗೆ ಸಚಿವರೇ ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಹಲವು ಸಚಿವರು, ಈ ಬಗ್ಗೆ ತಮ್ಮ ಆಕ್ಷೇಪ ವ್ಯಕ್ತಪಡಿಸಿದರು. ಹಲವು ಹೊತ್ತು ಚರ್ಚೆ ನಡೆಯಿತು. ಜಾತಿ ಹೆಸರಿನ ಮುಂದೆ ಕ್ರಿಶ್ಚಿಯನ್ ಪದ ಇರುವ ಪಟ್ಟಿಯನ್ನು ತೆಗೆಯುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದರು ಎಂದು ಮೂಲಗಳು ಹೇಳಿವೆ.

ಜಾತಿ ಪಟ್ಟಿ ಕುರಿತು ಉಂಟಾಗಿರುವ ಗೊಂದಲದ ಬಗ್ಗೆ ಸಭೆ ನಡೆಸಿ ತೀರ್ಮಾನವನ್ನು ತಮಗೆ ತಿಳಿಸುವಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಎಚ್.ಕೆ.ಪಾಟೀಲ, ಎಂ.ಬಿ.ಪಾಟೀಲ ಸೇರಿ ಕೆಲವು ಸಚಿವರಿಗೆ ಜವಾಬ್ದಾರಿ ವಹಿಸಿದರು.

▶6

> **ಸಾಧಕ-ಭಾದಕಗಳ ಬಗ್ಗೆ ಆಯೋಗದ ಜೊತೆ ಚರ್ಚೆ ಆಗಿದೆ. ಮುಖ್ಯಮಂತ್ರಿಯವರು ಈ ಬಗ್ಗೆ ತೀರ್ಮಾನಿಸುತ್ತಾರೆ**
> **ಶಿವರಾಜ ತಂಗಡಗಿ**
> ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ

> **ನಾವು ಯಾವುದೇ ಸ್ಪಷ್ಟೀಕರಣ ನೀಡಿಲ್ಲ. ಅಲ್ಲದೆ, ಈಗ ನಾನು ಯಾವುದೇ ಪ್ರತಿಕ್ರಿಯೆ ಕೊಡುವ ಪರಿಸ್ಥಿತಿಯಲ್ಲಿಯೂ ಇಲ್ಲ**
> **ಮಧುಸೂದನ ನಾಯ್ಕ**
> ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ

ಸಮೀಕ್ಷೆ ಮುಂದೂಡಲು ಸಚಿವರ ಮನವಿ

'ಪೂರ್ವಸಿದ್ಧತೆ ಇಲ್ಲದೆ ತರಾತುರಿಯಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಆರಂಭಿಸಿರುವುದು ಎಲ್ಲ ಗೊಂದಲಗಳಿಗೆ ಕಾರಣವಾಗಿದೆ. ಹೀಗಾಗಿ, ಈ ಸಮೀಕ್ಷೆಯನ್ನು ಮುಂದೂಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಚಿವರು ಮನವಿ ಮಾಡಿದ್ದಾರೆ.

ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಡೆದ ಸಚಿವರ ಸಭೆಯಲ್ಲಿ ಈ ಕುರಿತು ಸುದೀರ್ಘ ಚರ್ಚೆ ನಡೆಯಿತು. ಸಭೆಯಲ್ಲಿ ಹಾಜರಿದ್ದ ಹಿಂದುಳಿದ ಆಯೋಗದ ಪ್ರತಿನಿಧಿಗಳು, 'ಜಾತಿಗಳನ್ನು ನಾವು ಸೃಷ್ಟಿ ಮಾಡಿಲ್ಲ. ಹಿಂದಿನ ಆಯೋಗಗಳು ಮಾಡಿದ್ದ ಜಾತಿ ಪಟ್ಟಿಯಲ್ಲಿಯೇ ಈ ರೀತಿಯ ಜಾತಿ ಹೆಸರುಗಳಿವೆ. ಅದನ್ನೇ ಮುಂದುವರಿಸಿದ್ದೇವೆ. ಜನರ ಅಹವಾಲು ಆಲಿಸಿದ ನಂತರ ಸಮೀಕ್ಷೆಗೆ ಜಾತಿ ಪಟ್ಟಿ ಸಿದ್ಧಪಡಿಸಲಾಗಿದೆ' ಎಂದು ಸ್ಪಷ್ಟನೆ ನೀಡಿದರು.

'ಹಿಂದೂ ಜಾತಿಗಳ ಹೆಸರಿನ ಜೊತೆ ಕ್ರಿಶ್ಚಿಯನ್ ಪದ ಸೇರಿಸಿದ ಕ್ರಮ ಸರಿಯಲ್ಲ. ಅಧಿಸೂಚನೆ ಹೊರಡಿಸಿ, ಅಧಿಕೃತವಾಗಿ ಪ್ರಕಟಿಸಿದ ಜಾತಿಗಳು ಮಾತ್ರ ಪಟ್ಟಿಯಲ್ಲಿ ಇರಬೇಕು. ಮತಾಂತರಗೊಂಡವರನ್ನೆಲ್ಲ ಪ್ರತ್ಯೇಕ ಕಾಲಂ ಮಾಡಿ ಗುರುತಿಸುವುದು ಒಳಿತು' ಎಂದು ಕೆಲವು ಸಚಿವರು ಸಲಹೆ ನೀಡಿದರು. ಡಿ.ಕೆ. ಶಿವಕುಮಾರ್ ಜೊತೆಗಿನ ಸಭೆಯ ಬಳಿಕ ಸಚಿವ ಶಿವರಾಜ ತಂಗಡಗಿ ಅವರು ಮಧುಸೂದನ್ ಆರ್. ನಾಯ್ಕ್ ಮತ್ತು ಆಯೋಗದ ಸದಸ್ಯರ ಜೊತೆ ಪ್ರತ್ಯೇಕ ಸಭೆ ನಡೆಸಿದರು.

ಎಲ್ಲರಿಗೂ ನ್ಯಾಯ ಒದಗಿಸಲು ಸಮೀಕ್ಷೆ: ಡಿ.ಕೆ. ಶಿವಕುಮಾರ್

'ಸಮೀಕ್ಷೆಯ ಕುರಿತು ಸಾರ್ವಜನಿಕರ ಅಭಿಪ್ರಾಯ ಮತ್ತು ಬಿಜೆಪಿಯವರ ಅಪಪ್ರಚಾರದ ಬಗ್ಗೆ ನಾವು ಚರ್ಚೆ ಮಾಡಿದ್ದೇವೆ. ನಮ್ಮ ಪಕ್ಷ, ನಮ್ಮ ಸರ್ಕಾರವು ಯಾವುದೇ ಸಮಾಜವನ್ನು ವಿಭಜಿಸಲು ಇಚ್ಛಿಸುವುದಿಲ್ಲ. ಎಲ್ಲರಿಗೂ ನ್ಯಾಯ ಒದಗಿಸಿಕೊಡುವ ಉದ್ದೇಶದಿಂದ ಸಮೀಕ್ಷೆ ನಡೆಸುತ್ತಿದ್ದೇವೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಸಚಿವರ ಜೊತೆಗಿನ ಸಭೆಯ ಬಳಿಕ ಮಾತನಾಡಿದ ಅವರು, 'ಹಿಂದುಳಿದ ವರ್ಗಗಳ ಆಯೋಗವು ಕಾನೂನು ಚೌಕಟ್ಟಿನಲ್ಲಿ ಸಮೀಕ್ಷೆ ಮೂಲಕ ಸಾರ್ವಜನಿಕರಿಂದ ಮಾಹಿತಿ ಪಡೆಯಲಿದೆ. ಸಾರ್ವಜನಿಕರು ತಮ್ಮ ಅಭಿಪ್ರಾಯ ಹೇಳಿಕೊಳ್ಳಲು ಅವಕಾಶ ಕಲ್ಪಿಸಿದ್ದೇವೆ. ಅನೇಕ ಸಮುದಾಯದವರು ತಮಗೆ ಪ್ರತ್ಯೇಕ ಗುರುತು ಬೇಕು ಎಂದು ಕೇಳಿದ್ದಾರೆ. ಆದರೆ, ಈ ಬಗ್ಗೆ ಕೆಲವರು ಆಕ್ಷೇಪ ಸಲ್ಲಿಸಿದ್ದಾರೆ. ನಾವು ಎಲ್ಲರ ಅಭಿಪ್ರಾಯ ಸಂಗ್ರಹಿಸುತ್ತಿದ್ದೇವೆ. ರಾಜಕೀಯವಾಗಿ ಮಾತನಾಡುವವರ ಬಗ್ಗೆ ನಾವು ತಲೆಕೆಡಿಸಿಕೊಳ್ಳುವುದಿಲ್ಲ. ಈ ಬಗ್ಗೆ ಮುಖ್ಯಮಂತ್ರಿಯ ಜೊತೆ ಚರ್ಚಿಸಿ ಅಂತಿಮ ತೀರ್ಮಾನ ಮಾಡುತ್ತೇವೆ' ಎಂದರು.

ಮೇಘಸ್ಫೋಟದ ಬಳಿಕ...

ಪಿಟಿಐ ಚಿತ್ರ

ಉತ್ತರಾಖಂಡದ ಡೆಹ್ರಾಡೂನ್ ಜಿಲ್ಲೆಯ ಮಾಲದೇವತಾ ಪ್ರದೇಶವು ಮೇಘಸ್ಫೋಟ ಹಾಗೂ ಭಾರಿ ಮಳೆಯಿಂದ ಹಾನಿಗೀಡಾಗಿದ್ದು ಜನರು ವಿವಿಧ ಸಾಮಗ್ರಿಗಳನ್ನು ಸುರಕ್ಷಿತ ಸ್ಥಳದತ್ತ ಕೊಂಡೊಯ್ಯುತ್ತಿರುವುದು ಗುರುವಾರ ಕಂಡು ಬಂತು

ಪಾಕ್ – ಸೌದಿ ರಕ್ಷಣಾ ಒಪ್ಪಂದ

ರಿಯಾದ್ (ಎಎಫ್‌ಪಿ): ಪಾಕಿಸ್ತಾನ ಮತ್ತು ಸೌದಿ ಅರೇಬಿಯಾ ರಕ್ಷಣಾ ಒಪ್ಪಂದಕ್ಕೆ ಬುಧವಾರ ಸಹಿ ಹಾಕಿವೆ. 'ಉಭಯ ದೇಶಗಳಲ್ಲಿ ಯಾರ ವಿರುದ್ಧ ದಾಳಿ ನಡೆದರೂ ಅದನ್ನು ಎರಡೂ ದೇಶಗಳ ಮೇಲೆ ನಡೆದ ದಾಳಿ ಎಂದೇ ಪರಿಗಣಿಸಿ ಒಟ್ಟಾಗಿ ಪ್ರತಿರೋಧಿಸಲಾಗುವುದು' ಎಂದು ಜಂಟಿ ಪ್ರಕಟಣೆಯಲ್ಲಿ ತಿಳಿಸಿವೆ.

ನೆರೆಯ ಕತಾರ್‌ನಲ್ಲಿ ಹಮಾಸ್ ಮುಖಂಡರನ್ನು ಗುರಿಯಾಗಿಸಿ ಇಸ್ರೇಲ್ ದಾಳಿ ನಡೆಸಿದ ಬೆನ್ನಲ್ಲೇ, ಪಾಕಿಸ್ತಾನ ಮತ್ತು ಸೌದಿ ಅರೇಬಿಯಾ ಈ ಒಪ್ಪಂದಕ್ಕೆ ಬಂದಿವೆ. ಕೊಲ್ಲಿ ರಾಷ್ಟ್ರಗಳು ದೀರ್ಘಕಾಲದಿಂದ ಭದ್ರತೆಗಾಗಿ ಅಮೆರಿಕವನ್ನು ಅವಲಂಬಿಸಿದ್ದು, ಕತಾರ್ ಮೇಲೆ ಇಸ್ರೇಲ್ ನಡೆಸಿದ ದಾಳಿಯು ಈ ದೇಶಗಳಿಗೆ ಎಚ್ಚರಿಕೆ ಸಂದೇಶ ರವಾನಿಸಿದೆ ಎಂದೇ ಹೇಳಲಾಗುತ್ತಿದೆ.

ಸೌದಿ ಅರೇಬಿಯಾದ ಯುವರಾಜ ಮಹಮ್ಮದ್ ಬಿನ್ ಸಲ್ಮಾನ್ ಮತ್ತು ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ರಕ್ಷಣಾ ಒಪ್ಪಂದಕ್ಕೆ ಸಹಿ ಹಾಕಿದರು. ಉಭಯ ದೇಶಗಳ ನಡುವೆ ರಕ್ಷಣಾ ಸಹಕಾರ ಬಲಪಡಿಸುವುದು ಮತ್ತು ಯಾರ ಮೇಲೆ ದಾಳಿ ನಡೆದರೂ ಅದನ್ನು ಜಂಟಿಯಾಗಿ ತಡೆಯುವುದು ಈ ರಕ್ಷಣಾ ಕಾರ್ಯತಂತ್ರದ ಪ್ರಮುಖ ಅಂಶಗಳಾಗಿವೆ.

ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಮೇ 7ರಿಂದ 10ರವರೆಗೆ ಭಾರತ–ಪಾಕ್ ನಡುವೆ ನಾಲ್ಕು ದಿನ ಸೇನಾ ಸಂಘರ್ಷ ನಡೆದಿತ್ತು. ಈ ಸಂದರ್ಭದಲ್ಲಿ ಅಣ್ವಸ್ತ್ರ ದಾಳಿಯ ಬಗ್ಗೆ ಚರ್ಚೆಗಳು ನಡೆದಿದ್ದವು. ಭಾರತ –ಪಾಕ್ ಸಂಘರ್ಷ ನಿಲ್ಲಿಸಿದ್ದು ತಾವು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದರು. ಸೌದಿ ಅರೇಬಿಯಾವೂ ಸೇನಾ ಸಂಘರ್ಷ ನಿಲ್ಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾಗಿ ಹೇಳಿಕೊಂಡಿತ್ತು.

▶6

ರಾಜತಾಂತ್ರಿಕ ನೀತಿಯ ವೈಫಲ್ಯ: ಕಾಂಗ್ರೆಸ್

'ಪಾಕಿಸ್ತಾನ ಮತ್ತು ಸೌದಿ ಅರೇಬಿಯಾ ನಡುವಿನ 'ರಕ್ಷಣಾ ಕಾರ್ಯತಂತ್ರ'ವು ಭಾರತದ ರಾಷ್ಟ್ರೀಯ ಭದ್ರತೆಯ ಮೇಲೆ ಗಂಭೀರ ಪರಿಣಾಮ ಬೀರುತ್ತದೆ ಮತ್ತು ಇದು ಬಿಜೆಪಿ ಸರ್ಕಾರದ ರಾಜತಾಂತ್ರಿಕ ನೀತಿಯ ವೈಫಲ್ಯ' ಎಂದು ಕಾಂಗ್ರೆಸ್ ಟೀಕಿಸಿದೆ.

'ಪ್ರಧಾನಿ ಮೋದಿ ಅವರ 'ವೈಯಕ್ತಿಕ ವರ್ಚಸ್ಸಿನ ರಾಜನೀತಿ'ಗೆ ಆಗಿರುವ ಹಿನ್ನಡೆ ಇದು ಎಂದು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

▶6

> **ಪಾಕಿಸ್ತಾನ–ಸೌದಿ ಅರೇಬಿಯಾ ರಕ್ಷಣಾ ಒಪ್ಪಂದವು ಭಾರತದ ರಾಷ್ಟ್ರೀಯ ಭದ್ರತೆ, ಪ್ರಾದೇಶಿಕ ಮತ್ತು ಜಾಗತಿಕ ಸ್ಥಿರತೆಯ ಮೇಲೆ ಬೀರಬಹುದಾದ ಪರಿಣಾಮಗಳ ಕುರಿತು ಅಧ್ಯಯನ ನಡೆಸಲಾಗುವುದು**
> **ರಣಧೀರ್ ಜೈಸ್ವಾಲ್,** ವಿದೇಶಾಂಗ ವ್ಯವಹಾರಗಳ ವಕ್ತಾರ

ಚಿನಕುರುಳಿ
ಪ್ರಕಾಶ್ ಶೆಟ್ಟಿ

ಧರ್ಮಸ್ಥಳ: ನೇತ್ರಾವತಿ ಸ್ನಾನಘಟ್ಟದ ಪಕ್ಕದ ಬಂಗ್ಲೆಗುಡ್ಡೆ ಕಾಡಿನಲ್ಲಿ ಶೋಧ

'7 ಬುರುಡೆ, ನೂರಾರು ಮೂಳೆ ಪತ್ತೆ'

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧಗಳಲ್ಲಿನ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂದು ಆರೋಪಿಸಲಾದ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್ಐಟಿ) ಧರ್ಮಸ್ಥಳದ ನೇತ್ರಾವತಿ ಸ್ನಾನಘಟ್ಟದ ಪಕ್ಕದ ಬಂಗ್ಲೆಗುಡ್ಡೆಯ ಕಾಡಿನಲ್ಲಿ ಶೋಧ ಕಾರ್ಯ ನಡೆಸಿದ್ದು, ಈ ವೇಳೆ ಒಟ್ಟು ಏಳು ತಲೆಬುರುಡೆಗಳು ಹಾಗೂ ಬಹಳಷ್ಟು ಮೂಳೆಗಳು ನೆಲದ ಮೇಲೆ ಸಿಕ್ಕಿವೆ ಎಂದು ಮೂಲಗಳು ತಿಳಿಸಿವೆ.

ಎಸ್ಐಟಿಯವರು ಬುಧವಾರ ಹಾಗೂ ಗುರುವಾರ ಶೋಧ ನಡೆಸಿದ್ದರು. ಈ ವೇಳೆ ಒಟ್ಟು ಒಂಬತ್ತು ಕಡೆ ಮೃತದೇಹಗಳ ಅವಶೇಷಗಳು ಕಂಡುಬಂದಿದ್ದವು. ಅವುಗಳ ಪೈಕಿ ಐದು ಸ್ಥಳಗಳಲ್ಲಿ ಸಿಕ್ಕಿದ್ದ ಐದು ತಲೆ ಬುರುಡೆಗಳು ಹಾಗೂ ನೂರಾರು ಮೂಳೆಗಳನ್ನು ಬುಧವಾರವೇ ಎಸ್ಐಟಿ ವಶಕ್ಕೆ ಪಡೆದಿತ್ತು. ಗುರುವಾರ ಇನ್ನುಳಿದ ಕಡೆಗಳಲ್ಲಿದ್ದ ಎರಡು ತಲೆಬುರುಡೆಗಳು ಹಾಗೂ ಮೂಳೆಗಳನ್ನು ವಶಕ್ಕೆ ಪಡೆದಿದೆ ಎಂದು ಗೊತ್ತಾಗಿದೆ.

'ಶೋಧ ಮುಗಿದಿಲ್ಲ. ಹಾಗಾಗಿ ಎಷ್ಟು ಮೃತದೇಹಗಳ ಮೂಳೆ ಪತ್ತೆಯಾಗಿವೆ ಎಂದು ಹೇಳಲಾಗದು' ಎಂದು ಎಸ್ಐಟಿ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

▶4

ಒಂದು ಮೃತದೇಹದ ಗುರುತು ಪತ್ತೆ?

ನೇತ್ರಾವತಿ ಸ್ನಾನಘಟ್ಟದ ಪಕ್ಕದ ಕಾಡಿನಲ್ಲಿ ಸಿಕ್ಕಿರುವ ಮೃತದೇಹಗಳ ಅವಶೇಷಗಳಲ್ಲಿ ಒಂದು ಮೃತದೇಹದ ಗುರುತು ಪತ್ತೆಯಾಗಿದೆ ಎಂದು ಗೊತ್ತಾಗಿದೆ.

ಮೃತದೇಹದ ಅವಶೇಷದ ಜೊತೆ ಗುರುತಿನ ಚೀಟಿಯೂ ಸಿಕ್ಕಿತ್ತು. ಅದರಲ್ಲಿದ್ದ ವಿಳಾಸದ ಪ್ರಕಾರ ಅದು ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲ್ಲೂಕಿನ ಯು.ಬಿ. ಅಯ್ಯಪ್ಪ ಅವರದು ಎಂಬ ಪ್ರಾಥಮಿಕ ಮಾಹಿತಿ ಸಿಕ್ಕಿದೆ. ಈ ಬಗ್ಗೆ ಇನ್ನಷ್ಟೇ ಖಾತರಿಪಡಿಸಿಕೊಳ್ಳಬೇಕಿದೆ ಎಂದು ಮೂಲಗಳು ತಿಳಿಸಿವೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಪ್ರಮಾಣದಲ್ಲಿ ಮಳೆ ಆಗಲಿದೆ

ಕೈಮಗ್ಗ, ಕರಕುಶಲ ಉತ್ಪನ್ನಗಳ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದ ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ(ಬಿಐಸಿ) ಇದೇ 19ರಿಂದ 21ರವರೆಗೆ ‘ನೈಸರ್ಗಿಕ ಬಣ್ಣ ಮತ್ತು ಕೈ ಮಗ್ಗ ಹಾಗೂ ಕರಕುಶಲ ವಸ್ತುಗಳ ವಿಶೇಷ ಉತ್ಸವ’ವನ್ನು ಆಯೋಜಿಸಲಾಗಿದೆ.

ಇಂಡಿಯಾ ಹ್ಯಾಂಡ್‌ಮೇಡ್ ಕಲೆಕ್ಟಿವ್ ಸಂಸ್ಥೆಯ ನೇತೃತ್ವದಲ್ಲಿ ನಡೆಯುತ್ತಿರುವ ಉತ್ಸವದಲ್ಲಿ ನೈಸರ್ಗಿಕ ಬಣ್ಣಗಳಿಂದ ತಯಾರಿಸಿದ ವೈವಿಧ್ಯಮಯ ಬಟ್ಟೆಗಳು, ಉಡುಪುಗಳು, ಟವೆಲ್ ಮತ್ತು ಇತರ ಗೃಹಾಲಂಕಾರಿಕ ವಸ್ತ್ರಗಳ ಪ್ರದರ್ಶನ ಮತ್ತು ಮಾರಾಟವಿರುತ್ತದೆ. ಇದಲ್ಲದೆ ಸಹಜ ಮತ್ತು ನೈಸರ್ಗಿಕ ಆಲಂಕಾರಿಕ ವಸ್ತುಗಳ ಪ್ರದರ್ಶನ ಮಳಿಗೆಗಳೂ ಇರುತ್ತವೆ.

ಉತ್ಪನ್ನಗಳ ಪ್ರದರ್ಶನ-ಮಾರಾಟದ ಜೊತೆಗೆ, ಕಸೂತಿ, ಹ್ಯಾಂಡ್ ಪ್ರಿಂಟಿಂಗ್ ಸೇರಿದಂತೆ ಹಲವು ಕುಶಲ ಕೆಲಸಗಳ ಕಾರ್ಯಾಗಾರ ಆಯೋಜಿಸಲಾಗಿದೆ.

ಮಾಹಿತಿಗೆ 7305127412 ಸಂಪರ್ಕಿಸಬಹುದು, www.indiahandmadecollective.com ಜಾಲತಾಣಕ್ಕೂ ಭೇಟಿ ನೀಡಬಹುದು.

₹370 ಕೋಟಿ ಮೌಲ್ಯದ ಆಸ್ತಿ ವಶ

ಜೆ.ಪಿ ನಗರದಲ್ಲಿ ಬಿಡಿಎ ಕಾರ್ಯಾಚರಣೆ ಅನಧಿಕೃತ ಕಟ್ಟಡಗಳು, ಶೆಡ್‌ಗಳ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಧಿಕೃತವಾಗಿ ನಿರ್ಮಿಸಿರುವ ಕಟ್ಟಡ, ಶೇಡ್‌ಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಕೈಗೊಂಡಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಎರಡು ದಿನಗಳಲ್ಲಿ ಒಟ್ಟು ₹370 ಕೋಟಿ ಮೌಲ್ಯದ ಆಸ್ತಿ ವಶಪಡಿಸಿಕೊಂಡಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿಯ ಆಲಹಳ್ಳಿ ಗ್ರಾಮದ ಸರ್ವೆ ನಂ. 6/2ರಲ್ಲಿ 1 ಎಕರೆ 3 ಗುಂಟೆ, 9/2ರಲ್ಲಿ 1 ಎಕರೆ 7 ಗುಂಟೆ, 10/3ರಲ್ಲಿ 2 ಎಕರೆ 20 ಗುಂಟೆ, 11/1ರಲ್ಲಿ 24 ಗುಂಟೆ, 15/1ರಲ್ಲಿ 36 ಗುಂಟೆ, 15/2ರಲ್ಲಿ 37 ಗುಂಟೆ, 15/3ರಲ್ಲಿ 1 ಎಕರೆ, 15/4ರಲ್ಲಿ 1 ಎಕರೆ-9 ಗುಂಟೆ, 15/5ರಲ್ಲಿ 1ಎಕರೆ-2 ಗುಂಟೆ, 15/6ರಲ್ಲಿ 2 ಗುಂಟೆ, 15/7ರಲ್ಲಿ 2 ಗುಂಟೆ ಸೇರಿ 10 ಎಕರೆ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿದ್ದ ಕಟ್ಟಡಗಳು ಹಾಗೂ ಶೆಡ್‌ಗಳನ್ನು ಜೆಸಿಬಿ ಮೂಲಕ ತೆರವುಗೊಳಿಸಿ ವಶಕ್ಕೆ ಪಡೆದಿದೆ. ಇವುಗಳ ಒಟ್ಟು ಮೌಲ್ಯ ₹305 ಕೋಟಿ ಎಂದು ಅಂದಾಜಿಸಲಾಗಿದೆ.

ಅದೇ ರೀತಿ ಆಲಹಳ್ಳಿ ಗ್ರಾಮದ ಸರ್ವೆ ನಂ. 82/1, 82/2, 82/3ರ 2.5 ಎಕರೆ ಪ್ರದೇಶದಲ್ಲಿ ಗುರುವಾರ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಿ, ಸುಮಾರು ₹65 ಕೋಟಿ ಬೆಲೆ ಬಾಳುವ ಜಾಗವನ್ನು ವಶಪಡಿಸಿಕೊಂಡಿದೆ.

ಆಲಹಳ್ಳಿ ಗ್ರಾಮದಲ್ಲಿ ಅಕ್ರಮ ಕಟ್ಟಡಗಳನ್ನು ತೆರವು ಮಾಡಲಾಯಿತು

ಬಿಡಿಎ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕರು, ಕಾರ್ಯಪಾಲಕ ಎಂಜಿನಿಯರ್ ಅಶೋಕ್ ಬಾಗಿ, , ದಕ್ಷಿಣ ವಿಭಾಗ ಹಾಗೂ ನಾಡಪ್ರಭು ಕೆಂಪೇಗೌಡ ಬಡಾವಣೆ, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ರಾಜ್ಯ ಮೀಸಲು ಪೊಲೀಸ್ ಹಾಗೂ ಸ್ಥಳೀಯ ಪೊಲೀಸ್ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಬರೆದುಕೊಟ್ಟ ಆರೋಪ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಸಾಮಾನ್ಯ ಜ್ಞಾನ ಇಲ್ಲ. ಯಾರೋ ಬರೆದುಕೊಟ್ಟಿದ್ದನ್ನು ನಂಬಿ ಆರೋಪ ಮಾಡುತ್ತಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ‘ಚುನಾವಣಾ ಅಕ್ರಮದ ಬಗ್ಗೆ ಕಾಂಗ್ರೆಸ್ ನಾಯಕರು ಮಾಧ್ಯಮಗಳ ಮುಂದೆ ಮಾತಾಡುತ್ತಾರೆ, ದಾಖಲೆಗಳನ್ನು ನೀಡುವುದಿಲ್ಲ. ಮಹದೇವಪುರ ಕ್ಷೇತ್ರ ದಲ್ಲಿ ಚುನಾವಣಾ ಅಕ್ರಮ ನಡೆದಿದೆ ಎಂದು ಮಾಡಿದ್ದ ಆರೋಪ ಸುಳ್ಳು ಎನ್ನುವುದು ಸಾಬೀತಾಗಿದೆ. ಈಗ ಆಳಂದ ಕ್ಷೇತ್ರದಲ್ಲಿ ಅಕ್ರಮ ನಡೆದಿದೆ ಎಂದು ಆರೋಪ ಮಾಡಿದ್ದಾರೆ’ ಎಂದು ದೂರಿದರು.

‘ಮಾಲೂರು ಕ್ಷೇತ್ರದಲ್ಲಿ ಮತ ಕಳ್ಳತನ ನಡೆದಿದ್ದು ಸಾಬೀತಾಗಿದೆ. ಕಾಂಗ್ರೆಸ್ ಶಾಸಕರ ಸದಸ್ಯತ್ವವೇ ರದ್ದಾಗಿದೆ. ಜಿಲ್ಲಾಧಿಕಾರಿ ತಪ್ಪು ಮಾಡಿದ್ದಾರೆ. ಬಿಜೆಪಿ ಅಭ್ಯರ್ಥಿ ಅಫಿಡವಿಟ್ ನೀಡಿದ್ದರು. ಮಾಲೂರು ಕ್ಷೇತ್ರದ ಅಕ್ರಮದ ಬಗ್ಗೆ ಕಾಂಗ್ರೆಸ್ ನಾಯಕರು ಮಾತಾಡಬೇಕು’ ಎಂದು ಸವಾಲು ಹಾಕಿದರು.

ಬಿಹಾರದಲ್ಲಿ ಸೋಲುತ್ತೇವೆಂದು ಅವರಿಗೆ ಗೊತ್ತು. ಹೀಗಾಗಿ ಕೇವಿಯಟ್ ರೀತಿ ಮೊದಲೇ ಆರೋಪ ಮಾಡುತ್ತಿದ್ದಾರೆ. ‘ಹಿಟ್ ಆ್ಯಂಡ್ ರನ್’ ರೀತಿ ನಡೆದುಕೊಳ್ಳುತ್ತಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಅವರು ಸಂಸತ್ತಿನಲ್ಲೇ ಮಾತನಾಡಬೇಕಿತ್ತು. ಆಯೋಗಕ್ಕೆ ದಾಖಲೆ ನೀಡಬೇಕಿತ್ತು. ಚುನಾವಣಾ ಆಯೋಗವನ್ನು ತಪ್ಪಿತಸ್ಥ ಸ್ಥಾನದಲ್ಲಿ ನಿಲ್ಲಿಸಲು ಈ ರೀತಿ ಮಾಡುತ್ತಿದ್ದಾರೆ. ದಾಖಲೆ ಇಲ್ಲದೆ ಮಾಧ್ಯಮಗಳ ಮುಂದೆ ಆರೋಪಿಸುತ್ತಾರೆ ಎಂದರು.

‘ಮುಸ್ಲಿಂ ಸಮುದಾಯ ಅಕ್ರಮದಲ್ಲಿ ಭಾಗಿಯಾಗಿದೆ. ಬಾಂಗ್ಲಾ ದೇಶದವರು ಇಲ್ಲಿಗೆ ಬಂದು ಮತದಾನ ಮಾಡುತ್ತಾರೆ. ಅಂಥವರಿಗೆ ಮತದಾರರ ಗುರುತಿನ ಚೀಟಿ ನೀಡಿದವರು ಯಾರು? ದೇಶದ ಭದ್ರತೆಯ ದೃಷ್ಟಿಯಿಂದ ಅಂಥವರನ್ನು ವಾಪಸ್ ಕಳಿಸಬೇಕು ಎಂದರು.

ಕರ್ನಾಟಕ ಸರ್ಕಾರ

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

ಶ್ರೀ ವಿನಾಯಕ ಸ್ವಾಮಿ ದೇವಾಲಯ

ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಯನಗರ 4ನೇ ಬಡಾವಣೆ, ಬೆಂಗಳೂರು-560011. ದೂರವಾಣಿ ಸಂಖ್ಯೆ: 080-22443255

ನಂ: ಎಸ್.ವಿ.ಟಿ/ಸಿ.ಆರ್./14/2025-26 ದಿನಾಂಕ: 18.09.2025

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಬೆಂಗಳೂರು ನಗರ ಜಯನಗರ 4ನೇ ಬಡಾವಣೆಯಲ್ಲಿರುವ **ಶ್ರೀ ವಿನಾಯಕ ಸ್ವಾಮಿ ದೇವಾಲಯದಲ್ಲಿ** 2025-26ನೇ ಸಾಲಿಗೆ ಸಂಬಧಿಸಿಂದಂತೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಉಪ ಆಯುಕ್ತರು ರವರಿಂದ ಅನುಮೋದನೆಗೊಂಡ ದಿನಾಂಕದಿಂದ (ಒಂದು ವರ್ಷದ ಅವಧಿಗೆ) ಈ ಕೆಳಕಂಡ 01 ಟೆಂಡರ್‌ನ್ನು ಇ-ಪ್ರೊಕ್ಯೂರ್‌ಮೆಂಟ್ **https://kppp.karnataka.gov.in** ಮುಖಾಂತರ ಪ್ರಕಟಣೆ ಹೊರಡಿಸಲಾಗಿರುತ್ತದೆ.

ಕ್ರ. ಸಂ.	ಟೆಂಡರ್‌ಗಳ ವಿವರ	ಕಡತ ಸಂಖ್ಯೆ	ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ದಿನಾಂಕ		ಆನ್‌ಲೈನ್ ಮೂಲಕ ಟೆಂಡರ್ ತೆರೆಯುವ ದಿನಾಂಕ
			ರಿಂದ	ರವರೆಗೆ	
1	ಹೊರಗುತ್ತಿಗೆ ಆಧಾರದ ಮೇರೆಗೆ ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಸೇವೆ ಪಡೆಯಲು	HRICE/25-26/SE0435 CALL-2	18.09.2025	3.10.2025 ಬೆಳಗ್ಗೆ 11.00 ಗಂಟೆ	4.10.2025 ಬೆಳಗ್ಗೆ 11.00 ಗಂಟೆ

ಸಹಿ/-
ಕಾರ್ಯನಿರ್ವಾಹಕ ಅಧಿಕಾರಿ
ಶ್ರೀ ವಿನಾಯಕ ಸ್ವಾಮಿ ದೇವಾಲಯ,
ಜಯನಗರ, ಬೆಂಗಳೂರು-560-011,

ವಾಸಸಂಇ/ವಾ.ಪ್ರ/2872/2025-26

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಟಿಇಎಲ್‌ಇ_ಸಿಸಿಟಿವಿ_9ಗೂಡ್ಸ್‌ಶೆಡ್_ಎಸ್‌ಬಿಸಿ, ದಿನಾಂಕ : 12-09-2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆ – ಬೆಂಗಳೂರು ವಿಭಾಗ – ನೆಲಮಂಗಲದ ಗೂಡ್ಸ್ ಶೆಡ್, ಬಂಗಾರಪೇಟೆ, ದೇವನಗೊಂದಿ, ಮದ್ದೂರು, ಮಂಡ್ಯ, ಶೆಟ್ಟಿಹಳ್ಳಿ, ದೊಡ್ಡಬಳ್ಳಾಪುರ, ಕ್ಯಾತಸಂದ್ರ ಗೂಡ್ಸ್ ಟರ್ಮಿನಲ್ ಮತ್ತು ಪೆನುಕೊಂಡ (09) ನಿಲ್ದಾಣಗಳಲ್ಲಿ ಸಿಸಿಟಿವಿ ಒದಗಿಸುವುದು.	ರೂ. 1,23,62,449.56

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 03-10-2025 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಇಂಜಿನಿಯರ್ / ಬೆಂಗಳೂರು

ಪಿಯುಬಿ/474/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025-26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway-SWR | SWRRLY | @SWRAILWAYHQ | @sw_railways

ಶವದೊಂದಿಗೆ ಪ್ರತಿಭಟನೆ

ರಾಮನಗರ: ವಿದ್ಯುತ್ ಕಂಬದಿಂದ ಬಿದ್ದು ಗಂಭೀರವಾಗಿ ಗಾಯಗೊಂಡು, ವರ್ಷದಿಂದ ಹಾಸಿಗೆ ಹಿಡಿದಿದ್ದ ಹೊರಗುತ್ತಿಗೆ ನೌಕರ ಗುರುವಾರ ಕೊನೆಯುಸಿರೆಳೆದಿದ್ದಾರೆ. ನೌಕರನ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡುವಂತೆ ಆಗ್ರಹಿಸಿ ಕುಟುಂಬದವರು, ಗ್ರಾಮಸ್ಥರು ರಾಮನಗರ ವಿಭಾಗದ ಬೆಸ್ಕಾಂ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

‘ಜಕಣಾಚಾರಿ ಹೆಸರಲ್ಲಿ ಪೀಠ ಸ್ಥಾಪಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಯಾವುದಾದರೂ ಒಂದು ವಿಶ್ವವಿದ್ಯಾಲಯದಲ್ಲಿ ಅಮರಶಿಲ್ಪಿ ಜಕಣಾಚಾರಿ ಹೆಸರಿನಲ್ಲಿ ಅಧ್ಯಯನ ಪೀಠ ಆರಂಭಿಸುವ ಕುರಿತು ಮುಂದಿನ ಬಜೆಟ್‌ನಲ್ಲಿ ಪ್ರಕಟಿಸಬೇಕು ಎಂದು ಪದ್ಮಶ್ರೀ ಪುರಸ್ಕೃತ ರಾಜಣ್ಣ ಒತ್ತಾಯಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬುಧವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ವಿಶ್ವಕರ್ಮ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿಶ್ವಕರ್ಮ ಸಮುದಾಯದಲ್ಲೂ ಸಾಧನೆಗೈದವರು ಇದ್ದಾರೆ. ಅಂತಹವರಿಗೂ ಪ್ರತಿಷ್ಠಿತ ಪ್ರಶಸ್ತಿಗಳನ್ನು ನೀಡಿ ಸನ್ಮಾನಿಸಲು ರಾಜ್ಯ ಸರ್ಕಾರ ಮುಂದಾಗಬೇಕು. ವಿಶ್ವಕರ್ಮ ಜಯಂತಿ ಬದಲು ವಿಶ್ವಕರ್ಮ ಪೂಜಾ ಮಹೋತ್ಸವವಾಗಿ ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಮಾತನಾಡಿ, ‘ಜಕಣಾಚಾರಿ ಅವರ ಹೆಸರಿನಲ್ಲೂ ಅಧ್ಯಯನ ಪೀಠ ಸ್ಥಾಪಿಸಬೇಕೆಂಬ ಬೇಡಿಕೆಗೆ ಪೂರಕವಾಗಿ ನಿಯೋಗ ಬರುವುದಾದರೆ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡೋಣ’ ಎಂದು ಭರವಸೆ ನೀಡಿದರು. ರಾಜ್ಯದಲ್ಲಿ ಸಾಕಷ್ಟು ಅಧ್ಯಯನ ಪೀಠಗಳು ಸ್ಥಾಪನೆಗೊಂಡಿದ್ದರೂ ಕೆಲವು ಹೆಸರಿಗಷ್ಟೇ ಸಿಮೀತವಾಗಿವೆ. ಅಧ್ಯಯನ ಪೀಠಗಳ ಬಗ್ಗೆ ಸರ್ಕಾರಕ್ಕೆ ಸಮಗ್ರ ಯೋಜನೆ ಸಲ್ಲಿಸುವ ಕೆಲಸ ಆಗಬೇಕಿದೆ ಎಂದರು.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ವಿಶ್ವಕರ್ಮ ಜಯಂತಿ ಕಾರ್ಯಕ್ರಮದಲ್ಲಿ ವಿಶ್ವಕರ್ಮ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು ಪ್ರಜಾವಾಣಿ ಚಿತ್ರ

ಹಾಸನ ಜಿಲ್ಲೆ ವಿಶ್ವಕರ್ಮ ಪೀಠ ಅರೆಮಾದನಹಳ್ಳಿ ವಿಶ್ವ ಬ್ರಾಹ್ಮಣ ಮಹಾ ಸಂಸ್ಥಾನಮಠದ ವಿಭೂಷಿತ ಶಿವಸುಜ್ಞಾನ ತೀರ್ಥ ಸ್ವಾಮೀಜಿ, ನಿವೃತ್ತ ಐಎಎಸ್ ಅಧಿಕಾರಿ ಕೆ.ಎಸ್. ಪ್ರಭಾಕರ್, ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷರಾದ ಆರ್. ಶ್ರೀನಿವಾಸಾಚಾರ್, ಬಿ.ಪಿ.ಸತ್ಯವತಿ, ಕರ್ನಾಟಕ ವಿ.ವಿ ನಿವೃತ್ತ ಪ್ರಾಧ್ಯಾಪಕ ಕೆ.ಪಿ. ಈರಣ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ.ಗಾಯತ್ರಿ, ಜಂಟಿ ನಿರ್ದೇಶಕ ಬಲವಂತರಾವ್ ಪಾಟೀಲ ಹಾಜರಿದ್ದರು.

ಒಂದೇ ದಿನ 11,175 ಮಹಿಳೆಯರಿಗೆ ಇಸಿಜಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಸ್ವಸ್ಥ ನಾರಿ, ಸಶಕ್ತ ಪರಿವಾರ ಅಭಿಯಾನದ ಭಾಗವಾಗಿ ನಾರಾಯಣ ಹೆಲ್ತ್ ತನ್ನ 20ಕ್ಕೂ ಹೆಚ್ಚು ಆಸ್ಪತ್ರೆಗಳಲ್ಲಿ ಬುಧವಾರ ಒಂದೇ ದಿನ 11,175ಕ್ಕೂ ಹೆಚ್ಚು ಮಹಿಳೆಯರಿಗೆ ಉಚಿತವಾಗಿ ಇಸಿಜಿ ಪರೀಕ್ಷೆ ನಡೆಸಿ ದಾಖಲೆ ಬರೆದಿದೆ.

ಬೆಂಗಳೂರಿನ ನಾರಾಯಣ ಹೆಲ್ತ್ ಸಿಟಿ ಒಂದರಲ್ಲೇ 5,500 ಮಹಿಳೆಯರಿಗೆ ಇಸಿಜಿ ಪರೀಕ್ಷೆ ಮಾಡಲಾಯಿತು. 2023ರಲ್ಲಿ ಬೆಂಗಳೂರಿನ ನಾರಾಯಣ ಹೆಲ್ತ್ ಸಿಟಿಯು ಒಂದೇ ಸ್ಥಳದಲ್ಲಿ 24 ಗಂಟೆಗಳಲ್ಲಿ 3,797 ಇಸಿಜಿ ಪರೀಕ್ಷೆ ನಡೆಸಿ ಗಿನ್ನೆಸ್ ದಾಖಲೆ ಸ್ಥಾಪಿಸಿತ್ತು. ಇದೀಗ ತನ್ನದೇ ದಾಖಲೆಯನ್ನು ಮುರಿದು ಹೊಸ ದಾಖಲೆ ಬರೆದಿದೆ ಎಂದು ನಾರಾಯಣ ಹೆಲ್ತ್ ಅಧ್ಯಕ್ಷ ಡಾ. ದೇವಿ ಶೆಟ್ಟಿ ಅವರು ತಿಳಿಸಿದ್ದಾರೆ. ನಾರಾಯಣ ಹೆಲ್ತ್‌ನ ಆಸ್ಪತ್ರೆಗಳು, ಹಾರ್ಟ್ ಸೆಂಟರ್‌ಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ಇಸಿಜಿ ಪರೀಕ್ಷೆ ನಡೆಸಲಾಯಿತು. ಮಹಾನಗರಗಳಿಂದ ಹಿಡಿದು ಎರಡನೇ ಮತ್ತು ಮೂರನೇ ಹಂತದ ನಗರಗಳಲ್ಲಿಯೂ ಮಹಿಳೆಯರು ಉತ್ಸಾಹದಿಂದ ಭಾಗವಹಿಸಿದ್ದರು ಎಂದು ಮಾಹಿತಿ ನೀಡಿದ್ದಾರೆ.

ನಾರಾಯಣ ಹೆಲ್ತ್ ಗ್ರೂಪ್ ಸಿಇಒ ಡಾ. ಇಮ್ಯಾನುಯೆಲ್ ರೂಪರ್ಟ್ ಮಾತನಾಡಿ, ‘ಭಾರತದಲ್ಲಿ ಹೃದಯ ಸಂಬಂಧಿ ಕಾಯಿಲೆಗಳಿಂದ ಶೇ 25ರಷ್ಟು ಸಾವುಗಳು ಉಂಟಾಗುತ್ತಿವೆ. ಇದರಲ್ಲಿ ಮಹಿಳೆಯರ ಸಂಖ್ಯೆಯೇ ಹೆಚ್ಚು. ಹೀಗಾಗಿ ಮಹಿಳೆಯರ ಆರೋಗ್ಯ ರಕ್ಷಣೆಗಾಗಿ ನಾರಾಯಣ ಹಾಸ್ಪಿಟಲ್ ಮಹತ್ವದ ಕ್ರಮ ಕೈಗೊಂಡಿದೆ’ ಎಂದು ವಿವರಿಸಿದ್ದಾರೆ.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಹೆಚ್‌ಇ-ಟಿಆರ್‌ಡಿ-2025-26-ಓಟಿ-27

ದಿನಾಂಕ : 12-09-2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಗಿಣಿಗೇರಾ ನಿಲ್ದಾಣದಲ್ಲಿ 1 ಹೆಚ್ಚುವರಿ ಲೂಪ್ ಲೈನ್ ಒದಗಿಸುವುದಕ್ಕಾಗಿ ಓಹೆಚ್‌ಇ ಮಾರ್ಪಾಡು.	ರೂ. 1,18,40,130.40

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 13-10-2025 ರಂದು 11:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಮುಕ್ತಾಯದ ದಿನಾಂಕದವರೆಗೆ ಯಾವುದೇ ತಿದ್ದುಪಡಿಗಾಗಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.

ಹಿರಿಯ ವಿಭಾಗೀಯ ವಿದ್ಯುತ್ ಇಂಜಿನಿಯರ್ ಟ್ರ್ಯಾಕ್ಷನ್ ಡಿಸ್ಟ್ರಿಬ್ಯೂಷನ್, ಹುಬ್ಬಳ್ಳಿ

ಪಿಯುಬಿ/479/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025-26

ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ

South Western Railway-SWR | SWRRLY | @SWRAILWAYHQ | @sw_railways

ಉಪ ನಿರ್ದೇಶಕರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ

ಅಪ್ಪಾಜಿ ಲೇಔಟ್, ಕೊತ್ತಿಪುರ ಗ್ರಾಮ (ಪಡೇರಹಳ್ಳಿ ರೈಲ್ವೆಗೇಟ್ ಹತ್ತಿರ), ರಾಮನಗರ ಬೆಂಗಳೂರು ದಕ್ಷಿಣ ಜಿಲ್ಲೆ,-562159. Phone: 080-29911780,, E-Mail: ddkandmgka@gmail.com

ಸಂ.: ಗಭೂಇ/ಉನಿಬೆಂದ/ಬಹ/2025-26/4372 ದಿನಾಂಕ: 18.09.2025

ಬಹಿರಂಗ ಹರಾಜು ಪ್ರಕಟಣೆ

ಹಾರೊಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಬಾಚಹಳ್ಳಿ ಗ್ರಾಮದ ಸರ್ವೆ ನಂ. 114ರ 1-20 ಎಕರೆ ಶ್ರೀ ಪಿ.ಜೆ ಸತೀಶ್ ರವರ ಪಟ್ಟಾ ಜಮೀನಿನ ಕಲ್ಲುಗಣಿ ಗುತ್ತಿಗೆ ಪರವಾನಿಗೆ ಸಂಖ್ಯೆ: ಪಿ63ರಲ್ಲಿ ಈ ಹಿಂದೆ ವಶಪಡಿಸಿಕೊಳ್ಳಲಾಗಿದ್ದ 124 ಶಿಲಾದಿಮ್ಮಿಗಳು ಸಾಗಾಣಿಕೆ ಮಾಡದೇ ಸ್ಥಳದಲ್ಲೇ ದಾಸ್ತಾನು ಮಾಡಿದ್ದು, ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡುವ ಕುರಿತು ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಸಭೆಯಲ್ಲಿ ಚರ್ಚಿಸಲಾಗಿ ಸಭೆಯು ಸರ್ವಾನುಮತದಿಂದ ಹರಾಜು ಪ್ರಕ್ರಿಯೆಯನ್ನು ನಡೆಸಲು ತೀರ್ಮಾನಿಸಿ ಅನುಮೋದನೆ ನೀಡಲಾಗಿರುತ್ತದೆ. **ಅದರಂತೆ ಸಾರ್ವಜನಿಕ ಬಹಿರಂಗ ಹರಾಜು ಪ್ರಕ್ರಿಯೆಯನ್ನು ಉಪವಿಭಾಗಾಧಿಕಾರಿಗಳು ಕಂದಾಯ ಇಲಾಖೆ ಮತ್ತು ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ರವರ ಸಮ್ಮುಖದಲ್ಲಿ ದಿನಾಂಕ: 15.10.2025 ರಂದು ಮಧ್ಯಾಹ್ನ 12.00 ಗಂಟೆಗೆ ಉಪ ನಿರ್ದೇಶಕರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ಇಲ್ಲಿ 124 ಅಲಂಕಾರಿಕಾ ಶಿಲಾದಿಮ್ಮಿಗಳನ್ನು ಎಲ್ಲಿದಿಯೋ ಹೇಗಿದೆಯೋ ಹಾಗೆಯೇ ಹರಾಜು ನಡೆಸಲಾಗುವುದು** ಎಂದು ಸಾರ್ವಜನಿಕರ ಗಮನಕ್ಕೆ ಈ ಮೂಲಕ ಪ್ರಕಟಿಸಲಾಗಿದೆ.

ಕ್ರ. ಸಂ.	ಖನಿಜದ ವಿಧ, ಕೋಡ್ ಸ್ಥಳ, ಕನಿಷ್ಠ ದರ ಮತ್ತು ರಾಜಧನ ವಿವರ (As per Schedule-II, III & Form O)	ಕ್ಯೂಬಿಕ್ ಮೀ.	ಖನಿಜ ಮೌಲ್ಯ ರೂ.ಗಳಲ್ಲಿ	ಇಎಂಡಿ ಮೊತ್ತ (25%) ರೂ.ಗಳಲ್ಲಿ
1	1. As per Form O, Granites: (1) Dolerite and Gabbro Dykes "Black and Green Granites: (e) Other varieties of "Black granites dykes without defects: As per Schedule-III, BLG-5, Minimum rate 1000/ Cu.Mt As per Schedule-II, Omamental and Decorative Building Stone: (ii) Other varieties of dyke other than Black Graniles (Entire State). 2. ಹಾರೊಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಬಾಚಹಳ್ಳಿ ಗ್ರಾಮದ ಸರ್ವೆ ನಂ. 114ರ ವಿಸ್ತೀರ್ಣ 1-20 ಎಕರೆ ಪ್ರದೇಶದಲ್ಲಿ ವಶಪಡಿಸಿಕೊಳ್ಳಲಾಗಿದ್ದ 124 ಬಹುವರ್ಣಿಯ ಶಿಲಾದಿಮ್ಮಿಗಳನ್ನು ನಿಯಮ 47ರಡಿಯಲ್ಲಿ ವಿಲೇವಾರಿ ಮಾಡಬೇಕಾಗಿದ್ದು ಇದರ ಒಟ್ಟು ಪ್ರಮಾಣ 211.416 ಕ್ಯೂಬಿಕ್ ಮೀ.	211.416	2,11,416/-	52,854/-
	ಒಟ್ಟು	**211.416**	**2,11,416/-**	**52,854/-**

ಬಹಿರಂಗ ಹರಾಜಿನಲ್ಲಿ ಭಾಗವಹಿಸುವವರು ಹಿಂದಿರುಗಿಸಲಾಗದ ಅರ್ಜಿ ಶುಲ್ಕ ರೂ.1000/- ಹಾಗೂ ಇ.ಎಂ.ಡಿ ಮೊತ್ತಗಳನ್ನು ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ಇವರ ಹೆಸರಿನಲ್ಲಿ Demand Draft ಮುಖಾಂತರ ಪಾವತಿಸತಕ್ಕದ್ದು, ಬಹಿರಂಗ ಹರಾಜು ಮಾರಾಟ ವಿಲೇವಾರಿಯ ಷರತ್ತುಗಳನ್ನು ಹಾಗೂ ಖನಿಜದ ವಿವರಗಳನ್ನು **ತಹಶೀಲ್ದಾರ್ ಕಛೇರಿ ಹಾರೋಹಳ್ಳಿ ಮತ್ತು ಉಪ ನಿರ್ದೇಶಕರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ** ಇವರ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದ್ದು. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಛೇರಿಯನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ: **9844183858, 9900501140.**

ಸಹಿ/- ಉಪನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ
ಜಿಲ್ಲಾ ಟಾಸ್ಕ್‌ಫೋರ್ಸ್ (ಗಣಿ) ಸಮಿತಿ, ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ.

DIPR/BSD/347/SA/2025-26

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

Graphic Designers

WANTED MALE Graphic Designer (Corel Draw Photoshop Illustrator) Pvt Ltd Company around Rajajinagar Contact: 9108458798/ 9845579620

HRD & Admin

WANTED FEMALE Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

REAL ESTATE SELLING

Commerical

Whitefield

3210SFT,& 1200Sft, Commercial Sites For Sale Near Varthur Sub-Register Office,Within BBMP Limits With 'E'Khatha Call:9353532040

Flat

Banashankari

FOR SALE New Ready to move Luxury 3 BHK 1750 sft 2.54 Cr & 2000 sft 2.90 Cr with individual E-Khatha Flats for Sale @ Banashankari 2nd stage near BDA complex Brokers excuse Call 9741868566

RENTAL PROPERTIES

Accommodation Available

Industrial And Factory

AVAILABLE OF Industrial Shed of 75000`sqft at Soukya Road, Whitefield. Available Built-to-Suit Warehouse 160000 sqft`Vijipura Hoskote Contact: 9341234288/ 9663224353/ 9845417487.

Villas/Bunglows

FOR RENT Vasanth Nagar 5 BHK Bunglow. Near Mahaveer Jain Hospital. Vegetarians Only: 9844072344/ 9844830500

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

PUBLIC NOTICE

NOTICE

Notice is hereby given that the Lost Security Deposit Receipts Nos: 000399 & 000400 for equity shares of CENTURY GALAXY DEVELOPERS LIMITED for 2792 Shares in the name of South India Beverages Private Limited. Any person who has a claim in respect of the said shares should lodge such claim with the Company at its Registered Office at B Tower, 9th Floor, Corporate Block, Diamond District, Kodihally, Bangalore - 560008 within 15 days from the date of this advertisement, else the Company will proceed to issue Duplicate Security Deposit Receipts.
Date: 17.09.2025,
Place: Bangalore

BUSINESS

Business to Business

Business

PROPERTY COLLATERALS/ JD's/ Take Overs/ Finance for big Projects, Problem solving. Dr.Swamy Naidu-Vamshadhara Projects And Services. 9342247637.

PROPERTY COLLATERALS/ Joint Developments/ Take overs) R/E Buying Selling School/ Colleges/ Hospitals. Hot Drinks Factory (GOA). Dr. Swamy, Vamshadhara Projects/ Services-93422247637.

Business Offers

Finance

AVAIL MSME LOANS EASILY Business Owners can now Avail MSME Loans Upto 1 crore against GST/UDYAM Certificates UNSECURED LOANS Available for both Existing Businesses& Startups Contact-7204995189

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

General

WE BUY INDUSTRIES, Industrial Metal Scraps, Copper, Alluminium, Building Dismantle/ Demolition contract in and around Bengaluru and Karnataka immediate payment. Call Verna Metals, Barton Centre, MG Road. 9620253180.

PERSONAL

Change of Name

CHANGE OF NAME

I, **Shaheed Pasha A.B.,** S/o Basha A.M., residing at No. 20, 15th Cross, C Block, Rashad Nagar, Govindapura, Arabic Collage, Post, Bengaluru-560045, have changed my name to **SHAHID PASHA A.B.** vide affidavit dated 17.09.2025 before notary G.B. Turamari, Bengaluru.

KRISHNAPPA PURUSHOTHAMA REDDY #1208, 9th Main, AECS Layout A Block, Singasandra, Bengaluru-68, have changed my name to K PURUSHOTHAM REDDY vide affidavit dated- 17/08/2025

CONNECT ಕ್ಲಾಸಿಫೈಡ್ಸ್

I, DHARSHINI, residing at Bengaluru-68, have changed my name as DHARSHINI. S, vide affidavit dated 18/09/2025 before Notary K.S. Bammappanavar, Bengaluru

CHANGE OF NAME

I, **Gondamgere Singrappa Nagamani,** W/o M. Narayana Murthy, residing at No. 114, 5th Cross, Chinnayanapallya, Adugodi Post, Bengaluru-30, have changed my name to **S. NAGAMANI** vide affidavit dated 18.09.2025 before notary S Jayanth, Bengaluru.

PROPERTY

To Place your Classified Ads Contact
9845114560

ಕಳ್ಳಸಾಗಣೆ: ಪಾನ್ ಮಸಾಲ ವಶ

ದೆಹಲಿಯಿಂದ ಬೆಂಗಳೂರಿಗೆ ರೈಲಿನ ಮೂಲಕ ಸಾಗಣೆ ಮಾಡಲಾಗಿದ್ದ ₹1 ಕೋಟಿ ಮೌಲ್ಯದ 850 ಚೀಲಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಎಸ್‌ಟಿ ಪಾವತಿ ಮಾಡದೆ ದೆಹಲಿಯಿಂದ ಬೆಂಗಳೂರಿಗೆ ರೈಲಿನ ಮೂಲಕ ಕಳ್ಳಸಾಗಣೆ ಮಾಡಲಾಗಿದ್ದ ₹1 ಕೋಟಿ ಮೌಲ್ಯದ ಪಾನ್ ಮಸಾಲವನ್ನು ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

‘ಖಚಿತ ಮಾಹಿತಿಯ ಆಧಾರದ ಮೇಲೆ ನಗರದ ಯಶವಂತಪುರ ರೈಲು ನಿಲ್ದಾಣದಲ್ಲಿ ಗುರುವಾರ ಕಾರ್ಯಾಚರಣೆ ನಡೆಸಲಾಯಿತು. ದೆಹಲಿಯಿಂದ ಬಂದಿದ್ದ ರೈಲಿನಿಂದ ಇಳಿಸಿದ್ದ-ಚೀಲಗಳನ್ನು ಫ್ಲಾಟ್ ಫಾರ್ಮ್‌ನಲ್ಲಿ ಇರಿಸಲಾಗಿತ್ತು ಮತ್ತು ಕೆಲವು ಚೀಲಗಳನ್ನು ಟ್ರಕ್‌ಗೆ ತುಂಬಿಸಲಾಗಿತ್ತು’ ಎಂದು ವಾಣಿಜ್ಯ ತೆರಿಗೆ ಇಲಾಖೆಯು ತಿಳಿಸಿದೆ.

‘ಆ ಎಲ್ಲ ಚೀಲಗಳ ವಿವರವನ್ನು ಪರಿಶೀಲಿಸಿದಾಗ, ಅವುಗಳಿಗೆ ಜಿಎಸ್‌ಟಿ ಪಾವತಿ ಮಾಡಿಲ್ಲ ಎಂಬುದು ಪತ್ತೆಯಾಯಿತು. ₹1 ಕೋಟಿ

ಅಪರಾಧ ಸುದ್ದಿ

ಯಶವಂತಪುರ ರೈಲು ನಿಲ್ದಾಣದ ಪ್ಲಾಟ್‌ಫಾರ್ಮ್‌ನಲ್ಲಿ ಟಾರ್ಪಲ್ ಹೊದಿಸಿ ಇರಿಸಲಾಗಿದ್ದ ಪಾನ್ ಮಸಾಲ ಚೀಲಗಳು

ಮೌಲ್ಯದ 850 ಚೀಲಗಳನ್ನು ಹೀಗೆ ಕಳ್ಳಸಾಗಣೆ ಮಾಡಲಾಗಿತ್ತು. ಅವುಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಇಲಾಖೆ ತಿಳಿಸಿದೆ.

‘ಈ ಹಿಂದೆಯೂ ಗುಂಪೊಂದು ದೆಹಲಿಯಿಂದ ಟ್ರಕ್‌ಗಳ ಮೂಲಕ ಬೆಂಗಳೂರಿಗೆ ಪಾನ್ ಮಸಾಲ ಕಳ್ಳಸಾಗಣೆ ಮಾಡುತ್ತಿತ್ತು. ಕೆಲ ತಿಂಗಳ ಹಿಂದೆ ಹಲವು ಟ್ರಕ್‌ಗಳನ್ನು ಪತ್ತೆ ಮಾಡಿ, ಸುಮಾರು ₹20 ಕೋಟಿ ಮೌಲ್ಯದಷ್ಟು ಪಾನ್ ಮಸಾಲ ವಶಕ್ಕೆ ಪಡೆಯಲಾಗಿತ್ತು. ಆನಂತರ ರಸ್ತೆ ಮಾರ್ಗದಲ್ಲಿ ತಪಾಸಣೆ ಬಿಗಿಗೊಳಿಸಲಾಯಿತು. ಈಗ ಆ ಗುಂಪು ರೈಲು ಮಾರ್ಗವನ್ನು ಕಳ್ಳಸಾಗಣೆಗೆ ಬಳಸಿಕೊಳ್ಳುತ್ತಿರುವ ಶಂಕೆ ಇದೆ’ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ₹1 ಕೋಟಿ ಮೌಲ್ಯದ ಪಾನ್ ಮಸಾಲಾ ಚೀಲಗಳ ವಶ
- ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳ ಕಾರ್ಯಾಚರಣೆ

ಯಾವ ಕಂಪನಿಗಳ ಮಸಾಲ?

- ಕಮಲಾ ಪಸಂದ್
- ಹನ್ಸ್ ಚಾಪ್
- ಚೈನಿ ಫಿಲ್ಟರ್ ಟೊಬಾಕೊ
- ಶಿಖರ್ ಪಾನ್ ಮಸಾಲ

ಗಾಂಜಾ ಸಾಗಾಟ: 10 ವರ್ಷ ಜೈಲು

ವಿಕಾಸ್ ಮಿಶ್ರಾ

ಸಾಯಿಚರಣ್

ಬೆಂಗಳೂರು: ಆಂಧ್ರಪ್ರದೇಶದಿಂದ ನಗರಕ್ಕೆ ಕ್ವಿಂಟಲ್‌ಗೂ ಅಧಿಕ ಗಾಂಜಾ ತಂದು ಮಾರಾಟ ಮಾಡಲು ಯತ್ನಿಸಿದ ಪ್ರಕರಣದಲ್ಲಿ ಇಬ್ಬರು ಅಪರಾಧಿಗಳಿಗೆ ಹತ್ತು ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ ತಲಾ ಒಂದು ಲಕ್ಷ ರೂಪಾಯಿ ದಂಡ ವಿಧಿಸಿ ನಗರದ ಎನ್‌ಡಿಪಿಎಸ್ ವಿಶೇಷ ನ್ಯಾಯಾಲಯ ಆದೇಶ ಹೊರಡಿಸಿದೆ.

ಆಂಧ್ರದ ಶ್ರೀಕಾಕುಳಂ ಜಿಲ್ಲೆಯ ಸೀಲಮ್ ನಾಗವೆಂಕಟ ಸಾಯಿಚರಣ್ (29) ಮತ್ತು ವಿಜಯವಾಡ ಮೂಲದ ಜಗನ್ನಾಥನ್ ವಿಕಾಸ್ ಮಿಶ್ರಾ (30) ಶಿಕ್ಷೆಗೆ ಗುರಿಯಾದವರು.

ಸುದ್ದಗುಂಟೆ ಪಾಳ್ಯದ ಕೆಇಬಿ ಪಾರ್ಕ್ ಸಮೀಪ 2021ರ ಏಪ್ರಿಲ್ 12ರಂದು ಕಾರಿನಲ್ಲಿ ಗಾಂಜಾ ಸಾಗಣೆಯ ಮಾಹಿತಿ ಆಧರಿಸಿ ಪೊಲೀಸರು ದಾಳಿ ನಡೆಸಿ, ಕಾರು ಜಪ್ತಿ ಮಾಡಿ ಆರೋಪಿಗಳನ್ನು ಬಂಧಿಸಿದ್ದರು. ಕಾರು ಪರಿಶೀಲನೆ ವೇಳೆ 114 ಕೆ.ಜಿ. ಗಾಂಜಾ ಪತ್ತೆಯಾಗಿತ್ತು.

ಪ್ರಕರಣದ ತನಿಖೆ ನಡೆಸಿದ ಇನ್‌ಸ್ಪೆಕ್ಟರ್ ಡಿ.ಎನ್.ನಟರಾಜ್ ನೇತೃತ್ವದ ತಂಡ, ಆರೋಪಿಗಳ ವಿರುದ್ಧ ಮಾದಕ ವಸ್ತು ಸಾಗಾಟ ಮತ್ತು ಮಾರಾಟ ತಡೆ ಕಾಯ್ದೆ (ಎನ್‌ಡಿಪಿಎಸ್) ಅನ್ವಯ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತ್ತು.

ನ್ಯಾಯಾಧೀಶರಾದ ಲತಾ ಅವರು ಪ್ರಾಸಿಕ್ಯೂಷನ್ ವಾದ ಮತ್ತು ಸಾಕ್ಷ್ಯಾಧಾರಗಳನ್ನು ಪುರಸ್ಕರಿಸಿ ಅಪರಾಧಿಗಳಿಗೆ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿದ್ದಾರೆ. ‘ಆರೋಪಿಗಳು ನಗರಕ್ಕೆ ಗಾಂಜಾ ತಂದು ಮಾರಾಟ ಮಾಡುತ್ತಿದ್ದ ಕುರಿತು ಪ್ರಾಸಿಕ್ಯೂಷನ್ ಪ್ರಬಲ ಸಾಕ್ಷ್ಯಾಧಾರ ಸಂಗ್ರಹಿಸಿತ್ತು. ಏಳು ಮಂದಿ ಸಾಕ್ಷಿಗಳು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದಿದ್ದರು. ಇದರಿಂದಾಗಿ ಇಬ್ಬರನ್ನೂ ಶಿಕ್ಷೆಗೆ ಗುರಿಪಡಿಸಲು ಸಾಧ್ಯವಾಯಿತು’ ಎಂದು ಸರ್ಕಾರಿ ಅಭಿಯೋಜಕ ಕೆ.ವಿ.ಅಶ್ವತ್ಥನಾರಾಯಣ ತಿಳಿಸಿದರು.

ಭಾರತದ ಅತ್ಯುತ್ತಮ ಸಾರಿಗೆ ಕಂಪನಿ ಪ್ರಶಸ್ತಿ ಮತ್ತು ಹೆಚ್ಚು ವಿಶ್ವಾಸಾರ್ಹ ಸಂಸ್ಥೆ ಪ್ರಶಸ್ತಿಗಳನ್ನು ಕೆಎಸ್‌ಆರ್‌ಟಿಸಿಯ ಅರುಣ ಎಸ್. ಎನ್. ಹಾಗೂ ಎಂ. ನವೀನ್ ಸ್ವೀಕರಿಸಿದರು

ಅತ್ಯಂತ ವಿಶ್ವಾಸಾರ್ಹ ಬ್ರ್ಯಾಂಡ್ ಪ್ರಶಸ್ತಿ ಸೇರಿ ಕೆಎಸ್‌ಆರ್‌ಟಿಸಿಗೆ 3 ಪ್ರಶಸ್ತಿ

ಬೆಂಗಳೂರು: ಅತ್ಯಂತ ವಿಶ್ವಾಸಾರ್ಹ ಬ್ರ್ಯಾಂಡ್, ನಾಯಕತ್ವ ಪ್ರಶಸ್ತಿ ಹಾಗೂ ಏಷ್ಯಾ ಪೆಸಿಫಿಕ್ ಎಚ್‌ಆರ್‌ಎಂ ಕಾಂಗ್ರೆಸ್ ಪ್ರಶಸ್ತಿಗಳಿಗೆ ಕೆಎಸ್‌ಆರ್‌ಟಿಸಿ ಭಾಜನವಾಗಿದೆ.

ಅತ್ಯುತ್ತಮ ಪ್ರಯಾಣಿಕರ ಸ್ನೇಹಿ, ವಿವಿಧ ಬಸ್ಸುಗಳ ಬ್ರ್ಯಾಂಡಿಂಗ್, ಜನಸ್ನೇಹಿ ನಿರ್ವಹಣೆಗಾಗಿ ಕೆಎಸ್‌ಆರ್‌ಟಿಸಿ ಭಾರತದ ಅತ್ಯುತ್ತಮ ಸಾರಿಗೆ ಕಂಪನಿ ಪ್ರಶಸ್ತಿ ಮತ್ತು ಹೆಚ್ಚು ವಿಶ್ವಾಸಾರ್ಹ ಸಂಸ್ಥೆ ಪ್ರಶಸ್ತಿಯನ್ನು ಮುಂಬೈನ ರಾಡಿಸನ್ ಹೋಟೆಲ್‌ನಲ್ಲಿ ಗುರುವಾರ ನಡೆದ ಸಮಾರಂಭದಲ್ಲಿ ಪ್ರದಾನ ಮಾಡಲಾಯಿತು. ಕೆಂಪೇಗೌಡ ಬಸ್ ನಿಲ್ದಾಣದ ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ ಅರುಣ ಎಸ್.ಎನ್. ಹಾಗೂ ಪ್ರಾದೇಶಿಕ ಕಾರ್ಯಾಗಾರದ ವ್ಯವಸ್ಥಾಪಕ ಎಂ.ನವೀನ್ ನಿಗಮದ ಪರವಾಗಿ ಪ್ರಶಸ್ತಿ ಸ್ವೀಕರಿಸಿದರು.

ನೌಕರರ ಕಲ್ಯಾಣ ಕಾರ್ಯಕ್ರಮಗಳು, ತಂತ್ರಜ್ಞಾನ ಆಧಾರಿತ ಮಾನವ ಸಂಪನ್ಮೂಲ ಕ್ರಮಗಳು ಹಾಗೂ ನಿರಂತರ ನವೀನತೆಯೊಂದಿಗೆ ಮಾನವ ಸಂಪನ್ಮೂಲ ನಿರ್ವಹಣೆಗಾಗಿ ಏಷ್ಯಾ ಫೆಸಿಪಿಕ್ ಎಚ್‌ಆರ್‌ಎಂ ಕಾಂಗ್ರೆಸ್ ಪ್ರಶಸ್ತಿಗೆ ಕೆಎಸ್‌ಆರ್‌ಟಿಸಿ ಆಯ್ಕೆಯಾಗಿದ್ದು, ಬೆಂಗಳೂರಿನಲ್ಲಿ ನಡೆದ ನಾಲ್ಕನೇ ಆವೃತ್ತಿಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಿಗಮದ ಉಪ ಮುಖ್ಯ ಕಾನೂನು ಅಧಿಕಾರಿ ಶ್ಯಾಮಲಾ, ಕೇಂದ್ರ ಕಚೇರಿಯ ಕಾನೂನು ಅಧಿಕಾರಿ ಶಕುಂತಲಾ ಪ್ರಶಸ್ತಿ ಸ್ವೀಕರಿಸಿದರು.

ಮಳಖೇಡ: ಎಂಜಿನಿಯರಿಂಗ್ ವಿದ್ಯಾರ್ಥಿನಿ ಶವ ಪತ್ತೆ

ಸೇಡಂ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ಮಳಖೇಡದ ರಾಜಶ್ರೀ ಸಿಮೆಂಟ್ ಕಂಪನಿಯ ಕಾಲೊನಿ ಹಿಂಭಾಗದಲ್ಲಿ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿನಿಯ ಶವ ಗುರುವಾರ ಪತ್ತೆಯಾಗಿದೆ.

ಭಾಗ್ಯಶ್ರೀ ಸುಲಹಳ್ಳಿ

ಮಳಖೇಡದ ಆದಿತ್ಯ ನಗರದ ನಿವಾಸಿ ಭಾಗ್ಯಶ್ರೀ ಚನ್ನವೀರಪ್ಪ ಸುಲಹಳ್ಳಿ (20) ಮೃತ ವಿದ್ಯಾರ್ಥಿನಿ ಎಂದು ಗುರುತಿಸಲಾಗಿದೆ.

ಭಾಗ್ಯಶ್ರೀ ಅವರು ರಾಜಶ್ರೀ ಸಿಮೆಂಟ್ ಕಂಪನಿಯ ಕಾಲೇಜಿನಲ್ಲಿಯೇ ಪಿಯುಸಿ ಅಧ್ಯಯನ ಮಾಡಿದ್ದರು. ನಂತರ ಬೆಂಗಳೂರಿನ ಆಕ್ಸ್‌ಫರ್ಡ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಬಿಇ ಅಧ್ಯಯನಕ್ಕೆ ಪ್ರವೇಶ ಪಡೆದಿದ್ದರು. ಸೆ.11ರಂದು ಪ್ರವೇಶ ಪಡೆದು ಶುಲ್ಕ ಭರಿಸಿದ್ದರು. ಸೆ.13ರಂದು ಕಾಲೇಜಿಗೆ ತೆರಳಿ ತರಗತಿಗೆ ಹಾಜರಾಗುವವರಿದ್ದರು.

ಸೆ.11ರಂದು ಮನೆಯಿಂದ ಕಾಣೆಯಾಗಿದ್ದಾರೆ ಎಂದು ಅವರ ತಂದೆ ಮಳಖೇಡ ಪೊಲೀಸ್ ಠಾಣೆಯಲ್ಲಿ ಸೆ.12ರಂದು ದೂರು ನೀಡಿದ್ದರು. ಇದೀಗ ವಿದ್ಯಾರ್ಥಿನಿ ಶವವಾಗಿ ಪತ್ತೆಯಾಗಿದ್ದಾರೆ. ಕಂಪನಿಯ ಕಾಲೊನಿಯ ಗಾರ್ಡನ್ ಪ್ರದೇಶದ ಹಿಂಭಾಗದಲ್ಲಿ ವಾಸನೆ ಬರುತ್ತಿರುವುದನ್ನು ಗಮನಿಸಿದ ಕಂಪನಿ ಭದ್ರತಾ ಸಿಬ್ಬಂದಿ ಶವ ಇರುವುದನ್ನು ಗುರುತಿಸಿ, ಕಂಪನಿಯ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಕಂಪನಿ ಅಧಿಕಾರಿಗಳು ಮಳಖೇಡ ಪೊಲೀಸ್ ಠಾಣೆಗೆ ತಿಳಿಸಿದ್ದಾರೆ. ಆಗ ವಿದ್ಯಾರ್ಥಿನಿಯ ಗುರುತು ಪತ್ತೆಯಾಗಿದೆ.

ಕೊಲೆ ಶಂಕೆ: ಮೃತ ವಿದ್ಯಾರ್ಥಿನಿಯ ಶವ ಪತ್ತೆಯಾಗುತ್ತಿದ್ದಂತೆಯೇ ಪಾಲಕರು ಕೊಲೆ ಶಂಕೆ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿನಿಯ ಶವವನ್ನು ಕಲಬುರಗಿಯ ಜಿಮ್ಸ್‌ಗೆ ಕಳುಹಿಸಲಾಗಿದೆ. ಸ್ಥಳಕ್ಕೆ ವಿಧಿವಿಜ್ಞಾನ ಪ್ರಯೋಗಾಲಯದ ತಂಡ ಮತ್ತು ಬೆರಳಚ್ಚು ತಂಡ ಆಗಮಿಸಿ ಸ್ಥಳ ಪರಿಶೀಲಿಸಿತು.

ಅತ್ಯಾಚಾರ ಆರೋಪ: ಯೋಗ ಗುರು ಬಂಧನ

ಬೆಂಗಳೂರು: ಯೋಗ ಕಲಿಯಲು ಬರುತ್ತಿದ್ದ ಬಾಲಕಿಗೆ ಅಂತರರಾಷ್ಟ್ರೀಯ ಮಟ್ಟದ ಯೋಗಪಟುವನ್ನಾಗಿ ಮಾಡುವುದಾಗಿ ಆಮಿಷವೊಡ್ಡಿ ಅತ್ಯಾಚಾರವೆಸಗಿದ ಆರೋಪದಡಿ ಯೋಗ ಗುರುವನ್ನು ಆರ್.ಆರ್.ನಗರ ಪೊಲೀಸರು ಬಂಧಿಸಿದ್ದಾರೆ.

ಸನ್ ಶೈನ್ ದಿ ಯೋಗ ಝೋನ್ ಸಂಸ್ಥಾಪಕ ಎಂ. ನಿರಂಜನಮೂರ್ತಿ (55) ಬಂಧಿತ ಯೋಗ ಗುರು.

ನಿರಂಜನ ಮೂರ್ತಿ

ಆಗಸ್ಟ್ 30ರಂದು ಸಂತ್ರಸ್ತೆ ನೀಡಿದ ದೂರು ಆಧರಿಸಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಆರೋಪಿಯು ಆರ್. ಆರ್. ನಗರದ ಸನ್‌ಶೈನ್ ಇನ್‌ಸ್ಟಿಟ್ಯೂಟ್ ಹೆಸರಲ್ಲಿ 2019ರಿಂದ ಯೋಗ ತರಗತಿ ನಡೆಸುತ್ತಿದ್ದರು. 2021ರಲ್ಲಿ ಯೋಗ ತರಗತಿಗೆ ಸೇರಿದ್ದ ಬಾಲಕಿ, ಯೋಗಗುರು ಜತೆ ಥಾಯ್ಲೆಂಡ್‌ನಲ್ಲಿ ನಡೆದಿದ್ದ ಯೋಗ ಸ್ಪರ್ಧೆಯಲ್ಲಿ ಭಾಗಿಯಾಗಿದ್ದರು. ಈ ವೇಳೆ ಆರೋಪಿ ಲೈಂಗಿಕ ದೌರ್ಜನ್ಯವೆಸಗಿದ್ದರು ಎಂಬುದಾಗಿ ದೂರಿನಲ್ಲಿ ಆರೋಪಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಮತ್ತೆ ಯೋಗ ಸ್ಪರ್ಧೆಯಲ್ಲಿ ಭಾಗವಹಿಸುವ ಸಲುವಾಗಿ ಬಾಲಕಿಯು, ಆರೋಪಿ ಒಡೆತನದ ಯೋಗ ಕೇಂದ್ರಕ್ಕೆ 2024ರಲ್ಲಿ ಸೇರಿಕೊಂಡಿದ್ದಳು. ರಾಷ್ಟ್ರ ಮಟ್ಟದ ಯೋಗ ಸ್ಪರ್ಧೆಯಲ್ಲಿ ಪದಕ ಹಾಗೂ ಒಳ್ಳೆಯ ಉದ್ಯೋಗ ಕೊಡಿಸುವುದಾಗಿ ಆಮಿಷವೊಡ್ಡಿ ಕಳೆದ ಆಗಸ್ಟ್‌ನಲ್ಲಿ ಬಾಲಕಿಯೊಂದಿಗೆ ದೈಹಿಕ ಸಂಪರ್ಕ ಮಾಡಿರುವುದಾಗಿ ದೂರಿನಲ್ಲಿ ಆರೋಪಿಸಲಾಗಿದೆ.

ಪ್ರಕರಣ ದಾಖಲಾಗುತ್ತಿದ್ದಂತೆ ನಾಪತ್ತೆಯಾಗಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿ, ವಿಚಾರಣೆಗೆ ಒಳಪಡಿಸಿದ್ದಾರೆ. ತನಿಖೆ ನಡೆಯುತ್ತಿರುವ ಕಾರಣ ಹೆಚ್ಚಿನ ಮಾಹಿತಿ ನೀಡಲು ಆಗುವುದಿಲ್ಲ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ವಿದ್ಯಾರ್ಥಿಗಳ ನಡುವೆ ಹೊಡೆದಾಟ

ಬೆಂಗಳೂರು: ನಗರದ ಹೊರವಲಯದ ಆವಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಖಾಸಗಿ ಕಾಲೇಜಿನ 40ಕ್ಕೂ ಹೆಚ್ಚು ನರ್ಸಿಂಗ್ ವಿದ್ಯಾರ್ಥಿಗಳ ನಡುವೆ ಹೊಡೆದಾಟ ನಡೆದಿದೆ.

ಹಿರಿಯ ಮತ್ತು ಕಿರಿಯ ವಿದ್ಯಾರ್ಥಿಗಳು ಎಂಬ ವಿಷಯಕ್ಕೆ ಜಗಳ ನಡೆದಿದ್ದು, ಕಾಲೇಜು ಮುಂಭಾಗ ಪರಸ್ಪರ ಕೈ ಕೈ ಮಿಲಾಯಿಸಿರುವ ದೃಶ್ಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ವಿಡಿಯೊ ಜಾಲತಾಣದಲ್ಲಿ ಹರಿದಾಡುತ್ತಿದೆ.

‘ಕೇರಳದ ವಿವಿಧ ಭಾಗಗಳಿಂದ ಬಂದಿರುವ ವಿದ್ಯಾರ್ಥಿಗಳು ಇಲ್ಲಿ ನರ್ಸಿಂಗ್ ಓದುತ್ತಿದ್ದಾರೆ. ಹಿರಿಯ ವಿದ್ಯಾರ್ಥಿಗಳ ಮಾತನ್ನು ಕಿರಿಯರ ವಿದ್ಯಾರ್ಥಿಗಳು ಕೇಳಬೇಕು ಎನ್ನುವ ವಿಚಾರಕ್ಕೆ ಗಲಾಟೆ ನಡೆದಿದೆ. ವಿದ್ಯಾರ್ಥಿಗಳಿಂದ ತಪ್ಪೊಪ್ಪಿಗೆ ಬರೆಸಿಕೊಂಡು ಎಚ್ಚರಿಕೆ ನೀಡಲಾಗಿದೆ. ಘಟನೆಗೆ ಸಂಬಂಧಿಸಿದಂತೆ ಕಾಲೇಜು ಆಡಳಿತ ಮಂಡಳಿ ಎಂಟು ವಿದ್ಯಾರ್ಥಿಗಳನ್ನು ಹೊರಗೆ ಹಾಕಿದೆ. ಪ್ರಕರಣ ದಾಖಲಾಗಿಲ್ಲ’ ಎಂದು ಪೊಲೀಸರು ತಿಳಿಸಿದರು.

ಮೈಸೂರು ರೇಸ್

ಆಫ್ರಿಕನ್ ಗೋಲ್ಡ್ ಗೆಲ್ಲುವ ನಿರೀಕ್ಷೆ

ಮಹರಾಜಾಸ್ ಗೋಲ್ಡ್ ಕಪ್ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಆಫ್ರಿಕನ್ ಗೋಲ್ಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಅಡಾರ್ನ್‌ಮೆಂಟ್ 1, ಪ್ರಿನ್ಸೆಸ್ ಜಾಸ್ಮೈನ್ 3, ಸೆಡಕ್ಟಿವ್ 5
2ನೇ ರೇಸ್: ವರ್ಸೇಸ್ 9, ವಾಯು 1, ಮೇಗಾ ಸಕ್ಸಸ್ 3
3ನೇ ರೇಸ್: ಫ್ಲೇಮಿಂಗ್ ಸ್ವೋರ್ಡ್ 8, ಸೆರಾಯ್ 5, ಟು ಹಾಟ್ ಟು ಟಚ್ 7
4ನೇ ರೇಸ್: ಆಫ್ರಿಕನ್ ಗೋಲ್ಡ್ 1, ಮೇಯ್ಸ್ ಮ್ಯಾಜಿಕ್ 6, ಪ್ರಾಮಿಸ್‌ಆಫ್‌ದಿಫ್ಯೂಚರ್ 9
5ನೇ ರೇಸ್: ಮಾರ್ಕ್ ಒನ್ 1, ಸ್ಮೈಲ್ ಆಫ್ ಬ್ಯೂಟಿ 3, ಅನುಶ್ಟುಭ 9
6ನೇ ರೇಸ್: ಕೂರ್ಗ್ ಜನರಲ್ 6, ಟೈಗರ್‌ಕಿಂಗ್ 5, ಸೊರೆಂಟೊ ಸೀಕ್ರೆಟ್ 7

ಉತ್ತಮ ಬೆಟ್: ಫ್ಲೇಮಿಂಗ್ ಸ್ವೋರ್ಡ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಮೂರು ಕಡೆ ಡಯಾಲಿಸಿಸ್ ಕೇಂದ್ರ

ರಾಜರಾಜೇಶ್ವರಿ ನಗರ: ನಾಗರಿಕರಿಗೆ ಗುಣಮಟ್ಟದ ಅಗತ್ಯ ಸೌಲಭ್ಯವುಳ್ಳ ಸುಸಜ್ಜಿತ 250 ಹಾಸಿಗೆಯುಳ್ಳ ಆಸ್ಪತ್ರೆಯನ್ನು ನಿರ್ಮಾಣ ಮಾಡಲಾಗುತ್ತದೆ ಎಂದು ಆರೋಗ್ಯ ಮತ್ತು ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಯಶವಂತಪುರ ಕ್ಷೇತ್ರದ ಉಲ್ಲಾಳು ವಿನಲ್ಲಿ ₹209 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ 250 ಹಾಸಿಗೆಯುಳ್ಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಕಾಮಗಾರಿಯನ್ನು ಪರಿಶೀಲಿಸಿ ಅವರು ಮಾತನಾಡಿದರು.

ಭರತ್ ನಗರದಲ್ಲಿ ಡಯಾಲಿಸಿಸ್ ಸೆಂಟರ್ ವೀಕ್ಷಿಸಿ, ಉಚಿತ ಆಂಬುಲೆನ್ಸ್ ವಾಹನವನ್ನು ಜನಾರ್ಪಣೆ ಮಾಡಿದ ಅವರು, ಮಧುಮೇಹ, ರಕ್ತದೊತ್ತಡ ರೋಗಿಗಳಿಗೆ ಅನುಕೂಲ ಮಾಡಿಕೊಡಲು ಅಗತ್ಯ ಕಂಡುಬಂದರೆ ಇನ್ನು ಹೆಚ್ಚಿನ ಡಯಾಲಿಸಿಸ್ ಯಂತ್ರಗಳನ್ನು ನೀಡಲಾಗುವುದು ಎಂದರು.

ಕೆಂಗೇರಿ ಉಪನಗರದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಕಟ್ಟಡವನ್ನು ₹30 ಕೋಟಿ ವೆಚ್ಚದಲ್ಲಿ ನಿರ್ಮಿಸಲು ನೀಲ ನಕ್ಷೆ ತಯಾರಾಗಿದೆ. ಶೀಘ್ರದಲ್ಲಿಯೇ ₹11ಕೋಟಿ ವೆಚ್ಚದಲ್ಲಿ ಕ್ಷೇತ್ರದ ಮೂರು ಕಡೆ ಡಯಾಲಿಸಿಸ್ ಸೆಂಟರ್ ಪ್ರಾರಂಭಿಸಲಾಗುವುದು ಎಂದರು.

ಶಾಸಕ ಎಸ್.ಟಿ. ಸೋಮಶೇಖರ್ ಮಾತನಾಡಿದರು.

ಹೋಟೆಲ್ ಮತ್ತು ರೆಸ್ಟೋರೆಂಟ್ ಸಂಘಗಳ ಒಕ್ಕೂಟದ ಸಮಾವೇಶ ಆರಂಭ

‘ಆತಿಥ್ಯ ವಲಯದಲ್ಲಿ 50,000 ಉದ್ಯೋಗ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರವಾಸಿ ಮಿತ್ರ ಯೋಜನೆಯಡಿ ಕರ್ನಾಟಕದ ಆತಿಥ್ಯ ವಲಯದಲ್ಲಿ ಒಂದು ವರ್ಷದಲ್ಲಿ 50,000 ಯುವಕರನ್ನು ಕೌಶಲಗೊಳಿಸಿ ಉದ್ಯೋಗ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದಲ್ಲಿ ಆರಂಭಗೊಂಡ ಭಾರತೀಯ ಹೋಟೆಲ್ ಮತ್ತು ರೆಸ್ಟೋರೆಂಟ್ ಸಂಘಗಳ ಒಕ್ಕೂಟದ 55ನೇ ಸಮಾವೇಶವನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರವಾಸೋದ್ಯಮ ಹಾಗೂ ಆತಿಥ್ಯ ವಲಯದಲ್ಲಿ ಕರ್ನಾಟಕ ಸದಾ ಮುಂಚೂಣಿಯಲ್ಲಿದೆ. ಪ್ರವಾಸೋದ್ಯಮ ವಲಯದ ಬೆಳವಣಿಗೆಯು 12 ಲಕ್ಷಕ್ಕೂ ಹೆಚ್ಚು ನೇರ ಮತ್ತು ಪರೋಕ್ಷ ಉದ್ಯೋಗಗಳಿಗೆ ಕಾರಣವಾಗಿದೆ. ಕರ್ನಾಟಕದಲ್ಲಿ ಆತಿಥ್ಯ ವಲಯವೇ ಈಗ ನಮ್ಮ ಆರ್ಥಿಕತೆಗೆ ಸುಮಾರು ₹25,000 ಕೋಟಿ ಕೊಡುಗೆಯನ್ನು ನೀಡುತ್ತಿದೆ ಎಂದು ತಿಳಿಸಿದರು.

‘ಪ್ರವಾಸೋದ್ಯಮದ ಐದು ವರ್ಷದ ಪ್ರಗತಿಯನ್ನು ಗುರಿಯಾಗಿಟ್ಟುಕೊಂಡು ಪ್ರತ್ಯೇಕ ನೀತಿಯನ್ನು ಕಳೆದ ವರ್ಷ ಜಾರಿಗೆ ತಂದಿದ್ದೇವೆ. ಎಲ್ಲರನ್ನೂ ಒಳಗೊಳ್ಳುವ, ಸುಸ್ಥಿರ ಮತ್ತು ತಂತ್ರಜ್ಞಾನ ಆಧಾರಿತ ಆತಿಥ್ಯ ಪರಿಸರ ವ್ಯವಸ್ಥೆಯನ್ನು ಸೃಷ್ಟಿಸುವುದು ಈ ನೀತಿಯ ಉದ್ದೇಶವಾಗಿದೆ. 2029ರ ವೇಳೆಗೆ 1.5 ಲಕ್ಷ ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಮತ್ತು ₹8,000 ಕೋಟಿ ಬಂಡವಾಳ ಹೂಡಿಕೆಗಳನ್ನು ಆಕರ್ಷಿಸುವ ಗುರಿಯಿದೆ’ ಎಂದು ಹೇಳಿದರು.

ಹೋಟೆಲ್ ಮತ್ತು ರೆಸ್ಟೋರೆಂಟ್ ಸಂಘಗಳ ಒಕ್ಕೂಟದ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಉದ್ಯಮಿಗಳು

‘ಕರ್ನಾಟಕದಲ್ಲಿ 54 ಹೊಸ ಹೋಟೆಲ್‌ಗಳು ಮತ್ತು ರೆಸಾರ್ಟ್‌ಗಳಿಗೆ ಸಹಾಯಧನವನ್ನು ನೀಡಲು ಅನುಮತಿ ನೀಡಲಾಗಿದೆ. ಇದಲ್ಲದೇ ಕರ್ನಾಟಕದ ಕರಾವಳಿ ಪ್ರವಾಸೋದ್ಯಮದ ಆಕರ್ಷಣೆ ಹೆಚ್ಚಿಸಲು ₹200 ಕೋಟಿ ವಿನಿಯೋಗಿಸುತ್ತಿದ್ದೇವೆ’ ಎಂದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ‘ಬೆಂಗಳೂರು ನಗರ ಜಗತ್ತಿನ ಪ್ರಮುಖ ತಂತ್ರಜ್ಞಾನ, ಉದ್ಯಮ ಹಾಗೂ ನಾವೀನ್ಯ ನಗರಿಯಾಗಿ ಬೆಳೆದಿದೆ. 25 ಲಕ್ಷ ಎಂಜಿನಿಯರ್‌ಗಳು ಇಲ್ಲಿದ್ದಾರೆ. ಈ ನಗರದಲ್ಲಿ ಹೂಡಿಕೆಗೆ ಉದ್ಯಮಿಗಳು ಮುಂದೆ ಬಂದರೆ ಸರ್ಕಾರ ಎಲ್ಲಾ ರೀತಿಯ ನೆರವು ನೀಡಲಿದೆ’ ಎಂದು ಹೇಳಿದರು.

ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ಮಾತನಾಡಿ, ‘ಪ್ರವಾಸೋದ್ಯಮದ ಭಾಗವಾಗಿರುವ ಆತಿಥ್ಯ ವಲಯದ ಪ್ರಗತಿಗೆ ಪೂರಕವಾಗಿ ಸರ್ಕಾರವು ಸಹಾಯಧನ, ಪ್ರೋತ್ಸಾಹಕ ಕಾರ್ಯಕ್ರಮಗಳನ್ನು ರೂಪಿಸಿದೆ. ಇದರ ಉಪಯೋಗವನ್ನು ಉದ್ಯಮ ವಲಯ ಪಡೆದುಕೊಳ್ಳಬೇಕು’ ಎಂದು ಸಲಹೆ ನೀಡಿದರು.

ಕೇಂದ್ರ ಸಚಿವ ಗಜೇಂದ್ರಸಿಂಗ್ ಶೆಖಾವತ್, ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್, ಒಕ್ಕೂಟದ ಅಧ್ಯಕ್ಷ ಕೆ.ಶಾಮರಾಜು, ಸಮಾವೇಶದ ಆಯೋಜನಾ ಸಮಿತಿ ಅಧ್ಯಕ್ಷ ಕೆ.ರವಿ ಹಾಜರಿದ್ದರು.

ಡಿಜಿಪಿ ಪದೋನ್ನತಿ ಆದೇಶಕ್ಕೆ ಸಿಎಟಿ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಪಿಎಸ್ ಅಧಿಕಾರಿಗಳಾದ ಉಮೇಶ್ ಕುಮಾರ್ ಮತ್ತು ಅರುಣ್ ಚಕ್ರವರ್ತಿ ಅವರಿಗೆ ರಾಜ್ಯ ಪೊಲೀಸ್ ಮಹಾ ನಿರ್ದೇಶಕರ (ಡಿಜಿಪಿ) ಹುದ್ದೆಗೆ ಪದೋನ್ನತಿ ನೀಡಿರುವ ರಾಜ್ಯ ಸರ್ಕಾರದ ಆದೇಶಕ್ಕೆ ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ (ಸಿಎಟಿ) ಮಧ್ಯಂತರ ತಡೆ ನೀಡಿದೆ.

ಅಧಿಸೂಚನೆ ರದ್ದುಪಡಿಸುವಂತೆ ಕೋರಿ ರಾಜ್ಯ ಪೊಲೀಸ್ ತರಬೇತಿ ಕೇಂದ್ರದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಎಡಿಜಿಪಿ) ಅಲೋಕ್ ಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಎಸ್.ಸುಜಾತ ಮತ್ತು ಆಡಳಿತಾತ್ಮಕ ಸದಸ್ಯ ಸಂಜೀವ್ ಕುಮಾರ್ ಅವರಿದ್ದ ವಿಭಾಗೀಯ ಪೀಠ ಗುರುವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ಪ್ರತಿವಾದಿಗಳಾದ ರಾಜ್ಯ ಸರ್ಕಾರ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ನೋಟಿಸ್, ಉಮೇಶ್ ಕುಮಾರ್ ಮತ್ತು ಅರುಣ್ ಚಕ್ರವರ್ತಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಲಾಗಿದ್ದು ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಲಾಗಿದೆ.

Hindustan Unilever Limited

CORPORATE OWNED PROPERTIES FOR SALE ON ‘AS-IS, WHERE IS’ BASIS

MR23, Nandini Layout
Plot Size: 121.51 SQ.M. (1,308 SF)
Bungalow Area: 95.74 SQ.M. (1,030 SF) SBU
- Peaceful neighbourhood with good connectivity
- Well Maintained Property

19/2, 19/3, 20/1, 20/2, 20/3 & 20/4 Nandini Layout
- 1 BHK Apartments
- 41.81 SQ.M. (450 SF) SBU each

Interested parties to collect & submit the Expression of Interest (EOI) in prescribed format at the office of CBRE South Asia Pvt Ltd, Embassy Golf Links Business Park, Sunriver Building, 5th Floor - Wing A, Off Intermediate Ring Road, Bengaluru, Karnataka KA 560071 by 10th October 2025, 5PM.

For further details, please contact:
Raj Kumar +91 7899 615 412
raj.chand@cbre.com
Girijesh R +91 9901 542 173
girijesh.r@cbre.com

Exclusively Marketed by
CBRE
CIN - U74140DL1999PTC100244
PRM/KA/RERA/1251/446/AG/230321/003513

ಕರ್ನಾಟಕದ ಮೌಂಟ್ ರೂಫಿಂಗ್ ಆ್ಯಂಡ್ ಸ್ಟ್ರಕ್ಚರ್ಸ್ ಸಂಸ್ಥೆಯು 1,20,000 ಚದರ ಅಡಿಯ ಪ್ರಿ ಎಂಜಿನಿಯರಿಂಗ್ (ಪಿಇಬಿ) ಸ್ಟ್ರಕ್ಚರ್ ಅನ್ನು 64 ಗಂಟೆಗಳಲ್ಲಿ ತಯಾರಿಸಿ, 1.2 ಲಕ್ಷ ಚದರ ಅಡಿಯ ಪಾಲಿಯುರೆಥೇನ್ ಫೋಮ್ (ಪಿಯುಎಫ್) ಪ್ಯಾನಲ್‌ಗಳನ್ನು 24 ಗಂಟೆಗಳಲ್ಲಿ ಪೂರೈಕೆ ಮಾಡಿರುವುದು ಜಾಗತಿಕ ದಾಖಲೆ ಆಗಿದೆ. ಇದಕ್ಕಾಗಿ ಇತ್ತೀಚೆಗೆ ಬ್ರಿಟನ್ ಸಂಸತ್ತಿನಲ್ಲಿ ನಡೆದ ಸಮಾರಂಭದಲ್ಲಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಶೇರ್ ಸಿಂಗ್ ಅವರಿಗೆ ‘ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್’ ಪ್ರಶಸ್ತಿ ಪತ್ರ ನೀಡಲಾಯಿತು. ಉಗಾಂಡದ ಉಪ ಪ್ರಧಾನಿ ರೆಬೆಕಾ ಕಡಗ, ಆಂಧ್ರಪ್ರದೇಶದ ಮಾನವ ಸಂಪನ್ಮೂಲ ಸಚಿವ ನಾರಾ ಲೋಕೇಶ್, ಉಗಾಂಡದ ಇಂಧನ ಸಚಿವ ರುಥ್ ಎನ್, ಬ್ರಿಟನ್‌ನ ಸಂಸದ ರಮಿ ರೇಂಜರ್ ಉಪಸ್ಥಿತರಿದ್ದರು

ಅಪಘಾತ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಞಾನಭಾರತಿ ಮತ್ತು ಚಿಕ್ಕಜಾಲ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಸೆಕ್ಯೂರಿಟಿ ಕಂಪನಿ ಉದ್ಯೋಗಿ ಸೇರಿ ಇಬ್ಬರು ಮೃತಪಟ್ಟಿದ್ದಾರೆ.

ಜ್ಞಾನಭಾರತಿ ಬಳಿಯ ಚಿಕ್ಕಬಸ್ತಿ ಕೆರೆಯ ಪ್ರವೇಶದ್ವಾರದ ಗೇಟ್‌ಗೆ ಬುಧವಾರ ಬೈಕ್ ಡಿಕ್ಕಿ ಹೊಡೆದು ಸಂಭವಿಸಿದ ಅಪಘಾತದಲ್ಲಿ ರಂಜಿತ್ (26) ಮೃತಪಟ್ಟಿದ್ದಾರೆ.

ಬ್ಯಾಡರಹಳ್ಳಿಯಿಂದ ಚಿಕ್ಕಬಸ್ತಿ ಕಡೆಗೆ ಹೋಗುತ್ತಿದ್ದಾಗ ಕೆರೆಯ ಪ್ರವೇಶದ್ವಾರದ ಕಬ್ಬಿಣದ ಗೇಟ್‌ಗೆ ವಾಹನ ಡಿಕ್ಕಿ ಹೊಡೆದ ಪರಿಣಾಮ ತಲೆಗೆ ತೀವ್ರ ಪೆಟ್ಟಾಗಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ರಂಜಿತ್ ಹೆಲ್ಮೆಟ್ ಧರಿಸಿದ್ದರು. ಆದರೂ ಅಪಘಾತದ ತೀವ್ರತೆಗೆ ಹೆಲ್ಮೆಟ್ ನಜ್ಜುಗುಜ್ಜಾಗಿದೆ. ರಂಜಿತ್‌ನ ನಿರ್ಲಕ್ಷ್ಯ ಹಾಗೂ ಅತಿಯಾದ ವೇಗವೇ ಅಪಘಾತಕ್ಕೆ ಕಾರಣ ಎಂದು ಪೊಲೀಸರು ಹೇಳಿದ್ದಾರೆ.

ಬಾಗಲೂರು ಬಳಿಯ ಕೆಐಎಡಿಬಿ ಪ್ರದೇಶದಲ್ಲಿ ಸಂಭವಿಸಿದ ಬೈಕ್ ಅಪಘಾತದಲ್ಲಿ ಸೆಕ್ಯೂರಿಟಿ ಕಂಪನಿ ಉದ್ಯೋಗಿ ಸೂರ್ಯಕುಮಾರ್ (29) ಮೃತಪಟ್ಟಿದ್ದಾರೆ. ಅತಿ ವೇಗದ ಚಾಲನೆಯೇ ಅಪಘಾತಕ್ಕೆ ಕಾರಣ ಎಂದು ಪೊಲೀಸರು ಹೇಳಿದ್ದಾರೆ.

ಕೌನ್ಸಿಲ್‌ನಲ್ಲಿ 150 ಸದಸ್ಯರಿಗೆ ಅವಕಾಶ

ನಾಲ್ಕು ನಗರ ಪಾಲಿಕೆಗಳು, ಜಿಬಿಎ ಆಡಳಿತ ಕಟ್ಟಡದ ವಿನ್ಯಾಸಕ್ಕೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ ರಚನೆಯಾಗಿರುವ ಐದು ನಗರ ಪಾಲಿಕೆಗಳ ಕೌನ್ಸಿಲ್ ಸಭಾಂಗಣದಲ್ಲಿ ತಲಾ 150 ಸದಸ್ಯರು ಕುಳಿತುಕೊಳ್ಳುವಂತೆ ವಿನ್ಯಾಸ ಮಾಡಲು ನಿರ್ಧರಿಸಲಾಗಿದೆ.

ಬೆಂಗಳೂರು ಪೂರ್ವ ನಗರ ಪಾಲಿಕೆ (ಬಿಇಸಿಸಿ), ಪಶ್ಚಿಮ ನಗರ ಪಾಲಿಕೆ (ಬಿಡಬ್ಲ್ಯುಸಿಸಿ), ಉತ್ತರ ನಗರ ಪಾಲಿಕೆ (ಬಿಎನ್‌ಸಿಸಿ), ದಕ್ಷಿಣ ನಗರ ಪಾಲಿಕೆಗಳಿಗೆ (ಬಿಎಸ್‌ಸಿಸಿ) ಹೊಸ ಕಟ್ಟಡಗಳ ವಿನ್ಯಾಸಗೊಳಿಸಲು ಆಸಕ್ತರಿಗೆ ಜಿಬಿಎಯಿಂದ ಆಹ್ವಾನ ನೀಡಲಾಗಿದೆ. ಈ ಟೆಂಡರ್ ಆಹ್ವಾನದಂತೆ 150 ಸದಸ್ಯರು ಆಸೀನರಾಗುವಂತಹ ಕೌನ್ಸಿಲ್ ಸಭಾಂಗಣ ನಿರ್ಮಿಸಲು ಹೇಳಲಾಗಿದೆ.

ಬಿಇಸಿಸಿಯಲ್ಲಿ 63 ವಾರ್ಡ್, ಬಿಡಬ್ಲ್ಯುಸಿಸಿಯಲ್ಲಿ 117 ವಾರ್ಡ್, ಬಿಎನ್‌ಸಿಸಿಯಲ್ಲಿ 90 ವಾರ್ಡ್, ಬಿಎಸ್‌ಸಿಸಿಯಲ್ಲಿ 90 ವಾರ್ಡ್ ರಚನೆಯಾಗುವ ಪ್ರಸ್ತಾವವಿದೆ. ವಾರ್ಡ್ ಪುನರ್ ವಿಂಗಡಣಾ ಆಯೋಗ ವಾರ್ಡ್ ರಚನೆಗಳ ಬಗ್ಗೆ ವರದಿ ತಯಾರಿಸುತ್ತಿದ್ದು, ಸೆ.23ಕ್ಕೆ ಕರಡು ವರದಿ ಸಲ್ಲಿಸುವ ಸಾಧ್ಯತೆ ಇದೆ. ಈ ಮಧ್ಯೆ, ಜಿಬಿಎಯ ಮುಖ್ಯ ಆಡಳಿತ ಕಟ್ಟಡ ಮತ್ತು ಬಿಇಸಿಸಿ, ಬಿಡಬ್ಲ್ಯುಸಿಸಿ, ಬಿಎನ್‌ಸಿಸಿ, ಬಿಎಸ್‌ಸಿಸಿಗಳ ಆಡಳಿತ ಕಟ್ಟಡವನ್ನು ನಿರ್ಮಿಸಲು ಏಕ ವಿನ್ಯಾಸಗಳನ್ನು ಆಹ್ವಾನಿಸಲಾಗಿದೆ.

ಶಾಂತಿನಗರ ವಿಭಾಗದ ಕಾರ್ಯಕಾರಿ ಎಂಜಿನಿಯರ್ ಈ ಟೆಂಡರ್ ಅನ್ನು ಆಹ್ವಾನಿಸಿದ್ದು, ಯಾವ ಸೌಲಭ್ಯಗಳು ಇರಬೇಕು ಎಂಬುದನ್ನು ನಮೂದಿಸಲಾಗಿದೆ. ವಾಸ್ತು ಶಿಲ್ಪಿಗಳು/ಆರ್ಕಿಟೆಕ್ಟ್ ಸಂಸ್ಥೆಗಳು ಸೆ.23ಕ್ಕೆ ವಿನ್ಯಾಸಗಳ ಪ್ರಸ್ತಾವ ಸಲ್ಲಿಸಲು ಅಂತಿಮ ದಿನವಾಗಿದೆ.

ನಗರ ಪಾಲಿಕೆಗಳಿಗೆ ಚುನಾಯಿತ ಸದಸ್ಯರು ಹಾಗೂ ನಾಮನಿರ್ದೇಶಿತ ಸದಸ್ಯರಿಗೂ ಅನುವಾಗಲು ಕೌನ್ಸಿಲ್ ಸಭಾಂಗಣವನ್ನು ವಿಶಾಲವಾಗಿ ರೂಪಿಸಲು ನಿರ್ಧರಿಸಲಾಗಿದೆ. ಮುಂದಿನ ದಿನಗಳಲ್ಲಿ ನಗರ ಪಾಲಿಕೆಗಳಿಗೆ ಹೆಚ್ಚುವರಿ ಪ್ರದೇಶಗಳು ಸೇರಿಕೊಂಡು ಸದಸ್ಯರ ಸಂಖ್ಯೆ ಅಧಿಕವಾದರೆ ಆಸನಗಳನ್ನು ಹೆಚ್ಚಿಸಿಕೊಳ್ಳುವ ಅವಕಾಶವೂ ಹೊಸ ಕಟ್ಟಡಗಳಲ್ಲಿ ಇರಲಿದೆ ಎಂದು ಹೇಳಲಾಗಿದೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆಗೆ (ಬಿಸಿಸಿಸಿ) ಈಗಿರುವ ಜಿಬಿಎ ಕಟ್ಟಡದಲ್ಲೇ, ಆಡಳಿತಾತ್ಮಕ ಕಚೇರಿಗಳು, ಕೌನ್ಸಿಲ್ ಸಭೆ ನಡೆಸಲು ಅವಕಾಶ ಮಾಡಿಕೊಡಲು ಅನೆಕ್ಸ್ ಕಟ್ಟಡಗಳನ್ನು ನೀಡುವ ಬಗ್ಗೆ ಆಲೋಚಿಸಲಾಗುತ್ತಿದೆ. ಆದ್ದರಿಂದ ಹೊಸ ವಿನ್ಯಾಸದ ಪ್ರಸ್ತಾವದಲ್ಲಿ ಬಿಸಿಸಿಸಿಯನ್ನು ಸೇರಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದರು.

ನಗರ ಪಾಲಿಕೆ ಕಟ್ಟಡದಲ್ಲಿ ಏನೇನಿರಲಿದೆ?

- ಆಯುಕ್ತರ ಕಚೇರಿ, ಸಭಾಂಗಣ
- ಮೇಯರ್ ಕಚೇರಿ, ಉಪ ಮೇಯರ್ ಕಚೇರಿ
- 150 ಸದಸ್ಯರಿಗಾಗಿ ಕೌನ್ಸಿಲ್ ಸಭಾಂಗಣ
- 20 ಸಮಿತಿ ಕೊಠಡಿ
- ಸಭಾಂಗಣಗಳು
- ಕ್ಯಾಂಟೀನ್
- ಕೇಂದ್ರೀಕೃತ ನಿಯಂತ್ರಣ ಕೊಠಡಿ
- ಸ್ಟ್ರಾಂಗ್ ರೂಂ/ ಸ್ಟೋರ್ ರೂಂ
- ವಲಯ -1 ಮತ್ತು 2ರ ಜಂಟಿ ಆಯುಕ್ತರರ ಕಚೇರಿಗಳು, ಸಭಾಂಗಣ, ಉಪ ಆಯುಕ್ತರು, ಮುಖ್ಯ ಎಂಜಿನಿಯರ್, ಹಣಕಾಸು ವಿಭಾಗ, ಅಧೀಕ್ಷಕ ಎಂಜಿನಿಯರ್, ನಗರ ಯೋಜನೆ, ಸಮಿತಿ ಕೊಠಡಿಗಳು. ಹೆಚ್ಚುವರಿ ಆಯುಕ್ತರ ಕೊಠಡಿ ಮತ್ತು ಕಚೇರಿ ಸಭಾಂಗಣ. ಅರಣ್ಯ, ತೋಟಗಾರಿಕೆ, ಆರೋಗ್ಯ-ವಿಪತ್ತು ನಿರ್ವಹಣೆ, ಬಿಎಂಟಿಎಫ್, ಕಾನೂನು, ಭದ್ರತೆ, ಎಂಪಿಡಿ ವಿಭಾಗಗಳಿಗೆ ಕಚೇರಿ ಹಾಗೂ ಸಾಮಾನ್ಯ ಸೌಲಭ್ಯಗಳು.

ಟೆಂಡರ್ ಪರಿಶೀಲನಾ ಸಮಿತಿ

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಹಂತದಲ್ಲಿ ಕೈಗೊಳ್ಳುವ ಎಲ್ಲ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟೆಂಡರ್‌ಗಳ ತಾಂತ್ರಿಕ ಮತ್ತು ಆರ್ಥಿಕ ಪರಿಶೀಲನಾ ಸಮಿತಿಯನ್ನು ರಚಿಸಿ ನಗರಾಭಿವೃದ್ಧಿ ಇಲಾಖೆ ಗುರುವಾರ ಆದೇಶಿಸಿದೆ.

ಸಮಿತಿ: ಅಧ್ಯಕ್ಷ- ಜಿಬಿಎ ಮುಖ್ಯ ಆಯುಕ್ತ, ಸದಸ್ಯರು- ಜಿಬಿಎ ಆಡಳಿತದ ವಿಶೇಷ ಆಯುಕ್ತ, ಜಿಬಿಎ ಪ್ರಧಾನ ಎಂಜಿನಿಯರ್. ಸದಸ್ಯ ಕಾರ್ಯದರ್ಶಿ- ಕಾಮಗಾರಿಗೆ ಸಂಬಂಧಿಸಿದ ಜಿಬಿಎ ಮುಖ್ಯ ಎಂಜಿನಿಯರ್.

ಹಿಂಡನ್‌ಬರ್ಗ್ ಆರೋಪ: ಅದಾನಿ ದೋಷಮುಕ್ತ

ನವದೆಹಲಿ (ಪಿಟಿಐ): ಉದ್ಯಮಿ ಗೌತಮ್ ಅದಾನಿ ಹಾಗೂ ಅವರ ನೇತೃತ್ವದ ಉದ್ಯಮ ಸಮೂಹವು ಷೇರು ಮೌಲ್ಯದ ಮೇಲೆ ಕೃತಕವಾಗಿ ಪ್ರಭಾವ ಬೀರುವ ಕೆಲಸಗಳಲ್ಲಿ ತೊಡಗಿದ್ದ ಆರೋಪದಿಂದ ಮುಕ್ತವಾಗಿವೆ. ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಈ ಆರೋಪ ಹೊರಿಸಿತ್ತು.

ಗೌತಮ್ ಅದಾನಿ

ಆರೋಪದ ಕುರಿತಾಗಿ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ತನಿಖೆ ನಡೆಸಿತ್ತು. ಆರೋಪಕ್ಕೆ ಯಾವುದೇ ಸಾಕ್ಷ್ಯಗಳು ಇಲ್ಲ ಎಂದು ಸೆಬಿ ಹೇಳಿದೆ.ವಿಸ್ತೃತ ತನಿಖೆ ನಡೆಸಲಾಗಿದೆ, ಕಂಪನಿಯ ಆಂತರಿಕ ಸಂಗತಿಗಳನ್ನು ಸಾರ್ವಜನಿಕರಿಗಿಂತ ಮೊದಲೇ ತಿಳಿದುಕೊಂಡು ಷೇರು ವಹಿವಾಟು ನಡೆಸಿದ್ದಕ್ಕೆ (ಇನ್‌ಸೈಡರ್ ಟ್ರೇಡಿಂಗ್), ಷೇರು ಬೆಲೆಯ ಮೇಲೆ ಕೃತಕವಾಗಿ ಪ್ರಭಾವ ಬೀರಿದ್ದಕ್ಕೆ ಹಾಗೂ ಸಾರ್ವಜನಿಕರು ಹೊಂದಿರಬೇಕಾದ ಷೇರುಗಳ ಪ್ರಮಾಣಕ್ಕೆ ಸಂಬಂಧಿಸಿದ ನಿಯಮಗಳನ್ನು ಉಲ್ಲಂಘಿಸಿದ್ದಕ್ಕೆ ಸಾಕ್ಷ್ಯಗಳು ಇಲ್ಲ ಎಂದು ಎರಡು ಪ್ರತ್ಯೇಕ ಆದೇಶಗಳಲ್ಲಿ ಸೆಬಿ ಹೇಳಿದೆ.

ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಈಗ ಬಾಗಿಲು ಮುಚ್ಚಿದೆ. 2023ರ ಜನವರಿಯಲ್ಲಿ ವರದಿಯೊಂದನ್ನು ಪ್ರಕಟಿಸಿದ್ದ ಹಿಂಡನ್‌ಬರ್ಗ್ ಅದಾನಿ ಸಮೂಹದ ಮೇಲೆ ಹಲವು ಆರೋಪಗಳನ್ನು ಹೊರಿಸಿತ್ತು. ಆರೋಪಗಳು ಇರುವ ವರದಿ ಪ್ರಕಟವಾದ ನಂತರದಲ್ಲಿ ಸಮೂಹದ ಕಂಪನಿಗಳ ಷೇರುಮೌಲ್ಯವು ತೀವ್ರ ಕುಸಿತ ಕಂಡಿತ್ತು.

‘ಕ್ಷಮೆ ಕೇಳಲಿ’: ‘ದುರುದ್ದೇಶದ ವರದಿ ಯನ್ನು ಬಳಸಿಕೊಂಡು ತಪ್ಪು ಸಂಕಥನಗ ಳನ್ನು ಹರಡಿದವರು ದೇಶದ ಮುಂದೆ ಕ್ಷಮೆ ಕೇಳಬೇಕು ಎಂದು ಗೌತಮ್ ಅದಾನಿ ಹೇಳಿದ್ದಾರೆ.

450 ಹಾಸಿಗೆಗಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷ್ಣ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನ (ಕಿಮ್ಸ್) ಕರ್ನಾಟಕದ ಮೊದಲ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ಬೆಂಗಳೂರಿನಲ್ಲಿ ತೆರೆಯಲಾಗಿದೆ ಎಂದು ಘೋಷಿಸಿದೆ.

ಅತ್ಯಾಧುನಿಕ ಸೌಲಭ್ಯ ಹೊಂದಿರುವ 450 ಹಾಸಿಗೆಗಳ, ಮಲ್ಟಿ ಸ್ಪೆಷಾಲಿಟಿ ತೃತೀಯ ಆರೈಕೆ ಆಸ್ಪತ್ರೆಯಾಗಿದೆ. ಆಸ್ಪತ್ರೆಯು 35ಕ್ಕೂ ಹೆಚ್ಚು ವೈದ್ಯಕೀಯ ಮತ್ತು ಶಸ್ತ್ರಚಿಕಿತ್ಸಾ ವಿಶೇಷತೆಗಳು, 120ಕ್ಕೂ ಅಧಿಕ ಸುಧಾರಿತ ಐಸಿಯು ಹಾಸಿಗೆಗಳು ಮತ್ತು 100ಕ್ಕೂ ಹೆಚ್ಚು ಹೊರರೋಗಿ ವಿಭಾಗದ(ಒಪಿಡಿ) ಕೊಠಡಿಗಳನ್ನು ಹೊಂದಿದೆ.

‘ಬೆಂಗಳೂರಿನಲ್ಲಿ ನಮ್ಮ ಮೊದಲ ಆಸ್ಪತ್ರೆ ಉದ್ಘಾಟನೆ ಆಗಿರುವುದರಿಂದ ಎಲ್ಲರಿಗೂ ಕೈಗೆಟಕುವ ದರದಲ್ಲಿ ಗುಣಮಟ್ಟದ ಚಿಕಿತ್ಸೆ ಸಿಗಲಿದೆ. ಶೀಘ್ರದಲ್ಲೇ ಎಲೆಕ್ಟ್ರಾನಿಕ್ ಸಿಟಿಯಲ್ಲಿ ನಮ್ಮ ಎರಡನೇ ಘಟಕವನ್ನು ತೆರೆಯಲಾಗುವುದು’ ಎಂದು ಆಸ್ಪತ್ರೆಯ ಆಡಳಿತ ಮಂಡಳಿ ತಿಳಿಸಿದೆ.

ತೆಲಂಗಾಣ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಆಸ್ಪತ್ರೆಗಳನ್ನು ಹೊಂದಿರುವ ಭಾರತದ ಅತಿದೊಡ್ಡ ಕಾರ್ಪೊರೇಟ್ ಸಂಸ್ಥೆಗಳಲ್ಲಿ ಕಿಮ್ಸ್ ಒಂದಾಗಿದೆ. ಇದು ಕೈಗೆಟಕುವ ದರದಲ್ಲಿ ಆರೋಗ್ಯ ಸೇವೆಗಳನ್ನು ಒದಗಿಸುತ್ತದೆ. ತೆಲಂಗಾಣ, ಆಂಧ್ರಪ್ರದೇಶ, ಮಹಾರಾಷ್ಟ್ರ, ಕೇರಳ, ಕರ್ನಾಟಕದಲ್ಲಿ 25 ಆಸ್ಪತ್ರೆಗಳು ಮತ್ತು 8,300ಕ್ಕೂ ಹೆಚ್ಚು ಹಾಸಿಗೆಗಳನ್ನು ಹೊಂದಿದೆ. ಹೃದಯ ಚಿಕಿತ್ಸೆ, ಅಂಕಾಲಜಿ, ನರವಿಜ್ಞಾನ, ಮೂಳೆಚಿಕಿತ್ಸೆ, ಅಂಗಾಂಗ ಕಸಿ, ಮೂತ್ರಪಿಂಡ, ತಾಯಿ ಮತ್ತು ಮಗುವಿನ ಆರೈಕೆ ಸೇರಿದಂತೆ 25 ವಿಶೇಷ ಮತ್ತು ಸಮಗ್ರ ಆರೋಗ್ಯ ಸೇವೆಗಳನ್ನು ಕಿಮ್ಸ್ ನೀಡುತ್ತಿದೆ ಎಂದು ಹೇಳಿದೆ.

ತುಪಾಕಿ ಪಿಸುಮಾತು ಕಾದಂಬರಿ ಜನಾರ್ಪಣೆ

ಬೆಂಗಳೂರು: ಲೇಖಕ ಕೆ. ಎಲ್. ವಿನೋದ್ ಅವರ ಎರಡನೇ ಕಾದಂಬರಿ ತುಪಾಕಿಯ ಪಿಸುಮಾತು ಬುಧವಾರ ಚಿತ್ರಕಲಾ ಪರಿಷತ್‌ನಲ್ಲಿ ಜನಾರ್ಪಣೆಗೊಂಡಿತು.

ಕಾದಂಬರಿ ಬಿಡುಗಡೆ ಮಾಡಿದ ಲೇಖಕಿ ಡಾ. ಧರಣಿದೇವಿ ಮಾಲಗತ್ತಿ ಮಾತನಾಡಿ, ‘ದಲಿತ ಸಾಹಿತ್ಯಕ್ಕೆ ಅರ್ಧ ಶತಮಾನಗಳ ಇತಿಹಾಸವಿದೆ. ಮರಾಠಿಯಲ್ಲಿ ಆತ್ಮಕಥೆಯೇ ಮೊದಲ ಕೃತಿಯಾಗಿ ಬಂದು ವಿಮರ್ಶೆಗೂ ಒಳಪಟ್ಟಿತ್ತು. ಅಲ್ಲಿನ ಅನುಭವ, ವಿಷಯ, ವಿಶಿಷ್ಟವಾಗಿಯೂ, ತೀಕ್ಷ್ಣವಾಗಿಯೂ ಜನರನ್ನು ತಟ್ಟಿತ್ತು. ದಲಿತ ಸಾಹಿತ್ಯದಲ್ಲಿ ಈವರೆಗೆ ಏನು ಬಂತೋ ಅದಕ್ಕಿಂತ ಮುಂದೆ ಹೋಗಿ ಪ್ರಶ್ನಿಸುವ ಗುಣ ವಿನೋದ್ ಅವರ ಕಾದಂಬರಿಯಲ್ಲಿ ಕಾಣಬಹುದು ಎಂದರು.

ಕಾದಂಬರಿಯ ಕರ್ತೃ ವಿನೋದ್ ಮಾತನಾಡಿ, ‘ಸತ್ಯವನ್ನು ಮಾತಾಡುವ ಲೇಖನಿಯ ವಿರುದ್ಧ ತುಪಾಕಿ ಪಿಸುಗುಡುತ್ತದೆ. ಇದು ಕಾದಂಬರಿಯ ಮುಖ್ಯ ಎಳೆ. ಈ ಕಾದಂಬರಿಯನ್ನು 2018 ರಲ್ಲೇ ಬರೆದಿದ್ದು ಈಗ ಬಿಡುಗಡೆ ಆಗುತ್ತಿದೆ ಎಂದರು.

ಲೇಖಕ ಪ್ರಕಾಶ್ ರಾಜ್ ಮೇಹು ಅವರು ಕಾದಂಬರಿ ಕುರಿತು ಮಾತನಾಡಿದರು. ಬೆಂಗಳೂರು ವಿಶ್ವವಿದ್ಯಾಲಯ ರಾಮನಗರ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಗಂಗಾಧರ್ ಅಧ್ಯಕ್ಷತೆ ವಹಿಸಿದ್ದರು. ಕೊ. ಪ್ರಕಾಶನದ ಸುರೇಶ್, ಲೇಖಕಿಯರಾದ ಕೆ .ಷರೀಫ, ದು. ಸರಸ್ವತಿ ಹಾಜರಿದ್ದರು.

ಸುದ್ದಿ 2 ನಿಮಿಷ

‘ಕಾಂಗ್ರೆಸ್ ಸರ್ಕಾರದ ಪಂಚೇಂದ್ರಿಯಗಳು ನಿಷ್ಕ್ರಿಯ’

ನವದೆಹಲಿ: ಬೆಂಗಳೂರಿನ ರಸ್ತೆಗಳ ದುಸ್ಥಿತಿಯ ಬಗ್ಗೆ ದನಿ ಎತ್ತಿರುವ ಉದ್ಯಮಿಗಳು ಯಾವುದೇ ಕಾರಣಕ್ಕೂ ರಾಜ್ಯವನ್ನು ಬಿಟ್ಟು ಹೋಗಬಾರದು ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಎಂದು ಮನವಿ ಮಾಡಿದ್ದಾರೆ.

ಈ ಬಗ್ಗೆ ಮಾಧ್ಯಮಗಳಿಗೆ ಹೇಳಿಕೆ ಬಿಡುಗಡೆ ಮಾಡಿರುವ ಅವರು, ‘ಈ ನಗರಕ್ಕೆ ಮಹಾನ್ ಪರಂಪರೆ, ಹಿನ್ನೆಲೆ ಇದೆ. ಈ ಎಮ್ಮೆ ಚರ್ಮದ ಸರ್ಕಾರಕ್ಕೆ ಪಾಠ ಕಲಿಸುತ್ತೇವೆ. ನಿಮ್ಮ ಜತೆ ನಾವು, ಇಡೀ ಕರ್ನಾಟಕದ ಜನತೆ ಇದ್ದೇವೆ. ಹೋಗುತ್ತೇವೆ ಎನ್ನುವ ಮಾತನ್ನು ಮನಸ್ಸಿನಿಂದ ತೆಗೆದುಬಿಡಿ‘ ಎಂದಿದ್ದಾರೆ.

‘ಬೆಂಗಳೂರು ಮತ್ತು ಕರ್ನಾಟಕ ಭ್ರಷ್ಟರ ಕೈಯ್ಯಲ್ಲಿ ಸಿಲುಕಿ ನರಳುತ್ತಿವೆ. ಹೆಜ್ಜೆ ಹೆಜ್ಜೆಗೂ ಸಾವಿನ ಗುಂಡಿ. ಗ್ರೇಟರ್ ಬೆಂಗಳೂರು ಎಂದರೆ ಇದೇನಾ? ಭಂಡ ಸರ್ಕಾರಕ್ಕೆ ಅರ್ಥವಾಗುತ್ತಿಲ್ಲ. ಈ ಸರ್ಕಾರದ ಪಂಚೇಂದ್ರಿಯಗಳು ನಿಷ್ಕ್ರಿಯವಾಗಿವೆ’ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ನಾಡಪ್ರಭು ಕೆಂಪೇಗೌಡರು ಕಟ್ಟಿದ ಹೆಮ್ಮೆಯ ಬೆಂಗಳೂರು ನಗರದ ಪ್ರತಿಷ್ಠೆಗೆ ಘೋರ ಪೆಟ್ಟು ಬಿದ್ದಿದೆ. ಕಂಡೆಲ್ಲೆಲ್ಲ ಕಸದ ರಾಶಿ. ಜಿಬಿಎ ಏನು ಮಾಡುತ್ತಿದೆ? ಜನರ ತೆರಿಗೆ ದುಡ್ಡು ನುಂಗಿ ಗೊರಕೆ ಹೊಡೆಯುತ್ತಿದೆಯಾ? ಬೆಂಗಳೂರು ಈಗ ಗುಂಡಿಯೂರು ಆಗಿ ಕುಖ್ಯಾತಿ ಆಗುತ್ತಿರುವುದು ದುರ್ದೈವ’ ಎಂದು ಅವರು ಹೇಳಿದ್ದಾರೆ.

‘ನಾಗಮೋಹನದಾಸ್ ಆಯೋಗದ ವರದಿ ಅವೈಜ್ಞಾನಿಕ’

ಬೆಂಗಳೂರು: ‘ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗದ ವರದಿಯು ಅವೈಜ್ಞಾನಿಕವಾಗಿದ್ದು, ಇದರಲ್ಲಿರುವ ಅಂಕಿ-ಅಂಶಗಳನ್ನು ಮರು ಪರಿಶೀಲಿಸಬೇಕು. ಜನಸಂಖ್ಯೆಯ ಆಧಾರದ ಮೇಲೆ ಪರಿಶಿಷ್ಟ ಜಾತಿಯ ಬಲಗೈ ಸಮುದಾಯಕ್ಕೆ ಸೇರಿದ ಜಾತಿಗಳನ್ನು ಪ್ರವರ್ಗ ‘ಎ’ ಗುಂಪಿಗೆ ಸೇರಿಸಿ, ಆದೇಶ ಹೊರಡಿಸಬೇಕು’ ಎಂದು ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ ಆಗ್ರಹಿಸಿದೆ.

ನಾಗಮೋಹನದಾಸ್ ವರದಿಯ ಒಳ ಸಂಚು ತಿಳಿಯುವುದು, ಸಾಮಾಜಿಕ, ಶೈಕ್ಷಣಿಕ ಗಣತಿಯಲ್ಲಿ ಬಲಗೈ ಜಾತಿಗಳ ಜವಾಬ್ದಾರಿ ಕುರಿತು ಗುರುವಾರ ಇಲ್ಲಿ ನಡೆದ ವಿಚಾರಸಂಕಿರಣದಲ್ಲಿ ಈ ಸಂಬಂಧ ನಿರ್ಣಯ ಕೈಗೊಂಡಿದೆ.

‘ಸೆ. 3ರಂದು ರೋಸ್ಟರ್ ಬಿಂದುಗಳನ್ನು ನಿಗದಿಪಡಿಸಿ ಹೊರಡಿಸಿರುವ ಆದೇಶವನ್ನು ಹಿಂಪಡೆಯಬೇಕು. ಹಿಂದುಳಿದ ವರ್ಗಗಳ ಆಯೋಗದ ವರದಿಯ ನಂತರವೇ ಪರಿಶಿಷ್ಟ ಜಾತಿಯ ಒಳ ಮೀಸಲಾತಿಯನ್ನು ಜಾರಿಗೊಳಿಸಬೇಕು. ಬಲಗೈ ಜಾತಿಗೆ ಆಗಿರುವ ಅನ್ಯಾಯವನ್ನು ಕೂಡಲೇ ಸರಿಪಡಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಮ್ಮ ಸಮುದಾಯದಿಂದ ಪ್ರತಿರೋಧ ಎದುರಿಸಬೇಕಾಗುತ್ತದೆ’ ಎಂದು ಎಚ್ಚರಿಕೆ ನೀಡಿದೆ.

ವಿಚಾರಸಂಕಿರಣದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ನಿವೃತ್ತ ಐಎಎಸ್ ಅಧಿಕಾರಿ ಎಸ್. ಸಿದ್ದಯ್ಯ, ‘ನಾಗಮೋಹನದಾಸ್ ಆಯೋಗದ ವರದಿಯು ಅಪೂರ್ಣವಾಗಿದ್ದು, ಇದು ಬಲಗೈ ಜನಾಂಗದ ಭವಿಷ್ಯಕ್ಕೆ ಮಾರಕವಾಗಿದೆ’ ಎಂದು ಆರೋಪಿಸಿದರು.

ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಜಂಟಿ ನಿರ್ದೇಶಕ ಡಿ. ಚಂದ್ರಶೇಖರಯ್ಯ, ಶಾಸಕ ಪಿ.ಎಂ. ನರೇಂದ್ರಸ್ವಾಮಿ, ವಿಧಾನ ಪರಿಷತ್ ಸದಸ್ಯರಾದ ಎಫ್.ಎಸ್. ಜಕ್ಕಪ್ಪನವರ, ಮಾಜಿ ಶಾಸಕ ಕುಮಾರಸ್ವಾಮಿ, ಮಾಜಿ ಸಚಿವ ಬಿ.ಬಿ. ನಿಂಗಯ್ಯ, ಮಾಜಿ ಸಂಸದ ಮುನಿಸ್ವಾಮಿ, ಒಕ್ಕೂಟದ ಬಿ. ಶಿವಣ್ಣ ಉಪಸ್ಥಿತರಿದ್ದರು.

ಜೆ.ಸಿ.ರಸ್ತೆಯಲ್ಲಿ ಜಿಬಿಎ ಆಯುಕ್ತ ಮಹೇಶ್ವರ್ ರಾವ್ ಪರಿಶೀಲನೆ

‘ವೈಟ್ ಟಾಪಿಂಗ್ ಶೀಘ್ರ ಮುಗಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆ.ಸಿ ರಸ್ತೆಯಲ್ಲಿ ನಡೆಯುತ್ತಿರುವ ವೈಟ್ ಟಾಪಿಂಗ್ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಗುರುವಾರ ಅನಿರೀಕ್ಷಿತವಾಗಿ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಅವರು, ಜೆ.ಸಿ. ರಸ್ತೆಯ ಮಿನರ್ವ ವೃತ್ತದಿಂದ ಟೌನ್‌ಹಾಲ್‌ವರೆಗಿನ ಒಂದು ಕಿ.ಮೀ ಉದ್ದದ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದೆ. ರಸ್ತೆಯ ಅರ್ಧ ಭಾಗದಲ್ಲಿ ಕಾಮಗಾರಿ ಪ್ರಾರಂಭಿಸಿ, ಉಳಿದರ್ಧ ಭಾಗದಲ್ಲಿ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ ಎಂದರು.

‘ಜೆ.ಸಿ. ರಸ್ತೆಯಲ್ಲಿ ನಡೆಯುತ್ತಿರುವ ವೈಟ್ ಟಾಪಿಂಗ್ ಕಾಮಗಾರಿಯನ್ನು ಸೆಪ್ಟೆಂಬರ್ 2ರಂದು ಬಿ-ಸ್ಮೈಲ್‌ಗೆ ಹಸ್ತಾಂತರಿಸಲಾಗಿದೆ. ಆ ಬಳಿಕ ವಾಹನ ಸಂಚಾರಕ್ಕೆ ಯಾವುದೇ ಅಡಚಣೆಯಾಗದಂತೆ ಕಾಮಗಾರಿಗೆ ವೇಗ ನೀಡಲಾಗಿದೆ. ಒಂದು ಭಾಗದಲ್ಲಿ ನಡೆಯುತ್ತಿರುವ ಕಾಮಗಾರಿಯನ್ನು ಸೆ.30ರೊಳಗಾಗಿ ಪೂರ್ಣಗೊಳಿಸಿ, ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು.

ಜೆ.ಸಿ ರಸ್ತೆಯಲ್ಲಿ ಅರ್ಧಭಾಗ ವೈಟ್ ಟಾಪಿಂಗ್ ಕಾಮಗಾರಿ ಮುಗಿದಿದೆ

ಉಳಿದರ್ಧ ಭಾಗವನ್ನು ಅಕ್ಟೋಬರ್ 31ರ ಒಳಗಾಗಿ ಪೂರ್ಣಗೊಳಿಸಲಾಗುವುದು’ ಎಂದು ಬಿಸ್ಮೈಲ್‌ನ ತಾಂತ್ರಿಕ ನಿರ್ದೇಶಕ ಬಿ.ಎಸ್.ಪ್ರಹ್ಲಾದ್ ತಿಳಿಸಿದರು.

‘ನಗರ ಪಾಲಿಕೆಗಳಿಗೆ ತಲಾ ₹25 ಕೋಟಿ ಬಿಡುಗಡೆ ಮಾಡಿದ್ದು, ಆ ಹಣದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯವನ್ನು ಕೂಡಲೇ ಕೈಗೊಳ್ಳಬೇಕು’ ಎಂದು ಮಹೇಶ್ವರ್ ರಾವ್ ಅವರು ನಗರ ಪಾಲಿಕೆಗಳ ಆಯುಕ್ತರಿಗೆ ಸೂಚಿಸಿದರು.

ಬಿಸಿಸಿಸಿ ಆಯುಕ್ತ ರಾಜೇಂದ್ರ ಚೋಳನ್ ಮಾತನಾಡಿ, ‘ಕೇಂದ್ರ ನಗರ ಪಾಲಿಕೆಯಲ್ಲಿ ಈಗಾಗಲೇ ನೋಡಲ್ ಅಧಿಕಾರಿಗಳನ್ನು ನಿಯೋಜಿಸಿದ್ದು, ರಸ್ತೆ ಗುಂಡಿಗಳನ್ನು ಮುಚ್ಚಲು ಸಮಗ್ರ ಯೋಜನೆ ರೂಪಿಸಲಾಗಿದೆ. 30ಕ್ಕೂ ಹೆಚ್ಚು ತಂಡಗಳನ್ನು ನಿಯೋಜನೆ ಮಾಡಿದ್ದು, ಪ್ರತಿ ರಸ್ತೆಗೂ ಪ್ರತ್ಯೇಕ ಏಜೆನ್ಸಿಯನ್ನು ನಿಗದಿಪಡಿಸಿ, ಕಾಲಮಿತಿಯಲ್ಲಿ ಸಾಮೂಹಿಕವಾಗಿ ರಸ್ತೆ ಗುಂಡಿಗಳನ್ನು ಮುಚ್ಚಲಾಗುತ್ತದೆ’ ಎಂದರು.

ರಸ್ತೆ ಅಗೆತ ಸ್ಥಗಿತ: ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೆಂಗಳೂರು ಜಲಮಂಡಳಿ, ಬೆಸ್ಕಾಂ, ಕೆಪಿಟಿಸಿಎಲ್ ಸೇರಿದಂತೆ ಯಾವುದೇ ಇಲಾಖೆಗಾಗಲಿ ರಸ್ತೆ ಅಗೆಯಲು ಅನುಮತಿ ನೀಡಬಾರದು. ಪ್ರಸ್ತುತ ನಡೆಯುತ್ತಿರುವ ಎಲ್ಲಾ ರಸ್ತೆ ಅಗೆತ ಕಾಮಗಾರಿಗಳನ್ನು ಸ್ಥಗಿತಗೊಳಿಸಬೇಕು ಎಂದು ರಾಜೇಂದ್ರ ಚೋಳನ್ ಸೂಚಿಸಿದರು.

ವಿವಿಧ ಸ್ಥಳಗಳಿಗೆ ಗುರುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ‘ಕಾಮಗಾರಿ ಪೂರ್ಣಗೊಂಡಿದ್ದರೂ ಅಗೆದಿರುವ ರಸ್ತೆಗಳ ದುರಸ್ತಿ ಕಾರ್ಯವನ್ನು ಇಲಾಖೆಗಳು ನಡೆಸಿಲ್ಲ. ಆದ್ದರಿಂದ ಅವರಿಗೆ ಮುಂದೆ ಅನುಮತಿ ನೀಡಬೇಡಿ’ ಎಂದರು.

ಬಿಸಿಸಿಸಿ ನಿಯಂತ್ರಣ ಕೊಠಡಿ ವಿವರ

ಬೆಂಗಳೂರು ಕೇಂದ್ರ ನಗರ ಪಾಲಿಕೆ (ಬಿಸಿಸಿಸಿ) ವ್ಯಾಪ್ತಿಯ ವಿಧಾನಸಭಾ ಕ್ಷೇತ್ರಗಳಾದ ಶಾಂತಿನಗರ, ಸಿ.ವಿ. ರಾಮನ್‌ನಗರ, ಗಾಂಧಿನಗರ, ಚಾಮರಾಜಪೇಟೆ, ಚಿಕ್ಕಪೇಟೆ ಮತ್ತು ಶಿವಾಜಿನಗರ ವ್ಯಾಪ್ತಿಯಲ್ಲಿನ ಸಾರ್ವಜನಿಕರು ಮಾಹಿತಿ ಪಡೆಯಲು ಅಥವಾ ದೂರುಗಳನ್ನು ನೀಡಲು ಸಹಾಯವಾಗುವಂತೆ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಲಾಗಿದೆ.

ನಿಯಂತ್ರಣ ಕೊಠಡಿ ವಿಳಾಸ: ಮೆಯೊಹಾಲ್ ಕೋರ್ಟ್ ಆವರಣ, ಗೇಟ್ ನಂ. 1, ಮೆಯೊಹಾಲ್ ಬಸ್ ನಿಲ್ದಾಣದ ಹತ್ತಿರ, ರೆಸಿಡೆನ್ಸಿ ರಸ್ತೆ, ಬೆಂಗಳೂರು – 560001. ನಿಯಂತ್ರಣ ಕೊಠಡಿ: 080-22975803, ಮೊಬೈಲ್: 9480685702.

ಸಿಂಗನಾಯಕನಹಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರ ಆಯ್ಕೆ

ಪ್ರಜಾವಾಣಿ ವಾರ್ತೆ

ಯಲಹಂಕ: ಸಿಂಗನಾಯಕನಹಳ್ಳಿ ಗ್ರಾಮ ಪಂಚಾಯಿತಿಯ ನೂತನ ಉಪಾಧ್ಯಕ್ಷರಾಗಿ ಬಿ.ಎನ್. ಸುನಂದ ಪ್ರಕಾಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸುನಂದ ಪ್ರಕಾಶ್

ಜಿ.ಸಿ. ಮಂಜುನಾಥ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕಾಗಿ ಗುರುವಾರ ಚುನಾವಣಾ ಪ್ರಕ್ರಿಯೆ ನಡೆಯಿತು. ಒಟ್ಟು 23 ಸದಸ್ಯಬಲ ಹೊಂದಿರುವ ಪಂಚಾಯಿತಿಯಲ್ಲಿ ಸುನಂದ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧ ಆಯ್ಕೆ ನಡೆಯಿತು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಅಮರಾವತಮ್ಮ, ಮಾಜಿ ಅಧ್ಯಕ್ಷ ಟಿ.ಮುನಿರೆಡ್ಡಿ, ಸದಸ್ಯರಾದ ಎಸ್.ಜಿ.ಪ್ರಶಾಂತ್‌ರೆಡ್ಡಿ, ಡಿ.ಹೇಮಂತ್‌ಕುಮಾರ್, ನಂಜೇಗೌಡ, ಕೆ.ಬಾಬು, ಮಲ್ಲೇಶ್, ಪದ್ಮಶ್ರೀ, ಭಾಗ್ಯಲಕ್ಷ್ಮಿ, ಜೀವಿತ, ಬಿಜೆಪಿ ಮುಖಂಡರಾದ ದಿಬ್ಬೂರು ಜಯಣ್ಣ, ಎಸ್.ಎನ್.ರಾಜಣ್ಣ, ಡಿ.ಜಿ. ಅಪ್ಪಯಣ್ಣ, ವಿಜಯಕುಮಾರ್ ಉಪಸ್ಥಿತರಿದ್ದರು.

ಗೊಂಬೆ ಹೇಳುತ್ತೈತೆ...

ಪ್ರಜಾವಾಣಿ ಚಿತ್ರ: ರಂಜು ಪಿ.

ನವರಾತ್ರಿ ಅಂಗವಾಗಿ ಬೆಂಗಳೂರಿನ ಬಸವನಗುಡಿಯ ಮಳಿಗೆಯೊಂದರಲ್ಲಿ ಗುರುವಾರ ದಸರಾ ಗೊಂಬೆಗಳ ಖರೀದಿಯಲ್ಲಿ ತೊಡಗಿದ್ದ ಜನ

ಹೊರ ವರ್ತುಲ ರಸ್ತೆಯ ವಿವಿಧ ಸ್ಥಳಗಳಿಗೆ ಭೇಟಿ ನೀಡಿದ ತುಷಾರ್ ಗಿರಿನಾಥ್

ಸಂಚಾರ ದಟ್ಟಣೆ ನಿವಾರಣೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಂಚಾರ ದಟ್ಟಣೆ ನಿವಾರಣೆಗಾಗಿ ಅವಶ್ಯಕ ಕಾಮಗಾರಿಗಳನ್ನು ಕೈಗೊಳ್ಳಬೇಕು ಎಂದು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಹೆಬ್ಬಾಳ ಜಂಕ್ಷನ್‌ವರೆಗಿನ ಹೊರ ವರ್ತುಲ ರಸ್ತೆಯಲ್ಲಿ ವಾಹನಗಳ ಸುಗಮ ಸಂಚಾರಕ್ಕೆ ತೆಗೆದುಕೊಳ್ಳಬೇಕಿರುವ ಸೂಕ್ತ ಕ್ರಮಗಳ ಕುರಿತು ವಿವಿಧ ಇಲಾಖೆಗಳ ಅಧಿಕಾರಿಗಳ ಜೊತೆ ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಿ, ಅವರು ಮಾತನಾಡಿದರು.

ರಸ್ತೆ ಗುಂಡಿಗಳನ್ನು ಮುಚ್ಚುವುದು, ರಸ್ತೆ ಮೇಲ್ಮೈ ದುರಸ್ತಿ, ಜಂಕ್ಷನ್‌ಗಳ ಅಭಿವೃದ್ಧಿ, ವೈಟ್ ಟಾಪಿಂಗ್ ಕಾಮಗಾರಿ, ರಸ್ತೆಗಳ ಮೇಲೆ ನೀರು ನಿಲ್ಲದಂತೆ ಕ್ರಮವಹಿಸಲು ಹಾಗೂ ಮೆಟ್ರೊ ಕಾಮಗಾರಿ ನಡೆಯುವ ಕಡೆ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ಅಧಿಕಾರಿಗಳಿಗೆ ಸೂಚಿಸಿದರು.

‘ಮೆಟ್ರೊ, ಜಲಮಂಡಳಿ, ಬೆಸ್ಕಾಂ, ಜಲಮಂಡಳಿಯ ಕಾಮಗಾರಿ ನಡೆಯುತ್ತಿರುವ ಕಡೆ ರಸ್ತೆಗಳನ್ನು ಅವರೇ ಸುಸ್ಥಿತಿಯಲ್ಲಿಡಬೇಕು. ಆ ರಸ್ತೆಯಲ್ಲಿ ಮೇಲ್ಮೈ ಹಾಳಾಗಿದ್ದರೆ, ರಸ್ತೆ ಗುಂಡಿಗಳು ಬಿದ್ದಿದ್ದರೆ ಅವರೇ ದುರಸ್ತಿ ಕಾರ್ಯ ಕೈಗೊಳ್ಳಬೇಕು. ಈ ಸಂಬಂಧ ವಿವಿಧ ಇಲಾಖೆಗಳು ಕಾಮಗಾರಿ ನಡೆಯುವ ರಸ್ತೆಗಳಲ್ಲಿ ಯಾವ ಇಲಾಖೆ ಕಾಮಗಾರಿ ನಡೆಸುತ್ತಿದೆ ಎಂಬ ನಾಮಫಲಕವನ್ನು ಅಳವಡಿಸಬೇಕು’ ಎಂದರು.

ಸಿಲ್ಕ್ ಬೋರ್ಡ್ ಜಂಕ್ಷನ್ ಬಳಿ ಜಲಾವೃತವಾಗುವುದನ್ನು ತಪ್ಪಿಸಬೇಕು. ಈ ಸಂಬಂಧ ರಾಜಕಾಲುವೆಗಳಲ್ಲಿ ನಿರಂತರವಾಗಿ ಹೂಳೆತ್ತಿ ಸ್ವಚ್ಛವಾಗಿರುವಂತೆ ನೋಡಿಕೊಳ್ಳಬೇಕು ಎಂದು ಹೇಳಿದರು.

ಅಗರ ಕೆರೆ ರಸ್ತೆಯ ವೈಟ್ ಟಾಪಿಂಗ್ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು. ಇಬ್ಲೂರು ಜಂಕ್ಷನ್ ಬಳಿ ಪಾದಚಾರಿಗಳ ಸುಗಮ ಸಂಚಾರಕ್ಕೆ ಸ್ಕೈವಾಕ್ ನಿರ್ಮಾಣ ಮಾಡಬೇಕು. ಹೊರವರ್ತುಲ ರಸ್ತೆಯಲ್ಲಿ 20 ಸ್ಥಳಗಳಲ್ಲಿ ಸರ್ವೀಸ್ ರಸ್ತೆಯಿಂದ ಪ್ರಮುಖ ರಸ್ತೆಗೆ ಒಳಗೆ-ಹೊರಗೆ ಹೋಗಲು ವಿನ್ಯಾಸ ರೂಪಿಸಿದರೆ ಶೇ 30ರಿಂದ 40ರಷ್ಟು ಸಂಚಾರ ದಟ್ಟಣೆ ಕಡಿಮೆ ಆಗಲಿದೆ. ಈ ಸಂಬಂಧ ಪಾಲಿಕೆ ಹಾಗೂ ಸಂಚಾರಿ ವಿಭಾಗದ ಸಹಕಾರದೊಂದಿಗೆ ವಿನ್ಯಾಸ ರೂಪಿಸಿ ತ್ವರಿತವಾಗಿ ಅನುಷ್ಠಾನಗೊಳಿಸಬೇಕು ಎಂದು ಸೂಚಿಸಿದರು.

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಶಾಂತಲಾ ನಗರದ ಲಾಂಗ್ ಫೋರ್ಡ್ ರಸ್ತೆಯಲ್ಲಿ, ರಸ್ತೆ ಮೇಲ್ಮೈ ಹಾಳಾಗಿರುವುದನ್ನು ಗಮನಿಸಿ, ಅವರೇ ಮೊಬೈಲ್‌ನಲ್ಲಿ ಫೋಟೊ ತೆಗೆದು ಸಂಬಂಧಪಟ್ಟ ಅಧಿಕಾರಿಗೆ ಕಳುಹಿಸಿ ದುರಸ್ತಿ ಕಾರ್ಯ ಕೈಗೊಳ್ಳಲು ಹೇಳಿದರು.

ಬೆಂಗಳೂರು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್, ಮೆಟ್ರೊ ವ್ಯವಸ್ಥಾಪಕ ನಿರ್ದೇಶಕ ರವಿಶಂಕರ್, ನಗರ ಪಾಲಿಕೆ ಆಯುಕ್ತರಾದ ಕೆ.ಎನ್ ರಮೇಶ್, ರಮೇಶ್ ಡಿ.ಎಸ್, ಪೊಮ್ಮಲ ಸುನೀಲ್ ಕುಮಾರ್ ಉಪಸ್ಥಿತರಿದ್ದರು.

ನಗರ ಬಿಟ್ಟು ಹೋಗಲ್ಲ: ಬ್ಲ್ಯಾಕ್‌ಬಕ್

ಹೊರವರ್ತುಲ ರಸ್ತೆಯ (ಒಆರ್‌ಆರ್) ಬೆಳ್ಳಂದೂರಿನಿಂದ ಸ್ಥಳಾಂತರವಾಗುತ್ತೇವೆ ಎಂದು ಎರಡು ದಿನಗಳ ಹಿಂದೆ ಹೇಳಿದ್ದ ಲಾಜಿಸ್ಟಿಕ್ ಕಂಪನಿ ಬ್ಲ್ಯಾಕ್‌ಬಕ್ ಸಿಇಒ ರಾಜೇಶ್ ಯಬಾಜಿ, ‘ನಮ್ಮ ಕಂಪನಿ ನಗರವನ್ನು ತೊರೆಯುತ್ತಿಲ್ಲ, ಸ್ಥಳಾಂತರಗೊಳ್ಳುತ್ತಿದೆ ಅಷ್ಟೇ. ನಾವು ನಗರದಲ್ಲೇ ಇನ್ನಷ್ಟು ವಿಸ್ತರಣೆ ಮಾಡಲಿದ್ದೇವೆ’ ಎಂದು ಗುರುವಾರ ‘ಎಕ್ಸ್’ನಲ್ಲಿ ಹೇಳಿಕೆ ನೀಡಿದ್ದಾರೆ.

‘ಬೆಂಗಳೂರು ಎಂದಿಗೂ ನಮ್ಮ ಮನೆ. ನಮ್ಮ ಅಗತ್ಯಗಳು ಮತ್ತು ಸಮಸ್ಯೆಗಳನ್ನು ಸರ್ಕಾರ, ಅಧಿಕಾರಿಗಳಿಗೆ ತಿಳಿಸಿ, ಅವುಗಳನ್ನು ಬಗೆಹರಿಸಿಕೊಳ್ಳಲು ನೆರವು ಪಡೆಯುತ್ತೇವೆ’ ಎಂದಿದ್ದಾರೆ.

ವಿಪತ್ತು ಸಂದರ್ಭದಲ್ಲಿ ಸನ್ನದ್ಧರಾಗುವುದು ಹೇಗೆ ಎಂಬ ಕುರಿತು ವಡ್ಡರಹಳ್ಳಿಯಲ್ಲಿ ಪ್ರಾತ್ಯಕ್ಷಿಕೆ

ರೈಲ್ವೆ ಯಾರ್ಡ್‌ನಲ್ಲಿ ಅಣಕು ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಡ್ಡರಹಳ್ಳಿ ರೈಲ್ವೆ ಯಾರ್ಡ್‌ನಲ್ಲಿ ಹಳಿ ತಪ್ಪಿದ ಬೋಗಿ ಮಗುಚಿ ಬೀಳುವಂತಾಗಿತ್ತು. ಕೂಡಲೇ ತುರ್ತು ಸೈರನ್ ಮೊಳಗಿತು. ನಿಯಂತ್ರಣ ಕಚೇರಿಯಿಂದ ಅಪಘಾತದ ಬಗ್ಗೆ ಸಂದೇಶ ರವಾನೆಯಾಯಿತು. ವಿವಿಧ ರಕ್ಷಣಾ ತಂಡಗಳು ಸ್ಥಳಕ್ಕೆ ಬಂದು ರಕ್ಷಣಾ ಕಾರ್ಯಾಚರಣೆ ನಡೆಸಿದವು.

ವಿಪತ್ತು ಸಂದರ್ಭದಲ್ಲಿ ಸನ್ನದ್ಧರಾಗುವುದು ಹೇಗೆ ಎಂಬುದರ ಬಗ್ಗೆ ರಾಷ್ಟ್ರೀಯ ವಿಪತ್ತು ಸ್ಪಂದನಾ ಪಡೆಯ (ಎನ್‌ಡಿಆರ್‌ಎಫ್) 10ನೇ ಬೆಟಾಲಿಯನ್ ಮತ್ತು ಇತರ ಸಂಸ್ಥೆಗಳ ಸದಸ್ಯರು ಗುರುವಾರ ನೀಡಿದ ಅಣಕು ಪ್ರದರ್ಶನದ ದೃಶ್ಯಗಳು ಇವು.

10ನೇ ಬೆಟಾಲಿಯನ್‌ನ ಉಪ ಕಮಾಂಡೆಂಟ್ ದಿಲ್ಬಾಗ್ ಸಿಂಗ್ ನೇತೃತ್ವದ ರಾಷ್ಟ್ರೀಯ ವಿಪತ್ತು ಸ್ಪಂದನಾ ಪಡೆಯ 27 ಮಂದಿ ರಕ್ಷಣಾ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು. ರಾಜ್ಯ ವಿಪತ್ತು ಸ್ಪಂದನಾ ಪಡೆ (ಎಸ್‌ಡಿಆರ್‌ಎಫ್), ಗೃಹರಕ್ಷಕ ದಳ, ನಾಗರಿಕ ರಕ್ಷಣಾ ಪಡೆ, ಅಗ್ನಿಶಾಮಕ ಸೇವೆಗಳು, ಸರ್ಕಾರಿ ಆಸ್ಪತ್ರೆ, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ರೈಲ್ವೆಯ ವೈದ್ಯಕೀಯ, ಕ್ಯಾರೇಜ್ ಮತ್ತು ವ್ಯಾಗನ್, ಸಿಗ್ನಲ್, ವಿದ್ಯುತ್, ರೈಲ್ವೆ ರಕ್ಷಣಾ ದಳ, ಪರಿಚಾಲನಾ ಮತ್ತು ವಾಣಿಜ್ಯ ಇಲಾಖೆ ಸಿಬ್ಬಂದಿ ಸಹಕಾರ ನೀಡಿದರು.

ನೈರುತ್ಯ ರೈಲ್ವೆಯ ಪ್ರಧಾನ ಮುಖ್ಯ ಸುರಕ್ಷತಾ ಅಧಿಕಾರಿ ಎಂ. ರಾಮಕೃಷ್ಣ ಮಾತನಾಡಿ, ‘ರಕ್ಷಣಾ ಕಾರ್ಯಾಚರಣೆಯ ಅಭ್ಯಾಸವನ್ನು ಸಮನ್ವಯತೆಯಿಂದ ಮಾಡಬೇಕು. ವಿಪತ್ತು ನಿರ್ವಹಣೆಗಾಗಿ ಪ್ರತಿ ಜಿಲ್ಲೆಯಲ್ಲಿ ‘ಆಪತ್‌ಮಿತ್ರ’ ಸ್ವಯಂಸೇವಕರನ್ನು ನೇಮಿಸಿಕೊಳ್ಳುವುದು ಅಗತ್ಯ’ ಎಂದು ತಿಳಿಸಿದರು.



ವಡ್ಡರಹಳ್ಳಿ ರೈಲ್ವೆ ಯಾರ್ಡ್‌ನಲ್ಲಿ ಗುರುವಾರ ನಡೆದ ಅಣಕು ಪ್ರದರ್ಶನದ ದೃಶ್ಯ

ಡೀಸೆಲ್ ಮತ್ತು ವಿಪತ್ತು ನಿರ್ವಹಣೆ ವಿಭಾಗದ ಮುಖ್ಯ ಮೆಕ್ಯಾನಿಕಲ್ ಎಂಜಿನಿಯರ್ ಬಾಲಸುಂದರ್ ಪಿ., ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಪರೀಕ್ಷಿತ್ ಮೋಹನ್‌ಪುರಿಯಾ, ಹೆಚ್ಚುವರಿ ಮುಖ್ಯ ವೈದ್ಯಕೀಯ ಅಧೀಕ್ಷಕ ಡಾ. ವೆಂಕಟರಾಮಯ್ಯ, ಗೃಹರಕ್ಷಕ ದಳದ ಉಪ ಕಮಾಂಡೆಂಟ್ ಮಹಾದೇವ ಮೂರ್ತಿ, ಅಗ್ನಿಶಾಮಕ ಸೇವೆಗಳ ಕಮಾಂಡಿಂಗ್ ಅಧಿಕಾರಿ ಗೌತಮ್ ಎಚ್.ಜಿ., ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಪ್ರತಿನಿಧಿ ಸ್ಮಿತಾ ಪ್ರಿಯದರ್ಶಿನಿ, ಎಸ್‌ಡಿಆರ್‌ಎಫ್ ಇನ್‌ಸ್ಪೆಕ್ಟರ್ ಅನುಕುಮಾರ್, ಹಿರಿಯ ವಿಭಾಗೀಯ ಸುರಕ್ಷತಾ ಅಧಿಕಾರಿ ಸುದರ್ಶನ್ ಭಟ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಶುದ್ಧ ಆರಾಧನೆ: ಸ್ಥಳ: ಇಬಿಸು ಕನ್ವೆನ್ಷನ್ ಸೆಂಟರ್, ಹೆಗಡೆ ನಗರ, ಮುಖ್ಯರಸ್ತೆ, ಜಕ್ಕೂರು ಪೋಸ್ಟ್ ಚೊಕ್ಕನಹಳ್ಳಿ, ಬೆಳಿಗ್ಗೆ 9.20

ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಶತೋತ್ತರ ದಶಮಾನೋತ್ಸವ: ಸಾನ್ನಿಧ್ಯ: ಶಿವಾನಂದ, ಶಿವಯೋಗಿ ರಾಜೇಂದ್ರ ಸ್ವಾಮೀಜಿ, ಉದ್ಘಾಟನೆ: ಬಸವರಾಜ ರಾಯರೆಡ್ಡಿ, ಅಧ್ಯಕ್ಷತೆ: ಸಿ. ಸೋಮಶೇಖರ್, ಅತಿಥಿಗಳು: ಸಿ.ಕೆ. ರಾಮಮೂರ್ತಿ, ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಜಯನಗರ ಸಮುಚ್ಚಯದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸ್ಥಳ: ಶಿವರಾತ್ರೀಶ್ವರ **ಕೇಂದ್ರ, ಜಯನಗರ, ಬೆಳಿಗ್ಗೆ 11**

ಕೆನರಾ ಉತ್ಸವ: ಆಯೋಜನೆ: ಕೆನರಾ ಬ್ಯಾಂಕ್, ಸ್ಥಳ: ರಂಗೋಲಿ ಮೆಟ್ರೊ ಆರ್ಟ್ ಸೆಂಟರ್, ಎಂ.ಜಿ. ರಸ್ತೆ, ಬೆಳಿಗ್ಗೆ 11

2024ನೇ ಸಾಲಿನ ‘ವಡ್ಡರ್ಸೆ ರಘುರಾಮ ಶೆಟ್ಟಿ ಸಾಮಾಜಿಕ ನ್ಯಾಯ’ ಪತ್ರಿಕೋದ್ಯಮ ಪ್ರಶಸ್ತಿ, ‘2017ರಿಂದ 2023ನೇ ಸಾಲಿನ ಪರಿಸರ ಮತ್ತು ಅಭಿವೃದ್ಧಿ’ ಪತ್ರಿಕೋದ್ಯಮ ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಪಿ.ಸಿ. ಮೋಹನ್, ಕೆ.ವಿ. ಪ್ರಭಾಕರ್, ಅಶೋಕ ಬಿ. ಹಿಂಚಿಗೇರಿ, ಆಯೋಜನೆ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸ್ಥಳ: ಸುಲೋಚನಾ ಸಭಾಂಗಣ, ವಾರ್ತಾಸೌಧ, ಬೆಳಿಗ್ಗೆ 11.30

‘ಎಥಿಕಲ್ ಲೀಡರ್‌ಶಿಪ್ ಆ್ಯಂಡ್ ಸಿವಿಕ್ ಎಂಗೇಜ್‌ಮೆಂಟ್’ ಕುರಿತು ಉಪನ್ಯಾಸ: ಗುರುರಾಜ್ ಎಸ್. ದಾವಣಗೆರೆ, ಆಯೋಜನೆ: ಸಿಐಐಎಸ್, ಸೆಂಟರ್ ಫಾರ್ ಇಂಡಿಯನ್ ನಾಲೆಜ್ ಸಿಸ್ಟಮ್, ಸ್ಥಳ: ಸೇಂಟ್ ಚಾವರ ಹಾಲ್, ಮಧ್ಯಾಹ್ನ 2

‘ದೀಪಿಕಾ’ ಉನ್ನತ ಶಿಕ್ಷಣ ವಿದ್ಯಾರ್ಥಿವೇತನಕ್ಕೆ ಚಾಲನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಎಂ.ಸಿ. ಸುಧಾಕರ್, ಅಜೀಂ ಪ್ರೇಮ್‌ಜಿ, ಅಧ್ಯಕ್ಷತೆ: ಕೃಷ್ಣ ಬೈರೇಗೌಡ, ಆಯೋಜನೆ: ಉನ್ನತ ಶಿಕ್ಷಣ ಇಲಾಖೆ, ಅಜೀಂ ಪ್ರೇಮ್‌ಜಿ ಫೌಂಡೇಷನ್, ಸ್ಥಳ: ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನ, ಜಿಕೆವಿಕೆ, ಸಂಜೆ 4

‘ಕನ್ನಡ ಮತ್ತು ದ್ರಾವಿಡ ಭಾಷಾ ಸಮುದಾಯಗಳ ಪ್ರಾಚೀನ ವಾಸದ ನೆಲೆಗಳು-ಆಧುನಿಕ ಪ್ರಮೇಯಗಳು’ ತಿಂಗಳ ಉಪನ್ಯಾಸ: ವೆಂಕಟೇಶಯ್ಯ ನೆಲ್ಲುಕುಂಟೆ, ಅಧ್ಯಕ್ಷತೆ: ಚನ್ನಪ್ಪ ಕಟ್ಟಿ, ಆಯೋಜನೆ ಮತ್ತು ಸ್ಥಳ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆವರಣ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5

ನಮನ್ ‘ಕಥಕ್’ ನೃತ್ಯ ಪ್ರದರ್ಶನ: ಅತಿಥಿಗಳು ಪ್ರದೀಪ್ ಕುಮಾರ್, ಮೈಸೂರು ಬಿ. ನಾಗರಾಜ್, ಆಯೋಜನೆ: ಕೃಷ್ಣ ಪರ್ಫಾರ್ಮಿಂಗ್ ಆರ್ಟ್ಸ್ ಅಕಾಡೆಮಿ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 6

‘ದಿ ರೈಸಿಂಗ್ ಆಫ್ ಡೆತ್’ ನಾಟಕ ಪ್ರದರ್ಶನ: ನಿರ್ದೇಶನ: ಸಂದೀಪ್ ಭಟ್ಟಾಚಾರ್ಯ, ಅತಿಥಿಗಳು: ರಾಜಶೇಖರ ಕಂಬಾರ, ಹೊ.ನ. ನೀಲಕಂಠೇಗೌಡ, ಆಯೋಜನೆ: ಆದಿಶಕ್ತಿ ರಂಗ ಕಲಾಸಂಸ್ಥೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಸಂಜೆ 6

‘ಪೂಜ್ಯಾಯ ರಾಘವೇಂದ್ರಾಯ’ ಯಕ್ಷಗಾನ ಪ್ರದರ್ಶನ: ಆಯೋಜನೆ: ಯಕ್ಷಸಂಗಮ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಪೂರ್ಣರಾತ್ರಿ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಚಿಟಿಕೆ ಸುದ್ದಿ

ತ್ರಿವಳಿ ಮಕ್ಕಳಿಗೆ ಜನ್ಮ ನೀಡಿದ ಮಹಿಳೆ

ತ್ರಿವಳಿ ಮಕ್ಕಳೊಂದಿಗೆ ಡಾ.ನ್ಯಾನ್ಸಿ ಪಾಲ್

ಹಾಸನ: ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ದೊಡ್ಡಕಾಡನೂರು ಗ್ರಾಮದ ಮಹಿಳೆಯೊಬ್ಬರು ಇಲ್ಲಿನ 'ಹಿಮ್ಸ್' ಆಸ್ಪತ್ರೆಯಲ್ಲಿ ಗುರುವಾರ ಒಂದು ಗಂಡು ಹಾಗೂ ಎರಡು ಹೆಣ್ಣು ಸೇರಿದಂತೆ ಮೂವರು ಮಕ್ಕಳಿಗೆ ಜನ್ಮ ನೀಡಿದ್ದಾರೆ.

'ಹಿಮ್ಸ್' ಆಸ್ಪತ್ರೆಯಲ್ಲಿ ತಪಾಸಣೆಗೆ ಒಳಪಟ್ಟಿದ್ದ ಅವರಿಗೆ, ಅಲ್ಲಿನ ಸ್ತ್ರೀರೋಗ ತಜ್ಞೆ ಡಾ.ನ್ಯಾನ್ಸಿ ಪಾಲ್ ಮಾರ್ಗದರ್ಶನದಲ್ಲಿ ವೈದ್ಯರು, ಸಿಬ್ಬಂದಿ ಗುರುವಾರ ಬೆಳಿಗ್ಗೆ 11 ಗಂಟೆಗೆ ಶಸ್ತ್ರಚಿಕಿತ್ಸೆಯ ಮೂಲಕ ಹೆರಿಗೆ ಮಾಡಿಸಿದ್ದಾರೆ.

ಮೊದಲು ಜನಿಸಿದ ಗಂಡು ಮಗು 2.1 ಕೆ.ಜಿ ತೂಕವಿದ್ದು, ಎರಡನೇ ಹೆಣ್ಣು ಮಗು 1.9 ಕೆ.ಜಿ, ಮತ್ತೊಂದು ಹೆಣ್ಣು ಮಗು 1.8 ಕೆ.ಜಿ ತೂಕವಿದೆ. ಮೂರು ಶಿಶುಗಳಿಗೆ ಯಾವುದೇ ತೊಂದರೆ ಇಲ್ಲ ಎನ್ನುವುದು ದೃಢಪಟ್ಟಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಅಮ್ರಿತ್ ಪೌಲ್ ಅರ್ಜಿ ತಿರಸ್ಕೃತ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್ಐ) ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧದ ಪ್ರಕರಣ ರದ್ದುಪಡಿಸುವಂತೆ ಕೋರಿದ್ದ ಆರೋಪಿ ಐಪಿಎಸ್ ಅಧಿಕಾರಿ ಅಮ್ರಿತ್ ಪೌಲ್ ಅವರ ಅರ್ಜಿಯನ್ನು ಹೈಕೋರ್ಟ್ ತಿರಸ್ಕರಿಸಿದೆ.

ಅಮ್ರಿತ್ ಪೌಲ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಜೆ.ಎಂ.ಖಾಜಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಅರ್ಜಿ ತಿರಸ್ಕರಿಸಿರುವುದಾಗಿ ತಿಳಿಸಿತು.

ಸಿಐಡಿ ಪರ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ಅವರ ವಾದ ಮನ್ನಿಸಿರುವ ನ್ಯಾಯಪೀಠ, ಅರ್ಜಿ ವಜಾಗೊಳಿಸಿ ಆದೇಶಿಸಿತು. 'ನನ್ನ ವಿರುದ್ಧದ ಎಫ್ಐಆರ್, ಏಳು ದೋಷಾರೋಪ ಪಟ್ಟಿಗಳು ಮತ್ತು ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಕೋರಿ ಅಮ್ರಿತ್ ಪೌಲ್ ಈ ಅರ್ಜಿ ಸಲ್ಲಿಸಿದ್ದರು.

ಮಡಿಕೇರಿ ದಸರೆ ಇದೇ 25ಕ್ಕೆ ಕವಿಗೋಷ್ಠಿ

ಮಡಿಕೇರಿ: 'ಬೆಳಕಿನ ದಸರೆ' ಎಂದೇ ಹೆಸರಾದ ಮಡಿಕೇರಿ ದಸರೆಯಲ್ಲಿ ಈ ಬಾರಿ ಬಹುಭಾಷಾ ಕವಿಗೋಷ್ಠಿಯಲ್ಲಿ ಒಟ್ಟು 13 ಭಾಷೆಯ ಕವಿಗಳು ಭಾಗಿಯಾಗುತ್ತಿದ್ದು, ವೈವಿಧ್ಯಮಯವಾದ ರಸಾನುಭೂತಿ ಸಹೃದಯರಿಗೆ ಸಿಗಲಿದೆ.

ಕನ್ನಡ, ಇಂಗ್ಲಿಷ್, ಹಿಂದಿ, ತುಳು, ಮಲೆಯಾಳಂ, ಯರವ, ಜೇನುಕುರುಬ, ಕೊಡವ, ಕುಂಬಾರ, ಹವ್ಯಕ, ಬ್ಯಾರಿ, ಬೈರ, ಅರೆಭಾಷೆಯಲ್ಲಿ ಕವನ ವಾಚನ ಸೆ. 25ರಂದು ಬೆಳಿಗ್ಗೆ 10.30ಕ್ಕೆ ಇಲ್ಲಿನ ಗಾಂಧಿ ಮೈದಾನದಲ್ಲಿ ನಡೆಯಲಿದೆ.

ಕೊಡಗು ಮಾತ್ರವಲ್ಲದೇ, ಕಾಸರಗೋಡು, ಬೆಂಗಳೂರು, ಉಡುಪಿ, ದಕ್ಷಿಣ ಕನ್ನಡ, ಮೈಸೂರು ಸೇರಿದಂತೆ ರಾಜ್ಯ ವಿವಿಧ ಭಾಗಗಳಿಂದ 77ಕ್ಕೂ ಅಧಿಕ ಸಂಖ್ಯೆಯಲ್ಲಿ ಕವಿಗಳು, ಕವಯತ್ರಿಯರು ಇಲ್ಲಿ ತಮ್ಮ ತಮ್ಮ ಭಾಷೆಯಲ್ಲಿ ಕವನ ವಾಚಿಸಲಿದ್ದಾರೆ. ಇವರೆಲ್ಲರ ಕವನಗಳನ್ನೂ ಒಳಗೊಂಡ ಕವನ ಸಂಕಲನವೂ ಅಂದೇ ಬಿಡುಗಡೆಯಾಗಲಿದೆ.

ಇದಲ್ಲದೇ 6ರಿಂದ 14 ವರ್ಷದ ಒಳಗಿನ ಮಕ್ಕಳಿಗಾಗಿಯೇ ಕವಿಗೋಷ್ಠಿ ಇರಲಿದೆ. ತೃತೀಯ ಲಿಂಗಿಯೊಬ್ಬರೂ ಕವನ ವಾಚನ ಮಾಡುವುದು ವಿಶೇಷ ಎಂದು ಆಯೋಜಕರು ತಿಳಿಸಿದ್ದಾರೆ.

ಸಿ.ಎಂ. ಕಪ್ ಇದೇ 22ರಿಂದ

ಮೈಸೂರು: ಈ ಬಾರಿಯ 'ಸಿ.ಎಂ.ಕಪ್' ರಾಜ್ಯ ಮಟ್ಟದ ದಸರಾ ಕ್ರೀಡಾಕೂಟವು ಸೆ. 22ರಿಂದ 25ರವರೆಗೆ ನಡೆಯಲಿದೆ.

ಕ್ರೀಡಾಕೂಟದ ಸಿದ್ಧತೆಗಳ ಕುರಿತು ಕ್ರೀಡಾ ಇಲಾಖೆ ಆಯುಕ್ತ ಚೇತನ್ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಚಾಮುಂಡಿ ವಿಹಾರ ಕ್ರೀಡಾಂಗಣ ಸೇರಿದಂತೆ 13 ಸ್ಥಳಗಳಲ್ಲಿ 26 ಕ್ರೀಡೆಗಳು ನಡೆಯಲಿವೆ. ಜೊತೆಗೆ ಸ್ಥಳೀಯವಾಗಿ ಅಂಧರ ಚೆಸ್, ಸೈಕಲ್ ಪೋಲೊ, ಕರಾಟೆ, ಬಾಡಿ ಬಿಲ್ಡಿಂಗ್ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ' ಎಂದರು.

'ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕಲಬುರಗಿ, ಮೈಸೂರು, ಬೆಳಗಾವಿ ವಿಭಾಗಗಳಿಂದ ತಲಾ 646 ಕ್ರೀಡಾಪಟುಗಳಂತೆ ಒಟ್ಟು 3,230 ಕ್ರೀಡಾಪಟುಗಳು, 800 ತಾಂತ್ರಿಕ ಸಿಬ್ಬಂದಿ ಭಾಗವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

ಬೀದಿಗೆ ಕಸ, ಮನೆ ಮುಂದೆ ತಮಟೆ

ತ್ಯಾಜ್ಯ ಎಸೆಯುವವರ ವಿರುದ್ಧ ಅಭಿಯಾನಕ್ಕೆ ಬಿಎಸ್‌ಡಬ್ಲ್ಯುಎಂಎಲ್ ಸಿದ್ಧತೆ

• ಆರ್. ಮಂಜುನಾಥ್

ಮುಖ್ಯಾಂಶಗಳು
- 198 ವಾರ್ಡ್‌ಗಳಲ್ಲಿಯೂ ಮಾಹಿತಿ ಸಂಗ್ರಹ
- ಕಸ ಎಸೆಯುವವರ ವಿಡಿಯೊ ದಾಖಲೆ
- ಸಾಮಾಜಿಕ ಜಾಲತಾಣದಲ್ಲಿ ದಂಡ ತೆತ್ತವರ ಚಿತ್ರ

ಬೆಂಗಳೂರು: ರಸ್ತೆ-ಬೀದಿ, ಖಾಲಿ ನಿವೇಶನಗಳಲ್ಲಿ ಕಸ ಬಿಸಾಡುವವರ ಮನೆ ಮುಂದೆ ತ್ಯಾಜ್ಯ ಸುರಿದು, ತಮಟೆ ಹೊಡೆಯುವ ವಿನೂತನ ಅಭಿಯಾನ ನಡೆಸಲು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ಸಿದ್ಧತೆ ನಡೆಸಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ರಸ್ತೆಗಳಲ್ಲಿ ಬ್ಲ್ಯಾಕ್ ಸ್ಪಾಟ್‌ಗಳು ಇಲ್ಲದಂತೆ ಮಾಡಲು ಸಾಕಷ್ಟು ಪ್ರಯತ್ನಪಡುತ್ತಿದ್ದರೂ, ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯುವುದು ಪೂರ್ಣವಾಗಿ ನಿಂತಿಲ್ಲ. ಹೀಗಾಗಿ, ಬಿಎಸ್‌ಡಬ್ಲ್ಯುಎಂಎಲ್ ಸಿಬ್ಬಂದಿ ತ್ಯಾಜ್ಯ ಎಸೆಯುವವರನ್ನು ಪತ್ತೆಹಚ್ಚಿ, ಅವರ ಮನೆಯ ಮುಂದೆಯೇ ಕಸ ಸುರಿದು, ತಮಟೆ ಹೊಡೆದು ಅರಿವು ಮೂಡಿಸಲು ಮುಂದಾಗಿದೆ.

198 ವಾರ್ಡ್‌ಗಳಲ್ಲಿ ಬ್ಲ್ಯಾಕ್ ಸ್ಪಾಟ್‌ಗಳ ಬಗ್ಗೆ ಪೌರಕಾರ್ಮಿಕರು ಹಾಗೂ ತ್ಯಾಜ್ಯ ಸಂಗ್ರಹಿಸುವ ಆಟೊ ಸಿಬ್ಬಂದಿಗೆ ಮಾಹಿತಿ ಇದೆ. ಇವರ ಮಾಹಿತಿಯನ್ನು ಆಧರಿಸಿ, ಕಸ ಎಸೆಯುವವರ ವಿಡಿಯೊ ಮಾಡಿ, ಅವರ ವಿಳಾಸವನ್ನು ಪತ್ತೆ ಮಾಡಲಾಗುತ್ತದೆ. ದೃಶ್ಯ-ಚಿತ್ರ ಮಾಹಿತಿಗಳನ್ನು ಸಂಗ್ರಹಿಸಿಕೊಂಡು, ಆ ವ್ಯಕ್ತಿಯ ಮನೆಗೆ ಹೋಗಿ ದಂಡ ವಿಧಿಸಲಾಗುತ್ತದೆ. ಅಷ್ಟಕ್ಕೆ ಸುಮ್ಮನಾಗದೆ, ಎಲ್ಲರಿಗೂ ಅರಿವಾಗುವಂತೆ ತಮಟೆ ಬಾರಿಸಲಾಗುತ್ತದೆ. ತ್ಯಾಜ್ಯವನ್ನು ಸುರಿದು ಅದರಿಂದ ಎಂತಹ ಸಮಸ್ಯೆಯಾಗುತ್ತದೆ ಎಂಬುದನ್ನು ಅವರಿಗೆ ತಿಳಿಸಿಕೊಡಲಾಗುತ್ತದೆ. ಈ ಅಭಿಯಾನವನ್ನು ಸೆಪ್ಟೆಂಬರ್ ಅಂತ್ಯಕ್ಕೆ ಆರಂಭಿಸಲು ನಿರ್ಧರಿಸಲಾಗಿದೆ.

'ಎಲ್ಲೆಂದರಲ್ಲಿ ತ್ಯಾಜ್ಯ ಎಸೆಯುವವರ ಬಗ್ಗೆ ಮಾರ್ಷಲ್‌ಗಳು ಸೇರಿದಂತೆ ನಮ್ಮ ಸಿಬ್ಬಂದಿ ಮಾಹಿತಿ ಸಂಗ್ರಹಿಸುತ್ತಿದ್ದಾರೆ. ಸಾಕಷ್ಟು ಜನರ ಮಾಹಿತಿ ನಮ್ಮ ಬಳಿ ಇದೆ. ಅವರ ಮನೆ ಮುಂದೆ ತಮಟೆ ಬಾರಿಸುವ ಅಭಿಯಾನ ಆರಂಭಿಸಲಾಗುತ್ತದೆ. ಜನರು ಸಮಸ್ಯೆ ಅರಿತು ನಗರದ ಸ್ವಚ್ಛತೆಗೆ ಕೈಜೋಡಿಸಬೇಕು ಎಂಬುದು ನಮ್ಮ ಗುರಿಯೇ ಹೊರತು ಅವರಿಗೆ ಯಾವುದೇ ರೀತಿಯಲ್ಲಿ ಮುಜುಗರ ಉಂಟು ಮಾಡುವ ಉದ್ದೇಶವಿಲ್ಲ' ಎಂದು ಬಿಎಸ್‌ಡಬ್ಲ್ಯುಎಂಎಲ್ ಸಿಇಒ ಕರೀಗೌಡ ತಿಳಿಸಿದರು.

₹2 ಸಾವಿರ ದಂಡ: 'ರಸ್ತೆ, ನಿವೇಶಗಳಲ್ಲಿ ಕಸ ಎಸೆಯುವವರಿಗೆ ಕನಿಷ್ಠ ₹2 ಸಾವಿರ ದಂಡ ವಿಧಿಸಲಾಗುತ್ತಿದೆ. ಈ ರೀತಿ ದಂಡ ಪಾವತಿಸಿದವರ ಚಿತ್ರವನ್ನು ಇನ್ನು ಮುಂದೆ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಲು ನಿರ್ಧರಿಸಲಾಗಿದೆ. ಇಂತಹ ತಪ್ಪನ್ನು ಅವರು ಮತ್ತೆ ಮಾಡಬಾರದು ಎಂಬುದು ನಮ್ಮ ಆಶಯ' ಎಂದರು.

ರಸ್ತೆಯಲ್ಲಿ ಕಸ

ತ್ಯಾಜ್ಯ ನೀಡದಿದ್ದರೆ ನೋಟಿಸ್!

'198 ವಾರ್ಡ್‌ಗಳಲ್ಲಿ ಪ್ರತಿನಿತ್ಯ ಮನೆಗಳಿಂದ ತ್ಯಾಜ್ಯ ಸಂಗ್ರಹಿಸುವ ಆಟೊ ಸಿಬ್ಬಂದಿಗೆ ಯಾವ ಮನೆಯವರು ತ್ಯಾಜ್ಯ ನೀಡುತ್ತಿಲ್ಲ ಎಂಬುದು ಗೊತ್ತಿರುತ್ತದೆ. ಅವರಿಂದ ಮಾಹಿತಿ ಪಡೆದು ಅಂತಹ ಮನೆಗಳನ್ನು ವಾರ್ಡ್‌ವಾರು ಪಟ್ಟಿ ಮಾಡಿಕೊಳ್ಳಲಾಗುತ್ತಿದೆ. ಮನೆಗಳ ಮಾಲೀಕರಿಗೆ ನೋಟಿಸ್ ಜಾರಿ ಮಾಡುವ ಪ್ರಕ್ರಿಯೆ ಸದ್ಯದಲ್ಲೇ ಆರಂಭವಾಗಲಿದೆ' ಎಂದು ಬಿಎಸ್‌ಡಬ್ಲ್ಯುಎಂಎಲ್ ಸಿಇಒ ಕರೀಗೌಡ ತಿಳಿಸಿದರು.

'ನಗರದಲ್ಲಿ ಉದ್ಯೋಗಕ್ಕೆ ಹೋಗುವವರ ಸಂಖ್ಯೆ ಹೆಚ್ಚಿರುವುದರಿಂದ ಅವರು ಮನೆಯಿಂದ ಹೊರಡುವುದಕ್ಕೆ ಮೊದಲೇ ತ್ಯಾಜ್ಯ ಸಂಗ್ರಹ ಮಾಡುವುದಕ್ಕೆ ಅನುವಾಗಲು ಆಟೊಗಳ ಸಮಯವನ್ನೂ ಬದಲಾಯಿಸಲಾಗಿದೆ. ಆದರೂ ತ್ಯಾಜ್ಯ ನೀಡದೆ ಇದ್ದರೆ ಅವರು ರಸ್ತೆಗಳಲ್ಲೇ ಅದನ್ನು ಎಸೆಯುತ್ತಿದ್ದಾರೆ ಎಂದು ಭಾವಿಸಲಾಗುತ್ತದೆ. ಅವರು ತಾವೇ ತ್ಯಾಜ್ಯ ಸಂಸ್ಕರಿಸುತ್ತಿದ್ದೇವೆ ಎಂಬುದಾದರೆ ಅದನ್ನು ಸಾಬೀತುಪಡಿಸಬೇಕು' ಎಂದು ಹೇಳಿದರು.

ಜನರಲ್ಲಿ ಅರಿವು ಅಗತ್ಯ: ಕರೀಗೌಡ

ಕರೀಗೌಡ

'ನಗರದ ಸ್ವಚ್ಛತೆ ಕಾಪಾಡುವಲ್ಲಿ ಅದರಲ್ಲೂ ಎಲ್ಲೂ ಕಸ ಇಲ್ಲದಂತೆ ನೋಡಿಕೊಳ್ಳಲು ನಾಗರಿಕರ ಸಹಕಾರ ಬೇಕು. ಕಸ ತೆಗೆದುಕೊಳ್ಳಲು ಮನೆ ಬಾಗಿಲಿಗೆ ನಮ್ಮ ಸಿಬ್ಬಂದಿ ಹೋಗುತ್ತಾರೆ. ಅವರಿಗೆ ತ್ಯಾಜ್ಯ ನೀಡದೆ ಬೀದಿಯಲ್ಲಿ ಬಿಸಾಡಿದರೆ ನಗರದ ಸೌಂದರ್ಯ ಹಾಳಾಗುವ ಜೊತೆಗೆ ಆರೋಗ್ಯವೂ ಹಾಳಾಗುತ್ತದೆ. ಜನರು ತಮ್ಮ ಜವಾಬ್ದಾರಿಯನ್ನು ಅರಿತು ನಮ್ಮೊಂದಿಗೆ ಸಹಕರಿಸಬೇಕು. ತ್ಯಾಜ್ಯ ಸಂಗ್ರಹ, ವಿಲೇವಾರಿಯಲ್ಲಿ ತೊಂದರೆ, ಸಮಸ್ಯೆ ಆಗುತ್ತಿದ್ದರೆ ವಾಟ್ಸ್ ಆ್ಯಪ್ (9448197197) ಸಂದೇಶ ಕಳುಹಿಸಬೇಕು' ಎಂದು ಬಿಎಸ್‌ಡಬ್ಲ್ಯುಎಂಎಲ್ ಸಿಇಒ ಕರೀಗೌಡ ಹೇಳಿದರು.

ಜಾಲಿ ಎಲ್‌ಎಲ್‌ಬಿ ತಡೆಗೆ ನಕಾರ: ₹50 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 19ರಂದು (ಶುಕ್ರವಾರ) ಬಿಡುಗಡೆಯಾಗಲಿರುವ 'ಜಾಲಿ ಎಲ್‌ಎಲ್‌ಬಿ-3' ಹಿಂದಿ ಭಾಷೆಯ ಚಲನಚಿತ್ರದ ಬಿಡುಗಡೆ ಮತ್ತು ಪ್ರದರ್ಶನಕ್ಕೆ ತಡೆ ನೀಡುವಂತೆ ಕೋರಲಾಗಿದ್ದ ಅರ್ಜಿಯನ್ನು ವಜಾಗೊಳಿಸಿರುವ ಹೈಕೋರ್ಟ್, ಅರ್ಜಿದಾರರಿಗೆ ₹50 ಸಾವಿರ ದಂಡ ವಿಧಿಸಿದೆ.

ಈ ಸಂಬಂಧ ಬೆಂಗಳೂರಿನ ಮಂಜುನಾಥ ನಗರದ ಸಯೀದಾ ನಿಲೂಫರ್ (27) ಎಂಬುವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ದಂಡದ ಮೊತ್ತವನ್ನು ಹೈಕೋರ್ಟ್‌ನ ರಿಜಿಸ್ಟ್ರಾರ್ ಕಚೇರಿಯಲ್ಲಿ ಠೇವಣಿ ಇರಿಸಬೇಕು. ಒಂದು ವೇಳೆ ದಂಡದ ಮೊತ್ತ ಪಾವತಿ ಮಾಡದೇ ಇದ್ದಲ್ಲಿ ಅರ್ಜಿದಾರರ ವಿರುದ್ಧ ಕ್ರಮ ಕೈಗೊಳ್ಳುವುದಕ್ಕಾಗಿ ಅರ್ಜಿಯನ್ನು ಅಕ್ಟೋಬರ್ 4ರಂದು ಪುನಃ ವಿಚಾರಣೆಗೆ ಪಟ್ಟಿ ಮಾಡಲಾಗುವುದು' ಎಂದು ನ್ಯಾಯಪೀಠ ತಿಳಿಸಿದೆ.

'ಚಲನಚಿತ್ರವು, ನ್ಯಾಯಾಲಯದ ದೃಶ್ಯಗಳ ಮೂಲಕ ಹಾಸ್ಯಪ್ರಜ್ಞೆಯಿಂದ ಪ್ರೇಕ್ಷಕರನ್ನು ಆಕರ್ಷಿಸಲು ಉದ್ದೇಶಿಸಿದಂತೆ ತೋರುತ್ತದೆ. ಆದರೆ, ಅರ್ಜಿದಾರರನ್ನು ಆ ಹಾಸ್ಯ ಪ್ರಜ್ಞೆ ಆಕರ್ಷಿಸಿಲ್ಲ' ಎಂದು ಕುಟುಕಿರುವ ನ್ಯಾಯಪೀಠ, 'ಸೃಜನಶೀಲತೆಯನ್ನು ಹತ್ತಿಕ್ಕುವುದು ಮತ್ತು ಅಭಿವ್ಯಕ್ತಿ ನಿಯಂತ್ರಣ ಮಾಡುವಂತೆ ಆದೇಶ ನೀಡಲು ಸಾಧ್ಯವಿಲ್ಲ' ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ.

ಅರ್ಜಿಯಲ್ಲಿ ಏನಿತ್ತು?: 'ಚಿತ್ರದಲ್ಲಿರುವ ಸಂಭಾಷಣೆ ಮತ್ತು ದೃಶ್ಯಗಳು ಮಾನಹಾನಿಕಾರಕ ಎನಿಸುವಂತಿವೆ. ಭಾರತೀಯ ನ್ಯಾಯ ಸಂಹಿತೆ ಹಾಗೂ ಮಾಹಿತಿ ತಂತ್ರಜ್ಞಾನ ಕಾಯ್ದೆಗಳ ಉಲ್ಲಂಘನೆ ಮಾಡಿದಂತಿದೆ. ಆದ್ದರಿಂದ, ಚಿತ್ರದ ನಟರು, ನಿರ್ಮಾಪಕರ ವಿರುದ್ಧ ಸೂಕ್ತ ಕಾನೂನು ಕ್ರಮಕ್ಕೆ ಮುಂದಾಗಲು ಸಂಬಂಧಿಸಿದ ಪ್ರಾಧಿಕಾರಗಳಿಗೆ ನಿರ್ದೇಶಿಸಬೇಕು. ಚಿತ್ರದ ನಿರ್ಮಾಪಕರು ಹಾಗೂ ಮತ್ತು ನಟರು ರಾಷ್ಟ್ರೀಯ ಪತ್ರಿಕೆಗಳಲ್ಲಿ ಕ್ಷಮೆ ಯಾಚಿಸುವಂತೆಯೂ ಆದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

'6,018 ಅರ್ಜಿ ಸಲ್ಲಿಸಿದ್ದು ನಿಜ'

ಆಳಂದ ಕ್ಷೇತ್ರದಲ್ಲಿ ಮತದಾರರ ಚೀಟಿ ರದ್ದತಿ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಮತದಾರರ ಗುರುತಿನ ಚೀಟಿ ರದ್ದತಿಗೆ ಶಂಕಾಸ್ಪದ ಸ್ವರೂಪದಲ್ಲಿ 6,018 ಅರ್ಜಿಗಳನ್ನು ಸಲ್ಲಿಸಲಾಗಿತ್ತು ಎಂಬುದನ್ನು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ ತಿಳಿಸಿದೆ.

ಆಳಂದ ಕ್ಷೇತ್ರದ ಮತದಾರರಿಗೆ ಗೊತ್ತಾಗದ ರೀತಿಯಲ್ಲಿ 6,018 ಮತದಾರರ ಚೀಟಿಯನ್ನು ರದ್ದುಪಡಿಸಲು ಯತ್ನಿಸಲಾಗಿತ್ತು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಆರೋಪ ಕುರಿತಾಗಿ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯು 'ಎಕ್ಸ್'ನಲ್ಲಿ ಪ್ರಕಟಣೆ ಹೊರಡಿಸಿದೆ.

'2022ರ ಡಿಸೆಂಬರ್‌ನಲ್ಲಿ ಎನ್‌ವಿಎಸ್‌ಪಿ, ವಿಎಚ್‌ಎ ಮತ್ತು ಗರುಡ ಆ್ಯಪ್‌ಗಳನ್ನು ಬಳಸಿಕೊಂಡು 6,018 ಅರ್ಜಿ ಅನ್ನು ಆನ್‌ಲೈನ್ ಮೂಲಕ ಸಲ್ಲಿಸಲಾಗಿತ್ತು. ಅಷ್ಟು ದೊಡ್ಡ ಪ್ರಮಾಣದಲ್ಲಿ ಅರ್ಜಿಗಳು ಸಲ್ಲಿಕೆಯಾಗಿದ್ದರಿಂದ ಆ ಬಗ್ಗೆ ಸಂದೇಹ ವ್ಯಕ್ತವಾಗಿತ್ತು' ಎಂದು ಪ್ರಕಟಣೆ ತಿಳಿಸಿದೆ.

'ಆ ಪ್ರತಿ ಅರ್ಜಿಗಳನ್ನು ನಮ್ಮ ಮತಗಟ್ಟೆ ಅಧಿಕಾರಿಗಳು, ಮತದಾರರ ನೋಂದಣಿ ಅಧಿಕಾರಿಗಳು ಕೂಲಂಕಷವಾಗಿ ಪರಿಶೀಲಿಸಿದ್ದರು. ಅವುಗಳಲ್ಲಿ 24 ಮಾತ್ರವೇ ನೈಜ ಅರ್ಜಿಗಳಾಗಿದ್ದು, ಅವುಗಳನ್ನು ಮಾತ್ರ ಅಂಗೀಕರಿಸಲಾಗಿತ್ತು. ಉಳಿದ 5,994 ಅರ್ಜಿಗಳನ್ನು ತಿರಸ್ಕರಿಸಲಾಗಿತ್ತು' ಎಂದು ವಿವರಿಸಿದೆ.

'ಮತಗಟ್ಟೆ ಅಧಿಕಾರಿಗಳು, ಮತದಾರರ ನೋಂದಣಾಧಿಕಾರಿಗಳ ವರದಿಯ ಆಧಾರದಲ್ಲಿ 2023ರ ಫೆ. 21ರಂದು ಆಳಂದ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಿಸಲಾಗಿತ್ತು. ತನಿಖಾಧಿಕಾರಿಯ ಕೋರಿಕೆ ಮೇರೆಗೆ, ಮುಖ್ಯ ಚುನಾವಣಾಧಿಕಾರಿಯು ತನಿಖಾಧಿಕಾರಿ ಮತ್ತು ಸೈಬರ್ ಭದ್ರತಾ ತಜ್ಞರ ಜತೆಗೆ ಸಭೆ ನಡೆಸಿದ್ದರು' ಎಂದು ತಿಳಿಸಿದೆ.

'ಐ.ಪಿ ವಿವರ ಒದಗಿಸಲಾಗಿದೆ'

'ತನಿಖಾಧಿಕಾರಿಗಳು ಸಲ್ಲಿಸಿದ್ದ ಮನವಿಯನ್ನು ಪರಿಗಣಿಸಿ ಭಾರತೀಯ ಚುನಾವಣಾ ಆಯೋಗದ ಬಳಿ ಲಭ್ಯವಿದ್ದ ಎಲ್ಲ ಮಾಹಿತಿಗಳನ್ನು ಒದಗಿಸಲಾಗಿದೆ' ಎಂದು ಮುಖ್ಯ ಚುನಾವಣಾಧಿಕಾರಿ ಕಚೇರಿಯು ತಿಳಿಸಿದೆ.

'ಅರ್ಜಿಗಳ ಸಂಖ್ಯೆ, ಆಕ್ಷೇಪ ಸಲ್ಲಿಸಿದವರ ವಿವರ ಮತ್ತು ಎಪಿಕ್ ಸಂಖ್ಯೆ, ಆಯೋಗದ ಜಾಲತಾಣಕ್ಕೆ ಲಾಗಿನ್ ಆಗಲು ಬಳಸಿದ ಮೊಬೈಲ್ ಸಂಖ್ಯೆ, ಅದಕ್ಕೆ ಬಳಸಿಕೊಳ್ಳಲಾದ ಮಧ್ಯಸ್ಥ ತಂತ್ರಾಂಶ, ಐ.ಪಿ.ವಿಳಾಸ, ಅರ್ಜಿ ಸಲ್ಲಿಕೆಯಾದ ಸ್ಥಳ, ಅರ್ಜಿ ಸಲ್ಲಿಸಿದ ದಿನಾಂಕ ಮತ್ತು ಸಮಯ, ಅರ್ಜಿ ಸಲ್ಲಿಸಿದವರ ಬಳಕೆದಾರರ ಐ.ಡಿ ಸೃಷ್ಟಿಸಿದ ದಿನಾಂಕದ ವಿವರಗಳನ್ನು ತನಿಖಾಧಿಕಾರಿಗೆ ನೀಡಲಾಗಿದೆ' ಎಂದು ವಿವರಿಸಿದೆ.

ನೈತಿಕತೆ ಇಲ್ಲದ ವಿಶ್ವನಾಥ್: ಶಿವಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಗೆ ಮಾರಾಟವಾಗಿರುವ ಅವಕಾಶವಾದಿ ರಾಜಕಾರಣಿ, ನೀತಿ ಮತ್ತು ನೈತಿಕತೆ ಇಲ್ಲದ ಎಚ್. ವಿಶ್ವನಾಥ್ ಅವರಿಗೆ ಬುದ್ಧಿ ನಿಯಂತ್ರಣದಲ್ಲಿಲ್ಲ. ಹಾಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ನಿಂದಿಸುತ್ತಿದ್ದಾರೆ ಎಂದು ರಾಮಮನೋಹರ್ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಸ್. ಶಿವಣ್ಣ ಟೀಕಿಸಿದ್ದಾರೆ.

ಕುರುಬ ಸಮುದಾಯದವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ವಿಷಯದಲ್ಲಿ ಮುಖ್ಯಮಂತ್ರಿಯವರ ವಿರುದ್ಧ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಪಕ್ಷದಿಂದ ಪಕ್ಷಕ್ಕೆ ಹಾರಿ ಸ್ವಾರ್ಥ ರಾಜಕಾರಣ ಮಾಡುತ್ತಿರುವ ವಿಶ್ವನಾಥ್‌ಗೆ ರಾಜಕೀಯಕ್ಕಾಗಿ ಯಾವ ಹಂತಕ್ಕೂ ಇಳಿಯಬಲ್ಲರು. ದೇವರಾಜ ಅರಸು ಬೆನ್ನಿಗೆ ಚೂರಿ ಹಾಕಿದ್ದ ಅವರು ಈಗ ಅರಸು ಅವರನ್ನು ಪುಣ್ಯಾತ್ಮ ಎಂದು ಕರೆಯುತ್ತಿರುವುದು ದುರಂತ. ಸಂಸದರಾಗಿದ್ದಾಗ ಒಂದು ಬಾರಿಯೂ ಕುರುಬರ ಬಗ್ಗೆ ಮಾತನಾಡದೇ, ಹಿಂದುಳಿದವರಿಗೆ ಅಧಿಕಾರ ಕೊಡಿಸಲು ಪ್ರಯತ್ನಿಸದೇ, ತನ್ನ ಮಗನನ್ನು ಮಾತ್ರ ಜಿಲ್ಲಾ ಪಂಚಾಯಿತಿ ಸದಸ್ಯರನ್ನಾಗಿ ಮಾಡಿ ಸ್ವಾರ್ಥ ಪ್ರದರ್ಶಿಸಿದ್ದರು. ವಿಶ್ವನಾಥ್ ಅವರು ಸಿದ್ದರಾಮಯ್ಯರ ಶ್ರಮ ಇಲ್ಲದೇ ಇದ್ದಿದ್ದರೆ ಸಂಸದರೂ ಆಗುತ್ತಿರಲಿಲ್ಲ ಎಂದಿದ್ದಾರೆ.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷರಾಗಿದ್ದಾಗ ಬಿಜೆಪಿಗೆ ಮಾರಾಟವಾದರು. 2024ರ ಲೋಕಸಭಾ ಚುನಾವಣೆಯ ವೇಳೆ ಟಿಕೆಟ್ ಕೇಳಿಕೊಂಡು ಕೆಪಿಸಿಸಿ ಕಚೇರಿ ವೇದಿಕೆಯಲ್ಲಿ ಕುಳಿತಿದ್ದರು. ಈಗ ತಾನು ಇನ್ನೂ ಬದುಕಿರುವುದನ್ನು ತೋರಿಸಲು ಸುದ್ದಿಗೋಷ್ಠಿ ಮಾಡಿ ಸಿದ್ದರಾಮಯ್ಯ ಅವರನ್ನು ನಿಂದಿಸಿದ್ದಾರೆ. ಕೆಟ್ಟ ನಡವಳಿಕೆಯ ಕಾರಣಕ್ಕೆ ಅವರನ್ನು ಸಮುದಾಯದಿಂದ ಜನರು ಹೊರಗಿಟ್ಟಿದ್ದಾರೆ ಎಂದು ಶಿವಣ್ಣ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಭಾರತ ಆಪ್ತ ದೇಶ: ಡೊನಾಲ್ಡ್ ಟ್ರಂಪ್

ಲಂಡನ್ (ಪಿಟಿಐ): 'ನಾನು ಭಾರತದೊಂದಿಗೆ ಆಪ್ತ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ಜತೆಗೆ ಉತ್ತಮ ಸಂಬಂಧ ಹೊಂದಿದ್ದೇನೆ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುರುವಾರ ಹೇಳಿದ್ದಾರೆ.

ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಅವರೊಂದಿಗೆ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಉತ್ತಮ ಸಂಬಂಧದ ನಡುವೆಯೂ ನಾನು ಭಾರತದ ಮೇಲೆ ಅಧಿಕ ಶುಲ್ಕ ವಿಧಿಸಿದ್ದೇನೆ. ರಷ್ಯಾದಿಂದ ಭಾರತ ಕಚ್ಚಾತೈಲ ಖರೀದಿಸುತ್ತಿರುವ ಕಾರಣಕ್ಕೆ ಹೀಗೆ ಮಾಡಿದ್ದೇನೆ. ಉಕ್ರೇನ್ ಮೇಲೆ ರಷ್ಯಾ ನಡೆಸುತ್ತಿರುವ ಯುದ್ಧಕ್ಕೆ ತಡೆ ನೀಡುವ ಉದ್ದೇಶ ನನ್ನದಾಗಿದೆ. ತೈಲ ಬೆಲೆ ಕಡಿಮೆಯಾದರೆ ರಷ್ಯಾ ಯುದ್ಧ ನಿಲ್ಲಿಸುತ್ತದೆ ಎಂಬ ವಿಶ್ವಾಸ ನನಗಿದೆ' ಎಂದು ಅವರು ಹೇಳಿದ್ದಾರೆ.

ಎಂ.ಜಿ. ರಸ್ತೆಯಲ್ಲಿರುವ ಗಾಂಧಿ ಪ್ರತಿಮೆ ಎದುರು ನಿಂತ ನೀರಿನಲ್ಲಿ ವಾಹನ ಸವಾರರು ಸಾಗಲು ಹರಸಾಹಸಪಟ್ಟರು ಚಿತ್ರಗಳು: ಎಂ.ಎಸ್.ಮಂಜುನಾಥ್

ಬಿರುಸಿನ ಮಳೆ: ಸವಾರರ ಪರದಾಟ

ಹಲವು ಮುಖ್ಯರಸ್ತೆಗಳಲ್ಲಿ ನಿಂತ ನೀರು • ಆರಕೆರೆಯಲ್ಲಿ 4.1 ಸೆಂ.ಮೀ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಗುರುವಾರ ಸಂಜೆಯಿಂದ ರಾತ್ರಿಯವರೆಗೆ ಹಲವೆಡೆ ಬಿರುಸಿನ ಮಳೆಯಾಯಿತು. ಮುಖ್ಯರಸ್ತೆಗಳಲ್ಲಿ ನೀರು ನಿಂತಿದ್ದರಿಂದ ವಾಹನ ಸವಾರರು ಪರದಾಡಿದರು.

ಬುಧವಾರ ತಡರಾತ್ರಿಯವರೆಗೂ ನಗರದ ಹಲವೆಡೆ ಸುರಿದಿದ್ದ ಮಳೆ, ಗುರುವಾರ ಬೆಳಿಗ್ಗೆ ಬಿಡುವು ನೀಡಿತ್ತು. ಮಧ್ಯಾಹ್ನದವರೆಗೆ ಬಿಸಿಲಿನ ವಾತಾವರಣವಿದ್ದು, ಸಂಜೆ ವೇಳೆಗೆ ಬಿರುಸಿನಿಂದ ಮಳೆ ಸುರಿಯಿತು. ತಡರಾತ್ರಿಯವರೆಗೂ ಹಲವು ಪ್ರದೇಶಗಳಲ್ಲಿ ಮಳೆಯಾಯಿತು.

ಇಬ್ಲೂರಿನಿಂದ ಮಾರತ್‌ಹಳ್ಳಿ, ಬಿಳೇಕಹಳ್ಳಿಯಿಂದ ಜಿ.ಡಿ.ಮರ, ಇಬ್ಲೂರು ಕಡೆಯಿಂದ ಅಗರ, ಕೈಕೊಂಡನಹಳ್ಳಿ ಕಡೆಯಿಂದ ಇಬ್ಲೂರು, ಶ್ರೀನಿವಾಗಿಲು ಜಂಕ್ಷನ್ ಕಡೆಯಿಂದ ಸೋನಿ ವರ್ಲ್ಡ್, ದೊಮ್ಮಲೂರಿನಿಂದ ಶ್ರೀನಿವಾಗಿಲು, ಅಗರ ರಸ್ತೆ ಕಡೆಯಿಂದ ಒಆರ್‌ಸಿ, ಕೆ.ಆರ್. ವೃತ್ತದ ಕಡೆಯಿಂದ ಹಡ್ಸನ್ ವೃತ್ತ, ಸಾಗರ್ ಜಂಕ್ಷನ್ ಕಡೆಯಿಂದ ಡೇರಿ ವೃತ್ತ, ದೊಡ್ಡಮರ ಜಂಕ್ಷನ್‌ನಿಂದ ಚೂಡಸಂದ್ರದವರೆಗೆ ವಾಹನಗಳು ಸಾಲುಗಟ್ಟಿ ನಿಂತಿದ್ದವು.

ಹಲಸೂರು ಕಡೆಯಿಂದ ಸೋನಿ ವರ್ಲ್ಡ್, ಬಿಟಿಎಂ ಲೇಔಟ್ 2ನೇ ಹಂತದಿಂದ ಮಡಿವಾಳ ಕೆರೆ ರಸ್ತೆ, ಕ್ಯಾಶ್ ಫಾರ್ಮಸಿ ಕಡೆಯಿಂದ ಆಶೀರ್ವಾದ ಜಂಕ್ಷನ್, ವೀರಸಂದ್ರ ಕಡೆಯಿಂದ ಹೊಸ ರಸ್ತೆ, ರೂಪೇನ ಅಗ್ರಹಾರ ಕಡೆಯಿಂದ ಸಾಗರ್ ಜಂಕ್ಷನ್, ಆಸ್ಟರ್ ಆಸ್ಪತ್ರೆ ಕಡೆಯಿಂದ ಸಾಗರ್ ಜಂಕ್ಷನ್, ಫೋರ್ಟಿಸ್ ಆಸ್ಪತ್ರೆ ಕಡೆಯಿಂದ ಬಿಳೇಕಹಳ್ಳಿ, ಎನ್‌ಜಿವಿ ಮುಖ್ಯ ಗೇಟ್ ಕಡೆಯಿಂದ ಎನ್‌ಜಿವಿ ಹಿಂದಿನ ಗೇಟ್, ಬಿನ್ನಿಮಿಲ್ ರಸ್ತೆ, ಎಸ್‌ಜೆಪಿ ರಸ್ತೆಯಿಂದ ಟೌನ್‌ಹಾಲ್, ಕೆ.ಆರ್ ವೃತ್ತದಿಂದ ಎಂ.ಎಸ್ ಕಟ್ಟಡ, ಮಾರತ್‌ಹಳ್ಳಿಯಿಂದ ಬೆಳ್ಳಂದೂರು ಕಡೆಗೆ ಹೋಗುವ ರಸ್ತೆಯಲ್ಲಿ ಮಳೆ ನೀರು ನಿಂತು ಸಂಚಾರ ದಟ್ಟಣೆ ಹೆಚ್ಚಾಗಿತ್ತು.

85 ದೂರು: ಬೆಂಗಳೂರು ದಕ್ಷಿಣ ಹಾಗೂ ಪಶ್ಚಿಮ ನಗರ ಪಾಲಿಕೆಗಳಲ್ಲಿ ತಲಾ 15 ಮರಗಳು ಉರುಳಿ ಬಿದ್ದಿವೆ. ಮಳೆ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಐದು ನಗರ ಪಾಲಿಕೆಗಳ ನಾಗರಿಕರಿಂದ ಒಟ್ಟು 85 ದೂರುಗಳು ಬಂದಿದ್ದವು. ಅದರಲ್ಲಿ 71ಕ್ಕೆ ಪರಿಹಾರ ಕಲ್ಪಿಸಲಾಗಿದೆ ಎಂದು ಜಿಬಿಎ ಪ್ರಕಟಣೆ ತಿಳಿಸಿದೆ.

ಎಲ್ಲೆಲ್ಲಿ ಏನು, ಎಷ್ಟು ಸಮಸ್ಯೆ?

ನಗರ ಪಾಲಿಕೆ	ನೀರು ನಿಂತ ಸ್ಥಳಗಳು	ರಸ್ತೆ ಬದಿ ಚರಂಡಿ	ಬಿದ್ದ ಮರಗಳು	ಬಿದ್ದ ಕೊಂಬೆಗಳು
ಕೇಂದ್ರ ನಗರ ಪಾಲಿಕೆ	5	1	2	6
ಪೂರ್ವ ನಗರ ಪಾಲಿಕೆ	2	1	-	2
ಉತ್ತರ ನಗರ ಪಾಲಿಕೆ	1	4	9	12
ದಕ್ಷಿಣ ನಗರ ಪಾಲಿಕೆ	2	4	15	5
ಪಶ್ಚಿಮ ನಗರ ಪಾಲಿಕೆ	1	6	15	10
ಒಟ್ಟು	11	16	41	35

ಹೊಲಗಳಿಗೆ ನೀರು

ದಾಬಸ್ ಪೇಟೆ: ಸೋಂಪುರ ಹೋಬಳಿಯ ಹಲವೆಡೆ ಬುಧವಾರ ರಾತ್ರಿ ಹಾಗೂ ಗುರುವಾರ ಬೆಳಿಗ್ಗೆ, ರಾತ್ರಿ ಮಳೆಯಾಯಿತು.

ಗುರುವಾರ ಬೆಳಿಗ್ಗೆಯಿಂದಲೂ ಮೋಡ ಕವಿದ ವಾತಾವರಣ ಜೊತೆಗೆ ಸಣ್ಣಗೆ ಮಳೆ ಹನಿ. ಮಧ್ಯೆ ಕೆಲವು ನಿಮಿಷ ಬಿರುಸು ಮಳೆಯಾಯಿತು. ಹೋಬಳಿಯ ಕೆಲವು ಭಾಗಗಳಲ್ಲಿ ನೀರು ಹರಿಯುವಂತೆ ಮಳೆಯಾದರೆ, ಕೆಲವೆಡೆ ಜಡಿಮಳೆಯಾಗಿದೆ.

ಎಲ್ಲಿ ಹೆಚ್ಚು ಮಳೆ?

ಆರಕೆರೆಯಲ್ಲಿ 4.1 ಸೆಂ.ಮೀ, ಬಿಳೇಕಹಳ್ಳಿ 3.5 ಸೆಂ.ಮೀ, ಬೊಮ್ಮನಹಳ್ಳಿ, ನಾಗಪುರ, ಸಂಪಂಗಿರಾಮನಗರ, ದೊರೆಸಾನಿಪಾಳ್ಯ, ಕೋರಮಂಗಲ, ವಿದ್ಯಾಪೀಠ, ಎಚ್‌ಎಸ್‌ಆರ್ ಲೇಔಟ್, ರಾಜರಾಜೇಶ್ವರಿನಗರ, ವನ್ನಾರ ಪೇಟೆಯಲ್ಲಿ ತಲಾ 3 ಸೆಂ.ಮೀ, ಬಿಟಿಎಂ ಲೇಔಟ್, ನಾಯಂಡಹಳ್ಳಿ, ಮನೋರಾಯನಪಾಳ್ಯ, ಪುಲಕೇಶಿನಗರ, ಹಂಪಿನಗರ, ಬೆಳ್ಳಂದೂರಿನಲ್ಲಿ ತಲಾ 2.5 ಸೆಂ.ಮೀ, ಪೀಣ್ಯ ಕೈಗಾರಿಕಾ ಪ್ರದೇಶ, ಬಸವೇಶ್ವರನಗರ, ಕೋಣನಕುಂಟೆ, ಯಲಹಂಕ, ವಿ.ನಾಗೇನಹಳ್ಳಿ, ದೊಡ್ಡಬಿದರಕಲ್ಲು, ಶೆಟ್ಟಿಹಳ್ಳಿ, ಸಿಂಗಸಂದ್ರ, ಬಾಣಸವಾಡಿ, ನಂದಿನಿ ಲೇಔಟ್, ರಾಜಾಜಿನಗರ, ಚೌಡೇಶ್ವರಿ, ಗೊಟ್ಟಿಗೆರೆ, ಎಚ್‌ಎಎಲ್ ವಿಮಾನ ನಿಲ್ದಾಣ, ವಿದ್ಯಾರಣ್ಯಪುರ, ವಿಶ್ವೇಶ್ವರಪುರ, ಕುಶಾಲನಗರದಲ್ಲಿ ತಲಾ 2 ಸೆಂ.ಮೀ, ಬಾಗಲಗುಂಟೆ, ಚೊಕ್ಕಸಂದ್ರ, ಚಾಮರಾಜಪೇಟೆ, ರಾಜಮಹಲ್ ಗುಟ್ಟಹಳ್ಳಿ, ಜಕ್ಕೂರು, ಅಂಜನಾಪುರದಲ್ಲಿ ತಲಾ 1.5 ಸೆಂ.ಮೀ ಮಳೆಯಾಗಿದೆ.

ಉದ್ಬೂರು ಸಮೀಪದ ಸ್ಮಾರಕದಲ್ಲಿ ಐದು ಸಾವಿರ ಜನರಿಗೆ ಹೋಳಿಗೆ ಊಟ

ವಿಷ್ಣು ಹುಟ್ಟುಹಬ್ಬ: ಅಭಿಮಾನಿಗಳ ಸಂಭ್ರಮ

ಪ್ರಜಾವಾಣಿ ವಾರ್ತೆ

ಮೈಸೂರು: ದಿವಂಗತ ನಟ ವಿಷ್ಣುವರ್ಧನ್ 75ನೇ ಹುಟ್ಟುಹಬ್ಬದ ಅಂಗವಾಗಿ ಉದ್ಬೂರು ಸಮೀಪದ ವಿಷ್ಣು ಸ್ಮಾರಕದಲ್ಲಿ ಗುರುವಾರ ಅಭಿಮಾನಿಗಳ ಸಂಭ್ರಮ ಮುಗಿಲು ಮುಟ್ಟಿತು. ನೆಚ್ಚಿನ ನಟನಿಗೆ ದೊರೆತ ಮರಣೋತ್ತರ 'ಕರ್ನಾಟಕ ರತ್ನ' ಪ್ರಶಸ್ತಿಯ ಬಗ್ಗೆ ಕೊಂಡಾಡಿದರು.

ವಿಷ್ಣುವರ್ಧನ್ ಪತ್ನಿ ಭಾರತಿ ವಿಷ್ಣುವರ್ಧನ್, ಮಗಳು ಕೀರ್ತಿ ವಿಷ್ಣುವರ್ಧನ್, ಅಳಿಯ ಅನಿರುದ್ಧ್, ಮೊಮ್ಮಗ ಜೇಷ್ಠ ವರ್ಧನ್ ಆಗಮಿಸಿ ವಿಷ್ಣು ಪ್ರತಿಮೆಗೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಿದರು. ಅಭಿಮಾನಿಗಳು ವಿಷ್ಣುವರ್ಧನ್‌ಗೆ ಜಯಘೋಷ ಹಾಕಿದರು.

ಮೈಸೂರು ರತ್ನ ವಿಷ್ಣುವರ್ಧನ್ ಸ್ಮಾರಕ ಅಭಿಮಾನಿಗಳ ಒಕ್ಕೂಟವು ಬೆಳಿಗ್ಗಿನಿಂದಲೇ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿತ್ತು. ಲಯನ್ಸ್, ಇನ್ನರ್ ವೀಲ್ ಕ್ಲಬ್ ಹಾಗೂ ಜೀವಾಧಾರ ರಕ್ತನಿಧಿ ಕೇಂದ್ರವು ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ಅನೇಕ ಯುವಕರು ರಕ್ತದಾನ ಮಾಡಿದರು. ರಾಯಚೂರಿನ ಮಲ್ಲಪ್ಪ ತನ್ನ ಪತ್ನಿ ಹಾಗೂ ಮಗುವಿನೊಂದಿಗೆ ಬಂದು ರಕ್ತದಾನ ಮಾಡಿದ್ದು ವಿಶೇಷವಾಗಿತ್ತು.

ಹಲವರು ವಿಷ್ಣುವರ್ಧನ್ ರೀತಿಯಲ್ಲೇ ವೇಷಭೂಷಣ ತೊಟ್ಟು ಮಿಂಚಿದರು. ತಲೆಗೆ ಬಿಳಿ ವಸ್ತ್ರ, ಕೂಲಿಂಗ್ ಗ್ಲಾಸ್ ಹಾಕಿ, ಎಡ ಕೈಯಲ್ಲಿರುವ ಕಡಗವನ್ನು ತಿರುವುತ್ತಾ ಫೋಟೊ ತೆಗೆಸಿಕೊಂಡರು. ಸ್ಮಾರಕದ ಸುತ್ತಲೂ ಇರುವ ವಿಷ್ಣುವರ್ಧನ್ ಜೀವನದ ಪ್ರಮುಖ ಘಟ್ಟಗಳ ಫೋಟೊಗಳನ್ನು ವೀಕ್ಷಿಸಿ ನೆನಪು ಹಂಚಿಕೊಂಡರು.

ಮೈಸೂರಿನ ಜ್ಯೋತಿನಗರದ ಮಹೇಶ್ ತನ್ನ ಆಟೊ ರಿಕ್ಷಾದ ತುಂಬೆಲ್ಲಾ ವಿಷ್ಣುವರ್ಧನ್ ಭಾವಚಿತ್ರಗಳ ಸ್ಟಿಕ್ಕರ್ ಅಂಟಿಸಿದ್ದರು. ಮುಂಭಾಗದಲ್ಲಿ ವಿಷ್ಣುವರ್ಧನ್ ದಂಪತಿ ಫೋಟೊ ಹಾಕಿಸಿ 'ಯಜಮಾನ್ರು' ಎಂಬ ತಲೆಬರಹ ಅಂಟಿಸಿದ್ದು, ಅಭಿಮಾನಿಗಳು ಅದರೊಂದಿಗೆ ಫೋಟೊ ತೆಗೆಸಿಕೊಂಡರು.

ವಿಷ್ಣು ಗ್ರೂಪ್ ತಂಡದ ಸದಸ್ಯರು ವಿಷ್ಣುವರ್ಧನ್ ಅಭಿನಯದ ಚಿತ್ರಗೀತೆಗಳನ್ನು ಹಾಡಿದರು. ತಮ್ಮಿಷ್ಟದ ಹಾಡುಗಳಿಗೆ ಅಭಿಮಾನಿಗಳು ಹೆಜ್ಜೆ ಹಾಕಿದರು.

ಬಳಿಕ ಆಗಮಿಸಿದ ಎಲ್ಲರಿಗೂ ಬಾಳೆ ಎಲೆ-ಒಬ್ಬಟ್ಟಿನ ಹಬ್ಬದೂಟ ಉಣಬಡಿಸಿದರು.

10 ಗುಂಟೆ ಜಾಗಕ್ಕೆ ಮನವಿ: 'ಅಭಿಮಾನ್ ಸ್ಟುಡಿಯೊದಲ್ಲಿ ಅಭಿಮಾನಿಗಳಿಗೆ ಭೇಟಿ ನೀಡಿ ಪೂಜೆ ಸಲ್ಲಿಸಲು 10 ಗುಂಟೆ ಜಾಗ ನೀಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದೇವೆ. ಜಾಗ ದೊರೆತರೆ ಕುಟುಂಬದವರೇ ಮಂಟಪ ನಿರ್ಮಿಸುತ್ತೇವೆ' ಎಂದು ವಿಷ್ಣುವರ್ಧನ್ ಅಳಿಯ ಅನಿರುದ್ಧ್ ತಿಳಿಸಿದರು.

ಮಾಧ್ಯಮಗಳೊಂದಿಗೆ ಮಾತನಾಡಿ, 'ಕುಟುಂಬದ ಸದಸ್ಯರ ಬಗ್ಗೆ ತಿಳಿಯದವರು, ಅಭಿಮಾನಿಗಳೆಂಬ ಮುಖವಾಡ ಧರಿಸಿ ನಮ್ಮ ಮಧ್ಯೆಯೇ ಇರುವವರು ಅಪಪ್ರಚಾರಗಳನ್ನು ಮಾಡುತ್ತಿದ್ದಾರೆ. ಹೀಗಾಗಿ ಪೊಲೀಸರಿಗೆ ದೂರು ನೀಡಿದ್ದೇನೆ. ಮುಂದೆ ಇದು ಮುಂದುವರೆದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು. ಕರ್ನಾಟಕ ರತ್ನ ಪ್ರಶಸ್ತಿಗೆ, ಸ್ಮಾರಕ ನಿರ್ಮಾಣದ ಹಿಂದೆ ಕುಟುಂಬದ ಶ್ರಮವಿದೆ. ಇವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು' ಎಂದು ಹೇಳಿದರು.


ಮೈಸೂರಿನ ಉದ್ಬೂರ್ ಗೇಟ್‌ನಲ್ಲಿರುವ ವಿಷ್ಣು ಸ್ಮಾರಕಕ್ಕೆ ವಿಷ್ಣುವರ್ಧನ್ ಪತ್ನಿ ಭಾರತಿ ವಿಷ್ಣುವರ್ಧನ್, ಮಗಳು ಕೀರ್ತಿ ವಿಷ್ಣುವರ್ಧನ್, ಅಳಿಯ ಅನಿರುದ್ಧ್, ಮೊಮ್ಮಗ ಜೇಷ್ಠ ವರ್ಧನ್ ಆಗಮಿಸಿ ವಿಷ್ಣು ಪ್ರತಿಮೆಗೆ ಪೂಜೆ ಸಲ್ಲಿಸಿದರು

ಅಪಪ್ರಚಾರಕ್ಕೆ ಕಿವಿಗೊಡಬೇಡಿ, ನಮ್ಮನ್ನೇ ವಿಚಾರಿಸಿ : ಭಾರತಿ

'ವಿಷ್ಣುವರ್ಧನ್ ಅಭಿಮಾನಿಗಳು ಧೈರ್ಯವಂತರು, ಸುಸಂಸ್ಕೃತರು. ನಮ್ಮ ಕುಟುಂಬದ ಬಗೆಗಿನ ಅಪಪ್ರಚಾರಗಳಿಗೆ ಕಿವಿಗೊಡಬೇಡಿ. ನಿಮಗೆ ಅನುಮಾನಗಳಿದ್ದರೆ ನೇರವಾಗಿ ನಮ್ಮ ಮನೆಗೆ ಬನ್ನಿ, ಅನಿರುದ್ಧ್ ನಿಮ್ಮ ಸಂಶಯ ಸರಿಪಡಿಸುತ್ತಾರೆ' ಎಂದು ಭಾರತಿ ಮನವಿ ಮಾಡಿದರು.

'ಯಜಮಾನರಿಗೆ ಕರ್ನಾಟಕ ಗೌರವ ದೊರೆತಿರುವುದಕ್ಕೆ ದೇವರಿಗೆ ಎಷ್ಟು ನಮಸ್ಕಾರ ಹೇಳಿದರೂ ಸಾಲದು. ಸರ್ಕಾರಕ್ಕೆ ನಾವು ಚಿರಋಣಿ. ಅವರ ಮಾತಿನಂತೆ ತಂದೆ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳಿ. ಉತ್ತಮ ದಾರಿಯಲ್ಲಿ ನಡೆದರೆ ಒಳ್ಳೆಯದಾಗುತ್ತದೆ. ಇದೇ ಪ್ರೀತಿ ಮೊಮ್ಮಗ ಜೇಷ್ಠನ ಮೇಲೂ ಇರಲಿ' ಎಂದರು.

ವಿಷ್ಣುವರ್ಧನ್ ಅಭಿಮಾನ ಕ್ಷೇತ್ರದ ನೀಲನಕ್ಷೆ

ಹೀಗಿರಲಿದೆ 'ಅಭಿಮಾನ ಕ್ಷೇತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಸುದೀಪ್ ನೇತೃತ್ವದಲ್ಲಿ ಕೆಂಗೇರಿ ಸಮೀಪ ನಿರ್ಮಾಣವಾಗಲಿರುವ 'ಡಾ. ವಿಷ್ಣುವರ್ಧನ್ ಅಭಿಮಾನ ಕ್ಷೇತ್ರ'ದ ನೀಲನಕ್ಷೆಯನ್ನು ಡಾ.ವಿಷ್ಣು ಸೇನಾ ಸಮಿತಿಯ ವೀರಕಪುತ್ರ ಶ್ರೀನಿವಾಸ್ ಗುರುವಾರ(ಸೆ.18) ಬಿಡುಗಡೆಗೊಳಿಸಿದರು.

'ಡಾ.ವಿಷ್ಣುವರ್ಧನ್ ಅಭಿಮಾನ ಕ್ಷೇತ್ರ'ದ ನಿರ್ಮಾಣಕ್ಕೆ ಸುದೀಪ್, ಅಶೋಕ್ ಖೇಣಿ, ಕರ್ನಾಟಕ ರಕ್ಷಣಾ ವೇದಿಕೆಯ ಅಧ್ಯಕ್ಷ ನಾರಾಯಣ ಗೌಡ, ನೈಸ್ ಸಂಸ್ಥೆಯ ಎಂ.ರುದ್ರೇಶ್ ಹಾಗೂ ಅಭಿಮಾನಿಗಳು ಕೈಜೋಡಿಸಿದ್ದಾರೆ. 'ಕಲಾವಿದರೊಬ್ಬರ ಹೆಸರಿನಲ್ಲಿ ಅವರ ಅಭಿಮಾನಿಗಳು ನಿರ್ಮಿಸುತ್ತಿರುವ ದೇಶದ ಮೊಟ್ಟ ಮೊದಲ ಅಭಿಮಾನ ಕ್ಷೇತ್ರವಿದು' ಎಂದಿದ್ದಾರೆ ಶ್ರೀನಿವಾಸ್.

'ಜ್ಞಾನ, ಧ್ಯಾನ ಮತ್ತು ದರ್ಶನ' ಎಂಬ ವಿಷಯವನ್ನಿಟ್ಟುಕೊಂಡು ಈ ಕೇಂದ್ರ ನಿರ್ಮಾಣವಾಗಲಿದ್ದು, ಇಲ್ಲಿ ವಿಷ್ಣುವರ್ಧನ್ ಅವರ 25 ಅಡಿಯ ಅಮೃತ ಶಿಲೆಯ ಪ್ರತಿಮೆಯ ಜೊತೆಗೆ ಧ್ಯಾನ ಮಂದಿರವಿರಲಿದೆ. ಈ ಧ್ಯಾನ ಮಂದಿರದ ವಿಶೇಷತೆ ಏನೆಂದರೆ ಮಧ್ಯಾಹ್ನ ಎರಡು ಗಂಟೆಗೆ ಸೂರ್ಯನ ಕಿರಣಗಳು ಪ್ರತಿಮೆಯ ಮೇಲೆ ಮೂಡುವಂತೆ ಇದನ್ನು ವಿನ್ಯಾಸ ಮಾಡಲಾಗುವುದು. ಗ್ರಂಥಾಲಯ, ಫೋಟೊ ಗ್ಯಾಲರಿ ಕೂಡ ವಿಶೇಷವಾಗಿ ವಿನ್ಯಾಸಗೊಂಡಿದೆ. ಜೊತೆಗೆ ಪ್ರತಿದಿನ ಸಂಜೆ 6.30ಕ್ಕೆ ಲೇಸರ್ ಶೋ ನಡೆಯುವಂತೆ ವ್ಯವಸ್ಥೆಯನ್ನು ಮಾಡಲಾಗಿದೆ' ಎಂದರು.

'ಮುಂದಿನ ಒಂದು ವರ್ಷದಲ್ಲಿ ಈ ಕ್ಷೇತ್ರದ ನಿರ್ಮಾಣ ಮುಗಿಸುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ಮಾಡಲಾಗುತ್ತಿದ್ದು, ಮುಂಜಾಗ್ರತೆ ಕಾರಣಕ್ಕಾಗಿ ಆ ಜಾಗ ಎಲ್ಲಿದೆ ಎನ್ನುವ ಮಾಹಿತಿಯನ್ನು ಬಹಿರಂಗಪಡಿಸುವುದಿಲ್ಲ' ಎಂದರು.

ಜನ್ಮದಿನಾಚರಣೆ: ಅಭಿಮಾನ್ ಸ್ಟುಡಿಯೊ ಬಳಿ ತಾತ್ಕಾಲಿಕ ಮಂಟಪ ನಿರ್ಮಿಸಿ ಅಭಿಮಾನಿಗಳು ವಿಷ್ಣುವರ್ಧನ್ ಅವರ ಜನ್ಮದಿನಾಚರಣೆಯನ್ನು ಆಚರಿಸಿದರು.

ಎಸ್‌.ಟಿ ಮುಖಂಡರ ಸಭೆಯಲ್ಲಿ ಗದ್ದಲ

ಹರಿಹರ: ಕುರುಬ ಸಮುದಾಯವನ್ನು ಎಸ್‌.ಟಿ.ಗೆ ಸೇರಿಸುವ ಪ್ರಸ್ತಾವಕ್ಕೆ ವಿರೋಧ, ಮಾತಿನ ಚಕಮಕಿ

ಪ್ರಜಾವಾಣಿ ವಾರ್ತೆ

ಹರಿಹರ (ದಾವಣಗೆರೆ): ಇಲ್ಲಿನ ರಾಜನಹಳ್ಳಿ ವಾಲ್ಮೀಕಿ ಗುರುಪೀಠದಲ್ಲಿ ಗುರುವಾರ ನಡೆದ ಎಸ್‌.ಟಿ ಸಮುದಾಯದ ಮುಖಂಡರ ಸಭೆಯಲ್ಲಿ ಮಾತಿನ ಚಕಮಕಿ ನಡೆದು, ಗದ್ದಲ, ಗೊಂದಲದ ವಾತಾವರಣ ನಿರ್ಮಾಣವಾಯಿತು.

ಜಾತಿ ಸಮೀಕ್ಷೆ ಸಂದರ್ಭ ಜಾತಿ ಕಾಲಂನಲ್ಲಿ 'ನಾಯಕ' ಎಂದು ಬರೆಸುವುದು, ಇತರೆ ಜಾತಿಯವರನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುವ ಸರ್ಕಾರದ ನಿರ್ಧಾರವನ್ನು ಹಾಗೂ ಸುಳ್ಳು ಜಾತಿ ಪ್ರಮಾಣಪತ್ರ ನೀಡುವುದನ್ನು ವಿರೋಧಿಸುವ ಕುರಿತು ಸಭೆ ಆಯೋಜಿಸಲಾಗಿತ್ತು.

'ವಾಲ್ಮೀಕಿ ನಿಗಮದ ಹಗರಣದಿಂದ ಕಾಂಗ್ರೆಸ್‌ನವರು ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ಚುನಾವಣೆ ಗೆದ್ದರು. ಆದರೆ, ನಾಯಕ ಸಮುದಾಯದ ಸಚಿವರ (ಬಿ.ನಾಗೇಂದ್ರ) ತಲೆದಂಡ ಆಯಿತು' ಎಂದು ವೇದಿಕೆಯಲ್ಲಿದ್ದ ಬಿಜೆಪಿಯ ಎಸ್‌.ಟಿ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷ ಬಂಗಾರು ಹನುಮಂತು ದೂರಿದರು.

ಈ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಬಳ್ಳಾರಿಯ ಕಾಂಗ್ರೆಸ್ ಸಂಸದ ಇ. ತುಕಾರಾಂ, 'ಇದು ರಾಜಕೀಯ ವೇದಿಕೆಯಲ್ಲ. ನಾವು ರಾಜಕೀಯವಾಗಿ ಮಾತನಾಡಬೇಕೆಂದರೆ ಬಹಳಷ್ಟು ವಿಷಯಗಳಿವೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ವೇಳೆ ಸಮುದಾಯದ ಮುಖಂಡರು ಬಂಗಾರು ಹನುಮಂತು ಅವರ ಕೈಲಿದ್ದ ಮೈಕ್ ಕಿತ್ತುಕೊಂಡು ಆಕ್ರೋಶ ವ್ಯಕ್ತಪಡಿಸಿದರು. ಆಗ ಎರಡು ಗುಂಪುಗಳ ನಡುವೆ ಜೋರು ಗಲಾಟೆ ನಡೆಯಿತು. ಬೆಂಬಲಿಗರ ನಡುವೆ ಅರ್ಧ ಗಂಟೆಗೂ ಹೆಚ್ಚು ಕಾಲ ಮಾತಿನ ಚಕಮಕಿ ನಡೆಯಿತು. ಪರಸ್ಪರ ತಳ್ಳಾಟ, ನೂಕಾಟವೂ ನಡೆಯಿತು.

ಈ ಸಂದರ್ಭ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಮಧ್ಯಪ್ರವೇಶಿಸಿ ಎಲ್ಲರನ್ನೂ ಸಮಾಧಾನಪಡಿಸಿದರು. ಕಿತ್ತಾಟದ ಬಗ್ಗೆ ಶ್ರೀಗಳು ಅಸಮಾಧಾನ ವ್ಯಕ್ತಪಡಿಸಿದರು.

ಸೇರ್ಪಡೆಗೆ ವಿರೋಧ: ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುವ ಸರ್ಕಾರ ದೆದುರಿನ ಪ್ರಸ್ತಾವಕ್ಕೆ ಸಭೆಯಲ್ಲಿ ವಿರೋಧ ವ್ಯಕ್ತವಾಯಿತು. ಸರ್ಕಾರದ ನಡೆ ವಿರೋಧಿಸಿ ಸೆ.25ರಂದು ರಾಜ್ಯದಾದ್ಯಂತ ತಹಶೀಲ್ದಾರ್, ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸುವುದು ಹಾಗೂ ಅ. 7ರಂದು ಎಲ್ಲಾ ಶಾಸಕರಿಗೆ ಮನವಿ ಸಲ್ಲಿಸಲು ಸಭೆಯಲ್ಲಿ ನಿರ್ಧರಿಸಲಾಗಿದೆ ಎಂದು ಪ್ರಸನ್ನಾನಂದ ಸ್ವಾಮೀಜಿ ಸಭೆಯ ನಂತರ ತಿಳಿಸಿದರು.

ಪ್ರಮುಖರು ಗೈರು: ಪರಿಶಿಷ್ಟ ಪಂಗಡಕ್ಕೆ ಸೇರಿರುವ ಸಚಿವ ಸತೀಶ್ ಜಾರಕಿಹೊಳಿ, ಮಾಜಿ ಸಚಿವರಾದ ಬಿ.ಶ್ರೀರಾಮುಲು, ರಮೇಶ್ ಜಾರಕಿಹೊಳಿ, ಕೆ.ಎನ್. ರಾಜಣ್ಣ ಸೇರಿದಂತೆ ಪ್ರಮುಖರು ಸಭೆಗೆ ಗೈರಾಗಿದ್ದರು.

'ಸಮೀಕ್ಷೆಯಲ್ಲಿ ಲಿಂಗಾಯತ ಪಂಚಮಸಾಲಿ ಎಂದೇ ನಮೂದಿಸಿ'

ಬಸವಜಯ ಮೃತ್ಯುಂಜಯ ಸ್ವಾಮೀಜಿ

ಬೆಳಗಾವಿ: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ಪಂಚಮಸಾಲಿ ಸಮಾಜದವರು 'ಲಿಂಗಾಯತ ಪಂಚಮಸಾಲಿ' ಎಂದು ನಮೂದಿಸಬೇಕು' ಎಂದು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠಾಧಿಪತಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

'ಪಂಚಮಸಾಲಿ ವಕೀಲರ ಪರಿಷತ್ ನಿರಂತರ ಸಭೆಗಳನ್ನು ನಡೆಸಿ ಮತ್ತು ಸಮಗ್ರವಾಗಿ ಚರ್ಚಿಸಿಯೇ ಈ ನಿರ್ಣಯ ತೆಗೆದುಕೊಂಡಿದೆ. ಹೀಗಾಗಿ ಮಹಾಸಭೆ, ಮಠಾಧೀಶರು ಮತ್ತು ಸಂಘ–ಸಂಸ್ಥೆಗಳ ಹೇಳಿಕೆಗೆ ಯಾರೂ ಕಿವಿಗೊಡಬಾರದು' ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

'ಸಮೀಕ್ಷೆ ವಿಷಯದಲ್ಲಿ ಪಂಚಮಸಾಲಿ ಸಮಾಜಕ್ಕೆ ನಾವು ನೀಡಿದ ಆದೇಶವನ್ನೇ ಎಲ್ಲರೂ ಪಾಲಿಸಬೇಕೇ ಹೊರತು ಬೇರೆಯವರ ಮಾತು ಕೇಳಬಾರದು. ಹುಬ್ಬಳ್ಳಿಯಲ್ಲಿ ಜರುಗುವ ಏಕತಾ ಸಮಾವೇಶದಲ್ಲಿ ಪಂಚಮಸಲಿ ಸಮುದಾಯದ ಯಾರೊಬ್ಬರೂ ಭಾಗವಹಿಸುವುದು ಬೇಡ' ಎಂದರು.

ಸೆ.20ಕ್ಕೆ 'ಪ್ರತಿಜ್ಞಾ ಕ್ರಾಂತಿ'ಗೆ ಚಾಲನೆ: 'ಮೀಸಲಾತಿ ಪಡೆಯುವುದಕ್ಕಾಗಿ ಎಂಟನೇ ಹಂತದ ಹೋರಾಟಕ್ಕೆ ರಾಯಬಾಗ ತಾಲ್ಲೂಕಿನ ಹಾರೂಗೇರಿಯಲ್ಲಿ ಸೆಪ್ಟೆಂಬರ್ 20ರಂದು ಚಾಲನೆ ನೀಡಲಾಗುತ್ತಿದೆ. ಪಂಚಮಸಾಲಿ 'ಪ್ರತಿಜ್ಞಾ ಕ್ರಾಂತಿ' ಹೆಸರಿನಲ್ಲಿ ನಡೆಯುವ ಹೋರಾಟದಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ, ಶಾಸಕ ಬಸನಗೌಡ ಪಾಟೀಲ ಯತ್ನಾಳ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ ಮತ್ತಿತರರು ಭಾಗವಹಿಸುವರು' ಎಂದು ಸ್ವಾಮೀಜಿ ತಿಳಿಸಿದರು.

'ಸೆ.22ರಂದು ರಾಮದುರ್ಗದಲ್ಲಿ ಮತ್ತು ಅ.4ರಂದು ಬಾಗಲಕೋಟೆ ಜಿಲ್ಲೆಯ ರಬಕವಿ–ಬನಹಟ್ಟಿಯಲ್ಲೂ ಹೋರಾಟ ಮಾಡಲಿದ್ದೇವೆ' ಎಂದರು.

ದಾವಣಗೆರೆ ಜಿಲ್ಲೆ ಹರಿಹರದ ರಾಜನಹಳ್ಳಿ ವಾಲ್ಮೀಕಿ ಗುರುಪೀಠದಲ್ಲಿ ಗುರುವಾರ ನಡೆದ ಎಸ್‌ಟಿ ಸಮುದಾಯದ ಮುಖಂಡರ ಸಭೆಯಲ್ಲಿ ಬಂಗಾರು ಹನುಮಂತು ಅವರ ವಿರುದ್ಧ ಇ.ತುಕಾರಾಂ ಆಕ್ರೋಶ ವ್ಯಕ್ತಪಡಿಸಿದರು

ವೀರಶೈವ ಲಿಂಗಾಯತ ಏಕತಾ ಸಮಾವೇಶ ಇಂದು

ಹುಬ್ಬಳ್ಳಿ: ಇಲ್ಲಿನ ನೆಹರೂ ಮೈದಾನದಲ್ಲಿ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ವೀರಶೈವ ಲಿಂಗಾಯತ ಏಕತಾ ಸಮಾವೇಶ ನಡೆಯಲಿದೆ. ಮುಖ್ಯ ವೇದಿಕೆ ಸೇರಿ ಒಟ್ಟು ಮೂರು ವೇದಿಕೆಗಳನ್ನು ನಿರ್ಮಿಸಲಾಗಿದೆ. ಪಂಚ ಪೀಠಾಧೀಶರು ಸೇರಿ ಒಂದು ಸಾವಿರ ಸ್ವಾಮೀಜಿಗಳು, 200 ರಾಜಕೀಯ ನಾಯಕರು ಮತ್ತು ಒಂದು ಲಕ್ಷ ಜನ ಸೇರುವ ನಿರೀಕ್ಷೆ ಇದೆ.

ಅಖಿಲ ಭಾರತವ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಸಚಿವರಾದ ಲಕ್ಷ್ಮಿ ಹೆಬ್ಬಾಳಕರ, ಈಶ್ವರ ಖಂಡ್ರೆ, ಡಾ.ಶರಣಪ್ರಕಾಶ ಪಾಟೀಲ, ಶಿವಾನಂದ ಪಾಟೀಲ, ಶಾಸಕ ಬಸವರಾಜ ರಾಯರಡ್ಡಿ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಂಸದರಾದ ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಸಮಾವೇಶದಲ್ಲಿ ಪಾಲ್ಗೊಳ್ಳುವರು.

'ಸಮಾಜದವರನ್ನು ಒಂದುಗೂಡಿಸಲು ಸಮಾವೇಶ ಆಯೋಜಿಸಲಾಗುತ್ತಿದೆ ಹೊರತು ಯಾವುದೇ ಸರ್ಕಾರ ಅಥವಾ ಪಕ್ಷದ ವಿರುದ್ಧ ಅಲ್ಲ. ಸಮಾಜದ ಸಂಘಟನೆಗೆ ಒತ್ತು ನೀಡುವ ಉದ್ದೇಶವಿದೆಯೇ ರಾಜಕಾರಣ ಮಾಡಲು ಬಯಸಿಲ್ಲ. ರಾಜಕಾರಣಕ್ಕೆ ಯಾರಾದರೂ ಮುಂದಾದರೆ, ಅದನ್ನು ನಿಭಾಯಿಸುವ ಸಾಮರ್ಥ್ಯ ಮಠಾಧೀಶರಿಗಿದೆ' ಎಂದು ಶಿರಹಟ್ಟಿಯ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು.


ದಿಂಗಾಲೇಶ್ವರ ಸ್ವಾಮೀಜಿ

'ಜಾಗತಿಕ ಲಿಂಗಾಯತ ಮಹಾಸಭಾದವರ ವಾದ ಬಸವಣ್ಣನವರ ಸಿದ್ಧಾಂತಕ್ಕೆ ದ್ರೋಹ ಮಾಡುವುದಾಗಿದೆ. ಬಸವಣ್ಣನವರು ಎಲ್ಲ ಜಾತಿಗಳನ್ನುಒಂದು ಮಾಡುವ ಸಿದ್ಧಾಂತ ಮಂಡಿಸಿದ್ದು, ಅವರು ಪ್ರತ್ಯೇಕ ಲಿಂಗಾಯತ ಧರ್ಮದ ಬಗ್ಗೆ ಹೇಳಿಲ್ಲ' ಎಂದರು.

'ಬಸವ ಸಂಸ್ಕೃತಿ ಯಾತ್ರೆ ನಮಗೆ ಲೆಕ್ಕಕ್ಕೆ ಇಲ್ಲ. ವೀರಶೈವ, ಲಿಂಗಾಯತರನ್ನು ಒಡೆಯಲು ಹೊರಟಿರುವುದರ ಹಿಂದೆ ಕಾಣದ ಕೈಗಳಿವೆ. ಈ ಹಿಂದೆಯೂ ಅವರು ದೊಡ್ಡ ಮಟ್ಟದಲ್ಲಿ ಆ ಕೆಲಸ ಮಾಡಿದ್ದರು. ಈಗ ಸಣ್ಣ ಪ್ರಮಾಣದಲ್ಲಿ ಮಾಡುತ್ತಿದ್ದಾರೆ' ಎಂದರು.

ಸುದ್ದಿ 2 ನಿಮಿಷ

ಬಂಟರ ಮಾಹಿತಿ ಕೋಶಕ್ಕೆ ಸಿದ್ಧತೆ

ಮಂಗಳೂರು: ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿದ ವರದಿಯಲ್ಲಿ ಬಂಟರ ಯಾನೆ ನಾಡವರಿಗೆ ಸಂಬಂಧಿಸಿದ ವಿವರಗಳು ಅವೈಜ್ಞಾನಿಕವಾಗಿರುವುದರಿಂದ ಅದನ್ನು ಜಾತಿವಾರು ಸಮೀಕ್ಷೆಯ ಸಂದರ್ಭದಲ್ಲಿ ಪರಿಗಣಿಸಬಾರದು ಎಂದು ಬಂಟರ ಯಾನೆ ನಾಡವರ ಸಂಘದ ಅಧ್ಯಕ್ಷ ಮಾಲಾಡಿ ಅಜಿತ್ ಕುಮಾರ್ ರೈ ಆಗ್ರಹಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ವಿಶ್ವದಾದ್ಯಂತ ಇರುವ ಬಂಟರ ಜನಸಂಖ್ಯೆಯನ್ನು ನಿಖರವಾಗಿ ತಿಳಿದುಕೊಳ್ಳಲು ಬಾಂಧವ್ಯ ಎಂಬ ಹೆಸರಿನಲ್ಲಿ ಸಮೀಕ್ಷೆ ನಡೆಸಲಾಗುವುದು. ಅದರಲ್ಲಿ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಮಾಹಿತಿಯನ್ನು ಕಲೆ ಹಾಕಿ ಮಾಹಿತಿ ಕೋಶ ರಚಿಸಲಾಗುವುದು ಎಂದು ತಿಳಿಸಿದರು.

'ಕಾಂತರಾಜ ವರದಿಯಲ್ಲಿ ಬಂಟರ ಸಂಖ್ಯೆ 3.15 ಲಕ್ಷ ಎಂದು ದಾಖಲಿಸಲಾಗಿದೆ. ಆದರೆ ಬಂಟರ ಸಂಖ್ಯೆ 20 ಲಕ್ಷಕ್ಕೂ ಅಧಿಕ ಇದೆ. ಈ ಪೈಕಿ ಶೇಕಡ 40ರಷ್ಟು ಮಂದಿ ಬಡತನ ರೇಖೆಗಿಂತ ಕೆಳಗೆ ಇದ್ದಾರೆ. ವಿವಿಧ ಕಾರಣಗಳಿಂದ 20 ಲಕ್ಷದಷ್ಟು ಜನರು ದೇಶದ ವಿವಿಧ ಭಾಗ ಮತ್ತು ವಿದೇಶದಲ್ಲಿದ್ದಾರೆ. ಇವರೆಲ್ಲರೂ ಬಂಟರೇ. ಆದರೆ ಆಯೋಗ ಪ್ರಕಟಿಸಿದ ಪಟ್ಟಿಯಲ್ಲಿ ಬಂಟರು ಮತ್ತು ನಾಡವರು ಭಿನ್ನ ಎಂಬ ಮಾಹಿತಿ ಇದೆ. ಇದು ಖಂಡನೀಯ' ಎಂದು ಅವರು ಹೇಳಿದರು.

ಸಮೀಕ್ಷೆಯ ಸಂದರ್ಭದಲ್ಲಿ ಮೊಬೈಲ್ ಆ್ಯಪ್‌ನ ಜಾತಿ ಕಾಲಂನಲ್ಲಿ ಬಂಟ ಎಂದೂ ನಾಡವ ಎಂಬುದನ್ನು ಸಮಾನಾರ್ಥದ ಹೆಸರಿನ ಕಾಲಂನಲ್ಲಿ ಬರೆಸಬೇಕು ಎಂದೂ ಅವರು ತಿಳಿಸಿದರು.

ಹೇಮನಾಥ ಶೆಟ್ಟಿ ಕಾವು, ರಾಮ್‌ಮೋಹನ್ ರೈ, ಸಂಜೀವ ಶೆಟ್ಟಿ ಎಸ್ ಮತ್ತಿತರರು ಪಾಲ್ಗೊಂಡಿದ್ದರು.

ನದಿಯಲ್ಲಿ ಮುಳುಗಿ ಆನೆ ಸಾವು

ಕುಶಾಲನಗರ: ತಾಲ್ಲೂಕಿನ ಮೀನುಕೊಲ್ಲಿ ಮೀಸಲು ಅರಣ್ಯ ವ್ಯಾಪ್ತಿಯ ವಾಲ್ನೂರು ಹಾಗೂ ಮಾಲ್ದಾರೆ ಬಳಿಯ ಕಾವೇರಿ ನದಿಯಲ್ಲಿ ಮುಳುಗಿ ಹೆಣ್ಣಾನೆ ಮೃತಪಟ್ಟಿದ್ದು, ಗುರುವಾರ ಮೃತದೇಹ ಕಂಡು ಬಂದಿದೆ.

ನದಿಯ ಮಧ್ಯಭಾಗದಲ್ಲಿದ್ದ ಮೃತದೇಹವನ್ನು ಸಾಕಾನೆಯ ಸಹಾಯದಿಂದ ಹೊರ ತೆಗೆಯಲಾಯಿತು. ಎಸಿಎಫ್ ಎ.ಎ.ಗೋಪಾಲ, ಆರ್‌ಎಫ್‌ಒ ಆರ್.ರಕ್ಷಿತ್ ಹಾಗೂ ಮುಖ್ಯ ಪಶು ವೈದ್ಯಾಧಿಕಾರಿ ಡಾ.ಮುಜೀಬ್, ಪಶುವೈದ್ಯಾಧಿಕಾರಿ ಡಾ.ಚಿಟ್ಟಿಯಪ್ಪ ನೇತೃತ್ವ ವಹಿಸಿದ್ದರು.

'ಆನೆಗೆ ಗುಂಡು ತಗುಲಿಲ್ಲ, ವಿದ್ಯುತ್ ಸ್ಪರ್ಶವೂ ಆಗಿಲ್ಲ. ಮುಳುಗಿಯೇ ಮೃತಪಟ್ಟಿದೆ' ಎಂದು ಅಧಿಕಾರಿಗಳು ದೃಢಪಡಿಸಿದರು. ಮಾಲ್ದಾರೆ ಅರಣ್ಯ ಪ್ರದೇಶದಲ್ಲಿ ಅಂತ್ಯಸಂಸ್ಕಾರ ನಡೆಯಿತು.

'ಬೊಮ್ಮಾಯಿ ಹೇಳಿಕೆ ದುರದೃಷ್ಟಕರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೀರಶೈವ ಲಿಂಗಾಯತ ಏಕತಾ ಸಮಾವೇಶವು ಸರ್ಕಾರದ ವಿರುದ್ಧ ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿಕೆ ನೀಡಿರುವುದು ದುರದೃಷ್ಟಕರ ಎಂದು ಅಖಿಲ ಭಾರತ ವೀರಶೈವ ಮಹಾಸಭಾ ತಿಳಿಸಿದೆ.

ಬೊಮ್ಮಾಯಿ ಯಾವ ಉದ್ದೇಶ ಇಟ್ಟುಕೊಂಡು ಹೇಳಿಕೆ ನೀಡಿದ್ದಾರೆ ಎಂಬುದು ಗೊತ್ತಿಲ್ಲ. ಹುಬ್ಬಳ್ಳಿಯ ನೆಹರೂ ಮೈದಾನದಲ್ಲಿ ಸೆ.19ರಂದು ಹಮ್ಮಿಕೊಂಡಿರುವ ಈ ಸಮಾವೇಶವು ಯಾವುದೇ ಧರ್ಮ, ಜಾತಿ ಅಥವಾ ಸರ್ಕಾರದ ವಿರುದ್ಧ ಅಲ್ಲ. ನಾವೆಲ್ಲ ಒಂದು ಎಂಬ ಸಂದೇಶವನ್ನು ಸಾರುವುದು ಮತ್ತು ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯಲ್ಲಿ ಏನು ಬರೆಯಿಸಬೇಕೆಂಬ ಸ್ಪಷ್ಟ ನಿಲುವು ತಾಳುವುದು ಈ ಸಮಾವೇಶದ ಉದ್ದೇಶ ಎಂದು ಮಹಾಸಭಾದ ಕಾರ್ಯದರ್ಶಿ ಎಚ್‌.ಎಂ. ರೇಣುಕ ಪ್ರಸನ್ನ ತಿಳಿಸಿದ್ದಾರೆ.

ಸಮಾವೇಶದ ಬಗ್ಗೆ ಕೆಲವರು ಇಲ್ಲಸಲ್ಲದ ರಾಜಕೀಯ ಪ್ರೇರಿತ ಹೇಳಿಕೆಗಳನ್ನು ನೀಡಿ, ಸಮಾಜದಲ್ಲಿ ಗೊಂದಲವನ್ನು ಉಂಟು ಮಾಡುತ್ತಿರುವುದನ್ನು ಮಹಾಸಭಾ ಖಂಡಿಸುತ್ತದೆ. ಇಂಥ ಹೇಳಿಕೆ ನೀಡುವುದನ್ನು ನಿಲ್ಲಿಸಬೇಕು. ಸಮಾವೇಶದಲ್ಲಿ ಎಲ್ಲರೂ ಪಾಲ್ಗೊಂಡು ಸಮಾಜದ ಒಗ್ಗಟ್ಟನ್ನು ಪ್ರದರ್ಶಿಸಬೇಕು ಎಂದು ಹೇಳಿದ್ದಾರೆ.

ಸಮೀಕ್ಷೆ: ಕ್ರೈಸ್ತರಲ್ಲಿ ಜಾತಿ ಸೃಷ್ಟಿಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿವಾರು ಸಮೀಕ್ಷೆಗೆ ಸಿದ್ಧಪಡಿಸಿರುವ ಪಟ್ಟಿಯಿಂದ ಪರಿಶಿಷ್ಟ ಕ್ರೈಸ್ತ ಜಾತಿಗಳನ್ನು ಸರ್ಕಾರ ಕೈಬಿಡಬೇಕು. ರಾಜಕೀಯ ಲಾಭಕ್ಕಾಗಿ ಸಮಾಜವನ್ನು ಒಡೆಯುವ ಕೆಲಸ ಮಾಡಬಾರದು ಎಂದು ಪರಿಶಿಷ್ಟ ಜಾತಿಗಳ ಮೀಸಲಾತಿ ಹಿತರಕ್ಷಣಾ ವೇದಿಕೆ ಒತ್ತಾಯಿಸಿದೆ.

ನಿವೃತ್ತ ಐಎಎಸ್ ಅಧಿಕಾರಿ ಎಂ.ಲಕ್ಷ್ಮೀನಾರಾಯಣ, ಮಾಜಿ ಸಚಿವ ಎನ್‌.ಮಹೇಶ್ ನೇತೃತ್ವದಲ್ಲಿ ಶಾಸಕರ ಭವನದಲ್ಲಿ ಗುರುವಾರ ನಡೆದ ಸಭೆಯಲ್ಲಿ ಚರ್ಚೆ ನಡೆಸಿದ ವೇದಿಕೆ ಮುಖಂಡರು, ದಲಿತ ಜಾತಿಗಳನ್ನು ಹುಟ್ಟುಹಾಕುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ. ಸಂವಿಧಾನದ 341ನೇ ವಿಧಿಯ ದುರ್ಬಳಕೆಯಾಗುತ್ತಿದೆ. ಜಾತಿಗಳನ್ನು ಒಡೆದು ರಾಜಕಾರಣಕ್ಕೆ ಬಳಸಿಕೊಳ್ಳುತ್ತಿದೆ ಎಂದು ದೂರಿದರು.

> **ಸರ್ಕಾರ ಜಾತಿಗಳನ್ನು ಒಡೆಯುವ ಕೆಲಸ ಮಾಡುತ್ತಿದೆ. ಸೋನಿಯಾಗಾಂಧಿ ಅವರನ್ನು ಓಲೈಸಲು ಕರ್ನಾಟಕದ ಪೋಪ್ ಆಗಲು ಸಿದ್ದರಾಮಯ್ಯ ಹೊರಟಿದ್ದಾರೆ**
> **ಕೆ.ಎನ್.ಸುನಿಲ್‌ಕುಮಾರ್**
> ಶಾಸಕ

ಸರ್ಕಾರದ ಜಾತಿಪಟ್ಟಿಯಲ್ಲಿ ಕ್ರೈಸ್ತರ ಮೂಲ ಜಾತಿಗಳಾದ ಕೆಥೋಲಿಕ್, ಪ್ರೊಟೆಸ್ಟೆಂಟ್ ಇತ್ಯಾದಿ ಜಾತಿಗಳೇ ಇಲ್ಲ. ಈ ಬಗ್ಗೆ ಕ್ರೈಸ್ತ ಧರ್ಮಗುರುಗಳ ಮೌನವೂ ಆಕ್ಷೇಪಾರ್ಹ. ಸರ್ಕಾರ ಹಿಂದೂ ಧರ್ಮೀಯರ ಸಂಖ್ಯೆಯನ್ನು ಕುಗ್ಗಿಸಿ, ಕ್ರೈಸ್ತ ಧರ್ಮೀಯರನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದೆ. ಈ ವಿಷಯದಲ್ಲಿ ರಾಜ್ಯಪಾಲರು ಮಧ್ಯಪ್ರವೇಶ ಮಾಡಬೇಕು. ಪರಿಶಿಷ್ಟ ಜಾತಿಗಳ ಹಿತ ಕಾಪಾಡಬೇಕು ಎಂದು ಮುಖಂಡರಾದ ಎಂ.ವೆಂಕಟಸ್ವಾಮಿ, ಬಾಲಕೃಷ್ಣ, ಶಂಕರಪ್ಪ ದಂಡೋರ, ಬಿ.ಆರ್. ಮುನಿರಾಜು, ಹರಿರಾಮ್, ಶ್ರೀನಿವಾಸ್, ಬಿ.ಆರ್.ಲೋಹಿತ್, ರಾಮಬಾಬು, ಅಶೋಕ್, ಕೋದಂಡರಾಮು, ವೆಂಕಟೇಶ್ ಮೌರ್ಯ, ವೆಂಕಟೇಶ ದೊಡ್ಡೇರಿ ಆಗ್ರಹಿಸಿದರು.

ಎರಡು ತಿಂಗಳ ಹಿಂದೆಯಷ್ಟೆ ನ್ಯಾಯಮೂರ್ತಿ ನಾಗಮೋಹನ ದಾಸ್ ಆಯೋಗ ಪರಿಶಿಷ್ಟ ಜಾತಿಗಳ ಸಮಗ್ರ ಸಮೀಕ್ಷೆ ಮಾಡಿದೆ. ದಲಿತರ ಮೀಸಲು ನಿಧಿಯಿಂದ ₹150 ಕೋಟಿ ವ್ಯಯಿಸಿದೆ. ಈಗ ಮತ್ತೆ ದಲಿತರ ಸಮೀಕ್ಷೆ ಮಾಡುವ ಅಗತ್ಯ ಏನಿದೆ? ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಕ್ರೈಸ್ತರ ಸೇರ್ಪಡೆಯಿಂದ ಸಮೀಕ್ಷೆ ನಗೆಪಾಟಲಿಗೆ ಗುರಿಯಾಗಿದೆ. ಪಕ್ಷದ ಹೈಕಮಾಂಡ್ ಓಲೈಸಲು ಸಾಮಾಜಿಕ ನ್ಯಾಯದ ಹಿತವನ್ನು ಬಲಿಕೊಡಲಾಗುತ್ತಿದೆ ಎಂದು ಆರೋಪಿಸಿದರು.

ಸ್ವಯಂ ಪ್ರೇರಿತ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಸೈನಿಕರು, ಮಾಜಿ ಸೈನಿಕರು, ಸ್ವಾತಂತ್ರ್ಯ ಹೋರಾಟಗಾರರಿಗೆ ಸರ್ಕಾರ ದಿಂದ ದೊರಕಬೇಕಾದ ಸವಲತ್ತುಗಳನ್ನು ಒದಗಿಸಲು ನಿರ್ಲಕ್ಷ್ಯ ತೋರಿದ ಆರೋಪದ ಮೇರೆಗೆ ಜಿಲ್ಲೆಯ ಎಲ್ಲ ತಾಲ್ಲೂಕುಗಳ ತಹಶೀಲ್ದಾರರು ಮತ್ತು ಉಪವಿಭಾಗಾಧಿಕಾರಿಗಳ ವಿರುದ್ಧ ಲೋಕಾಯುಕ್ತ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದೆ.

ಸ್ವಾತಂತ್ರ್ಯ ಯೋಧರು ಮತ್ತು ಅವರ ಅವಲಂಬಿತರು ಹಾಗೂ ಹುತಾತ್ಮ ಯೋಧರ ಅವಲಂಬಿತರಿಗೆ ಸಂವಿಧಾನಾತ್ಮಕವಾಗಿ ನೀಡಬೇಕಾದ ಪರಿಹಾರವನ್ನು (ಜಮೀನು) ಕಲ್ಪಿಸುವಲ್ಲಿ ನಿರ್ಲಕ್ಷ್ಯ ಮತ್ತು ವಿಳಂಬ ಧೋರಣೆ ತೋರಿದ ಆರೋಪ ಇದೆ ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ.

ಧರ್ಮಸ್ಥಳ: ಹೈಕೋರ್ಟ್‌ಗೆ ರಾಜ್ಯ ಪ್ರಾಸಿಕ್ಯೂಷನ್ ಸ್ಪಷ್ಟನೆ

ದೂರುದಾರ ಚಿನ್ನಯ್ಯ ಹೇಳಿಕೆಗಳೆಲ್ಲಾ ಸುಳ್ಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಧರ್ಮಸ್ಥಳದ ಆಜುಬಾಜಿನ ಸ್ಥಳಗಳಲ್ಲಿ ನೂರಾರು ಅನಾಮಧೇಯ ಹೆಣ್ಣು ಮಕ್ಕಳ ಮೃತದೇಹಗಳನ್ನು ಕಾನೂನುಬಾಹಿರವಾಗಿ ದಫನ ಮಾಡಲಾಗಿದೆ ಎಂಬ ದೂರುದಾರ ಚಿನ್ನಯ್ಯನ ಹೇಳಿಕೆಗಳು ಆತನ ಸ್ವಂತ ಹೇಳಿಕೆಗಳಲ್ಲ. ಅವೆಲ್ಲ ಸುಳ್ಳು' ಎಂದು ರಾಜ್ಯ ಪ್ರಾಸಿಕ್ಯೂಷನ್ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದೆ.

'ಧರ್ಮಸ್ಥಳ ಗ್ರಾಮದಲ್ಲಿ ನಾವು ಗುರುತಿಸಿರುವ ಸ್ಥಳಗಳಲ್ಲಿ ಅಗೆಯಲು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ನಿರ್ದೇಶನ ನೀಡಬೇಕು' ಎಂದು ಕೋರಿ ಪಾಂಗಾಳ ನಿವಾಸಿ ಪಾಂಡುರಂಗ ಗೌಡ (38) ಮತ್ತು ತುಕಾರಾಂ ಗೌಡ (48) ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ನ್ಯಾಯಪೀಠಕ್ಕೆ ಈ ಕುರಿತಂತೆ ವಿವರಿಸಿದರು.

'ಬೇರೊಬ್ಬರ ಆಣತಿಯ ಪ್ರಕಾರ ಚಿನ್ನಯ್ಯ ಕೋರ್ಟ್ ಮುಂದೆ ಹೇಳಿಕೆ ದಾಖಲಿಸಿದ್ದಾನೆ. ಈತನ ಹಿಂದೆ ಕೆಲಸ ಮಾಡುತ್ತಿರುವ ಗುಂಪಿನ ಪಿತೂರಿ ಅಥವಾ ಉದ್ದೇಶವೇನು ಎಂಬುದನ್ನು ತನಿಖೆಯ ಮುಖಾಂತರ ಪತ್ತೆ ಹಚ್ಚುವ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

> **ಚಿನ್ನಯ್ಯನ ಹೇಳಿಕೆ ಆಧರಿಸಿ ಮತ್ತಷ್ಟು ಸ್ಥಳಗಳಲ್ಲಿ ಅಗೆಯಲು ನಿರ್ದೇಶಿಸಬೇಕು ಎಂದು ಕೋರಿದ್ದೀರಿ. ನಿಮಗೆ ಅವಕಾಶ ಕೊಟ್ಟರೆ ಇನ್ನೂ 10 ಜನರು ಬಂದು ನಾವು ಹೇಳಿದ ಸ್ಥಳಗಳಲ್ಲಿ ಅಗೆಯಲು ನಿರ್ದೇಶಿಸಬೇಕು ಎನ್ನುತ್ತಾರೆ**
> **ಎಂ.ನಾಗಪ್ರಸನ್ನ,** ನ್ಯಾಯಮೂರ್ತಿ

'ಚಿನ್ನಯ್ಯ 2014ರಲ್ಲಿ ಧರ್ಮಸ್ಥಳ ತೊರೆದು ಆನಂತರ ಅಲ್ಲಿಗೆ ಬಂದಿಲ್ಲ ಎಂಬುದಾಗಿ ಮ್ಯಾಜಿಸ್ಟ್ರೇಟ್ ಮುಂದೆ ನೀಡಿದ್ದ ಹೇಳಿಕೆ ಸುಳ್ಳು. ಆತ ಈಗ್ಗೆ ಎರಡು ವರ್ಷಗಳ ಹಿಂದೆ ಧರ್ಮಸ್ಥಳಕ್ಕೆ ಬಂದಿದ್ದಾನೆ. 'ಇಬ್ಬರು ನನಗೆ ಬುರುಡೆ ಕೊಟ್ಟು ಏನು ಹೇಳಬೇಕು ಎಂಬುದನ್ನು ತಿಳಿಸಿದ ರೀತಿಯಲ್ಲಿ ನಾನು ಮ್ಯಾಜಿಸ್ಟ್ರೇಟ್ ಮುಂದೆ ಹೇಳಿಕೆ ನೀಡಿದ್ದೇನೆ' ಎಂಬುದು ಆತನ ವಿವರಣೆಯಾಗಿದೆ' ಎಂದರು.

'ಚಿನ್ನಯ್ಯ ಹೇಳಿದ 13 ಸ್ಥಳಗಳಲ್ಲಿ ಶೋಧ ನಡೆಸಿದಾಗ, ಅಸ್ಥಿಪಂಜರ ಸಿಕ್ಕಿದ್ದು ಒಂದೇ ಸ್ಥಳದಲ್ಲಿ. ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಸಿಕ್ಕ ಮೂಳೆಗಳು ಅಂದಾಜು 30 ವರ್ಷಗಳ ಪುರುಷನದ್ದು ಎಂದು ಗೊತ್ತಾಗಿದೆ.

ಮತ್ತೊಂದು ಭೂಮಿಯ ಮೇಲ್ಭಾಗದಲ್ಲಿ ಸಿಕ್ಕಿದ್ದು, ಅದು ಕೂಡಾ ಪುರುಷನ ಅಸ್ಥಿ ಪಂಜರವಾಗಿದೆ' ಎಂದು ಜಗದೀಶ್ ತಿಳಿಸಿದರು.

ಇದಕ್ಕೆ ಪ್ರತಿಯಾಗಿ ಅರ್ಜಿದಾರರ ಪರ ವಿಡಿಯೊ ಕಾನ್ಫರೆನ್ಸ್ ಮುಖಾಂತರ ಹಾಜರಾಗಿದ್ದ ದೆಹಲಿ ಹೈಕೋರ್ಟ್ ವಕೀಲ ದೀಪಕ್ ಖೋಸ್ಲಾ, 'ಅರ್ಜಿದಾರರು ಎಸ್‌ಐಟಿಗೆ ಕಳೆದ ತಿಂಗಳ 29ರಂದು ಸಲ್ಲಿಸಿರುವ ಅರ್ಜಿಯನ್ನು ಪರಿಗಣಿಸಲು ನ್ಯಾಯಪೀಠ ನಿರ್ದೇಶನ ನೀಡಬೇಕು' ಎಂದು ಪುನರುಚ್ಚರಿಸಿದರು.

ಇದನ್ನು ನಿರಾಕರಿಸಿದ ನ್ಯಾಯಪೀಠ, 'ನಿಮ್ಮ ಬಳಿ ಹೊಸ ಅಂಶ ಏನಾದರೂ ಇದ್ದರೆ ಅದನ್ನು ವಿವರಿಸಿ. ಅದನ್ನು ಮುಂದಿನ ವಿಚಾರಣೆಯಲ್ಲಿ ಪರಿಶೀಲಿಸೋಣ' ಎಂದು ವಿಚಾರಣೆ ಮುಂದೂಡಿತು. ಇದೇ ವೇಳೆ 'ಚಿನ್ನಯ್ಯನ ಹೇಳಿಕೆಯನ್ನು ಸಿಆರ್‌ಪಿಸಿ ಕಲಂ 183ರ ಅಡಿಯಲ್ಲಿ ಮ್ಯಾಜಿಸ್ಟ್ರೇಟ್ ನ್ಯಾಯಾಧೀಶರು ಇನ್ನೂ ಯಾಕೆ ದಾಖಲು ಮಾಡಿಕೊಳ್ಳಿಲ್ಲ. ಅವರ ಈ ನಡೆ ತುಂಬಾ ಆಶ್ಚರ್ಯಕರವಾಗಿದೆ' ಎಂದೂ ನ್ಯಾಯಪೀಠ ಕಳವಳ ವ್ಯಕ್ತಪಡಿಸಿತು.

ಅನನ್ಯಾ ಭಟ್ ಕಥೆಯೆಲ್ಲಾ ಸುಳ್ಳು...

'ನನ್ನ ಮಗಳು ಅನನ್ಯಾ ಭಟ್ 2003ರಲ್ಲಿ ಧರ್ಮಸ್ಥಳಕ್ಕೆ ಹೋದವಳು ನಾಪತ್ತೆಯಾಗಿದ್ದಾಳೆ ಎಂದು ನಾನು ಆಕೆಯ ತಾಯಿ ಎಂದು ಹೇಳಿಕೊಂಡಿದ್ದ ಸುಜಾತಾ ಭಟ್ ಅವರ ಹೇಳಿಕೆಗಳೂ ಸುಳ್ಳು ಎಂಬುದು ಎಸ್‌ಐಟಿ ತನಿಖೆಯ ವೇಳೆ ಕಂಡುಬಂದಿದೆ' ಎಂದು ಜಗದೀಶ್ ನ್ಯಾಯಪೀಠಕ್ಕೆ ತಿಳಿಸಿದರು.

'ಸುಜಾತಾ ಭಟ್ ತೋರಿಸಿದ್ದ ಯುವತಿಯ ಫೋಟೊ ಅನುಸರಿಸಿ ಆ ಯುವತಿಯ ವಾರಸುದಾರರನ್ನು ಬೆಂಗಳೂರಿನಲ್ಲಿ ಗುರುತಿಸಿ ಅವರಿಂದ ಹೇಳಿಕೆ ಪಡೆಯಲಾಗಿದೆ. ಸುಜಾತಾ ಭಟ್ ತೋರಿಸಿದ್ದ ಫೋಟೊದಲ್ಲಿನ ಯುವತಿ ಅವರ ಪುತ್ರಿಯಲ್ಲ ಎಂಬುದು ಈ ತನಿಖೆಯಲ್ಲಿ ಗೊತ್ತಾಗಿದೆ' ಎಂದು ಜಗದೀಶ್ ಸ್ಪಷ್ಟಪಡಿಸಿದರು.

'ತಾರ್ಕಿಕ ಅಂತ್ಯ ಕಾಣಲಿದೆ'

'ವಿಶೇಷ ತನಿಖಾ ತಂಡ (ಎಸ್‌ಐಟಿ) ನಡೆಸುತ್ತಿರುವ ಧರ್ಮಸ್ಥಳ ಪ್ರಕರಣದ ತನಿಖೆ ತಾರ್ಕಿಕ ಅಂತ್ಯ ಕಾಣುವುದರಲ್ಲಿ ಯಾವುದೇ ಅನುಮಾನ ಬೇಡ' ಎಂದು ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ತಿಳಿಸಿದರು. ಪ್ರೆಸ್‌ಕ್ಲಬ್‌ನಲ್ಲಿ ಗುರುವಾರ ಏರ್ಪಡಿಸಿದ್ದ ಮಾಧ್ಯಮ ಸಂವಾದದಲ್ಲಿ ಅವರು ಮಾತನಾಡಿದರು.

7 ಬುರುಡೆ, ನೂರಾರು ಮೂಳೆಗಳು ಪತ್ತೆ?

ಒಂದನೇ ಪುಟದಿಂದ...

'ಕಾಡಿನಲ್ಲಿ ಸಿಕ್ಕ ಮೂಳೆಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗುತ್ತದೆ. ಆ ಮೂಳೆಗಳು ಪುರುಷ, ಮಹಿಳೆ, ವಯಸ್ಸಾದ ವ್ಯಕ್ತಿಗಳದ್ದೇ, ಮಕ್ಕಳದ್ದೇ ಎಂಬುದು ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಕೈಸೇರಿದ ಬಳಿಕವಷ್ಟೇ ಗೊತ್ತಾಗಲಿದೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ಗುರುವಾರ ಮಧ್ಯಾಹ್ನ 1 ಗಂಟೆ ಸುಮಾರಿಗೆ ಎಸ್‌ಐಟಿಯವರು ಕಾಡಿನೊಳಕ್ಕೆ ತೆರಳಿ, ಮಧ್ಯಾಹ್ನ 3.30ರ ಸುಮಾರಿಗೆ ಹೊರಬಂದರು. ಎಸ್‌ಐಟಿಯ ಎಸ್‌ಪಿಗಳಾದ ಜಿತೇಂದ್ರ ಕುಮಾರ್ ದಯಾಮ, ಸಿ.ಎ.ಸೈಮನ್, ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು, ಬೆಳ್ತಂಗಡಿ ವಲಯದ ಅರಣ್ಯ ಇಲಾಖೆ ಅಧಿಕಾರಿಗಳು, ಧರ್ಮಸ್ಥಳ ಗ್ರಾಮ ಪಂಚಾಯಿತಿ ಸಿಬ್ಬಂದಿ, ಕಂದಾಯ ಇಲಾಖೆ ಸಿಬ್ಬಂದಿ ಶೋಧ ಕಾರ್ಯದಲ್ಲಿ ಭಾಗವಹಿಸಿದ್ದರು.

ಶೋಧ ಕಾರ್ಯ ನಡೆದ ಸ್ಥಳದಲ್ಲಿ ವಾಕಿಂಗ್ ಸ್ಟಿಕ್, ಚಪ್ಪಲಿಗಳು, ಸೀರೆ ಮತ್ತಿತರ ಬಟ್ಟೆಗಳು, ಬ್ಯಾಗ್‌ಗಳು, ಬಾಟಲಿಗಳು ಸಿಕ್ಕಿವೆ ಎಂದು ಗೊತ್ತಾಗಿದೆ. ಪತ್ತೆಯಾದ ಬುರುಡೆಗಳನ್ನು ಬಕೆಟ್‌ಗಳಲ್ಲಿ ಹಾಗೂ ಮೂಳೆಗಳನ್ನು ಪಿವಿಸಿ ಕೊಳವೆಯಲ್ಲಿ ತುಂಬಿ ಕೊಂಡೊಯ್ದರು.

ಬೇರೆ ಕಡೆ ಶೋಧ ಕಾರ್ಯ ಶುಕ್ರವಾರ ಮುಂದುವರಿಯಲಿದೆಯೇ ಎಂಬ ಬಗ್ಗೆ ಎಸ್‌ಐಟಿ ಸುಳಿವು ಬಿಟ್ಟುಕೊಟ್ಟಿಲ್ಲ.

ಈ ಪ್ರಕರಣದ ಸಾಕ್ಷಿ ದೂರುದಾರ ಪೊಲೀಸರಿಗೆ ತಲೆಬುರುಡೆಯನ್ನು ಒಪ್ಪಿಸಿದ್ದ. ಆದರೆ, ಅದನ್ನು ಹೊರತೆಗೆದದ್ದು 'ನಾನಲ್ಲ' ಎಂದು ಎಸ್‌ಐಟಿ ಮುಂದೆ ಹೇಳಿಕೆ ನೀಡಿದ್ದ. ಧರ್ಮಸ್ಥಳದ ನೇತ್ರಾವತಿ ಸ್ನಾನಘಟ್ಟದ ಪಕ್ಕದ ಬಂಗ್ಲೆಗುಡ್ಡೆಯ ಕಾಡಿನಿಂದ ಹೊರತೆಗೆಯಲಾಗಿತ್ತು. ಆ ತಲೆಬುರುಡೆ ಇದ್ದ ಜಾಗವನ್ನು ಧರ್ಮಸ್ಥಳ ಗ್ರಾಮದ ಪಾಂಗಾಳದ ವಿಠಲ ಗೌಡ ತೋರಿಸಿದ್ದರು ಎಂಬುದು ತನಿಖೆಯಲ್ಲಿ ಗೊತ್ತಾಗಿತ್ತು. ಎಸ್‌ಐಟಿ ಅಧಿಕಾರಿಗಳು ವಿಠಲ ಗೌಡ ಅವರನ್ನು ಕೆಲ ದಿನಗಳ ಹಿಂದೆ ಕಾಡಿನ ಒಳಗೆ ಕರೆದೊಯ್ದು ಮಹಜರು ನಡೆಸಿದ್ದರು. ಈ ವೇಳೆ ನೆಲದ ಮೇಲೆಯೇ ಕೆಲವೆಡೆ ಮೃತದೇಹಗಳ ಅವಶೇಷ ಕಂಡುಬಂದಿತ್ತು. ಹಾಗಾಗಿ ಕಾಡಿನಲ್ಲಿ ಶೋಧ ಕಾರ್ಯ ನಡೆಸಲು ಎಸ್‌ಐಟಿ ನಿರ್ಧರಿಸಿತ್ತು.

ಸಿಪಿಎಂನಿಂದ ಎಸ್‌ಐಟಿಗೆ ದೂರು

ಬೆಳ್ತಂಗಡಿ ಠಾಣೆ ಮತ್ತು ಧರ್ಮಸ್ಥಳ ಠಾಣೆಗಳಲ್ಲಿ 20 ವರ್ಷಗಳಿಂದ ಈಚೆಗೆ ದಾಖಲಾದ ಎಲ್ಲ ಅಸಹಜ ಸಾವು, ಆತ್ಮಹತ್ಯೆ, ಕೊಲೆ ಅತ್ಯಾಚಾರ ಹಾಗೂ ಕೊಲೆಗಳಿಗೆ ಕಾರಣವಾಗಿರಬಹುದಾದ ಭೂಕಬಳಿಕೆ, ಲೈಂಗಿಕ ದೌರ್ಜನ್ಯ ಪ್ರಕರಣಗಳ ತನಿಖೆ ನಡೆಸಿ ಸಂತ್ರಸ್ತ ಕುಟುಂಬಗಳಿಗೆ ನ್ಯಾಯ ಒದಗಿಸಬೇಕು ಎಂದು ಒತ್ತಾಯಿಸಿ ಸಿಪಿಎಂ ಬೆಳ್ತಂಗಡಿ ತಾಲ್ಲೂಕು ಸಮಿತಿಯ ಕಾರ್ಯದರ್ಶಿ ಬಿ.ಎಂ.ಭಟ್ ಅವರು ಎಸ್‌ಐಟಿಗೆ ದೂರು ನೀಡಿದ್ದಾರೆ. ಇದಕ್ಕೆ ಪೂರಕವಾಗಿ ಕೆಲವು ದಾಖಲೆಗಳನ್ನು ಅವರು ಎಸ್‌ಐಟಿಗೆ ಒಪ್ಪಿಸಿದ್ದಾರೆ.

ವಿಠಲ ಗೌಡ ವಿರುದ್ಧ ದೂರು: ಎಸ್‌ಐಟಿ ವಿಚಾರಣೆಗೆ ಒಳಪಟ್ಟ ವಿಠಲ ಗೌಡ ಅವರು ಪ್ರಕರಣದ ತನಿಖೆ ನಡೆಯುವ ವೇಳೆಯೇ, 'ಕಾಡಿನಲ್ಲಿ ಮೃತದೇಹಗಳ ಅವಶೇಷಗಳಿವೆ' ಎಂದು ವಿಡಿಯೊ ಹರಿಯ ಬಿಡುವ ಮೂಲಕ ತನಿಖೆಯ ಹಾದಿ ತಪ್ಪಿಸಲು ಯತ್ನಿಸಿದ್ದಾರೆ. ಅವರನ್ನು ಸೂಕ್ತ ರೀತಿಯಲ್ಲಿ ತನಿಖೆಗೆ ಒಳಪಡಿಸಿ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿ ಧರ್ಮಸ್ಥಳದ ಸಂದೀಪ್ ರೈ ಎಂಬವರು ಎಸ್‌ಐಟಿಗೆ ಗುರುವಾರ ದೂರು ನೀಡಿದ್ದಾರೆ.

ಸಾಕ್ಷಿ ದೂರುದಾರ ನ್ಯಾಯಾಲಯಕ್ಕೆ ಹಾಜರು

ಪ್ರಕರಣದ ಸಾಕ್ಷಿ ದೂರುದಾರನನ್ನು ಶಿವಮೊಗ್ಗದ ಜೈಲಿನಿಂದ ಕರೆತಂದು ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಬುಧವಾರ ಹಾಜರುಪಡಿಸಲಾಯಿತು.

'ಹೇಳಿಕೆ ದಾಖಲಿಸಿಕೊಳ್ಳುವ ಉದ್ದೇಶದಿಂದ ಆತನನ್ನು ಬೆಳ್ತಂಗಡಿಗೆ ಕರೆತರಲಾಗಿತ್ತು. ಆದರೆ ಹೇಳಿಕೆ ದಾಖಲಿಸುವ ಪ್ರಕ್ರಿಯೆ ನಡೆದಿಲ್ಲ' ಎಂದು ಮೂಲಗಳು ತಿಳಿಸಿವೆ.

ವಸಂತಿ ಸೋದರ ವಿಜಯ್ ಹಾಜರು

ಎಸ್‌ಐಟಿಗೆ ಈ ಹಿಂದೆ, 'ನನ್ನ ಮಗಳು ಅನನ್ಯಾ ಭಟ್ ಧರ್ಮಸ್ಥಳಕ್ಕೆ ತೆರಳಿದ್ದ ವೇಳೆ ಕಾಣೆಯಾಗಿದ್ದಾಳೆ' ಎಂದು ಆರೋಪಿಸಿ ಸುಜಾತಾ ಭಟ್ ಎಸ್‌ಐಟಿಗೆ ನೀಡಿದ್ದ ದೂರಿಗೆ ಸಂಬಂಧಿಸಿ ವಸಂತಿ ಎಂ.ಪಿ. ಅವರ ಸೋದರ, ಕೊಡಗು ಜಿಲ್ಲೆಯ ವಿಜಯ್ ಎಂಬವರು ಎಸ್‌ಐಟಿಯ ಬೆಳ್ತಂಗಡಿ ಕಚೇರಿಗೆ ಗುರುವಾರ ಹಾಜರಾಗಿ ಹೇಳಿಕೆ ದಾಖಲಿಸಿದರು.

'ತನ್ನ ಮಗಳು ಅನನ್ಯಾ ಭಟ್ ಫೋಟೊ ಎಂದು ಹೇಳಿ ಸುಜಾತಾ ಭಟ್ ಅವರು ವಸಂತಿ ಎಂ.ಪಿ. ಅವರ ಫೋಟೊವನ್ನು ಎಸ್‌ಐಟಿಗೆ ನೀಡಿದ್ದರು. ವಸಂತಿ ಅವರು 2007ರಲ್ಲಿ ನಿಧನರಾಗಿದ್ದರು. ಆಕೆಯ ಮರಣ ಪ್ರಮಾಣಪತ್ರವೂ ಸೇರಿದಂತೆ ಕೆಲ ದಾಖಲೆಗಳನ್ನು ವಿಜಯ್ ಅವರು ಎಸ್‌ಐಟಿ ಮುಂದೆ ಹಾಜರುಪಡಿಸಿದರು' ಎಂದು ಮೂಲಗಳು ತಿಳಿಸಿವೆ.

ಗಣಿ ಗುತ್ತಿಗೆ: ಸಿ.ಎಂ ವಿರುದ್ಧದ ಪಿಐಎಲ್ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಣಿ ಗುತ್ತಿಗೆ ಪರವಾನಗಿಯನ್ನು ಅಕ್ರಮವಾಗಿ ಹಂಚಿಕೆ ಮಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ರಾಜ್ಯಪಾಲರಿಗೆ ನಿರ್ದೇಶಿಸಬೇಕು' ಎಂದು ಕೋರಲಾದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ನಗರದ ಉದ್ಯಮಿ ಎಂ.ಪಿ. ವೇಣುಗೋಪಾಲ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠದ ಮುಂದೆ ಗುರುವಾರ ವಿಚಾರಣೆಗೆ ನಿಗದಿಯಾಗಿತ್ತು.

ಸರದಿ ಪ್ರಕಾರ ಅರ್ಜಿ ವಿಚಾರಣೆಗೆ ಬಂದಾಗ, ಕೋರ್ಟ್ ಅಧಿಕಾರಿ ಸಂಖ್ಯೆಯನ್ನು ಎರಡು ಬಾರಿ ಕೂಗಿದರೂ ಅರ್ಜಿದಾರರ ಪರ ಯಾರೂ ಹಾಜರಾಗದ ಕಾರಣ ನ್ಯಾಯಪೀಠ, ನ್ಯಾಯಿಕ ಪ್ರಕ್ರಿಯೆ ಪಾಲನೆಯ ಲೋಪದ ಆಧಾರದಡಿ ಅರ್ಜಿಯನ್ನು ವಜಾಗೊಳಿಸಿ ಆದೇಶಿಸಿತು.

ಅರ್ಜಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಂದಿನ ಕಾರ್ಯದರ್ಶಿಯಾಗಿದ್ದ ಐಎಎಸ್ ಅಧಿಕಾರಿ ತುಷಾರ ಗಿರಿನಾಥ, ಬೆಂಗಳೂರಿನ ಮೆಸರ್ಸ್ ವೀರಭದ್ರಪ್ಪ ಸಂಗಪ್ಪ ಮತ್ತು ವಹಾಬ್ ಗ್ರೂಪ್, ಎಂ.ಉಪೇಂದ್ರನ್, ಮೆಸರ್ಸ್ ಮಿನರಲ್ ಎಂಟರಪ್ರೈಸಸ್ ಲಿಮಿಟೆಡ್ ಕಂಪನಿ ಮತ್ತು ಗುಬ್ಬಿಯ ಮೆಸರ್ಸ್ ಜಯರಾಂ ಮಿನರಲ್ಸ್ ಅನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿತ್ತು.

ಮನವಿ ಏನಿತ್ತು?: 'ಗಣಿ ಗುತ್ತಿಗೆಗಳ ಕಾನೂನು ಬಾಹಿರ ನವೀಕರಣ ಸಂಬಂಧ ಸ್ವತಂತ್ರ ತನಿಖೆ ನಡೆಸುವಂತೆ ಸಿಬಿಐಗೆ ನಿರ್ದೇಶನ ನೀಡಬೇಕು. ಈ ವಿಚಾರವಾಗಿ ವರದಿ ನೀಡುವಂತೆ ಲೋಕಾಯುಕ್ತಕ್ಕೆ ಸೂಚಿಸಬೇಕು. ರಾಮಗಡ ಮಿನರಲ್ ಆ್ಯಂಡ್ ಮೈನಿಂಗ್ ಪ್ರೈ. ಲಿಮಿಟೆಡ್, ವೀರಭದ್ರಪ್ಪ ಸಂಗಪ್ಪ ಆ್ಯಂಡ್ ಕಂಪನಿಗಳಿಗೆ ನೀಡಲಾಗಿರುವ ಗಣಿ ಗುತ್ತಿಗೆ ರದ್ದುಪಡಿಸಬೇಕು. ಎಲ್ಲಾ ಗಣಿ ಗುತ್ತಿಗೆ ಪರವಾನಗಿ ಕಾನೂನುಬಾಹಿರ ಎಂದು ಘೋಷಿಸಬೇಕು. ಇದರಿಂದ ಆಗಿರುವ ಆರ್ಥಿಕ ನಷ್ಟವನ್ನು ಅಕ್ರಮ ಗಣಿ ಗುತ್ತಿಗೆದಾರರಿಂದ ವಸೂಲಿ ಮಾಡಲು ನಿರ್ದೇಶನ ನೀಡಬೇಕು' ಎಂದು ಅರ್ಜಿಯಲ್ಲಿ ಮನವಿ ಮಾಡಲಾಗಿತ್ತು.

ಹುಲಿ ಸಂರಕ್ಷಿತ ಪ್ರದೇಶಕ್ಕೆ ಸಹಮತ ಇಲ್ಲ: ಶಾಸಕ ಮಂಜುನಾಥ್

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ಮಲೆ ಮಹದೇಶ್ವರ ವನ್ಯಜೀವಿ ಧಾಮವನ್ನು ಹುಲಿ ಯೋಜನೆ ವ್ಯಾಪ್ತಿಗೆ ಸೇರಿಸುವ ಸಿಇಸಿ ಶಿಫಾರಸಿಗೆ ಸಹಮತ ಇಲ್ಲ' ಎಂದು ಹನೂರು ಶಾಸಕ ಮಂಜುನಾಥ್ ಅಭಿಪ್ರಾಯಪಟ್ಟರು.

ಗುರುವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ಹುಲಿ ಸಂರಕ್ಷಿತ ಪ್ರದೇಶವೆಂದು ಘೋಷಿಸುವುದಕ್ಕೆ ಅರಣ್ಯದಂಚಿನ ಗ್ರಾಮಸ್ಥರ ಹಾಗೂ ರೈತರ ವಿರೋಧವಿದೆ. ಕಾನೂನುಗಳ ಹೆಸರಿನಲ್ಲಿ ಅರಣ್ಯದೊಳಗೆ ಸಂಪೂರ್ಣವಾಗಿ ನಿರ್ಬಂಧ ವಿಧಿಸಲಾಗುತ್ತದೆ ಎಂಬ ಭಯ ಕಾಡುತ್ತಿದೆ' ಎಂದರು.

'ವಿರೋಧಗಳ ಮಧ್ಯೆಯೂ ಘೋಷಣೆ ಮಾಡಿದರೆ ಹುಲಿಗಳ ಅಸಹಜ ಸಾವಿನ ಪ್ರಕರಣಗಳು ಮರುಕಳಿಸುವ ಆತಂಕ ಎದುರಾಗಲಿದೆ. ಹಾಗಾಗಿ, ಸಿಇಸಿ ಸಲ್ಲಿಸಿರುವ ಪ್ರಸ್ತಾವ ಕೈಬಿಡಬೇಕು' ಎಂದು ಒತ್ತಾಯಿಸಿದರು.

'ಈಗಾಗಲೇ ಜಿಲ್ಲೆಯಲ್ಲಿ ಬಂಡೀಪುರ ಹಾಗೂ ಬಿಆರ್‌ಟಿ ಹುಲಿ ಸಂರಕ್ಷಿತ ಅರಣ್ಯಗಳಿವೆ. ಅರಣ್ಯ ಹಾಗೂ ವನ್ಯ ಪ್ರಾಣಿಗಳ ರಕ್ಷಣೆಗೆ ಯಾರ ವಿರೋಧವೂ ಇಲ್ಲ. ಕಾಯ್ದೆ ಕಾನೂನುಗಳ ಹೆಸರಿನಲ್ಲಿ ಸಮಸ್ಯೆಯಾಗಬಾರದು' ಎಂದರು.

ನಿಧನ ವಾರ್ತೆ

ಸಂಶೋಧಕ ಕೆ.ಜಿ.ವಸಂತ ಮಾಧವ



ಮೂಲ್ಕಿ (ದಕ್ಷಿಣ ಕನ್ನಡ): ಸಂಶೋಧಕ, ಸಾಹಿತಿ, ನಿವೃತ್ತ ಉಪನ್ಯಾಸಕ ಕೆ.ಜಿ. ವಸಂತ ಮಾಧವ (82) ಬೆಂಗಳೂರಿನಲ್ಲಿ ಬುಧವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

ಕೊಡಂಚ ಗುಜ್ಜಾಡಿ ವಸಂತ ಮಾಧವ ಅವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಇತಿಹಾಸದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು.

ಮೂಲ್ಕಿ ವಿಜಯಾ ಕಾಲೇಜಿನಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿ 32 ವರ್ಷ ಕರ್ತವ್ಯ ನಿರ್ವಹಿಸಿದ್ದರು. ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸುಮಾರು 20 ಇತಿಹಾಸದ ಕೃತಿಗಳನ್ನು ಮತ್ತು ಸಾವಿರಾರು ಲೇಖನಗಳನ್ನು ಬರೆದಿದ್ದಾರೆ.

ವಸಂತ ಮಾಧವ ಅವರ ಕುರಿತ ಕೃತಿಯನ್ನು ಎಸ್‌.ಪದ್ಮನಾಭ ಭಟ್ ರಚಿಸಿದ್ದು, 'ನಾಡಿಗೆ ನಮಸ್ಕಾರ' ಗ್ರಂಥಮಾಲೆಯಡಿ ಕಾಂತಾವರ ಕನ್ನಡ ಸಂಘ ಪ್ರಕಟಿಸಿದೆ. ಕರಾವಳಿ ಕರ್ನಾಟಕದ ಮಾಹಿತಿ ನೀಡುವ ಶಿಕ್ಷಕರೆಂದೇ ಅವರು ಪ್ರಸಿದ್ಧರಾಗಿದ್ದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸೂಕ್ಷ್ಮ ಪರಿಸರದ ಮೇಲೆ ಪ್ರಹಾರವೇಕೆ?

ಅಹವಾಲು ಸಭೆಯಲ್ಲಿ 10 ಸಾವಿರಕ್ಕೂ ಹೆಚ್ಚು ಅರ್ಜಿ: ಸರ್ಕಾರಕ್ಕೆ ಒಕ್ಕೊರಲ ಪ್ರಶ್ನೆ

ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಸಂಬಂಧಿಸಿ ಗೇರುಸೊಪ್ಪದಲ್ಲಿ ನಡೆದ ಸಾರ್ವಜನಿಕ ಆಹವಾಲು ಸಭೆಯಲ್ಲಿ ಸೇರಿದ್ದ ಜನರು

ಪ್ರಜಾವಾಣಿ ವಾರ್ತೆ

ಗೇರುಸೊಪ್ಪ (ಉತ್ತರ ಕನ್ನಡ): 'ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಸೌಲಭ್ಯ ಕೇಳಿದರೂ ಕೊಡದ ಸರ್ಕಾರ ಉತ್ತರ ಕನ್ನಡದ ಸೂಕ್ಷ್ಮ ಪರಿಸರದ ಮೇಲೆ ಪ್ರಹಾರ ಮಾಡುವ ಯೋಜನೆಯನ್ನು ಯಾಕೆ ಹೇರುತ್ತಿದೆ' ಎಂಬ ಪ್ರಶ್ನೆ ಉದ್ದೇಶಿತ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯ ಪರಿಸರ ಸಾರ್ವಜನಿಕ ಅಹವಾಲು ಸಭೆಯಲ್ಲಿ ವ್ಯಕ್ತವಾಯಿತು.

ಇಲ್ಲಿನ ಗುತ್ತಿ ಕನ್ನಿಕಾ ಪರಮೇಶ್ವರಿ ದೇವಾಲಯದ ಸಭಾಂಗಣದಲ್ಲಿ ಗುರುವಾರ ನಡೆದ ಸಭೆಯಲ್ಲಿ ಯೋಜನೆ ವಿರುದ್ಧ 10 ಸಾವಿರ ಅಹವಾಲುಗಳು ಸಲ್ಲಿಕೆಯಾದವು. ಯಾರು ಸಹ ಯೋಜನೆಯ ಪರ ಧ್ವನಿ ಎತ್ತಲಿಲ್ಲ.

ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಂಕ್ಷಿಪ್ತವಾಗಿ ಸಲಹೆ ನೀಡುವಂತೆ ಸೂಚಿಸಿದ್ದಕ್ಕೆ ಆಕ್ಷೇಪ ವ್ಯಕ್ತವಾಯಿತು. 'ಜನರ ಅಹವಾಲನ್ನು ತಾಳ್ಮೆಯಿಂದ ಕೇಳುವ ವ್ಯವಧಾನ ಇರಬೇಕು. ಸಭೆ ಕರೆದು, ಸಂಕ್ಷಿಪ್ತವಾಗಿ ಮಾತನಾಡಿ ಎನ್ನುವುದು ಸರಿಯಲ್ಲ' ಎಂದು ಬಂಗಾರಮಕ್ಕಿಯ ಮಾರುತಿ ಗುರೂಜಿ ಅಸಮಾಧಾನ ವ್ಯಕ್ತಪಡಿಸಿದರು.

'ಯೋಜನೆಯ ವಿಸ್ತೃತ ಯೋಜನಾ ವರದಿ ಬಹಿರಂಗಪಡಿಸಲಾಗಿಲ್ಲ. ಅಹವಾಲು ಸಭೆಗೂ ಮುನ್ನವೇ ಟೆಂಡರ್ ಪ್ರಕ್ರಿಯೆ ನಡೆದು, ಶಿವಮೊಗ್ಗ ಭಾಗದಲ್ಲಿ ಯೋಜನೆಯ ಕೆಲಸಗಳು ಪ್ರಾರಂಭವಾದ ಬಗ್ಗೆ ಮಾಹಿತಿ ಇದೆ. ಈ ಬಗ್ಗೆ ಸ್ಪಷ್ಟಪಡಿಸಿ' ಎಂದು ಕುಮಟಾ ಶಾಸಕ ದಿನಕರ ಶೆಟ್ಟಿ ಒತ್ತಾಯಿಸಿದರು.

'ಪರಿಸರ ಅನುಮತಿ ಪತ್ರ ಸಿಗದೆ ಕಾಮಗಾರಿ ಆರಂಭಿಸಲು ಸಾಧ್ಯವಿಲ್ಲ. ಅದಕ್ಕಾಗಿಯೇ ಅಹವಾಲು ಸಭೆ ನಡೆಯುತ್ತಿದೆ' ಎಂದು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಪರಿಸರ ಅಧಿಕಾರಿ ಬಿ.ಕೆ.ಸಂತೋಷ್ ಸ್ಪಷ್ಟನೆ ನೀಡಿದರು.

'ಪಶ್ಚಿಮ ಘಟ್ಟದಲ್ಲಿ ಸುರಂಗ ಕೊರೆದರೆ ವನ್ಯಜೀವಿಗಳು ನೂರಾರು ಕಿ.ಮೀ ದೂರ ವಲಸೆ ಹೋಗಬಹುದು. ಯೋಜನೆ ಜಾರಿಗೆ ಮುಂದಾದರೆ ರಾಜ್ಯವ್ಯಾಪಿ ಹೋರಾಟ ನಡೆಸಲಾಗುವುದು' ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ ಹೇಳಿದರು.

ಕೆಪಿಸಿ ಮುಖ್ಯ ಕಚೇರಿಯ ಕಾರ್ಯ ನಿರ್ವಾಹಕ ಎಂಜಿನಿಯರ್ ವಿಜಯ ವಿ.ಎಂ. ಯೋಜನೆ ಕುರಿತ ಮಾಹಿತಿ ನೀಡಿದರು. ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಹಿರಿಯ ಅಧಿಕಾರಿ ಕೀರ್ತಿಕುಮಾರ್ ಇದ್ದರು.

ಬೆಂಗಳೂರಿಗೆ ನೀರು ಸಾಗಿಸುವ ಯೋಜನೆ

'ಗೇರುಸೊಪ್ಪದಿಂದ ತಳಕಳಲೆ ಜಲಾಶಯಕ್ಕೆ ನೀರು ಸಾಗಿಸಿ ವಿದ್ಯುತ್ ಉತ್ಪಾದಿಸುವುದು ತೋರಿಕೆಗೆ ಮಾತ್ರ. ಅಲ್ಲಿಂದ ಭವಿಷ್ಯದಲ್ಲಿ ಬೆಂಗಳೂರಿಗೆ ನೀರು ಸಾಗಿಸುವ ಯೋಜನೆ ಇದಾಗಲಿದೆ. ಶರಾವತಿ ನದಿಯಲ್ಲಿ ನೀರಿನ ಹರಿವು ಕಡಿಮೆಯಾದರೆ ಹೊನ್ನಾವರ ಭಾಗದಲ್ಲಿನ 1.60 ಲಕ್ಷ ಎಕರೆಯಷ್ಟು ಕೃಷಿಭೂಮಿ ನಾಶವಾಗಲಿದೆ' ಎಂದು ಸಭೆಯಲ್ಲಿ ಕಳವಳ ವ್ಯಕ್ತವಾಯಿತು.

ತಮಿಳುನಾಡು ಜಾನುವಾರಿಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ಜಿಲ್ಲೆಯ ಹನೂರು ತಾಲ್ಲೂಕಿನ ಮಲೆ ಮಹದೇಶ್ವರ ವನ್ಯಧಾಮದೊಳಗೆ ತಮಿಳುನಾಡಿನ ಜಾನುವಾರು ಪ್ರವೇಶವನ್ನು ನಿರ್ಬಂಧಿಸಲಾಗಿದ್ದು, ರಾಜ್ಯದ ಗಡಿ ಪ್ರವೇಶಿಸದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ' ಎಂದು ಮಲೆ ಮಹದೇಶ್ವರ (ಎಂ ಎಂ ಹಿಲ್ಸ್) ಅರಣ್ಯ ವಿಭಾಗದ ಡಿಸಿಎಫ್ ಭಾಸ್ಕರ್ ತಿಳಿಸಿದರು.

ಗುರುವಾರ ಇಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ನೇತೃತ್ವದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿ, 'ತಮಿಳುನಾಡಿನಿಂದ ಹೆಚ್ಚಿನ ಜಾನುವಾರು ರಾಜ್ಯ ದೊಳಗೆ ನುಗ್ಗಿಸಿ ಅರಣ್ಯದಂಚಿನಲ್ಲಿ ದೊಡ್ಡಿಗಳನ್ನು ನಿರ್ಮಿಸಿ ಕಾಡಿನೊಳಗೆ ಮೇಯಲು ಬಿಡಲಾಗುತ್ತಿದೆ. ದೊಡ್ಡಿಗಳನ್ನು ತೆರವು ಗೊಳಿಸಲಾಗುತ್ತಿದೆ. ಅನ್ಯ ರಾಜ್ಯದ ದನಗಳನ್ನು ಸಾಕದಂತೆ ಸ್ಥಳೀಯರಿಗೆ ತಿಳಿವಳಿಕೆ ನೀಡಲಾಗುತ್ತಿದೆ. ಹಂತಹಂತವಾಗಿ ಅರಣ್ಯದೊಳಗೆ ಜಾನುವಾರು ನಿರ್ಬಂಧಿಸಲಾಗುವುದು' ಎಂದರು.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

'ವಿರೋಧ ಇದೆ'

ಮಡಿಕೇರಿ: 'ಲೇಖಕಿ ಬಾನು ಮುಷ್ತಾಕ್ ಅವರು ದಸರೆ ಉದ್ಘಾಟನೆ ಮಾಡುವುದಕ್ಕೆ ನಮ್ಮ ವಿರೋಧ ಈಗಲೂ ಇದೆ' ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

'ತಾಯಿ ಭುವನೇಶ್ವರಿ ಕುರಿತು ಲೇಖಕಿಯು ಆಕ್ಷೇಪ ವ್ಯಕ್ತಪಡಿಸಿದ್ದಕ್ಕೆ ನಮ್ಮ ವಿರೋಧವಿದೆ. ಈಗಲೂ ಅವರು ಅದಕ್ಕೆ ಸ್ಪಷ್ಟನೆ ನೀಡಲಿ' ಎಂದರು.

ತೋಟಗಾರಿಕೆ ಇಲಾಖೆ

ತೋಟಗಾರಿಕೆ ನಿರ್ದೇಶನಾಲಯ, ಜೈವಿಕ ಕೇಂದ್ರ, ಹುಳಿಮಾವು, ಬೆಂಗಳೂರು – 560 076. ದೂರವಾಣಿ ಸಂಖ್ಯೆ: 080–26582775, ಇ–ಮೇಲ್: ddhbiotech3@gmail.com

ಟೆಂಡರ್ ಪ್ರಕಟಣೆ

ತೋಟಗಾರಿಕೆ ಇಲಾಖೆ, ಜೈವಿಕ ಕೇಂದ್ರ, ಹುಳಿಮಾವು ಇಲ್ಲಿನ ಅಂಗಾಂಶ ಕೃಷಿ ಪ್ರಯೋಗಶಾಲೆಗೆ ಆಟೋಕ್ಲೇವ್ ಉಪಕರಣವನ್ನು ಖರೀದಿಸಲು ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು http://www.kppp.karnataka.gov.in ವೆಬ್ ಸೈಟ್ ನ ಟೆಂಡರ್ ಸಂಖ್ಯೆ: **KSHD/2025-26/IND0125** ರಲ್ಲಿ ಪಡೆಯಬಹುದಾಗಿರುತ್ತದೆ. ಬಿಡ್ ಸಲ್ಲಿಸಬಹುದಾದ ಅವಧಿ ದಿನಾಂಕ: **18.09.2025 ರಿಂದ 08.10.2025 ರ ಸಂಜೆ 5.30 ಘಂಟೆ.** ಈ ಕಛೇರಿಯಲ್ಲಿ ಪ್ರಿ – ಬಿಡ್ (Prebid) ಸಭೆಯ ದಿನಾಂಕ: **29.09.2025 ರಂದು ಬೆಳಗ್ಗೆ 11–30 ಘಂಟೆಗೆ** ನಡೆಯಲಿದೆ.

ಸಹಿ/–
ತೋಟಗಾರಿಕೆ ಉಪ ನಿರ್ದೇಶಕರು (ಅಂಗಾಂಶ ಕೃಷಿ),

ವಾಸಾಸಂಇ/ವಾ.ಪ್ರ/2877/ಎಂಎಎ/25–26

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಹೇಮಾವತಿ ನಾಲಾ ತನಿಖಾ ವಿಭಾಗ, ಹೆಬ್ಬೂರು–572120 ತುಮಕೂರು ಜಿಲ್ಲೆ.
ಫೋನ್:0816–2957008 ಇ–ಮೇಲ್:eehcidhebbur@gmail.com

ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಸಂಖ್ಯೆ.: 04/2025–26, ದಿನಾಂಕ: 15.09.2025

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ 06 ಕಾಮಗಾರಿಗಳಿಗೆ ಟೆಂಡರ್ ಅನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಐಟಂ ರೇಟ್ ಆಧಾರದ ಮೇಲೆ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಹೇಮಾವತಿ ನಾಲಾ ತನಿಖಾ ವಿಭಾಗ,
ಕಾನೀನಿನಿ, ಹೆಬ್ಬೂರು

TAMILNADU NEWSPRINT AND PAPERS LIMITED
Kagithapuram - 639 136. Karur Dist. Tamil Nadu.

NOTICE INVITING TENDER

Tender No.	Material Description	Due date
252613 004357	Procurement of 1,000 MT ± 5% Office Waste Paper (White Records) in Bale form from Karnataka for TNPL Unit - I at Kagithapuram.	26.09.2025

Corrigendum if any will be issued in TNPL Website and NIC Portal only. For further details please visit websites : **www.tnpl.com / https://tntenders.gov.in/nicgep/app**

DIPR/5216/Tender/2025 — *TNPL - Maker of bagasse based eco-friendly Paper*

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಆಯುಕ್ತರ ಕಛೇರಿ, ನಂ. 16–ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052. ಫೋನ್: +91–80–29505530
ಇ–ಮೇಲ್ : bcwd.hostels@karnataka.gov.in

ಸಂಖ್ಯೆ: **BCWD-12020/8/2025-HOSTELPart(1)** ದಿನಾಂಕ:18.09.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಟೆಂಡರ್ ಮೂಲಕ ಮಾತ್ರ)

ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಮತ್ತು ಆಶ್ರಮ ಶಾಲೆಯ ವಿದ್ಯಾರ್ಥಿಗಳಿಗೆ ಜಮಖಾನ ಮತ್ತು ಬೆಡ್‌ಶೀಟ್‌ಗಳನ್ನು ಸರಬರಾಜು ಮಾಡಲು ಅರ್ಹ ಬಿಡ್‌ದಾರರಿಂದ ಅಲ್ಪಾವಧಿ ಟೆಂಡರನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಸಾಮಗ್ರಿಯ ವಿವರ	ನಿಗದಿಪಡಿಸಿರುವ ಅಂದಾಜು ಮೊತ್ತ (ರೂ. ಕೋಟಿಗಳಲ್ಲಿ)
01	ಜಮಖಾನ ಮತ್ತು ಬೆಡ್‌ಶೀಟ್‌ಗಳು	11.43

ವಿವರಗಳಿಗೆ https://kppp.karnataka.gov.in ವೆಬ್‌ಸೈಟ್ ನೋಡಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **04.10.2025ರ ಸಂಜೆ 05.00 ಗಂಟೆಯವರೆಗೆ.**

ಸಹಿ/–
(ಟೆಂಡರ್ ಆಹ್ವಾನಿಸುವ ಪ್ರಾಧಿಕಾರ)
ಜಂಟಿ ನಿರ್ದೇಶಕರು (ವಸತಿ ನಿಲಯ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ವಾಸಾಸಂಇ/ವಾಪ್ರ/ಜಿಎ/2870/2025–26

ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ
ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಮಂತ್ರಾಲಯ, ಭಾರತ ಸರ್ಕಾರ
ಮಲ್ಟಿ ಡಿಸಿಪ್ಲಿನರಿ ಟ್ರೈನಿಂಗ್ ಸೆಂಟರ್
ವಿಜಿನಾಪುರ, ಎಫ್‌ಸಿಐ ಗೋಡೌನ್ ಹತ್ತಿರ, ದೂರವಾಣಿನಗರ, ಬೆಂಗಳೂರು–560 016.

ವ್ಯಕ್ತಿಗಳು/ವೃತ್ತಿಪರರು/ಸಂಸ್ಥೆಗಳಿಂದ ಅರ್ಜಿ ಆಹ್ವಾನ

ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮದಲ್ಲಿ ಕೆಲಸ ಮಾಡುತ್ತಿರುವ ವಿವಿಧ ವ್ಯಕ್ತಿಗಳು/ವೃತ್ತಿಪರರು/ತರಬೇತುದಾರರು ಮತ್ತು ಅಗತ್ಯವಿರುವ ವ್ಯಕ್ತಿಗಳಿಗೆ ಸ್ವ–ಹಣಕಾಸು ಕೌಶಲ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಒದಗಿಸಲು ಅಗತ್ಯವಿರುವ ಸಂಪನ್ಮೂಲ ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಂತಹ ವ್ಯಕ್ತಿಗಳನ್ನು ಗೌರವಧನದ ಆಧಾರದ ಮೇಲೆ ಬೆಂಗಳೂರಿನ ಕೆವಿಐಸಿಯ ಎಂಡಿಟಿಸಿ ಆಯ್ಕೆ ಮಾಡಿದ ನಂತರ ಸ್ಥಳೀಯ ಕೌಶಲ್ಯ ತರಬೇತುದಾರರಾಗಿ (LSTs) ಸೇರಿಸಲಾಗುತ್ತದೆ.

ಆಸಕ್ತ ಅಭ್ಯರ್ಥಿಗಳು ತಮ್ಮ ವಿವರಗಳನ್ನು ನಿಗದಿತ ನಮೂನೆಯಲ್ಲಿ ಈ ಕಚೇರಿಗೆ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು 080–25650285 ಅಥವಾ 8105788431 ಅಥವಾ 8299377420 ಅಥವಾ ಇಮೇಲ್: kvicbang@gmail.com ಅನ್ನು ಸಂಪರ್ಕಿಸಬಹುದು. ವಿವರವಾದ ನಿಬಂಧನೆ ಮತ್ತು ಷರತ್ತುಗಳನ್ನು ಎಂಪ್ಯಾನೆಲ್‌ಮೆಂಟ್ ಸಮಯದಲ್ಲಿ ತಿಳಿಸಲಾಗುತ್ತದೆ. ಯಾವುದೇ ಸೂಚನೆಯಿಲ್ಲದೇ ಅರ್ಜಿಗಳನ್ನು ಆಯ್ಕೆ ಮಾಡುವುದು ಅಥವಾ ತಿರಸ್ಕರಿಸುವ ಅಧಿಕಾರವನ್ನು ಕೆವಿಐಸಿ, ಎಂಡಿಟಿಸಿ, ಬೆಂಗಳೂರು, ಕಾಯ್ದಿರಿಸಿಕೊಂಡಿದೆ.

ಸಹಿ/–
ಉಪ ನಿರ್ದೇಶಕರು / ಪ್ರಾಂಶುಪಾಲರು

Navodaya Vidyalaya Samiti
HYDERABAD REGION
PM SHRI — Pradhan Mantri Schools for Rising India — Creating holistic and well-rounded individuals equipped with key 21st Century skills

WALK-IN-INTERVIEW

Candidates are invited to attend the Walk-in-Interview on 30.09.2025(Tuesday) at 10:30 am at PMShri Jawahar Navodaya Vidyalaya, Bashettihalli(P), Doddaballapura(T), Bangalore Rural District for the post of Hostel Superintendent On Contract Basis in JNVs of Karnataka State for the year 2025-26.

ELIGIBILITY CRITERIA:

1. Essential Academic Qualification:— Graduation in any discipline.
2. Desirable Academic Qualification:--
   a. Master's Degree/B.Ed.
   b. Proficiency in Regional Language(Kannada).
3. Minimum Age at the time of Engagement: 35 Years.
4. Maximum Age at the time of Engagement: 62 Years.
5. Work Experience:
   a. Minimum 02 years experience in pay level-3 (or consolidated pay of Rs.21,700) or above of 7th CPC(or equivalent scale) in any recognized school.
   OR
   b. Ex-defense personnel having work experience of a minimum of 02 years in pay level-3 or above of the 7th CPC.
6. Health / Fitness Requirement: As per NVS norms i.e. applicable for regular appointment.
7. Marital Status: Male & Female without encumbrances may be taken.
8. Experience certificate from the previously served institutions/defense establishments clearly mentioning date of issuance need to be submitted.
9. Duties and Responsibilities, Contract Agreement of Hostel Superintendents in JNVs is attached in Annexure I & II.
   https://drive.google.com/file/d/1KAmR9WCmLCDkvHEUfHYEUY eHFmIIww0b/view?usp=drive_link
10. Duly filled application form(Using below Google Form Link) will be accepted up to **28.09.2025, 5:00 pm.** https://forms.gle/zCPxguuzef5FBAGN7

Cut-off date for calculating age :: As of date of notification issued.

- Remuneration: Rs. 35,750/- per month.

Note: Shared single accommodation inside JNV campus only provided.

Helpdesk:

1. Mr.T.Palanivelu, Principal -Contact Number-9445237133
2. Mr.Jayakrishnan Manghat, Vice Principal-9743742622
3. Dr.Jayamma.C, Office Superindent-9480193995
   School Email-id:: jnvbangalorerural@gmail.com

Scan for Location

Sd/- Principal

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು – 560 064.

ಇ–ಹರಾಜು ಸೂಚನೆ
ಸಂ.:ಆರ್‌ಡಬ್ಲ್ಯೂಎಫ್/ಜಿಎಸ್‌ಡಿ/ಡಬ್ಲ್ಯೂಡಿ–30/25–26 ದಿ. 15.09.2025

ಭಾರತದ ರಾಷ್ಟ್ರಪತಿಗಳ ಪರವಾಗಿ, ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು, **www.ireps.gov.in** ವೆಬ್‌ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಸ್ಕ್ರ್ಯಾಪ್ ವಸ್ತುಗಳ (ಫೆರಸ್/ನಾನ್‌–ಫೆರಸ್/ವಿವಿಧ ಮತ್ತು ಇತರೆ) ಮಾರಾಟಕ್ಕಾಗಿ ಇ–ಹರಾಜನ್ನು ಆಹ್ವಾನಿಸಿದ್ದಾರೆ, ಇ–ಹರಾಜು ದಿನಾಂಕಗಳನ್ನು ಈ ಕೆಳಗೆ ನೀಡಲಾಗಿದೆ:

ಇ–ಹರಾಜು ದಿನಾಂಕ:

07/10/2025, 15/10/2025, 24/10/2025, 3/11/2025, 11/11/2025, 19/11/2025, 27/11/2025, 5/12/2025 15/12/2025, 23/12/2025, 31/12/2025.

ಇ–ಹರಾಜಿನ ಕ್ಯಾಟಲಾಗ್ ಅನ್ನು ನಮ್ಮ ವೆಬ್‌ಸೈಟ್: **www.rwf.indianrailways.gov.in** ಅಥವಾ **www.ireps.gov.in** ನಲ್ಲಿ ಇ–ಹರಾಜಿನ ದಿನಾಂಕದಿಂದ 7 ದಿನಗಳ (ಏಳು ದಿನಗಳು) ಮೊದಲು ವೀಕ್ಷಿಸಬಹುದು.

ಪ್ರಧಾನ ಮುಖ್ಯ ಸಾಮಗ್ರಿ ಪ್ರಬಂಧಕರು/ಡಿಪೊ

ಇ–ಟೆಂಡರ್ ಸೂಚನೆ
ಸಂ.:ಆರ್‌ಡಬ್ಲ್ಯೂಎಫ್/ಡಬ್ಲ್ಯೂ/25–26 ದಿ. 15.09.2025

ಇ–ಟೆಂಡರ್‌ಗಳು: ಭಾರತದ ರಾಷ್ಟ್ರಪತಿಗಳ ಪರವಾಗಿ, ಉಪ ಮುಖ್ಯ ಇಂಜಿನಿಯರ್‌ರವರು **http://www.ireps.gov.in** (ಕಾಮಗಾರಿಗಳು) ವೆಬ್‌ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಈ ಕೆಳಗಿನ ಕಾಮಗಾರಿಗಳಿಗೆ ಎಲೆಕ್ಟ್ರಾನಿಕ್ ಟೆಂಡರ್‌ಗಳನ್ನು ಆಹ್ವಾನಿಸುತ್ತಾರೆ.

ಟೆಂಡರ್ ಸಂಖ್ಯೆ: ಡಬ್ಲ್ಯೂ.496/ಆರ್‌ಡಬ್ಲ್ಯೂಎಫ್/ವೈಎನ್‌ಕೆ/1067. ವಿವರಣೆ: **RWF ಮತ್ತು IREPS** ವೆಬ್‌ಸೈಟ್ ಅನ್ನು ವೀಕ್ಷಿಸಬಹುದು. ಅಂದಾಜು ಮೌಲ್ಯ: ರೂ. 3,46,76,753.80, ಇಎಂಡಿ: ರೂ.3,23,400/-, ಟೆಂಡರ್ ಕೊನೆಗೊಳ್ಳುವ ದಿನಾಂಕ ಮತ್ತು ಸಮಯ: 08.10.2025, ಮಧ್ಯಾಹ್ನ 3:00 ಗಂಟೆಗೆ.

ಉಪ ಮುಖ್ಯ ಇಂಜಿನಿಯರ್

ಕರ್ನಾಟಕ ಸರ್ಕಾರ–ಜಿಲ್ಲಾ ಪಂಚಾಯತ್–ಶಾಲಾ ಶಿಕ್ಷಣ ಇಲಾಖೆ
ಸಮಗ್ರ ಶಿಕ್ಷಣ ಕರ್ನಾಟಕ – ಶಿವಮೊಗ್ಗ ಜಿಲ್ಲೆ
ಸಂಖ್ಯೆ:ಸಶಿಕ/ಎ1/ಮಾ.ಸಂಸೇ.ಟೆಂಡರ್/18/2025–26 ದಿನಾಂಕ:15/09/2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯ ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮದಡಿ ಇಲಾಖಾವತಿಯಿಂದ 2024–25 ನೇ ಸಾಲಿಗೆ ಈ ಕೆಳಕಂಡ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆಯಲು ನೊಂದಾಯಿತ ಸ್ವಯಂ ಸೇವಾ ಸಂಘ ಮತ್ತು ಏಜೆನ್ಸಿಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ–ಟೆಂಡರ್ ಆಹ್ವಾನಿಸಲಾಗಿದ್ದು, ಕೊನೆಯ ದಿನಾಂಕ : 30/09/2025 ರ ಸಂಜೆ 5.30 ಘಂಟೆಯೊಳಗೆ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಹೆಚ್ಚಿನ ವಿವರಗಳಿಗೆ, KPPP.Karnataka.gov.in ನಲ್ಲಿ ನೋಡಬಹುದು.

ಕ್ರ.ಸಂ. 1. ಕಾರ್ಯಕ್ರಮದ ವಿವರ: ಜಿಲ್ಲಾ ಮತ್ತು ತಾಲ್ಲೂಕು ಕಛೇರಿಗಳಿಗೆ ಡಾಟ ಎಂಟ್ರಿ ಆಪರೇಟರ್, ಜಿಲ್ಲಾ ಮತ್ತು ಜ್ಯೂನಿಯರ್ ಕಂಪ್ಯೂಟರ್ ಪ್ರೋಗ್ರಾಮರ್ & ಬ್ಲಾಕ್ ಲೆಕ್ಕ ಸಹಾಯಕರುಗಳು **ಸಂಖ್ಯೆ:** 24 **ಟೆಂಡರ್ ಸಂಖ್ಯೆ:** DPI/2025-26/SE0373 **ಟೆಂಡರ್‌ನ ಅಂದಾಜು ಮೊತ್ತ:** ರೂ.100.644 ಲಕ್ಷ

ಹೆಚ್ಚಿನ ಮಾಹಿತಿಗಾಗಿ : 9448999406 ಈ ದೂರವಾಣಿ ಸಂಖ್ಯೆಗೆ ಸಂಪರ್ಕಿಸಬಹುದು.

ಸಹಿ/– ಉಪನಿರ್ದೇಶಕರು (ಆಡಳಿತ) ಮತ್ತು ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಸಮಗ್ರ ಶಿಕ್ಷಣ ಕರ್ನಾಟಕ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/87/09/944

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಸಂಚಾರ (ವಾಣಿಜ್ಯ) ಇಲಾಖೆ, 2ನೇ ಮಹಡಿ, ಶಾಂತಿನಗರ ಬಸ್ ನಿಲ್ದಾಣ, ಕೆ..ಹೆಚ್.ರಸ್ತೆ, ಬೆಂಗಳೂರು–560027 ದೂರವಾಣಿ ಸಂಖ್ಯೆ: 080 22537575
ವೆಬ್‌ಸೈಟ್ : www.mybmtc.com ಇ–ಮೇಲ್ : ctmc@mybmtc.com
ಸಂಖ್ಯೆ:ಬೆಂಮಸಾಸಂ/ಕೇಕ/ಸಂ/ವಾ/1890/2658/2025–26 ದಿನಾಂಕ:15.09.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–21/2025–26(Call-2) (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಕೆಂಗೇರಿ ಟಿಟಿಎಂಸಿ ಬಸ್ ನಿಲ್ದಾಣದ ವಾಣಿಜ್ಯ/ಕಛೇರಿ ಸ್ಥಳ, 2ನೇ ಮಹಡಿ ಮತ್ತು ಟೆರೇಸ್‌ಗೆ ಪರವಾನಗಿದಾರರ ಆಯ್ಕೆಗಾಗಿ ಆಸಕ್ತ ವ್ಯಕ್ತಿ/ಏಜೆನ್ಸಿ/ಕಂಪನಿಗಳಿಂದ ಇ–ಸಂಗ್ರಹಣಾ ವೇದಿಕೆ ಮುಖಾಂತರ ಟೆಂಡರ್ ಬಿಡ್‌ಗಳನ್ನು ಆಹ್ವಾನಿಸಿದೆ.

ಬಿಡ್ ಪೂರ್ವ ಸಭೆಯ ದಿನಾಂಕ	20.09.2025 ರಂದು 11.30 ಗಂಟೆಗೆ	ಸ್ಥಳ: ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) ರವರ ಕೊಠಡಿ, 2ನೇ ಮಹಡಿ, ಕೇಂದ್ರ ಕಛೇರಿ, ಬೆಂಮಸಾ ಸಂಸ್ಥೆ, ಶಾಂತಿನಗರ, ಬೆಂಗಳೂರು
ಬಿಡ್ ಸಲ್ಲಿಸುವ ಕೊನೆಯ ದಿನಾಂಕ	30.09.2025 ರಂದು 17:00 ಗಂಟೆಯವರೆಗೆ.	
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	03.10.2025 ರಂದು 11:30 ಗಂಟೆಗೆ	

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–25/2025–26 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಸಂ:ಬೆಂಮಸಾಸಂ/ಕೇಕ/ಸಂ/ವಾ1757/2734A/2025–26 ದಿನಾಂಕ: 17.09.2025
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ವ್ಯಾಪ್ತಿಗೆ ಒಳಪಟ್ಟ 10,000 ಚದರ ಅಡಿಗಳಿಗಿಂತ ಹೆಚ್ಚಿನ ವಿಸ್ತೀರ್ಣ ಹೊಂದಿರುವ **ಯಲಹಂಕ ಓಲ್ಡ್ ಟೌನ್, ವಿಜಯನಗರ ಟಿಟಿಎಂಸಿ, ಮಲ್ಲಸಂದ್ರ ಬಸ್ ನಿಲ್ದಾಣ, ಯಶವಂತಪುರ ಟಿಟಿಎಂಸಿ, ಕೆಂಗೇರಿ ಟಿಟಿಎಂಸಿ ಮತ್ತು ಹೊಸಕೋಟೆ ಬಸ್ ನಿಲ್ದಾಣಗಳಲ್ಲಿನ** ವಾಣಿಜ್ಯ ಕಛೇರಿ ಸ್ಥಳಗಳಿಗೆ ಪರವಾನಗಿ ನೀಡಲು ಆಸಕ್ತ/ ಏಜೆನ್ಸಿಗಳಿಂದ ಗುತ್ತಿಗೆದಾರರ ಆಯ್ಕೆಗಾಗಿ ಇ–ಸಂಗ್ರಹಣಾ ವೇದಿಕೆ ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಿದೆ.

ಬಿಡ್ ಪೂರ್ವ ಸಭೆಯ ದಿನಾಂಕ	24.09.2025 ರಂದು 11:00 ಗಂಟೆಗೆ	ಸ್ಥಳ: ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) ರವರ ಕೊಠಡಿ, 2ನೇ ಮಹಡಿ, ಕೇಂದ್ರ ಕಛೇರಿ, ಬೆಂಮಸಾ ಸಂಸ್ಥೆ, ಶಾಂತಿನಗರ, ಬೆಂಗಳೂರು
ಬಿಡ್ ಸಲ್ಲಿಸುವ ಕೊನೆಯ ದಿನಾಂಕ	04.10.2025 ರಂದು 17:00 ಗಂಟೆಯ ವರೆಗೆ	
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	06.10.2025 ರಂದು 11.30 ಗಂಟೆ	
ಆರ್ಥಿಕ ಬಿಡ್ ತೆರೆಯುವ ದಿನಾಂಕ	ನಂತರ ತಿಳಿಸಲಾಗುವುದು.	

ಮಾಸಿಕ ಪರವಾನಗಿ ಶುಲ್ಕ, ಇಎಂಡಿ ಮೊತ್ತ, ವಿಸ್ತೀರ್ಣ ಹಾಗೂ ಇನ್ನಿತರ ಮಾಹಿತಿಗಾಗಿ **www.kppp.karnataka.gov.in** ಗೆ ಲಾಗಿನ್ ಆಗಿ ಅಥವಾ ಇ–ಸಂಗ್ರಹಣಾ ಕೋಶ ದೂರವಾಣಿ ಸಂಖ್ಯೆ: 09240214000, 09240214001; 080–22483777; 22371090; 22340060; 22340948 ಅಥವಾ 7760997519 & 7760991222 ಇ–ಮೇಲ್: **ctmc@mybmtc.com** ಗೆ ಸಂಪರ್ಕಿಸಬಹುದು.

ಸಹಿ/– ಮುಖ್ಯ ಸಂಚಾರ ವ್ಯವಸ್ಥಾಪಕರು (ವಾಣಿಜ್ಯ) (ಟೆಂಡರ್ ಕರೆಯುವ ಪ್ರಾಧಿಕಾರಿ)

ಲೋಕೋಪಯೋಗಿ ಇಲಾಖೆ
ಕಾರ್ಯನಿರ್ವಾಹಕ ಇಂಜಿನೀಯರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟೆ.
ಸಂಖ್ಯೆ : ಲೋ.ಇ./ಬಾ.ವಿ./ಪಿ.ಬಿ./ಕೆ.ಡಬ್ಲ್ಯೂ/2025–26/2111 ದಿನಾಂಕ : 17–09–2025

ಅವಧಿ ವಿಸ್ತರಣೆ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 1999–2000ರ ಪ್ರಕಾರ ಆ್ಯಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ – 1 & 2 ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **ಬಾಗಲಕೋಟೆ ವಿಭಾಗದ ಅಡಿಯಲ್ಲಿಯ ಟೆಂಡರ್ ಪ್ರಕಟಣೆ ಸಂಖ್ಯೆ : 1925 ದಿನಾಂಕ : 02–09–2025 ರಲ್ಲಿಯ ಈ ಕೆಳಕಾಣಿಸಿದ ಕಾಮಗಾರಿಗಳನ್ನು ತಾಂತ್ರಿಕ ಕಾರಣಗಳಿಂದಾಗಿ ಟೆಂಡರ್ ಅವಧಿ ವಿಸ್ತರಣೆ ಮಾಡಲಾಗಿದೆ.**

ವರ್ಕ ಇಂಡೆಂಟ್ ನಂ. ಸಾಮಾನ್ಯ : **25399, 25407, 25409, 25389, 25413, 25417, 25433, 25435, 25438, 25410, 25428, 25425, 26729, 27308, 26720, 26726.**
ವರ್ಕ ಇಂಡೆಂಟ್ ನಂ. ಪರಿಶಿಷ್ಟ ಜಾತಿ : **25390, 25415, 25393, 26754, 26725, 26757.**
ವರ್ಕ ಇಂಡೆಂಟ್ ನಂ. ಪರಿಶಿಷ್ಟ ಪಂಗಡ : **25405, 26753.**
ವರ್ಕ ಇಂಡೆಂಟ್ ನಂ. ಕ್ಯಾಟಗರಿ 1 : **25401, 25371.**
ವರ್ಕ ಇಂಡೆಂಟ್ ನಂ. ಕ್ಯಾಟಗರಿ 2ಎ : **25384, 25387, 27422, 26721, 26715, 26751.**

ಈ ಎಲ್ಲ ಕಾಮಗಾರಿಗಳ ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ ರೂ. 49.29 ಲಕ್ಷ ಹಾಗೂ ಕನಿಷ್ಠ ಮೊತ್ತ ರೂ. 6.00 ಲಕ್ಷಗಳವರೆಗಿನ ಕಾಮಗಾರಿಗಳಿಗೆ ಈ ಕೆಳಕಾಣಿಸಿದ ದಿನಾಂಕಗಳಂತೆ ಟೆಂಡರ್ ಅಹ್ವಾನಿಸಲಾಗಿದೆ.

ಅ) ಟೆಂಡರ್ ಸ್ವೀಕರಿಸುವ ದಿನಾಂಕ	:	23–09–2025 ರ ಸಂಜೆ 4.00 ಘಂಟೆಯವರೆಗೆ.
ಬ) ತಾಂತ್ರಿಕ ಬಿಡ್ ತೆರೆಯುವ ದಿನಾಂಕ	:	24–09–2025 ರ ಸಂಜೆ 4.30 ಘಂಟೆಯವರೆಗೆ.
ಕ) ಆರ್ಥಿಕ ಬಿಡ್ ತೆರೆಯುವ ದಿನಾಂಕ	:	25–09–2025 ರ ಸಂಜೆ 4.30 ಘಂಟೆಯವರೆಗೆ.

ಕಾಮಗಾರಿಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ವೈಬ್‌ಸೈಟ್ ವಿಳಾಸ : **https://kppp.karnataka.gov.in** ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟೆ/284/ಮಣಿಪಾಲ್/2025–26

ಜಿಲ್ಲಾ ಪಂಚಾಯತ, ಬೆಳಗಾವಿ
ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ ಇಂಜನೀಯರಿಂಗ್ ವಿಭಾಗ ಚಿಕ್ಕೋಡಿ
ಕಚೇರಿ ದೂರವಾಣಿ/ಫ್ಯಾಕ್ಸ್ ಸಂಖ್ಯೆ : 08338-272131 Email : preckdee@gmail.com

ಟೆಂಡರ ಅವಧಿ ವಿಸ್ತರಣೆ–2 ಅಧಿಸೂಚನೆ
(ಕೆ.ಪಿ.ಪಿ. ಪೋರ್ಟಲ್ ಮೂಲಕ ಮಾತ್ರ)

ವಿಷಯ: ಈ ಕಚೇರಿಯ ಅಲ್ಪಾವಧಿ ಟೆಂಡರ ಅಧಿಸೂಚನೆ ಸಂಖ್ಯೆ: ಪಂರಾಂ/ಚವಿ/ಡಿಬಿ–2/ಕೆಪಿಪಿಪಿ/2025–26/3178, ದಿನಾಂಕ : 14–08–2025.

ಮೇಲಿನ ಉಲ್ಲೇಖದಲ್ಲಿ ದಿನಾಂಕ: 14–08–2025 ರಂದು 99 ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ ಅಧಿಸೂಚನೆ ಹೊರಡಿಸಲಾಗಿತ್ತು. ಕಾರಣಾಂತರಗಳಿಂದಾಗಿ ಟೆಂಡರ ಸಲ್ಲಿಸಲು ಈ ಕೆಳಗೆ ಕಾಣಿಸಿದ 6 ಕಾಮಗಾರಿಗಳಿಗೆ ಅವಧಿ ವಿಸ್ತರಣೆ ಮಾಡಲಾಗಿದೆ.

ಇಂಡೆಂಟ್ ನಂ. 14902, 14807, 14805, 14916, 14806, 14810,

1	The last date of Submission of Tenders through KPP Portal	24-09-2025 Up to 4:00 PM
2	Opening of Technical Bid	26-09-2025 at 11:00 AM
3	Opening of Financial Bid	29-09-2025 at 11:00 AM

ಹೆಚ್ಚುವರಿ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕಚೇರಿ ಸಮಯದಲ್ಲಿ ಪಡೆಯಬಹುದು ಕೆ.ಪಿ.ಪಿ. ಪೋರ್ಟಲ್ ನಲ್ಲಿ (www.eproc.karnataka.gov.in) ನೋಡಬಹುದು.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು,
ಪಂ. ರಾಜ್ ಇಂ. ವಿಭಾಗ, ಚಿಕ್ಕೋಡಿ

DIPR/RO-No.1049/2025-26

ಜಿಲ್ಲಾಧಿಕಾರಿಗಳ ಕಾರ್ಯಾಲಯ
ಬೆಂಗಳೂರು ದಕ್ಷಿಣ ಜಿಲ್ಲೆ
ಜಿಲ್ಲಾ ನಗರಾಭಿವೃದ್ಧಿ ಕೋಶ, ರಾಮನಗರ–562159
Phone: 080-27274108/27276074, E-Mail: ka.ramanagara.dudc@gmail.com
ಸಂ.: ರಾಜಿನಕೋ/ಎಂಯುಎನ್(1)/3rd Party Inspection/ಸಿಆರ್/42/2025–26 ದಿನಾಂಕ: 16.09.2025

ಟೆಂಡರ್ ಅಧಿಸೂಚನೆ

ಬೆಂಗಳೂರು ದಕ್ಷಿಣ ಜಿಲ್ಲೆಯ ನಗರಸಭೆ–ರಾಮನಗರ, ಚನ್ನಪಟ್ಟಣ, ಕನಕಪುರ ಮತ್ತು ಪುರಸಭೆ–ಬಿಡದಿ, ಮಾಗಡಿ ಮತ್ತು ಪ.ಪಂ–ಹಾರೋಹಳ್ಳಿ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ವಿವಿಧ ಯೋಜನೆ/ಅನುದಾನಗಳಡಿ ಕೈಗೊಳ್ಳುವ ಅಭಿವೃದ್ಧಿ/ನಿರ್ವಹಣಾ ಕಾಮಗಾರಿಗಳ ಗುಣಮಟ್ಟ ಪರಿಶೀಲನೆಗೆ 3ನೇ ವ್ಯಕ್ತಿ ತಪಾಸಣೆ ಸಮಲೋಚಕರ ಏಜೆನ್ಸಿ ನೇಮಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ವಿವರಗಳು	ಟೆಂಡರ್‌ಗಿಟ್ಟ ಮೊತ್ತ ರೂ. ಲಕ್ಷಗಳಲ್ಲಿ	ಇಎಂಡಿ ಮೊತ್ತ ರೂ. ಲಕ್ಷಗಳಲ್ಲಿ	ಗುತ್ತಿಗೆ ಅವಧಿ
1	ಇಂಡೆಂಟ್ ಸಂಖ್ಯೆ DMA/2025-26 SE6064	86.04	1.29	One year from the date of award

ಆಸಕ್ತಿಯುಳ್ಳ ಬಿಡ್‌ದಾರರು ಕೆ.ಪಿ.ಪಿ.ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳುವುದು. ಟೆಂಡರ್‌ನ್ನು ಹಾಗೂ ನಿಗಧಿಪಡಿಸಿರುವ ಇ.ಎಂ.ಡಿ. ಮೊತ್ತವನ್ನು ಕೆ.ಪಿ.ಪಿ ಪೋರ್ಟಲ್ ಮೂಲಕ ವಿದ್ಯುನ್ಮಾನವಾಗಿ ಸಲ್ಲಿಸುವುದು.

1) ಪೂರ್ವಭಾವಿ ಸಭೆ (Pre-bid) **ದಿನಾಂಕ: 25.09.2025 ರಂದು ಬೆಳಿಗ್ಗೆ 11:30 ಗಂಟೆಗೆ.** 2) ಪೂರ್ಣಗೊಳಿಸಿದ ಟೆಂಡರ್ ದಸ್ತಾವೇಜುಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 08.10.2025 ರಂದು ಸಂಜೆ 05.00 ಗಂಟೆಗೆ.** ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 10.10.2025 ರಂದು ಬೆಳಿಗ್ಗೆ 11:30 ಗಂಟೆಗೆ**

ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು. ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಈ ಕಚೇರಿಯ ಇ–ಮೇಲ್ ಮೂಲಕ ಪಡೆಯಬಹುದು. **ಸೂಚನೆ:–1)** ಬಿಡ್‌ದಾರರು ಆರ್ಥಿಕ ಬಿಡ್‌ನಲ್ಲಿ ನಕರಾತ್ಮಕ/ಅನಿಯಮಿತ ದರವನ್ನು ನಮೂದಿಸಿದ್ದಲ್ಲಿ ಬಿಡ್‌ನ್ನು ತಿರಸ್ಕರಿಸಲಾಗುವುದು.

ಸಹಿ/– **ಯೋಜನಾ ನಿರ್ದೇಶಕರು**
ಜಿಲ್ಲಾ ನಗರಾಭಿವೃದ್ಧಿ ಕೋಶ
ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ

DIPR/BSD/345/SA/2025-26

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಮ್.ಹೆಚ್. ಮರೀಗೌಡ ರಸ್ತೆ, ಬೆಂಗಳೂರು – 560 029
ಫೋನ್: 080–26096839/26096855 ಇಮೇಲ್: purchase@kmf.coop
ದಿನಾಂಕ: 17–09–2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಹಾಲು ಮಹಾಮಂಡಳವು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಘಟಕವಾರು ವಿವಿಧ ಪಶು ಆಹಾರ ಕಚ್ಚಾಮಾಲುಗಳನ್ನು ಖರೀದಿಸುವ ಸಂಬಂಧ ಟೆಂಡರ್ ಆಹ್ವಾನಿಸಿದ್ದು, ಆಸಕ್ತಿಯುಳ್ಳ ಟೆಂಡರ್‌ದಾರರು ಭಾಗವಹಿಸಬಹುದಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಹಾಗೂ ಐಟಂವಾರು ಇ.ಎಂ.ಡಿ ವಿವರಗಳನ್ನು KPP Portal https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ತಿದ್ದುಪಡಿ/ ಟಿಪ್ಪಣಿಗಳೇನಾದರು ಇದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿಯೇ ಪ್ರಕಟಿಸಲಾಗುವುದು.

ಕ್ರ. ಸಂ.	ಕಚ್ಚಾಮಾಲುಗಳು	ಘಟಕವಾರು ಪರಿಮಾಣ ಮೆಟ್ರಿಕ್ ಟನ್‌ಗಳಲ್ಲಿ				
		ರಾಜಾನುಕುಂಟೆ	ಗುಬ್ಬಿ	ಧಾರವಾಡ	ಹಾಸನ	ಶಿಕಾರಿಪುರ
1. IFT No.KMF/PUR/CFRM-650/2025-26 (KPPP Tender No. KMF/2025-26/IND1656)						
1	ಎಣ್ಣೆರಹಿತ ಶೇಂಗಾ ಹಿಂಡಿ	0	500	250	250	300
2	ಕಾರ್ನ್ ಪ್ರೋಟೀನ್ ಫೀಡ್	100	100	100	100	100
2. IFT No.KMF/PUR/CFRM-651/2025-26 (KPPP Tender No. KMF/2025-26/IND1659)						
1	ಮೆಕ್ಕೆಜೋಳ	2000	3000	0	5000	0

ಟೆಂಡರ್ ವೇಳಾಪಟ್ಟಿ: ಟೆಂಡರ್ ಪ್ರಾರಂಭವಾಗುವ ದಿನಾಂಕ: 17–09–2025; ಪೂರ್ವಭಾವಿ ಸಭೆಯ ದಿನಾಂಕ: 22-09-2025 at 11.30AM; ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 24-09-2025 at 03:00PM; ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ: 25-09-2025 at 03.15PM; ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ: 25-09-2025 at 3.30PM.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–52/957/2025–26 ದಿನಾಂಕ: 18.09.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಆಧುನಿಕ ತಂತ್ರಜ್ಞಾನ ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ವಿದ್ಯುತ್ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : 1) ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು 220/66/11ಕೆವಿ ಏರೋಸ್ಪೇಸ್ ಪಾರ್ಕ್ ವಿದ್ಯುತ್ ಉಪ ಕೇಂದ್ರದಿಂದ **SEZ**, ಐಟಿ/ಬಿಟಿ ಮತ್ತು ಏರೋಸ್ಪೇಸ್ ಪಾರ್ಕ್ ಕೈಗಾರಿಕಾ ಪ್ರದೇಶಕ್ಕೆ ಹಾಗೂ 220/66/11ಕೆವಿ ಹಾರ್ಡ್‌ವೇರ್ ಪಾರ್ಕ್ ವಿದ್ಯುತ್ ಉಪ ಕೇಂದ್ರದಿಂದ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ ಹಂತ–1 ಕೈಗಾರಿಕಾ ಪ್ರದೇಶಕ್ಕೆ ಲಿಂಕ್‌ಲೈನ್ ಕಲ್ಪಿಸುವ ಕಾಮಗಾರಿ.

2) ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕು, ಸಾರಥಿ ಕುರುಬರಹಳ್ಳಿ ಕೈಗಾರಿಕಾ ಪ್ರದೇಶದ ಹಂತ–2 ಕ್ಕೆ ವಿದ್ಯುತ್ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 13.10.2025 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **https://kppp.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/2881/NR/2025-26

ಚಿಟಿಕೆ ಸುದ್ದಿ

ಯುಪಿಎಸ್ ಸೆ. 30ಕ್ಕೆ ಮೊದಲು ತಿಳಿಸಲು ಸೂಚನೆ

ನವದೆಹಲಿ (ಪಿಟಿಐ): ಏಕೀಕೃತ ಪಿಂಚಣಿ ವ್ಯವಸ್ಥೆಗೆ (ಯುಪಿಎಸ್) ಬದಲಾಗುವ ಆಯ್ಕೆಯನ್ನು ಸೆಪ್ಟೆಂಬರ್ 30ರೊಳಗೆ ತಿಳಿಸುವಂತೆ ಕೇಂದ್ರ ಸರ್ಕಾರದ ನೌಕರರಿಗೆ ಹಣಕಾಸು ಸಚಿವಾಲಯವು ಗುರುವಾರ ತಿಳಿಸಿದೆ.

ಕೇಂದ್ರ ಸರ್ಕಾರದ ನೌಕರರಿಗೆ ರಾಷ್ಟ್ರೀಯ ಪಿಂಚಣಿ ಯೋಜನೆ (ಎನ್‌ಪಿಎಸ್) ಅಡಿಯಲ್ಲಿ ಯುಪಿಎಸ್ ಅನ್ನು ಏಪ್ರಿಲ್ 1ರಿಂದ ಆಯ್ಕೆಯಾಗಿ ಜಾರಿಗೊಳಿಸಲಾಗಿದೆ. ಜುಲೈ 20ರವರೆಗೆ 31,555 ನೌಕರರು ಯುಪಿಎಸ್ ಆಯ್ಕೆ ಮಾಡಿಕೊಂಡಿದ್ದಾರೆ. ಯುಪಿಎಸ್ ನೌಕರರಿಗೆ ನಿರ್ದಿಷ್ಟ ಮೊತ್ತದ ಪಿಂಚಣಿಯ ಖಾತರಿ ನೀಡುತ್ತದೆ.

ಎನ್‌ಪಿಎಸ್ ಆಯ್ಕೆ ಮಾಡಿಕೊಂಡಿರುವ ಅರ್ಹ ನೌಕರರು ಮತ್ತು ನಿವೃತ್ತಿ ಹೊಂದಿದ ಎನ್‌ಪಿಎಸ್ ನೌಕರರು ಯುಪಿಎಸ್ ಆಯ್ಕೆಯನ್ನು ಸೆಪ್ಟೆಂಬರ್ 30ಕ್ಕೆ ಮೊದಲು ಮಾಡಿಕೊಳ್ಳಬೇಕು. ನೌಕರರು ಎನ್‌ಪಿಎಸ್‌ನಲ್ಲಿ ಉಳಿಯುವ ಆಯ್ಕೆ ಮಾಡಿಕೊಂಡರೆ, ಈ ಗಡುವು ಮುಗಿದ ಬಳಿಕ ಮತ್ತೆ ಯುಪಿಎಸ್ ಆಯ್ಕೆ ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಸಚಿವಾಲಯ ತಿಳಿಸಿದೆ.

ಎಫ್‌ಎಂಸಿಜಿ ಉತ್ಪನ್ನಗಳ ಬೆಲೆ ಇಳಿಕೆ

ನವದೆಹಲಿ (ಪಿಟಿಐ): ಪ್ರಮುಖ ಎಫ್‌ಎಂಸಿಜಿ ಕಂಪನಿಗಳು ಜಿಎಸ್‌ಟಿ ಪರಿಷ್ಕರಣೆಯಿಂದಾಗಿ ತಮ್ಮ ಉತ್ಪನ್ನಗಳ ಬೆಲೆ ಎಷ್ಟರಮಟ್ಟಿಗೆ ಇಳಿಕೆ ಆಗುತ್ತದೆ ಎನ್ನುವುದನ್ನು ಪ್ರಕಟಿಸಿವೆ. ಹೊಸ ದರವು ಸೆಪ್ಟೆಂಬರ್ 22ರಿಂದ ಜಾರಿಗೆ ಬರಲಿದೆ.

ಪ್ರಾಕ್ಟರ್ ಆ್ಯಂಡ್ ಗ್ಯಾಂಬಲ್, ಇಮಾಮಿ ಮತ್ತು ಎಚ್‌ಯುಎಲ್ ಕಂಪನಿಗಳು ಬೆಲೆ ಇಳಿಕೆ ಮಾಡಿದ್ದು, ಈ ಮಾಹಿತಿಯನ್ನು ವಿತರಕರಿಗೆ ತಿಳಿಸಿವೆ. ಅಲ್ಲದೆ, ಹೊಸ ದರ ಪಟ್ಟಿಯನ್ನು ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಿವೆ. ಜಿಎಸ್‌ಟಿ ಪರಿಷ್ಕರಣೆಯ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾಯಿಸಲು ಕಂಪನಿಗಳು ಮುಂದಾಗಿವೆ.

ಸಾಬೂನು, ಶ್ಯಾಂಪೂ, ಮಕ್ಕಳ ಡೈಪರ್‌ಗಳು, ಟೂತ್‌ಪೇಸ್ಟ್, ರೇಜರ್‌ಗಳು, ಶೇವಿಂಗ್ ನಂತರದ ಲೋಷನ್ ಸೇರಿ ಹಲವು ಉತ್ಪನ್ನಗಳ ಬೆಲೆ ಇಳಿಕೆಯಾಗಲಿವೆ ಎಂದು ಕಂಪನಿಗಳು ತಿಳಿಸಿವೆ.

‘ನಾನು ಎಲ್ಲ ಧರ್ಮ ಗೌರವಿಸುವೆ’

ಪಿಐಎಲ್ ವಿಚಾರಣೆ ವೇಳೆ ಸಿಜೆಐ ನೀಡಿದ್ದ ಹೇಳಿಕೆಯಿಂದ ವಿವಾದ

ನವದೆಹಲಿ(ಪಿಟಿಐ):‘ನಾನು ಎಲ್ಲ ಧರ್ಮಗಳನ್ನು ಗೌರವಿಸುತ್ತೇನೆ’ ಎಂದು ಸುಪ್ರೀಂ ಕೋರ್ಟ್ ಮುಖ್ಯನ್ಯಾಯಮೂರ್ತಿ ಬಿ.ಆರ್.ಗವಾಯಿ ಗುರುವಾರ ಹೇಳಿದ್ದಾರೆ.

‘ಕೆಲ ದಿನಗಳ ಹಿಂದೆ ನಾನು ನೀಡಿದ್ದ ಹೇಳಿಕೆಗಳ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಚರ್ಚೆಯಾಗುತ್ತಿರುವ ಕುರಿತು ಕೆಲವರು ನನ್ನ ಗಮನಕ್ಕೆ ತಂದಿದ್ದಾರೆ. ಆದರೆ, ನಾನು ಎಲ್ಲ ಧರ್ಮಗಳನ್ನು ಗೌರವಿಸುತ್ತೇನೆ’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಮಧ್ಯಪ್ರದೇಶದ ಖಜುರಾಹೊ ದೇವಸ್ಥಾನ ಸಂಕೀರ್ಣದಲ್ಲಿರುವ ಜಾವರಿ ದೇಗುಲದಲ್ಲಿ ಏಳು ಅಡಿ ಎತ್ತರದ ಭಗವಾನ್ ವಿಷ್ಣು ಮೂರ್ತಿ ಭಗ್ನಗೊಂಡಿದೆ. ಈ ದೇವಸ್ಥಾನವನ್ನು ಮರು ನಿರ್ಮಾಣ ಮಾಡಬೇಕು ಹಾಗೂ ವಿಷ್ಣು ದೇವರ ಮೂರ್ತಿಯನ್ನು ಪುನಃ ಪ್ರತಿಷ್ಠಾಪಿಸಲು ನಿರ್ದೇಶನ ನೀಡಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಿಜೆಐ ನೇತೃತ್ವದ ಪೀಠ ಮೇ 16ರಂದು ವಜಾಗೊಳಿಸಿತ್ತು.

ಬಿ.ಆರ್. ಗವಾಯಿ

ರಾಕೇಶ್ ದಲಾಲ್ ಎಂಬುವವರು ಈ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ವೇಳೆ, ‘ಇದು ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲ. ಇದು ಪ್ರಚಾರ ಬಯಸಿ ಸಲ್ಲಿಸಿರುವ ಅರ್ಜಿ. ಈ ವಿಚಾರವಾಗಿ ಏನಾದರೂ ಮಾಡುವಂತೆ ಭಗವಾನ್ ವಿಷ್ಣುವಿನಲ್ಲಿಯೇ ನೀವು ಬೇಡಿಕೊಳ್ಳಿ’ ಎಂದು ಅರ್ಜಿದಾರರನ್ನು ಉದ್ದೇಶಿಸಿ ಸಿಜೆಐ ಹೇಳಿದ್ದರು.

‘ನೀವು ವಿಷ್ಣುವಿನ ಪರಮ ಭಕ್ತ ಎಂದು ಹೇಳಿಕೊಳ್ಳುತ್ತಿರುವಿರಿ. ಹಾಗಾದರೆ, ಈ ವಿಚಾರವಾಗಿ ಪ್ರಾರ್ಥನೆ ಸಲ್ಲಿಸಿ, ಒಂದಿಷ್ಟು ಧ್ಯಾನ ಮಾಡಿ’ ಎಂದೂ ಹೇಳಿದ್ದರು. ‘ನೀವು ಶೈವ ಸಿದ್ಧಾಂತ ವಿರೋಧಿಸದಿದ್ದಲ್ಲಿ, ಖಜುರಾಹೊ ದೇವಸ್ಥಾನ ಸಂಕೀರ್ಣದಲ್ಲಿ ಬೃಹತ್ ಶಿವನ ದೇಗುಲ ಇದೆ. ಅಲ್ಲಿಗೆ ಹೋಗಿ ಪೂಜೆ ಸಲ್ಲಿಸಿ’ ಎಂದಿದ್ದರು.

ಸಿಜೆಐ ಅವರ ಈ ಹೇಳಿಕೆಗಳ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕ ಟೀಕೆಗಳು ವ್ಯಕ್ತವಾಗಿವೆ. ಇದರ ಬೆನ್ನಲ್ಲೇ, ಅವರು ಈ ಸ್ಪಷ್ಟನೆ ನೀಡಿದ್ದಾರೆ.

ಇದೇ ವೇಳೆ, ನ್ಯಾಯಾಂಗ ಇಲಾಖೆಯ ಇಬ್ಬರು ಅಧಿಕಾರಿಗಳು, ‘ಸಿಜೆಐ ಅವರು ಎಲ್ಲ ಧಾರ್ಮಿಕ ಸ್ಥಳಗಳಿಗೂ ಭೇಟಿ ನೀಡಿದ್ದಾರೆ’ ಎಂದು ತಿಳಿಸಿದ್ದಾರೆ.

‘ನಾನು ಸಿಜೆಐ ಗವಾಯಿ ಅವರನ್ನು ಕಳೆದ 10 ವರ್ಷಗಳಿಂದ ಬಲ್ಲೆ. ಇದು ಗಂಭೀರ ವಿಚಾರ’ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದ್ದಾರೆ.

‘ಪ್ರತಿಯೊಂದು ಕ್ರಿಯೆಗೂ ಸಮನಾದ ಪ್ರತಿಕ್ರಿಯೆ ಇರುತ್ತದೆ ಎಂಬ ನ್ಯೂಟನ್‌ನ ನಿಯಮವನ್ನು ನಾವು ಓದಿದ್ದೇವೆ. ಈಗ, ಪ್ರತಿಯೊಂದು ಕ್ರಿಯೆಗೂ ಸಾಮಾಜಿಕ ಜಾಲತಾಣಗಳಲ್ಲಿ ಅನುಚಿತ ಪ್ರತಿಕ್ರಿಯೆ ಕಂಡುಬರುತ್ತಿದೆ’ ಎಂದು ಹೇಳಿದ್ದಾರೆ.

‘ಈ ವಿಚಾರವಾಗಿ ನಾವು ನಿತ್ಯವೂ ತೊಂದರೆ ಅನುಭವಿಸುತ್ತಿದ್ದೇವೆ. ಸಾಮಾಜಿಕ ಮಾಧ್ಯಮವು ಲಂಗು ಲಗಾಮು ಇಲ್ಲದ ಕುದುರೆಯಂತಾಗಿದೆ. ಅದನ್ನು ಪಳಗಿಸುವ ದಾರಿಯೇ ಕಾಣುತ್ತಿಲ್ಲ’ ಎಂದು ಹಿರಿಯ ವಕೀಲ ಕಪಿಲ್ ಸಿಬಲ್ ಹೇಳಿದ್ದಾರೆ.

ಅಪಹಾಸ್ಯದ ಹೇಳಿಕೆ ನೀಡದಿದ್ದರೆ ಉತ್ತಮ:ವಿಎಚ್‌ಪಿ

ಖಜುರಾಹೊ ದೇವಸ್ಥಾನದಲ್ಲಿ ವಿಷ್ಣು ದೇವರ ಮೂರ್ತಿ ಮರುಪ್ರತಿಷ್ಠಾಪನೆ ಕೋರಿದ್ದ ಅರ್ಜಿ ವಿಚಾರಣೆ ವೇಳೆ ಸಿಜೆಐ ಬಿ.ಆರ್.ಗವಾಯಿ ನೀಡಿದ್ದ ಹೇಳಿಕೆಗಳನ್ನು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಗುರುವಾರ ಖಂಡಿಸಿದೆ.

‘ಹಿಂದೂ ಧಾರ್ಮಿಕ ನಂಬಿಕೆಗಳನ್ನು ಅಪಹಾಸ್ಯ ಮಾಡುವಂತಹ ಹೇಳಿಕೆಗಳನ್ನು ನೀಡದೇ ಇರುವುದು ಒಳ್ಳೆಯದು’ ಎಂದೂ ವಿಎಚ್‌ಪಿ ಹೇಳಿದೆ.

‘ಸಿಜೆಐ ಅವರು ಮೌಖಿಕವಾಗಿ ವ್ಯಕ್ತಪಡಿಸಿರುವ ಹೇಳಿಕೆಗಳು ಹಿಂದೂ ಧಾರ್ಮಿಕ ನಂಬಿಕೆಗಳನ್ನು ಅಣಕಿಸುವಂತಿವೆ ಎಂಬುದು ನಮ್ಮ ಭಾವನೆ. ನ್ಯಾಯಾಲಯಗಳು ನ್ಯಾಯ ದೇಗುಲಗಳಿದ್ದಂತೆ. ನ್ಯಾಯಾಲಯಗಳ ಮೇಲೆ ಭಾರತೀಯ ಸಮಾಜ ನಂಬಿಕೆ ಹೊಂದಿದೆ. ಹೀಗಾಗಿ, ಇಂತಹ ಹೇಳಿಕೆಗಳನ್ನು ಹೇಳದಿರುವುದೇ ಒಳಿತು’ ಎಂದು ವಿಎಚ್‌ಪಿ ರಾಷ್ಟ್ರೀಯ ಅಧ್ಯಕ್ಷ ಅಲೋಕ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಆಲೋಕ್ ಕುಮಾರ್

‘ನ್ಯಾಯಾಲಯದ ಕಲಾಪಗಳಲ್ಲಿ ಭಾಗಿಯಾಗಿರುವಾಗ ನಾವು ನೀಡುವ ಹೇಳಿಕೆಗಳ ವಿಚಾರವಾಗಿ ಸಂಯಮ ಕಾಯ್ದುಕೊಳ್ಳುವುದು ನಮ್ಮ ಕರ್ತವ್ಯ. ಕಕ್ಷಿದಾರರು, ವಕೀಲರಲ್ಲದೇ, ನ್ಯಾಯಮೂರ್ತಿಗಳ ಮೇಲೂ ಈ ಜವಾಬ್ದಾರಿ ಇದೆ’ ಎಂದು ಅವರು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಎಐ ಆಧಾರಿತ ‘ವ್ಯೋಮಮಿತ್ರ’ ಅಭಿವೃದ್ಧಿ: ಇಸ್ರೊ

ಕೊಯಮತ್ತೂರು(ಪಿಟಿಐ): ಮಾನವಸಹಿತ ಗಗನಯಾನಕ್ಕೆ ಪೂರ್ವಭಾವಿಯಾಗಿ ಕೈಗೊಳ್ಳಲಾಗುವ ಮಾನವರಹಿತ ಕಾರ್ಯಾಚರಣೆಗೆ ವಿನ್ಯಾಸಗೊಳಿಸಲಾಗಿರುವ ‘ವ್ಯೋಮಮಿತ್ರ’ವು, ಮನುಷ್ಯನ ಪ್ರತಿಕೃತಿಯಂತಿರುವ ರೊಬೊಟ್ ಆಗಿದ್ದು, ಇದು ಕೃತಕ ಬುದ್ಧಿಮತ್ತೆ (ಎಐ) ಆಧರಿಸಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿದೆ ಎಂದು ಇಸ್ರೊ ಅಧ್ಯಕ್ಷ ವಿ.ನಾರಾಯಣನ್ ಗುರುವಾರ ಇಲ್ಲಿ ಹೇಳಿದ್ದಾರೆ.

‘ವ್ಯೋಮಮಿತ್ರ’ ಹೊತ್ತ ಬಾಹ್ಯಾಕಾಶ ಕೋಶವನ್ನು ಡಿಸೆಂಬರ್ ಅಂತ್ಯಕ್ಕೆ ಉಡ್ಡಯನ ಮಾಡಲಾಗುವುದು. ಈ ಕುರಿತ ಕಾರ್ಯಗಳು ಭರದಿಂದ ಸಾಗಿವೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

‘ಮಾನವಸಹಿತ ಗಗನಯಾನ ಕಾರ್ಯಕ್ರಮದ ಭಾಗವಾಗಿ ಗಗನಯಾನಿಗಳನ್ನು ಹೊತ್ತ ಕೋಶವನ್ನು ಭೂಮಿಯಿಂದ 400 ಕಿ.ಮೀ ದೂರದ ಕಕ್ಷೆಗೆ ಕಳುಹಿಸಲಾಗುವುದು. ಈ ವೇಳೆ, ತಾಪಮಾನ, ವಾಯುಭಾರ, ತೇವಾಂಶ ಹಾಗೂ ಇಂಗಾಲದ ಡೈಆಕ್ಸೈಡ್ ಪ್ರಮಾಣದಂತಹ ಅಂಶಗಳ ಕುರಿತು ಅಧ್ಯಯನ ನಡೆಸಲಾಗುವುದು’ ಎಂದು ಹೇಳಿದರು.

‘ಈ ಮಹತ್ವಾಕಾಂಕ್ಷೆ ಯೋಜನೆಗೆ ಭಾರತೀಯ ವಾಯುಪಡೆ, ನೌಕಾಪಡೆ, ಡಿಆರ್‌ಡಿಒ ಹಾಗೂ ಇತರ ಹಲವು ಸಂಸ್ಥೆಗಳು ಇಸ್ರೊ ಜೊತೆ ಕೈಜೋಡಿಸಿವೆ’ ಎಂದೂ ಹೇಳಿದರು.

ವಿವಿಧೆಡೆ ಇ.ಡಿ ಶೋಧ

ಹೈದರಾಬಾದ್/ಅಮರಾವತಿ (ಪಿಟಿಐ): ಹಿಂದಿನ ವೈಎಸ್‌ಆರ್‌ಸಿಪಿ ಸರ್ಕಾರದ ಅವಧಿಯಲ್ಲಿ ನಡೆದಿದೆ ಎನ್ನಲಾದ ₹3,500 ಮೊತ್ತದ ಅಬಕಾರಿ ಹಗರಣಕ್ಕೆ ಸಂಬಂಧಿಸಿದಂತೆ, ಜಾರಿ ನಿರ್ದೇಶನಾಲಯವು ವಿವಿಧ ರಾಜ್ಯಗಳಲ್ಲಿ ಗುರುವಾರ ಏಕಕಾಲಕ್ಕೆ ದಾಳಿ ನಡೆಸಿತು.

ಹಗರಣದೊಂದಿಗೆ ಸಂಬಂಧ ಹೊಂದಿದ ವ್ಯಕ್ತಿಗಳು ಹಾಗೂ ಸಂಸ್ಥೆಗಳ ಮೇಲೆ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ, ತೆಲಂಗಾಣ, ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡು, ನವದೆಹಲಿಯ 20ಕ್ಕೂ ಅಧಿಕ ಸ್ಥಳಗಳಲ್ಲಿ ಅಧಿಕಾರಿಗಳು ದಾಳಿ ನಡೆಸಿದರು. ಆರೋಪಿಗಳಿಗೆ ಸಂಬಂಧಿಸಿದ ಸ್ಥಳಗಳಲ್ಲಿಯೂ ಶೋಧ ಕಾರ್ಯ ನಡೆಸಲಾಯಿತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಈಗಾಗಲೇ ಮೂರು ಚಾರ್ಜ್‌ಶೀಟ್‌ಗಳನ್ನು ಸಲ್ಲಿಸಿದೆ. ವೈಎಸ್‌ಆರ್‌ಸಿಪಿಯ ಸಂಸದ ಮಿದುನ್ ರೆಡ್ಡಿ ಅವರನ್ನು ಬಂಧಿಸಿದೆ.

ಮಾಜಿ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಕೂಡ ಪ್ರತಿ ತಿಂಗಳು ₹50 ರಿಂದ ₹60 ಕೋಟಿ ಕಿಕ್‌ಬ್ಯಾಕ್ ಪಡೆಯುತ್ತಿದ್ದರು ಎಂದು ಚಾರ್ಜ್‌ಶೀಟ್‌ನಲ್ಲಿ ತಿಳಿಸಲಾಗಿದೆ. ಆದರೆ, ದೂರಿನಲ್ಲಿ ಜಗನ್ ಅವರನ್ನು ಆರೋಪಿ ಎಂದು ಹೆಸರಿಸಲಾಗಿಲ್ಲ.

ಮತ ಕಳ್ಳತನ: ಬಿಜೆಪಿ ಕಾರ್ಯಕರ್ತರಿಗೆ ಕೇಂದ್ರ ಗೃಹ ಸಚಿವ ಶಾ ಸೂಚನೆ

‘ಸುಳ್ಳು ಸಂಕಥನಕ್ಕೆ ತಿರುಗೇಟು ನೀಡಿ’

ಡೆಹರಿ–ಆನ್–ಸೋನ್ (ಬಿಹಾರ) (ಪಿಟಿಐ): ‘ಮತ ಕಳ್ಳತನಕ್ಕೆ ಸಂಬಂಧಿಸಿ ‘ಇಂಡಿಯಾ’ ಮೈತ್ರಿಕೂಟ ಸೃಷ್ಟಿಸಿರುವ ‘ಸುಳ್ಳು ಸಂಕಥನ’ಕ್ಕೆ ತಕ್ಕ ಪ್ರತ್ಯುತ್ತರ ನೀಡಬೇಕು’ ಎಂದು ಬಿಜೆಪಿ ಕಾರ್ಯಕರ್ತರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಗುರುವಾರ ಸೂಚನೆ ನೀಡಿದ್ದಾರೆ.

‘ಒಂದು ವೇಳೆ, ಬಿಹಾರದಲ್ಲಿ ವಿರೋಧ ಪಕ್ಷಗಳ ಒಕ್ಕೂಟ ‘ಇಂಡಿಯಾ’ ಅಧಿಕಾರಕ್ಕೆ ಬಂದಲ್ಲಿ ಒಳನುಸುಳುವಿಕೆ ಸಮಸ್ಯೆ ಹೆಚ್ಚಾಗಲಿದೆ ಎಂಬುದಾಗಿ ಜನರನ್ನು ಎಚ್ಚರಿಸಬೇಕು’ ಎಂದೂ ಶಾ ಸೂಚಿಸಿದ್ದಾರೆ.

ಬಿಹಾರ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ, ಡೆಹರಿ–ಆನ್–ಸೋನ್‌ನಲ್ಲಿ ಹಮ್ಮಿಕೊಂಡಿದ್ದ ಪಕ್ಷದ ಕಾರ್ಯಕರ್ತರ ಸಮಾವೇಶದಲ್ಲಿ ಅವರು ಮಾತನಾಡಿದರು.

ಕಾಂಗ್ರೆಸ್,ಆರ್‌ಜೆಡಿ ಹಾಗೂ ಎಡಪಕ್ಷಗಳ ವಿರುದ್ಧ ಟೀಕಾಪ್ರಹಾರ ನಡೆಸಿದ ಶಾ,‘ಈ ಬಾರಿಯ ಚುನಾವಣೆಯಲ್ಲಿ ಎನ್‌ಡಿಎ ಒಕ್ಕೂಟಕ್ಕೆ ಸರಳ ಬಹುಮತವಲ್ಲ, ಮೂರನೇ ಎರಡರಷ್ಟು ಪ್ರಚಂಡ ಬಹುಮತ ಸಿಗಬೇಕು. ಈ ಗುರಿಯೊಂದಿಗೆ ಕಾರ್ಯ ನಿರ್ವಹಿಸಬೇಕು’ ಎಂದು ಕಾರ್ಯಕರ್ತರಿಗೆ ಶಾ ಹೇಳಿದರು.

ಮುಖ್ಯಾಂಶಗಳು

- ಮಗಧ, ಶಹಬಾದ್ ಭಾಗದ 10 ಜಿಲ್ಲೆಗಳ ಕಾರ್ಯಕರ್ತರು ಭಾಗಿ
- ಬಿಹಾರ ವಿಧಾನಸಭೆ ಸದಸ್ಯ ಬಲ 243
- ಉಚಿತ ವಿದ್ಯುತ್: ನಿತೀಶ್ ಕುಮಾರ್ ಹೊಗಳಿದ ಶಾ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೈಗೊಂಡಿದ್ದ ‘ಮತದಾರರ ಅಧಿಕಾರ ಯಾತ್ರೆ’ ಪ್ರಸ್ತಾಪಿಸಿದ ಅವರು, ‘ಈ ಯಾತ್ರೆಯ ಉದ್ದೇಶ ಏನು ಎಂಬುದು ನಿಮಗೆ ಗೊತ್ತು. ಬಾಂಗ್ಲಾದೇಶದಿಂದ ದೇಶದೊಳಗೆ ನುಸುಳಿರುವವರ ರಕ್ಷಣೆಯೇ ಈ ಯಾತ್ರೆಯ ಉದ್ದೇಶವಾಗಿತ್ತು’ ಎಂದರು.

ಬಿಜೆಪಿ ಕಾರ್ಯಕರ್ತರ ಸಮಾವೇಶದಲ್ಲಿ ಪಾಲ್ಗೊಳ್ಳಲು ಬಂದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಅವರು ಬೇಗುಸರಾಯ್‌ನಲ್ಲಿ ಗುರುವಾರ ಸ್ವಾಗತಿಸಿದರು ಪಿಟಿಐ ಚಿತ್ರ

‘ನುಸುಳುಕೋರರಿಗೆ ಮತ ಚಲಾಯಿಸುವ ಹಕ್ಕು ಇರಬೇಕೇ? ಈ ದೇಶದ ನಾಗರಿಕರಿಗೆ ಸಿಗುತ್ತಿರುವ ಎಲ್ಲ ಪ್ರಯೋಜನಗಳೂ ಅವರಿಗೆ ನೀಡಬೇಕೇ’ ಎಂದು ಶಾ ಹೇಳಿದಾಗ, ಕಾರ್ಯಕರ್ತರು, ‘ಇಲ್ಲ’ ಎಂದು ಜೋರು ದನಿಯಲ್ಲಿ ಉತ್ತರಿಸಿದರು.

‘ನುಸುಳುಕೋರರೇ ಕಾಂಗ್ರೆಸ್‌ನ ಮತಬ್ಯಾಂಕ್. ಇದಕ್ಕಾಗಿಯೇ ರಾಹುಲ್ ಗಾಂಧಿ ಹಾಗೂ ಅವರ ಬೆಂಬಲಿಗರು ನುಸುಳುಕೋರರಿಗೆ ಮಣೆ ಹಾಕುತ್ತಾರೆ. ನಮ್ಮ ಯುವಕರಿಗೆ ಮೀಸಲಾದ ಉದ್ಯೋಗಗಳನ್ನು ಅವರಿಗೆ ನೀಡುತ್ತಾರೆ’ ಎಂದು ಶಾ ಆರೋಪಿಸಿದರು.

ಎರಡು ತಿಂಗಳಲ್ಲಿ ಅಮೆರಿಕದಿಂದ ಸುಂಕ ಇಳಿಕೆ

ನವದೆಹಲಿ: ಮುಂದಿನ ಎರಡು ತಿಂಗಳಲ್ಲಿ ಭಾರತ ಮತ್ತು ಅಮೆರಿಕದ ನಡುವೆ ವಾಣಿಜ್ಯ ಒಪ್ಪಂದ ಅಂತಿಮಗೊಳ್ಳುವ ನಿರೀಕ್ಷೆ ಇದೆ, ಶೇಕಡ 25ರಷ್ಟು ಇರುವ ದಂಡ ಸುಂಕವನ್ನು ಕೈಬಿಡುವ ಸಾಧ್ಯತೆ ಇದೆ ಎಂದು ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಹೇಳಿದ್ದಾರೆ.

ಅಲ್ಲದೆ, ಶೇ 25ರಷ್ಟು ಇರುವ ಪ್ರತಿಸುಂಕವನ್ನು ಶೇ 10–15ಕ್ಕೆ ಇಳಿಕೆ ಮಾಡುವ ಸಾಧ್ಯತೆ ಇದೆ ಎಂದಿದ್ದಾರೆ. ‘ಶೇ 25ರಷ್ಟು ಇರುವ ದಂಡ ಸುಂಕದ ವಿಚಾರವು ಮುಂದಿನ ಎರಡು ತಿಂಗಳಲ್ಲಿ ಇತ್ಯರ್ಥ ಕಾಣುತ್ತದೆ ಎಂಬುದು ನನ್ನ ವೈಯಕ್ತಿಕ ವಿಶ್ವಾಸ’ ಎಂದು ಅವರು ಕೋಲ್ಕತ್ತದಲ್ಲಿ ಹೇಳಿದ್ದಾರೆ.

‘ಹಿಂದೂ ಕ್ರೈಸ್ತ’ ಉಲ್ಲೇಖಕ್ಕೆ ತಡೆ

ಒಂದನೇ ಪುಟದಿಂದ...

ಸಚಿವ ಸಂಪುಟ ಸಭೆ ಬಳಿಕ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಎಚ್. ಕೆ. ಪಾಟೀಲ, ಶಿವರಾಜ ತಂಗಡಗಿ, ಜಮೀರ್ ಅಹಮದ್ ಖಾನ್, ಸಂತೋಷ್ ಲಾಡ್, ದಿನೇಶ್ ಗುಂಡೂರಾವ್, ಬೈರತಿ ಸುರೇಶ್ ಮುಂತಾದವರು ಇದ್ದರು. ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ಆರ್. ನಾಯ್ಕ್ ಮತ್ತು ಕೆಲವು ಸದಸ್ಯರನ್ನೂ ಸಭೆಗೆ ಆಹ್ವಾನಿಸಲಾಗಿತ್ತು.

ಸಂಪುಟ ಸಭೆಯಲ್ಲಿ ಚರ್ಚೆ: ಸಚಿವ ಸಂಪುಟ ಸಭೆಯಲ್ಲಿ ಸಮೀಕ್ಷೆಯ ವಿಚಾರವಾಗಿ ಚರ್ಚೆ ನಡೆಯಿತು. ಜಾತಿ ಪಟ್ಟಿಯಲ್ಲಿ 331 ಹೊಸ ಜಾತಿಗಳನ್ನು ಸೇರಿಸಲಾಗಿದೆ. ಹಿಂದೂ ಜಾತಿಗಳ ಹೆಸರಿನ ಜತೆ ಕ್ರಿಶ್ಚಿಯನ್ ಎಂದು ಸೇರಿಸಲಾಗಿದೆ. ಇದರ ಅಗತ್ಯ ಏನಿತ್ತು ಎಂದು ಉಪಮುಖ್ಯ ಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಎಚ್. ಕೆ. ಪಾಟೀಲ, ಎಂ.ಬಿ.ಪಾಟೀಲ ಮತ್ತಿತರರು ಪ್ರಶ್ನಿಸಿದರು. ಜಾತಿ ಪಟ್ಟಿಗೆ ಹೊಸ ಹೆಸರುಗಳನ್ನು ಸೇರಿಸುವ ಬಗ್ಗೆ ಸಚಿವ ಸಂಪುಟದ ಗಮನಕ್ಕೆ ತಂದಿಲ್ಲ. ಇದು ಎದುರಾಳಿ ಪಕ್ಷಗಳಿಗೆ ಅಸ್ತ್ರವಾಗಿ ಪರಿಣಮಿಸಿದೆ ಎಂದು ಆತಂಕ ವ್ಯಕ್ತಪಡಿಸಿದರು ಎಂದು ಗೊತ್ತಾಗಿದೆ.

ಸಭೆಗೆ ವಿವರ ನೀಡಿದ ಅಧಿಕಾರಿಗಳು, ‘ಇದನ್ನು ನಾವಾಗಿ ಸೇರಿಸಿದ್ದಲ್ಲ. ಕಾಂತರಾಜ ಆಯೋಗ ನಡೆಸಿದ ಸಮೀಕ್ಷೆ ವೇಳೆ ಕೆಲವರು ತಮ್ಮ ಜಾತಿಯನ್ನು ಕುರುಬ ಕ್ರಿಶ್ಚಿಯನ್, ಒಕ್ಕಲಿಗ ಕ್ರಿಶ್ಚಿಯನ್, ಲಿಂಗಾಯತ ಕ್ರಿಶ್ಚಿಯನ್, ಬ್ರಾಹ್ಮಣ ಕ್ರಿಶ್ಚಿಯನ್ ಎಂದು ಹೇಳಿದ್ದರು. ಹೀಗಾಗಿ ಈ ಬಾರಿ ಅವುಗಳನ್ನು ಪಟ್ಟಿಯಲ್ಲಿ ಸೇರಿಸಲಾಗಿದೆ. ಇವರ ಸಂಖ್ಯೆ ಗರಿಷ್ಠ ಒಂದು ಲಕ್ಷ ಇರಬಹುದು. ಇನ್ನೂ ಕೆಲವು ಸಮುದಾಯದವರು ತಮ್ಮ ಜಾತಿಗಳನ್ನು ಸೇರಿಸುವಂತೆ ಆಯೋಗಕ್ಕೆ ಪ್ರತ್ಯೇಕವಾಗಿ ಮನವಿ ಮಾಡಿದ್ದರು. ಆದ್ದರಿಂದ ಆಯೋಗವು ಹೊಸ ಜಾತಿಗಳ ಹೆಸರುಗಳನ್ನು ಸೇರಿಸಿದೆ. ಈ ಬಗ್ಗೆ ಸಮೀಕ್ಷೆ ವೇಳೆ ಮಾಹಿತಿಯನ್ನು ಮಾತ್ರ ಕಲೆ ಹಾಕಲಾಗುತ್ತಿದೆ’ ಎಂದು ಹೇಳಿದರು.

‘ಜಾತಿ ಗಣತಿ ಹೆಸರಿನಲ್ಲಿ ಸಮಾಜವನ್ನು ಒಡೆಯುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಬಿಜೆಪಿ–ಜೆಡಿಎಸ್ ಅಪಪ್ರಚಾರ ಮಾಡುತ್ತಿವೆ.ಈ ಅಪಪ್ರಚಾರ ಸರ್ಕಾರ ಮತ್ತು ಪಕ್ಷದ ಮೇಲೆ ಪರಿಣಾಮ ಬೀರುತ್ತದೆ. ಗೊಂದಲವನ್ನು ಸರಿಪಡಿಸುವವರೆಗೆ ಸಮೀಕ್ಷೆ ಮುಂದೂಡುವುದು ಸೂಕ್ತ ಎಂದು ಕೆಲವು ಸಚಿವರು ಅಭಿಪ್ರಾಯ ವ್ಯಕ್ತಪಡಿಸಿದರು’ ಎಂದು ಮೂಲಗಳು ತಿಳಿಸಿವೆ.

‘ಹಿಂದೂ ಜಾತಿಗಳ ಜತೆ ಕ್ರಿಶ್ಚಿಯನ್ ಎಂದು ಸೇರಿಸಿರುವುದನ್ನು ಕೈಬಿಡಬೇಕು ಮತ್ತು ಎಲ್ಲ ಕ್ರೈಸ್ತರನ್ನು ಒಂದೇ ಪಟ್ಟಿಗೆ ಸೇರಿಸುವುದು ಸೂಕ್ತ’ ಎಂಬ ಅಭಿಪ್ರಾಯವೂ ಕೇಳಿ ಬಂದಿತು.

ಎಲ್ಲರ ಅಭಿಪ್ರಾಯ ಆಲಿಸಿದ ಸಿದ್ದರಾಮಯ್ಯ, ‘ನಾವು ಸಮೀಕ್ಷೆ ಮಾಡಲಿ, ಬಿಡಲಿ ಪರ– ವಿರೋಧ ಅಭಿಪ್ರಾಯಗಳು ಬರುತ್ತವೆ. ಗಣತಿ ಮಾಡಿದರೆ ನನ್ನನ್ನು ಅಹಿಂದ ಪರ ಮತ್ತು ಪ್ರಬಲ ಜಾತಿಗಳ ವಿರೋಧಿ ಎನ್ನುತ್ತಾರೆ. ಹೀಗಾದರೆ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿ ಅರಿಯಲು ಸಾಧ್ಯವಿಲ್ಲ’ ಎಂದು ಸಭೆಯಲ್ಲಿ ಹೇಳಿದರು ಎಂದು ಮೂಲಗಳು ತಿಳಿಸಿವೆ.

ಮುಡಾದಲ್ಲಿ ಭಾರಿ ಹಗರಣ: ಇ.ಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೈಸೂರಿನ ಮುಡಾ ನಿವೇಶನಗಳ ಹಂಚಿಕೆಯಲ್ಲಿ ವಿವಿಧ ಕಾನೂನುಗಳು ಮತ್ತು ಸರ್ಕಾರಿ ಆದೇಶಗಳನ್ನು ಉಲ್ಲಂಘಿಸಿ ದೊಡ್ಡ ಪ್ರಮಾಣದ ಹಗರಣ ನಡೆದಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ.) ಗುರುವಾರ ಹೇಳಿದೆ.

ಅಕ್ರಮವಾಗಿ ನಿವೇಶನಗಳನ್ನು ಹಂಚಿಕೆ ಮಾಡಿದ್ದ ಪ್ರಕರಣದಲ್ಲಿ ಮಾಜಿ ಆಯುಕ್ತ ಜಿ.ಟಿ. ದಿನೇಶ್ ಕುಮಾರ್ ಅವರನ್ನು ಇ.ಡಿ. ಸೆ.16ರಂದು ಬಂಧಿಸಿತ್ತು. ಅನರ್ಹ ವ್ಯಕ್ತಿಗಳಿಗೆ ಪರಿಹಾರ ನಿವೇಶನಗಳ ಹಂಚಿಕೆಯಲ್ಲಿ ದಿನೇಶ್ ಕುಮಾರ್ ಪ್ರಮುಖ ಪಾತ್ರ ವಹಿಸಿದ್ದರು ಎಂದು ಇ.ಡಿ. ಆರೋಪಿಸಿದೆ.

‘ದಿನೇಶ್ ಕುಮಾರ್ ಅವರು ನಿವೇಶನಗಳ ಅಕ್ರಮ ಹಂಚಿಕೆ ಮಾಡಲು ನಗದು, ಬ್ಯಾಂಕ್ ವರ್ಗಾವಣೆ, ಚರ/ಸ್ಥಿರ ಆಸ್ತಿಗಳ ರೂಪದಲ್ಲಿ ಲಂಚ ಪಡೆದಿರುವುದಕ್ಕೆ ಸಂಬಂಧಿಸಿದ ಪುರಾವೆಗಳನ್ನು ತನಿಖೆಯ ಸಮಯದಲ್ಲಿ ಸಂಗ್ರಹಿಸಲಾಗಿದೆ‘ ಎಂದು ನಿರ್ದೇಶನಾಲಯ ಹೇಳಿದೆ.

ನಿವೇಶನಗಳ ಅಕ್ರಮ ಹಂಚಿಕೆ ಮಾಡಲು ಅನರ್ಹ ಫಲಾನುಭವಿಗಳನ್ನು ಗುರುತಿಸಲಾಗಿತ್ತು. ನಕಲಿ ದಾಖಲೆಗಳನ್ನು ಅಥವಾ ಅಪೂರ್ಣ ದಾಖಲೆಗಳನ್ನು ಬಳಸಿಕೊಂಡು ಹಂಚಿಕೆ ಮಾಡಲಾಗಿತ್ತು. ಸರ್ಕಾರಿ ಆದೇಶಗಳನ್ನು ಉಲ್ಲಂಘಿಸಿ ಅನರ್ಹರಿಗೆ ನಿವೇಶನ ನೀಡಲಾಗಿತ್ತು. ಕೆಲವು ಸಂದರ್ಭಗಳಲ್ಲಿ ಹಳೆಯ ದಿನಾಂಕ ನಮೂದಿಸಿ ಹಂಚಿಕೆ ಪತ್ರ ಕೊಡಲಾಗಿತ್ತು ಎಂದು ದೂರಿದೆ.

ಇದುವರೆಗೆ ಅಕ್ರಮವಾಗಿ ಹಂಚಿಕೆ ಮಾಡಲಾದ 252 ಮುಡಾ ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಅವುಗಳ ಮಾರುಕಟ್ಟೆ ಮೌಲ್ಯ ಸುಮಾರು ₹400 ಕೋಟಿ ಎಂದು ನಿರ್ದೇಶನಾಲಯ ಮಾಹಿತಿ ನೀಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಅವರು ಕಳೆದುಕೊಂಡ ಜಮೀನಿಗೆ ಪರಿಹಾರಾತ್ಮಕವಾಗಿ 14 ನಿವೇಶನಗಳನ್ನು ಹಂಚಿಕೆ ಮಾಡಿದ್ದ ಪ್ರಕರಣದ ತನಿಖೆ ಆರಂಭಿಸಿದ್ದ ಇ.ಡಿ, ಅನೇಕ ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿರುವುದನ್ನು ಪತ್ತೆ ಮಾಡಿತ್ತು.

ಮತ್ತೆ ವಿವಾದದಲ್ಲಿ ಕೇಂದ್ರ ಸಚಿವ ಸುರೇಶ್ ಗೋಪಿ

ತ್ರಿಶ್ಶೂರ್(ಕೇರಳ)(ಪಿಟಿಐ): ತಮ್ಮ ಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ವೃದ್ಧೆಯೊಬ್ಬರೊಂದಿಗೆ ಮಾತನಾಡುವ ವೇಳೆ ಕೇಂದ್ರ ಸಚಿವ ಸುರೇಶ್ ಗೋಪಿ ಅವರು ಸೂಕ್ಷ್ಮವಲ್ಲದ ಭಾಷೆ ಬಳಸಿದ್ದಾರೆ ಎಂಬ ಆರೋಪ ಕೇಳಿಬಂದಿದ್ದು, ಈ ವಿಚಾರ ಈಗ ವಿವಾದಕ್ಕೀಡಾಗಿದೆ.

ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಈ ಘಟನೆ ನಡೆದಿದೆ. ಕರುವಣ್ಣೂರು ಸೇವಾ ಸಹಕಾರ ಬ್ಯಾಂಕ್‌ನಲ್ಲಿ ತಾವು ಠೇವಣಿ ಇರಿಸಿದ್ದ ಹಣವನ್ನು ವಾಪಸು ಪಡೆಯಲು ಸಹಾಯ ಮಾಡುವಂತೆ ಆನಂದವಲ್ಲಿ ಎಂಬ ವೃದ್ಧೆ, ಸಚಿವ ಸುರೇಶ್ ಗೋಪಿ ಅವರನ್ನು ಕೋರಿದ್ದರು.

ಸುರೇಶ್ ಗೋಪಿ

ಆನಂದವಲ್ಲಿ ಅವರ ಮಾತಿಗೆ ಒರಟಾಗಿ ಉತ್ತರಿಸಿದ ಸಚಿವ ಗೋಪಿ, ‘ಇ.ಡಿ ಈ ಪ್ರಕರಣದ ತನಿಖೆ ನಡೆಸುತ್ತಿದ್ದು, ಬ್ಯಾಂಕಿನ ಹಣವನ್ನು ಮುಟ್ಟುಗೋಲು ಹಾಕಿಕೊಂಡಿದೆ. ಮುಖ್ಯಮಂತ್ರಿ ಅವರನ್ನು ಸಂಪರ್ಕಿಸಿ, ಹಣ ವಾಪಸು ಪಡೆಯಿರಿ’ ಎಂದು ಹೇಳಿದ್ದಾರೆ. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

‘ನೀವೂ ಸಹ ನಮ್ಮ ಸಚಿವರು’ ಎಂದು ವೃದ್ಧೆ ಹೇಳಿದಾಗ, ‘ನಾನು ದೇಶಕ್ಕೆ ಮಂತ್ರಿ’ ಎಂದು ಗೋಪಿ ಉತ್ತರಿಸಿದ್ದಾರೆ.

ಪ್ರತಿಕ್ರಿಯೆ: ಸಚಿವ ಸುರೇಶ್ ಗೋಪಿ ಅವರ ಮಾತಿಗೆ ಗುರುವಾರ ಇಲ್ಲಿ ಪ್ರತಿಕ್ರಿಯಿಸಿರುವ ಆನಂದವಲ್ಲಿ, ‘ಸಚಿವ ಗೋಪಿ ಅವರಿಂದ ಇಂತಹ ಉತ್ತರ ನಾನು ನಿರೀಕ್ಷಿಸಿರಲಿಲ್ಲ’ ಎಂದು ಹೇಳಿದರು.

‘ಅವರ ಚಿತ್ರಗಳನ್ನು ನೋಡಿದ್ದೇನೆ. ಅವರಿಂದ ಸಕಾರಾತ್ಮಕ ಪ್ರತಿಕ್ರಿಯೆ ನಿರೀಕ್ಷೆ ಮಾಡಿದ್ದೆ. ನನ್ನ ಮನವಿಯನ್ನು ಪರಿಗಣಿಸುತ್ತೇನೆ ಎಂದಷ್ಟೆ ಅವರು ಹೇಳಿದ್ದರೆ ಸಾಕಿತ್ತು’ ಎಂದಿದ್ದಾರೆ.

ಕರುವಣ್ಣೂರು ಸಹಕಾರ ಬ್ಯಾಂಕಿನಲ್ಲಿ ಅವ್ಯವಹಾರ ನಡೆದಿದ್ದು, ಸಿಪಿಎಂ ನಾಯಕರು ಇದರಲ್ಲಿ ಶಾಮೀಲಾಗಿದ್ದಾರೆ ಎಂಬ ಆರೋಪಗಳು ಕೇಳಿಬಂದಿವೆ.

ಈ ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುವ ನೂರಾರು ಜನರು ತಮ್ಮ ಹಣ ವಾಪಸು ಪಡೆಯಲು ಸಾಧ್ಯವಾಗದೇ ಸಂಕಷ್ಟಕ್ಕೀಡಾಗಿದ್ದಾರೆ. ಈ ಅವ್ಯವಹಾರ ಪ್ರಕರಣ ಕುರಿತು ಜಾರಿ ನಿರ್ದೇಶನಾಲಯ (ಇ.ಡಿ) ತನಿಖೆ ನಡೆಸುತ್ತಿದೆ.

ಕರುವಣ್ಣೂರು ಸಹಕಾರ ಬ್ಯಾಂಕಿನ ಠೇವಣಿದಾರರಿಗೆ ಹಣ ವಾಪಸು ಕೊಡಿಸುವುದಾಗಿ ಸುರೇಶ್ ಗೋಪಿ ಅವರು ಚುನಾವಣಾ ಪ್ರಚಾರದ ವೇಳೆ ಭರವಸೆ ನೀಡಿದ್ದರು.

ಪಾಕ್ – ಸೌದಿ ಅರೇಬಿಯಾ ರಕ್ಷಣಾ ಒಪ್ಪಂದ

ಒಂದನೇ ಪುಟದಿಂದ...

ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಅಂಕಿ ಅಂಶದಂತೆ ಸೌದಿ ಅರೇಬಿಯಾವು ಭಾರತಕ್ಕೆ ಮೂರನೆಯ ಅತಿ ದೊಡ್ಡ ಪೆಟ್ರೋಲಿಯಂ ಪೂರೈಕೆದಾರ ದೇಶವಾಗಿದೆ. ಸೌದಿ ಅರೇಬಿಯಾದೊಂದಿಗೆ ಪಾಕಿಸ್ತಾನವು ದಶಕಗಳಿಂದ ನಿಕಟ ಸಂಬಂಧ ಹೊಂದಿದೆ. 25 ಲಕ್ಷಕ್ಕೂ ಹೆಚ್ಚು ಪಾಕಿಸ್ತಾನಿಯರು ಕೆಲಸದ ನಿಮಿತ್ತ ಸೌದಿ ಅರೇಬಿಯಾದಲ್ಲಿ ನೆಲಸಿದ್ದಾರೆ.

ರಾಜತಾಂತ್ರಿಕ ನೀತಿಯ ವೈಫಲ್ಯ: ಕಾಂಗ್ರೆಸ್

ಒಂದನೇ ಪುಟದಿಂದ...

‘ಆಪರೇಷನ್ ಸಿಂಧೂರ’ ಕಾರ್ಯಾಚರಣೆಯನ್ನು ದಿಢೀರ್ ನಿಲ್ಲಿಸಲಾಯಿತು. ಇದರ ಬೆನ್ನಲ್ಲೇ ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಅವರಿಗೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಶ್ವೇತಭವನದಲ್ಲಿ ಔತಣಕೂಟ ಆಯೋಜಿಸಿ, ಭಾರತ–ಪಾಕಿಸ್ತಾನ ಯುದ್ಧ ನಿಲ್ಲಿಸಿದ್ದು ತಾವೇ ಎಂದು ಹೇಳಿದರು. ‘ನಮ್ಮ ಪ್ರಧಾನಿ ಚೀನಾ ಪ್ರವಾಸ ಮುಗಿಸಿ ಬಂದ ಕೆಲವು ದಿನಗಳಲ್ಲೇ, ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫ್ ಅವರಿಗೆ ಚೀನಾದ ರಹಸ್ಯ ಸೇನಾ ಸಂಕೀರ್ಣವನ್ನು ತೆರೆದಿಟ್ಟರು. ಈಗ ಸೌದಿ ಅರೇಬಿಯಾವು ಪಾಕಿಸ್ತಾನದೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಇದೆಲ್ಲವೂ ಬಿಜೆಪಿಯ ರಾಜತಾಂತ್ರಿಕ ನೀತಿಯ ವೈಫಲ್ಯ’ ಎಂದು ಜೈರಾಮ್ ಹೇಳಿದ್ದಾರೆ.

ಕೆಲ ಭಾರತೀಯರ ವೀಸಾ ರದ್ದು

ನವದೆಹಲಿ (ಪಿಟಿಐ): ‘ಫೆಂಟಾನಿಲ್’ ಮಾದಕದ್ರವ್ಯ ಕಳ್ಳಸಾಗಣೆಯಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪದ ಮೇರೆಗೆ ಭಾರತದ ಕೆಲ ಉದ್ಯಮ ಕಾರ್ಯನಿರ್ವಾಹಕರು ಮತ್ತು ಕಾರ್ಪೊರೇಟ್ ಸಂಸ್ಥೆಗಳ ಪ್ರಮುಖರ ವೀಸಾಗಳನ್ನು ರದ್ದುಗೊಳಿಸಲಾಗಿದೆ ಮತ್ತು ಕೆಲವರಿಗೆ ವೀಸಾ ನಿರಾಕರಿಸಲಾಗಿದೆ ಎಂದು ಅಮೆರಿಕ ಗುರುವಾರ ತಿಳಿಸಿದೆ.

ಮಾದಕದ್ರವ್ಯ ಕಳ್ಳಸಾಗಣೆ ಆರೋಪದ ಮೇರೆಗೆ ವೀಸಾ ರದ್ದು ಮಾಡಿರುವ ಮತ್ತು ವೀಸಾ ನಿರಾಕರಿಸಿರುವ ವ್ಯಕ್ತಿಗಳ ಗುರುತನ್ನು ಅಮೆರಿಕದ ರಾಯಭಾರ ಕಚೇರಿ ಸಾರ್ವಜನಿಕವಾಗಿ ಪ್ರಕಟಿಸಿಲ್ಲ. ಅಮೆರಿಕದ ಈ ಕ್ರಮದ ಬಗ್ಗೆ ಕೇಂದ್ರ ಸರ್ಕಾರದಿಂದ ಸದ್ಯಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಅಮೆರಿಕ ವಲಸೆ ಮತ್ತು ರಾಷ್ಟ್ರೀಯತೆ ಕಾಯ್ದೆ ಪ್ರಕಾರ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಅದು ತಿಳಿಸಿದೆ. ಇದರ ಪರಿಣಾಮ, ವೀಸಾ ರದ್ದುಗೊಳಿಸಿರುವ ಅಥವಾ ನಿರಾಕರಿಸಿರುವ ವ್ಯಕ್ತಿಗಳು ಮತ್ತು ಅವರ ಕುಟುಂಬದ ಸದಸ್ಯರು ಅಮೆರಿಕಕ್ಕೆ ಪ್ರಯಾಣಿಸಲು ಅನರ್ಹರು ಎಂದು ಪ್ರಕಟಣೆ ವಿವರಿಸಿದೆ.

ಕಾನೂನು ತಿದ್ದುಪಡಿಗೆ ಸಾಲಗಾರರ ಒಕ್ಕೂಟ ಆಗ್ರಹ

ದುರ್ಬಳಕೆಯಿಂದ ಸಾಲಗಾರರಿಗೆ ಸಂಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಬ್ಯಾಂಕ್ ಸೇರಿದಂತೆ ವಿವಿಧ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದವರ ಸಂಖ್ಯೆಯು 75 ಕೋಟಿಯಷ್ಟು ಇದ್ದು, ಅತಿಯಾದ ಬಡ್ಡಿ ದರ ಹಾಗೂ ಕಾನೂನಿನ ದುರ್ಬಳಕೆಯ ಕಾರಣದಿಂದಾಗಿ ಸಾಲ ಪಡೆದವರು ತೀವ್ರ ಯಾತನೆ ಅನುಭವಿಸುತ್ತಿದ್ದಾರೆ ಎಂದು ಅಖಿಲ ಭಾರತ ಸಾಲಗಾರರ ಒಕ್ಕೂಟ ಹೇಳಿದೆ.

ಬೆಂಗಳೂರಿನಲ್ಲಿ ಗುರುವಾರ ಪತ್ರಿಕಾಗೋಷ್ಠಿ ನಡೆಸಿದ ಒಕ್ಕೂಟದ ಅಧ್ಯಕ್ಷ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯ ದಯಾನಂದ ಅವರು, ‘ಭಾರತ ಮತ್ತು ಚೀನಾದ ಜನಸಂಖ್ಯೆ ಸರಿಸುಮಾರು ಒಂದೇ ಆಗಿದ್ದರೂ ಚೀನಾದ ಜಿಡಿಪಿ ಗಾತ್ರವು ಭಾರತದ ಜಿಡಿಪಿ ಗಾತ್ರಕ್ಕೆ ಹೋಲಿಸಿದರೆ ಸರಿಸುಮಾರು ಐದು ಪಟ್ಟು ದೊಡ್ಡದಾಗಿದೆ. ಚೀನಾದಲ್ಲಿ ಉದ್ಯಮಿಗಳಿಗೆ ಶೇ 3.94ರ ಬಡ್ಡಿ ದರದಲ್ಲಿ ಸಾಲ ಸಿಗುತ್ತಿದೆ. ಭಾರತದಲ್ಲಿ ಗರಿಷ್ಠ ಶೇ 16ರವರೆಗೆ ಬಡ್ಡಿ ನೀಡಿ ಉದ್ಯಮಿಗಳು ಸಾಲ ಪಡೆಯಬೇಕಾಗಿದೆ. ದುಬಾರಿ ಬಡ್ಡಿ ದರವು ಭಾರತದ ಆರ್ಥಿಕ ಬೆಳವಣಿಗೆಗೆ ಅಡ್ಡಿಯಾಗಿದೆ’ ಎಂದರು.

ದೇಶದಲ್ಲಿ ರೆಪೊ ದರವು ಶೇ 5.5ರಷ್ಟು ಮಾತ್ರ ಇದ್ದರೂ ಬ್ಯಾಂಕ್‌ಗಳು ಅದಕ್ಕಿಂತ ಶೇ 10ರಷ್ಟು ಹೆಚ್ಚು ಬಡ್ಡಿ ವಸೂಲಿ ಮಾಡುತ್ತಿವೆ. ಈ ಪ್ರಮಾಣದ ಬಡ್ಡಿಯ ಹೊರೆಯನ್ನು ತಾಳಿಕೊಳ್ಳಲು ರೈತರಿಗೆ, ಉದ್ಯಮಿಗಳಿಗೆ ಸಾಧ್ಯವಾಗುತ್ತಿಲ್ಲ ಎಂದರು.

ಹಣಕಾಸು ಸಂಸ್ಥೆಗಳು ಸರ್ಫೇಸಿ ಕಾಯ್ದೆ, ದಿವಾಳಿ ಸಂಹಿತೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿವೆ. ಸಾಲ ವಸೂಲಾತಿಗೆ ಡಿಆರ್‌ಟಿ, ಎನ್‌ಸಿಎಲ್‌ಟಿ ನ್ಯಾಯಮಂಡಳಿಗಳಲ್ಲಿ ಒಂದಕ್ಕಿಂತ ಹೆಚ್ಚು ಪ್ರಕರಣಗಳನ್ನು ದಾಖಲಿಸಿ ಉದ್ಯಮಿಗಳ ಆಸ್ತಿ ಮೌಲ್ಯ ಕುಸಿಯುವಂತೆ ಮಾಡುತ್ತಿವೆ. ದಿವಾಳಿ ಸಂಹಿತೆಯು ಕಂಪನಿಗಳು ನೌಕರರಿಗೆ ನೀಡಬೇಕಿರುವ ವೇತನ, ಪಾವತಿಸಬೇಕಿರುವ ಪಿಎಫ್ ಮೊತ್ತಕ್ಕಿಂತ ಹೆಚ್ಚಿನ ಆದ್ಯತೆಯನ್ನು ಸಾಲ ಮರುಪಾವತಿಗೆ ನೀಡುತ್ತಿದೆ ಎಂದು ದೂರಿದರು.

ಸಾಲಗಾರರಿಗೆ ಸಾಲ ಮರುಪಾವತಿ ಮಾಡಲು ಯಾವುದೋ ಕಾರಣಕ್ಕೆ ಆಗದಿದ್ದಾಗ, ಅವರಿಗೆ ತುಸು ಕಾಲಾವಕಾಶ ನೀಡಬೇಕು. ಸಾಲಕ್ಕೆ ಅಡಮಾನವಾಗಿ ಇರಿಸಿದ ಆಸ್ತಿಯನ್ನು ತಾವೇ ಮಾರಾಟ ಮಾಡಿ, ಸಾಲದ ಮೊತ್ತ ಭರ್ತಿ ಮಾಡಲು ಅವಕಾಶ ಕಲ್ಪಿಸಬೇಕು, ಇದಕ್ಕೆ ಆರು ತಿಂಗಳ ಕಾಲಾವಕಾಶ ನೀಡಬೇಕು ಎಂದು ಒತ್ತಾಯಿಸಿದರು.

ಸಾಲದ ಕಂತನ್ನು ಕಟ್ಟಲು ಆಗದಿದ್ದಾಗ ನೆರವು ಯಾಚಿಸಿ ಕರೆ ಮಾಡಲು ಸಹಾಯವಾಣಿಯೊಂದನ್ನು ಆರಂಭಿಸುವ ಉದ್ದೇಶ ಒಕ್ಕೂಟಕ್ಕೆ ಇದೆ ಎಂದು ತಿಳಿಸಿದರು. ಸಾಲಗಾರರ ಸಮಸ್ಯೆ ಹಾಗೂ ಕಾನೂನಿನ ದುರ್ಬಳಕೆ ಬಗ್ಗೆ ಚರ್ಚಿಸಲು ಬೆಂಗಳೂರಿನ ಎಫ್‌ಕೆಸಿಸಿಐ ಕಚೇರಿಯಲ್ಲಿ ಸೆಪ್ಟೆಂಬರ್ 25ರಂದು ಸಭೆ ನಡೆಯಲಿದೆ ಎಂದರು.

ಒಕ್ಕೂಟದ ಸಲಹೆಗಳು

- ಬಡ್ಡಿ ದರವನ್ನು ಪ್ರತಿಸ್ಪರ್ಧಿ ದೇಶಗಳಿಗೆ ಸಮನಾದ ಮಟ್ಟಕ್ಕೆ ತರಬೇಕು
- ಐಬಿಸಿ ಕಾಯ್ದೆಗೆ ತಿದ್ದುಪಡಿ ತಂದು, ಸಾಲಗಾರರಿಗೆ ಆಗುತ್ತಿರುವ ಅನ್ಯಾಯ ತಡೆಯಬೇಕು
- ದಿವಾಳಿ ಪ್ರಕ್ರಿಯೆಯ ಸಂದರ್ಭದಲ್ಲಿ ಕಂಪನಿಗಳ ಆಸ್ತಿ ಮಾರಾಟದಿಂದ ಬರುವ ಹಣವನ್ನು ನೌಕರರ ವೇತನ ಪಾವತಿ, ಶಾಸನಬದ್ಧ ಪಾವತಿಗಳಿಗೆ ಬಳಸಿಕೊಳ್ಳಲು ಆದ್ಯತೆ ನೀಡಬೇಕು
- ದಿವಾಳಿ ಪ್ರಕ್ರಿಯೆಯ ಸಂದರ್ಭದಲ್ಲಿ ವೃತ್ತಿಪರರನ್ನು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯು ಸ್ವತಂತ್ರವಾಗಿ ನೇಮಕ ಮಾಡುವಂತೆ ಆಗಬೇಕು. ನೇಮಕದಲ್ಲಿ ಸಾಲದಾತ ಕಂಪನಿಗಳ ಪಾತ್ರ ಇರಬಾರದು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 9019427194

ಮನೆಯಿಂದಲೇ ಕೆಲಸ. ಕಂಪನಿಗಳಿಗೆ ಬೇಕಾಗಿದ್ದಾರೆ. ವಿದ್ಯಾರ್ಥಿಗಳಿಗೆ, ಪುರುಷರಿಗೆ, ಮಹಿಳೆಯರಿಗೆ (ವಿದ್ಯಾರ್ಹತೆಯಿಲ್ಲದವರಿಗೂ) 18,200 ರಿಂದ 35,000. ಕೊರಿಯರ್ ಸೌಲಭ್ಯವಿದೆ. 9916065497

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

03.10.2025 ಗುರುವಾಯುರು, ಕೊಚ್ಚಿನ್,ಅಲಪೇ, ತಿರುವನಂತಪುರ, ಕನ್ಯಾಕುಮಾರಿ, ರಾಮೇಶ್ವರಂ. 03.10.2025 ಬೈದ್ಯನಾಥ್, ಗಯಾ,ಕಾಶಿ, ಅಯೋಧ್ಯಾ, ಪ್ರಯಾಗ್‌ರಾಜ್. ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ). 9845035349, 9482435755.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

REST IN PEACE
REST IN PEACE



IN LOVING MEMORY
DODDANNA KEMPANNA
JUNE 10, 1942 - SEPTEMBER 19, 2024
President of Karnataka State Contractor's Association
Forever in our memories, we continue to celebrate your life with a promise to continue your legacy.
Forever loved.
Lived on by your Wife, Children, Siblings & Grandchildren

ನೀರಜ್‌ಗೆ ನಿರಾಸೆ; ಸಚಿನ್ ಅಚ್ಚರಿ

ವಿಶ್ವ ಅಥ್ಲೆಟಿಕ್ಸ್: ವಾಲ್ಕಾಟ್‌ಗೆ ಚಿನ್ನ, ಪಾಕಿಸ್ತಾನದ ಅರ್ಷದ್‌ಗೆ 10ನೇ ಸ್ಥಾನ

ಹತಾಶೆಯಲ್ಲಿ ಭಾರತದ ನೀರಜ್ ಚೋಪ್ರಾ ಎಪಿ/ಪಿಟಿಐ ಚಿತ್ರ

ಟೋಕಿಯೊ (ಪಿಟಿಐ): ಭಾರತದ ನೀರಜ್ ಚೋಪ್ರಾ ಅವರಿಗೆ ಸತತ ಎರಡನೇ ಬಾರಿ ವಿಶ್ವ ಚಾಂಪಿಯನ್ ಕಿರೀಟ ಧರಿಸುವ ಕನಸು ಗುರುವಾರ ಭಗ್ನವಾಯಿತು.

ಇಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್‌ನ ಪುರುಷರ ವಿಭಾಗದ ಜಾವೆಲಿನ್ ಥ್ರೋ ಫೈನಲ್‌ನಲ್ಲಿ 'ಚಾಂಪಿಯನ್' ನೀರಜ್ ಎಂಟನೇ ಸ್ಥಾನ ಪಡೆದರು. ಭಾರತದವರೇ ಆದ ಯುವ ಅಥ್ಲೀಟ್ ಸಚಿನ್ ಯಾದವ್ ನಾಲ್ಕನೇ ಸ್ಥಾನ ಪಡೆದು ಅಲ್ಪ ಅಂತರದಲ್ಲಿ ಕಂಚಿನ ಪದಕ ತಪ್ಪಿಸಿಕೊಂಡರು.

ಟ್ರಿನಿಡಾಡ್ ಮತ್ತು ಟೊಬ್ಯಾಗೋದ ಕೆಶ್ರಾನ್ ವಾಲ್ಕಾಟ್ (88.16ಮೀ) ಚಿನ್ನದ ಪದಕಕ್ಕೆ ಕೊರಳೊಡ್ಡಿದರು. ಗ್ರೆನೆಡಾದ ಆ್ಯಂಡರ್ಸನ್ ಪೀಟರ್ (87.38ಮೀ) ಮತ್ತು ಕರ್ಟೀಸ್ ಥಾಂಪ್ಸನ್ (86.67ಮೀ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ನೀರಜ್ ಅವರು 2021ರಲ್ಲಿ ಒಲಿಂಪಿಕ್ಸ್ ಚಿನ್ನ ಜಯಿಸಿ ಇತಿಹಾಸ ನಿರ್ಮಿಸಿದ್ದ ಕ್ರೀಡಾಂಗಣ ಇದು. ಆದರೆ ಅವರಿಗೆ ಇಲ್ಲಿ ತಮ್ಮ ವೈಯಕ್ತಿಕ ಶ್ರೇಷ್ಠ ಥ್ರೋ ದಾಖಲಿಸಲು ಕೂಡ ಆಗಲಿಲ್ಲ. ಅವರಿಂದ 84.03 ಮೀ ದೂರ ಥ್ರೋ ಮಾಡಲಷ್ಟೇ ಸಾಧ್ಯವಾಯಿತು.

ಸ್ಪರ್ಧಾ ಕಣದಲ್ಲಿದ್ದ 12 ಅಥ್ಲೀಟ್‌ಗಳಿಗೆ ತಲಾ ಐದು ಥ್ರೋ ಅವಕಾಶಗಳನ್ನು ನೀಡಲಾಗಿತ್ತು. ಅದರಲ್ಲಿ ಮೊದಲ ಆರು ಸ್ಥಾನ ಪಡೆದವರಿಗೆ ಆರನೇ ಥ್ರೋ ಅವಕಾಶ ನೀಡಲಾಯಿತು. ಅಚ್ಚರಿಯೆಂದರೆ ಈ ಸುತ್ತಿಗೆ ಭಾರತದ ಯುವ ಅಥ್ಲೀಟ್ ಸಚಿನ್ ಯಾದವ್ ಅರ್ಹತೆ ಪಡೆದರು. ಅವರು ಈ ಸ್ಪರ್ಧೆಯ ಪ್ರಥಮ ಥ್ರೋನಲ್ಲಿಯೇ 86.27 ಮೀಟರ್ಸ್ ದೂರ ಥ್ರೋ ಮಾಡಿ ನಾಲ್ಕನೇ ಸ್ಥಾನ ಪಡೆದರು. ಸಚಿನ್ ಅವರು ಚೋಪ್ರಾ, ಜರ್ಮನಿಯ ತಾರೆ ಜೂಲಿಯನ್ ವೆಬರ್ (86.11ಮೀ) ಮತ್ತು ಅರ್ಷದ್ (82.75 ಮೀ) ಅವರಿಗಿಂತ ಉತ್ತಮವಾಗಿ ಥ್ರೋಗಳನ್ನು ನಿರ್ವಹಿಸಿದರು. ಹೋದ ಬಾರಿ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಚೋಪ್ರಾ ಚಿನ್ನ ಮತ್ತು ನದೀಂ ಬೆಳ್ಳಿ ಜಯಿಸಿದ್ದರು.

ಎರಡು ಒಲಿಂಪಿಕ್ಸ್‌ಗಳಲ್ಲಿ ಪದಕ ಜಯಿಸಿರುವ ಚೋಪ್ರಾ ಅವರು ತಮ್ಮ ಮೊದಲ ಪ್ರಯತ್ನದಲ್ಲಿ 83.65ಮೀಟರ್ಸ್ ಥ್ರೋ ಮಾಡಿ, ಐದನೇ ಸ್ಥಾನ ಪಡೆದರು. ಎರಡನೇ ಅವಕಾಶದಲ್ಲಿ ಸುಧಾರಿತ ಪ್ರದರ್ಶನ ನೀಡಿದ ಅವರು 84.03 ಮೀ ಥ್ರೋ ಮಾಡಿದರು. ಆದರೆ ಮೂರನೇ ಅವಕಾಶದಲ್ಲಿ ಫೌಲ್ ಮಾಡಿದರು. ಇದರಿಂದಾಗಿ ಎಂಟನೇ ಸ್ಥಾನಕ್ಕೆ ಕುಸಿದರು. ನಂತರದ ಭಾಗದುದ್ದಕ್ಕೂ ಅವರು ಇದೇ ಸ್ಥಾನದಲ್ಲಿ ಮುಂದುವರಿದರು.

ಅವರ ನಾಲ್ಕನೇ ಥ್ರೋ 82.86ಮೀ ದೂರ ಎಸೆದರು. ಕೇನ್ಯಾದ ಜೂಲಿಯಸ್ ಯೆಗೊ ಅವರು 85.54 ಮೀ ದೂರ ಥ್ರೋ ಮಾಡಿದರು. ಐದನೇ ಅವಕಾಶದಲ್ಲಿ ನೀರಜ್ ಅವರು ಫೌಲ್ ಆಗುವುದರೊಂದಿಗೆ ನಿರಾಶೆಯಲ್ಲಿ ಮುಳುಗಿದರು. ತಮ್ಮ ಸೊಂಟದ ಬೆಲ್ಟ್ ತೆಗೆದರು. ಅದರಿಂದ ಮುಖ ಮುಚ್ಚಿಕೊಂಡರು.

ಸ್ಥಿರ ಪ್ರದರ್ಶನಕ್ಕೆ ಹೆಸರಾಗಿರುವ ಚೋಪ್ರಾ ಅವರು ಇಲ್ಲಿ 85 ಮೀ ಹಂತವನ್ನೂ ದಾಟಲಿಲ್ಲ. ಹೋದ ವರ್ಷದ ಮೇ ತಿಂಗಳಲ್ಲಿ ನಡೆದಿದ್ದ ಫೆಡರೇಷನ್ ಕಪ್ ಅಥ್ಲೆಟಿಕ್ಸ್‌ನಲ್ಲಿ ಅವರು ಚಿನ್ನ ಗೆದ್ದಿದ್ದರು. ಆ ಸ್ಪರ್ಧೆಯಲ್ಲಿ ಅವರು 82.27 ಮೀ ಥ್ರೋ ಮಾಡಿದ್ದು ಇಲ್ಲಿಯವರೆಗಿನ ಕನಿಷ್ಠ ದಾಖಲೆಯಾಗಿತ್ತು.

ಮೇ ತಿಂಗಳಲ್ಲಿ ದೋಹಾ ಡೈಮಂಡ್ ಲೀಗ್‌ನಲ್ಲಿ 90.23 ಮೀ ದೂರ ಸಾಧನೆಯನ್ನು ಚೋಪ್ರಾ ಮಾಡಿದ್ದರು.

ಮುಖ್ಯಾಂಶಗಳು

- ಹೋದ ವಿಶ್ವ ಅಥ್ಲೆಟಿಕ್ ಕೂಟದಲ್ಲಿ ಚಿನ್ನ ಜಯಿಸಿದ್ದ ನೀರಜ್
- ಇದೇ ಮೊದಲ ಬಾರಿ ವಿಶ್ವ ಅಥ್ಲೆಟಿಕ್ಸ್‌ಗೆ ಅರ್ಹತೆ ಗಳಿಸಿದ್ದ ಸಚಿನ್
- 2012ರ ಒಲಿಂಪಿಕ್ಸ್‌ನಲ್ಲಿ ಚಿನ್ನ ಜಯಿಸಿದ್ದ ಕೆಶ್ರಾನ್ ವಾಲ್ಕಾಟ್

ಟೋಕಿಯೊದಲ್ಲಿ ನಡೆಯುತ್ತಿರುವ ವಿಶ್ವ ಅಥ್ಲೆಟಿಕ್ಸ್ ಜಾವೆಲಿನ್ ಥ್ರೋ ಪುರುಷರ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿದ ಟ್ರಿನಿಡಾಡ್–ಟೊಬ್ಯಾಗೊದ ಕೆಶ್ರಾನ್ ವಾಲ್ಕಾಟ್ –ಎಎಫ್‌ಪಿ ಚಿತ್ರ

ಜಾವೆಲಿನ್ ಥ್ರೋ: ಅಥ್ಲೀಟ್‌ಗಳ ಸಾಧನೆ

ಸ್ಥಾನ	ಅಥ್ಲೀಟ್	ದೇಶ	ಥ್ರೋ (ಮೀ)
1	ಕೆಶ್ರಾನ್ ವಾಲ್ಕಾಟ್	ಟ್ರಿನಿಡಾಡ್–ಟೊಬ್ಯಾಗೊ	88.16
2	ಆ್ಯಂಡರ್ಸನ್ ಪೀಟರ್ಸ್	ಗ್ರೆನೆಡಾ	87.38
3	ಕರ್ಟಿಸ್ ಥಾಂಪ್ಸನ್	ಅಮೆರಿಕ	86.67
4	ಸಚಿನ್ ಯಾದವ್	ಭಾರತ	86.27
5	ಜೂಲಿಯನ್ ವೆಬರ್	ಜರ್ಮನಿ	86.11
6	ಜೂಲಿಯಸ್ ಯೆಗೊ	ಕೆನ್ಯಾ	85.54
7	ರುಮೇಶ್ ತರಂಗ ಪಥಿರಾಗೆ	ಶ್ರೀಲಂಕಾ	84.38
8	ನೀರಜ್ ಚೋಪ್ರಾ	ಭಾರತ	84.03

ಅಭ್ಯಾಸದ ವೇಳೆ ಆದ ಗಾಯ: ಚೋಪ್ರಾ

ವಿಶ್ವ ಚಾಂಪಿಯನ್‌ಷಿಪ್‌ಗೂ ಮುನ್ನವೇ ತಮಗೆ ಬೆನ್ನು ನೋವಿನ ಸಮಸ್ಯೆ ಇರುವುದರ ಕುರಿತು ನೀರಜ್ ಚೋಪ್ರಾ ಅವರು ಸ್ಪಷ್ಟಪಡಿಸಿದ್ದಾರೆ.

'ಈ ಸ್ಪರ್ಧೆಗೆ ಬರುವ ಮುನ್ನ ಝೆಕ್ ಗಣರಾಜ್ಯದಲ್ಲಿ ಅಭ್ಯಾಸ ಮಾಡುತ್ತಿದ್ದೆ. ಆ ಸಂದರ್ಭದಲ್ಲಿಯೇ ಬೆನ್ನುನೋವು ಕಾಡಿತ್ತು. ಅದಕ್ಕಾಗಿ ಕಳೆದ ಎರಡು ವಾರಗಳಿಂದ ನಾನು ತರಬೇತಿಯಲ್ಲಿ ಪಾಲ್ಗೊಂಡಿಲ್ಲ. ಕೇವಲ ಗಾಯದ ಆರೈಕೆಯಲ್ಲಿದ್ದೇನೆ. ನನ್ನ ತಂಡಕ್ಕೆ ಇದು ಗೊತ್ತಿದೆ. ಎಎಫ್‌ಐಗೂ ತಿಳಿಸಿದ್ದೇವೆ' ಎಂದು ನೀರಜ್ 'ಎನ್‌ಎನ್‌ಐಎಸ್'ಗೆ ತಿಳಿಸಿದೆ.

'ನನಗೆ ಇಲ್ಲಿ ಕಣಕ್ಕಿಳಿಯಲು ಸಾಧ್ಯವೋ ಇಲ್ಲವೋ ಎಂಬುದೇ ಗೊತ್ತಿರಲಿಲ್ಲ. ಬಹಳಷ್ಟು ಯೋಚನೆ, ಯೋಜನೆ ನಂತರ ಸ್ಪರ್ಧೆಗೆ ಇಳಿಯುವುದು ಎಂದು ನಿರ್ಧರಿಸಿದೆವು. ತರಬೇತಿಯಲ್ಲಿ ಹೆಚ್ಚು ಭಾಗವಹಿಸಲಿಲ್ಲ. ನನಗೇ ಪೂರ್ಣ ಸೌಖ್ಯವೆನಿಸುತ್ತಿರಲಿಲ್ಲ' ಎಂದರು.

'ಸೆಪ್ಟೆಂಬರ್ 4 ರಂದು ಬೆನ್ನುನೋವು ಆರಂಭವಾಯಿತು. ಅದಕ್ಕೆ ಕಾರಣವಾಗುವ ಘಟನೆಯೊಂದು ಆ ದಿನ ನಡೆಯಿತು. ಅವತ್ತು ನಾನು ಶಾಟ್‌ಪಟ್ ಥ್ರೋ ಮಾಡುತ್ತಿದ್ದೆ. ಲೋಹದ ಗುಂಡನ್ನು ಒಂದು ಬಾರಿ ಮುಂದೆ ಮತ್ತೊಂದು ಸಲ ಹಿಂದೆ ಎಸೆಯುವ ಅಭ್ಯಾಸವದು. ನಾನು ಮುಂದೆ ಎಸೆಯಲು ಬಾಗಿದಾಗ ಬೆನ್ನಿನ ಎಡಬದಿಯಲ್ಲಿ ಇದ್ದಕ್ಕಿದ್ದಂತೆ ಸೆಳೆತ ಉಂಟಾಯಿತು. ಅದರಿಂದಾಗಿ ಓಡಾಡಲು ಆಗಲಿಲ್ಲ' ಎಂದು ವಿವರಿಸಿದರು.

'ಎಂಆರ್‌ಐ ಸ್ಕ್ಯಾನಿಂಗ್ ನಂತರ ಡಿಸ್ಕ್‌ನಲ್ಲಿ ಸಮಸ್ಯೆ ಕಂಡುಬಂದಿತು. ಇಲ್ಲಿಗೆ (ಟೋಕಿಯೊ) ಸೆ. 6ರಂದು ಬಂದೆವು. ಪ್ರತಿದಿನವೂ ಯಂತ್ರದ ಸಹಾಯದಿಂದ ಚಿಕಿತ್ಸೆ ನಡೆಯುತ್ತಿದೆ. ಥ್ರೋ ಮಾಡುವ ಪ್ರಯತ್ನಗಳ ಪರೀಕ್ಷೆ ಮಾಡಿದ ನಂತರವಷ್ಟೇ ಸ್ಪರ್ಧೆಯಲ್ಲಿ ಭಾಗವಹಿಸಲು ನಿರ್ಧರಿಸಲಾಯಿತು' ಎಂದು ನೀರಜ್ ಹೇಳಿದರು.

2 ವಾರಗಳಿಂದ ನೀರಜ್‌ಗೆ ಬೆನ್ನುನೋವು

ನವದೆಹಲಿ (ಪಿಟಿಐ): ಭಾರತದ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಅವರಿಗೆ ಕಳೆದೆರಡು ವಾರಗಳಿಂದ ಬೆನ್ನುನೋವು ಕಾಡುತ್ತಿದೆ. ಅದೇ ಕಾರಣದಿಂದ ಅವರಿಗೆ ಗುರುವಾರ ಟೋಕಿಯೊದಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಹಿನ್ನಡೆಯಾಗಿರುವ ಸಾಧ್ಯತೆ ಇದೆ ಎಂದು ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಮೂಲಗಳು ತಿಳಿಸಿವೆ.

'ಚೋಪ್ರಾ ಅವರಿಗೆ ಕಳೆದ ಒಂದೆರಡು ವಾರಗಳಿಂದ ಬೆನ್ನುನೋವಿನ ಸಮಸ್ಯೆ ಇದೆ. ಅವರು ನಮಗೆ ಈ ಕುರಿತು ಮೊದಲೇ ತಿಳಿಸಿದ್ದಾರೆ. ಬೆನ್ನು ನೋವಿನಿಂದಾಗಿ ಅವರ ಕಾರ್ಯಕ್ಷಮತೆ ಕುಂಠಿತವಾಗಿರುವ ಸಾಧ್ಯತೆ ಇದೆ. ಕ್ರೀಡೆಯಲ್ಲಿ ಸೋಲು ಮತ್ತು ಗೆಲುವು ಸಹಜ ಪ್ರಕ್ರಿಯೆ. ಜಾವೆಲಿನ್ ಥ್ರೋ ಅಂತಹ ಸ್ಪರ್ಧೆಯಲ್ಲಿ ಎಲ್ಲ ದಿನವೂ ಒಂದೇ ಆಗಿರುವುದಿಲ್ಲ. ಸ್ಪರ್ಧೆಯ ದಿನದ ಪ್ರದರ್ಶನ ಹೇಗಿರುತ್ತದೆ ಎಂದು ಮೊದಲೇ ಊಹಿಸಲಾಗದು. ಚೆನ್ನಾಗಿಯೂ ಆಗಬಹುದು ಅಥವಾ ಕಳಪೆಯೂ ಆಗಬಹುದು. ಇದು ಯಾರಿಗಾದರೂ ಆಗಬಹುದು' ಎಂದು ಹೇಳಿದೆ.

'ಚೋಪ್ರಾ ಅವರು ಫೆಡರೇಷನ್‌ಗೆ ಬೆನ್ನುನೋವಿನ ಸಮಸ್ಯೆ ಕುರಿತು ಈ ಮೊದಲೇ ತಿಳಿಸಿದ್ದರು. ವಿಶ್ವ ಅಥ್ಲೆಟಿಕ್ಸ್‌ಗೂ ಮುನ್ನ ಚೆಕ್ ಗಣರಾಜ್ಯದಲ್ಲಿ ಅವರು ತಾಲೀಮು ನಡೆಸುವಾಗ ಬೆನ್ನುನೋವು ಕಾಡಿತ್ತು. ಸದ್ಯದ ಕೋಚ್ ಯಾನ್ ಝೆಲೆಂಜಿ ಅವರ ಮಾರ್ಗದರ್ಶನದಲ್ಲಿ ಅವರು ಅಭ್ಯಾಸ ಮಾಡಿದ್ದರು' ಎಂದು ತಿಳಿಸಿದೆ.

'ಸಚಿನ್ ಯಾದವ್ ಅವರ ಸಾಧನೆಯು ಭಾರತದಲ್ಲಿ ಜಾವೆಲಿನ್ ಥ್ರೋ ವಿಭಾಗದ ಶಕ್ತಿಯನ್ನು ತೋರಿಸಿದೆ' ಎಂದೂ ಹೇಳಿದೆ.

ಇಂದು ಸೂರ್ಯ ಬಳಗಕ್ಕೆ ಒಮಾನ್ ಎದುರಾಳಿ

ನಾಲ್ಕರ ಘಟ್ಟಕ್ಕೂ ಮುನ್ನ ಭಾರತಕ್ಕೆ 'ಅಭ್ಯಾಸ'

ದುಬೈ (ಪಿಟಿಐ): ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ತಂಡವು ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ಹಂತ ಪ್ರವೇಶಿಸಿ ಆಗಿದೆ. ಅದಕ್ಕೂ ಮುನ್ನ ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಒಮಾನ್ ತಂಡವನ್ನು ಶುಕ್ರವಾರ ಎದುರಿಸಲಿದೆ.

ಏಷ್ಯಾ ಕಪ್ 2025

ಅಬುಧಾಬಿಯಲ್ಲಿ ನಡೆಯಲಿರುವ ಈ ಪಂದ್ಯವು ಭಾರತಕ್ಕೆ ಅಭ್ಯಾಸ ಪಂದ್ಯವಾಗುವ ಸಾಧ್ಯತೆ ಇದೆ. ಭಾನುವಾರ ನಡೆಯುವ ನಾಲ್ಕರ ಘಟ್ಟದ ಪಂದ್ಯದಲ್ಲಿ ಭಾರತ ತಂಡವು ತನ್ನ ಬದ್ಧ ಎದುರಾಳಿ ಪಾಕಿಸ್ತಾನವನ್ನು ಎದುರಿಸಲಿದೆ. ಎ ಗುಂಪಿನ ಪಂದ್ಯದಲ್ಲಿ ಸೂರ್ಯ ಬಳಗವು ಪಾಕ್ ವಿರುದ್ಧ ಜಯಿಸಿತ್ತು.

ಕಳೆದೆರಡೂ ಪಂದ್ಯಗಳಲ್ಲಿ ಭಾರತದ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಅವರು ಅಬ್ಬರದ ಆರಂಭ ನೀಡಿದ್ದರು. ಶುಭಮನ್ ಗಿಲ್ ಅವರು ಸ್ವಲ್ಪ ಹೆಚ್ಚು ಹೊತ್ತು ಕ್ರೀಸ್‌ನಲ್ಲಿರಲು ಪ್ರಯತ್ನಿಸಬೇಕು. ಪಾಕ್ ಎದುರಿನ ಪಂದ್ಯದಲ್ಲಿ ನಾಯಕ ಸೂರ್ಯ ಮಿಂಚಿದ್ದರು. ಆದರೆ ತಿಲಕ್ ವರ್ಮಾ ಅವರು ಲಯಕ್ಕೆ ಮರಳುವ ಅಗತ್ಯವಿದೆ.

ಮಧ್ಯಮ ಕ್ರಮಾಂಕದಲ್ಲಿ ಹಾರ್ದಿಕ್ ಪಾಂಡ್ಯ, ಸಂಜು ಸ್ಯಾಮ್ಸನ್, ಶಿವಂ ದುಬೆ ಮತ್ತು ಅಕ್ಷರ್ ಪಟೇಲ್ ಅವರು ಕೂಡ ತಮಗೆ ಬ್ಯಾಟಿಂಗ್ ಮಾಡುವ ಅವಕಾಶ ದೊರೆತರೆ ಒಂದಿಷ್ಟು ರನ್‌ಗಳನ್ನು ಪೇರಿಸಲು ಪ್ರಯತ್ನಿಸಬಹುದು. ಏಕೆಂದರೆ; ಮುಂಬರುವ ಏಳು ದಿನಗಳಲ್ಲಿ ಮೂರು ಪಂದ್ಯಗಳಲ್ಲಿ ಭಾರತ ಆಡಲಿದೆ. ಅರ್ಹತೆ ಗಿಟ್ಟಿಸಿದರೆ ಫೈನಲ್ ಕೂಡ ಆಡಬಹುದು.

ಜತೀಂದರ್ ಸಿಂಗ್ ನಾಯಕತ್ವದ ಒಮನ್ ತಂಡವು ಮೊದಲು ಬ್ಯಾಟಿಂಗ್ ಮಾಡಿದರೆ, ಭಾರತದ ಬಲಾಢ್ಯ ಬೌಲಿಂಗ್ ಪಡೆಯನ್ನು ಎದುರಿಸುವುದು ಕಷ್ಟ. ಒಮನ್ ತಂಡವು ಆಡಿರುವ ಕಳೆದ ಎರಡೂ ಪಂದ್ಯಗಳಲ್ಲಿ ಕ್ರಮವಾಗಿ 67 ಹಾಗೂ 130 ರನ್ ಗಳಿಸಿತ್ತು. ಭಾರತದ ಸ್ಪಿನ್ ಜೋಡಿ ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಮತ್ತು ವರುಣ್ ಚಕ್ರವರ್ತಿ ಅವರು ಇದುವರೆಗೂ ಬಹಳ ಪರಿಣಾಮಕಾರಿಯಾಗಿ ಬೌಲಿಂಗ್ ಮಾಡಿದ್ದಾರೆ. ಜೊತೆಯಾಟಗಳಿಗೆ ಕಡಿವಾಣ ಹಾಕಿದ್ದಾರೆ.

ಒಮಾನ್ ತಂಡದ ಯಾವ ಬ್ಯಾಟರ್ ಕೂಡ ಟೂರ್ನಿಯಲ್ಲಿ 30 ರನ್‌ಗಿಂತ ಹೆಚ್ಚಿನ ವೈಯಕ್ತಿಕ ಸ್ಕೋರ್ ದಾಖಲಿಸಿಲ್ಲ. ಪಾಕ್ ವಿರುದ್ಧದ ಪಂದ್ಯದಲ್ಲಿ ಹಮ್ಮದ್ ಮಿರ್ಜಾ 27 ರನ್ ಮತ್ತು ಆರ್ಯನ್ ಬಿಷ್ಟ್ ಅವರು ಯುಎಇ ವಿರುದ್ಧ 24 ರನ್ ಗಳಿಸಿದ್ದರು.

ಭಾರತ ತಂಡದ ಮುಖ್ಯ ಕೋಚ್ ಈ ಪಂದ್ಯದಲ್ಲಿ ತಂಡ ಸಂಯೋಜನೆಯಲ್ಲಿ ಪ್ರಯೋಗ ಮಾಡುವ ಸಾಧ್ಯತೆ ಕಡಿಮೆ. ಆದರೆ ವೇಗಿ ಜಸ್‌ಪ್ರೀತ್ ಬೂಮ್ರಾ ಅವರಿಗೆ ಮಾತ್ರ ವಿಶ್ರಾಂತಿ ನೀಡುವ ಸಾಧ್ಯತೆಯೂ ಇದೆ. ಆದ್ದರಿಂದ ಹರ್ಷಿತ್ ರಾಣಾಗೆ ಆಡುವ ಅವಕಾಶ ಸಿಗಬಹುದು.

ಪಂದ್ಯ ಆರಂಭ: ರಾತ್ರಿ 8
ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ಭಾರತ ತಂಡದ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ

ಮಿಂಚಿದ ತುಷಾರ, ಮೆಂಡಿಸ್: ಅಫ್ಗಾನಿಸ್ತಾನಕ್ಕೆ ಸೋಲು

ಲಂಕಾ ಪಡೆಗೆ ಹ್ಯಾಟ್ರಿಕ್ ಗೆಲುವು

ಅಬುಧಾಬಿ (ಪಿಟಿಐ): ವೇಗಿ ನುವಾನ್ ತುಷಾರ (18ಕ್ಕೆ 4) ಅವರ ಪರಿಣಾಮಕಾರಿ ಬೌಲಿಂಗ್ ಬಳಿಕ ಕುಶಾಲ್ ಮೆಂಡಿಸ್ (ಔಟಾಗದೇ 74;52ಎ, 4x10) ಅವರ ಅರ್ಧಶತಕದ ಬಲದಿಂದ ಶ್ರೀಲಂಕಾ ತಂಡವು ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಹ್ಯಾಟ್ರಿಕ್ ಜಯ ಸಾಧಿಸಿತು.

ಗುರುವಾರ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಲಂಕಾ ಪಡೆ ಆರು ವಿಕೆಟ್‌ಗಳಿಂದ ಅಫ್ಗಾನಿಸ್ತಾನ ತಂಡವನ್ನು ಮಣಿಸಿತು. ಗುಂಪಿನಲ್ಲಿ ಕ್ರಮವಾಗಿ ಮೊದಲೆರಡು ಸ್ಥಾನ ಪಡೆದ ಶ್ರೀಲಂಕಾ ಮತ್ತು ಬಾಂಗ್ಲಾದೇಶ ತಂಡಗಳು ಸೂಪರ್ ಫೋರ್ ಹಂತಕ್ಕೆ ಮುನ್ನಡೆದವು. ಮೂರನೇ ಸ್ಥಾನ ಪಡೆದ ಅಫ್ಗನ್ ತಂಡವು ಟೂರ್ನಿಯಿಂದ ಹೊರಬಿತ್ತು.

ಅಫ್ಗನ್ ತಂಡವು ನೀಡಿದ್ದ 170 ರನ್‌ಗಳ ಸವಾಲಿನ ಮೊತ್ತವನ್ನು ಬೆನ್ನತ್ತಿದ ಲಂಕಾ ತಂಡಕ್ಕೆ ಆರಂಭಿಕ ಆಟಗಾರ ಮೆಂಡಿಸ್ ಆಸರೆಯಾದರು. ಒಂದೆಡೆ ನಿಯಮಿತವಾಗಿ ವಿಕೆಟ್ ಉರುಳುತ್ತಿದ್ದರೂ ಅವರು ಮಾತ್ರ ಏಕಾಂಗಿಯಾಗಿ ಹೋರಾಟ ನಡೆಸಿದರು. ಎಂಟು ಎಸೆತಗಳು ಬಾಕಿ ಇರುವಂತೆ ಲಂಕಾ ತಂಡ 4 ವಿಕೆಟ್‌ಗೆ 171 ರನ್ ಗಳಿಸಿ ಸಂಭ್ರಮಿಸಿತು.

ಟಾಸ್ ಗೆದ್ದು ಬ್ಯಾಟಿಂಗ್‌ಗೆ ಇಳಿದ ಅಫ್ಗನ್ ತಂಡವು ಮೊಹಮ್ಮದ್ ನಬಿ (60, 22ಎ, 4x3, 6x6) ಅವರ ಬೀಸಾಟದ ನೆರವಿನಿಂದ 8 ವಿಕೆಟ್‌ಗೆ 169 ರನ್ ಗಳಿಸಿತು. ಒಂದು ಹಂತದಲ್ಲಿ ರಶೀದ್ ಖಾನ್ ಬಳಗ 18 ಓವರುಗಳ ನಂತರ 7 ವಿಕೆಟ್‌ಗೆ 120 ರನ್ ಗಳಿಸಿತ್ತು. ಆದರೆ ಅಫ್ಗನ್ ಪಡೆ ಕೊನೆಯ ಎರಡು ಓವರುಗಳಲ್ಲಿ 49 ರನ್ ಸೂರೆಮಾಡಿತು. ಇದರಲ್ಲಿ ನಬಿ ಪಾಲು 45 ರನ್!.

ಚಮೀರ (50ಕ್ಕೆ1) ಮಾಡಿದ 19ನೇ ಓವರಿನಲ್ಲಿ ಸತತ ಮೂರು ಬೌಂಡರಿ ಬಾರಿಸಿದ ನಬಿ, ವೆಲ್ಲಾಳಗೆ (49ಕ್ಕೆ1) ಮಾಡಿದ ಅಂತಿಮ ಓವರಿನಲ್ಲಿ ಐದು ಸಿಕ್ಸರ್ ಸಿಡಿಸಿ ತಂಡದ ಮೊತ್ತವನ್ನು 170ರ ಸಮೀಪ ತಲುಪಿಸಿದರು.

ಸಂಕ್ಷಿಪ್ತ ಸ್ಕೋರು: ಅಫ್ಗಾನಿಸ್ತಾನ: 20 ಓವರುಗಳಲ್ಲಿ 8ಕ್ಕೆ 169 (ಇಬ್ರಾಹಿಂ ಜದ್ರಾನ್ 24, ಮೊಹಮ್ಮದ್ ನಬಿ 60, ರಷೀದ್ ಖಾನ್ 24; ನುವಾನ್ ತುಷಾರ 18ಕ್ಕೆ4) ಶ್ರೀಲಂಕಾ: 18.4 ಓವರ್‌ಗಳಲ್ಲಿ 4 ವಿಕೆಟ್‌ಗೆ 171 (ಕುಶಾಲ್ ಮೆಂಡಿಸ್ ಔಟಾಗದೇ 74, ಕುಶಾಲ್ ಪೆರೇರಾ 28; ಅಜ್ಮತ್‌ವುಲ್ಲಾ ಒಮರ್‌ಜೈ 10ಕ್ಕೆ 1). ಫಲಿತಾಂಶ: ಶ್ರೀಲಂಕಾಕ್ಕೆ 6 ವಿಕೆಟ್‌ಗಳ ಜಯ. ಪಂದ್ಯದ ಆಟಗಾರ: ಕುಶಾಲ್ ಮೆಂಡಿಸ್

ಅಜೇಯ ಅರ್ಧಶತಕ ದಾಖಲಿಸಿದ ಕುಶಾಲ್ ಮೆಂಡಿಸ್ ಎಪಿ ಚಿತ್ರ

ಹೈಡ್ರಾಮಾ: ಪಾಕ್ ವಿರುದ್ಧ ಕ್ರಮಕ್ಕೆ ಚಿಂತನೆ

ದುಬೈ (ಪಿಟಿಐ): ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಯುಎಇ ವಿರುದ್ಧದ ಪಂದ್ಯಕ್ಕೂ ಮುನ್ನ ಶಿಷ್ಟಾಚಾರ ಉಲ್ಲಂಘಿಸಿ 'ಹೈಡ್ರಾಮಾ' ನಡೆಸಿದ ಪಾಕಿಸ್ತಾನದ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಚಿಂತನೆ ನಡೆಸುತ್ತಿದೆ.

ಭಾರತ ಮತ್ತು ಪಾಕಿಸ್ತಾನ ಪಂದ್ಯದಲ್ಲಿ ನಡೆದಿದ್ದ 'ಹಸ್ತಲಾಘವ ನಿರಾಕರಣೆ' ವಿವಾದದ ಹಿನ್ನೆಲೆಯಲ್ಲಿ ಮ್ಯಾಚ್ ರೆಫರಿ ಆ್ಯಂಡಿ ಪೈಕ್ರಾಫ್ಟ್ ಅವರನ್ನು ವಜಾಗೊಳಿಸಬೇಕು ಎಂದು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಐಸಿಸಿಗೆ ಮನವಿ ಮಾಡಿತ್ತು. ಆದರೆ ಆ ಮನವಿಯನ್ನು ಐಸಿಸಿ ತಳ್ಳಿ ಹಾಕಿತ್ತು. ಅದನ್ನು ವಿರೋಧಿಸಿ ತಂಡವನ್ನು ತಡವಾಗಿ ಕ್ರೀಡಾಂಗಣಕ್ಕೆ ಕಳುಹಿಸಿತ್ತು.

ಪಂದ್ಯಕ್ಕೂ ಮುನ್ನ ಐಸಿಸಿಯು ಪಿಸಿಬಿಗೆ ಇ–ಮೇಲ್ ಕಳುಹಿಸಿದೆ. ಅದರಲ್ಲಿ ಬಹು ತಂಡಗಳ ಟೂರ್ನಿಯಲ್ಲಿ ಪಾಕ್ ತಂಡದ ದುರ್ನಡತೆ ಮತ್ತು ಬಹು ಶಿಷ್ಟಾಚಾರ ಉಲ್ಲಂಘಿಸಿರುವ ಬಗ್ಗೆ ಉಲ್ಲೇಖಿಸಲಾಗಿದೆ.

ವಿಶ್ವ ಕುಸ್ತಿ: ಅಂತಿಮ್‌ಗೆ ಕಂಚು

ಝಾಗ್ರೆಬ್ (ಕ್ರೊವೇಷ್ಯಾ), (ಪಿಟಿಐ): ಯುವ ಕುಸ್ತಿಪಟು ಅಂತಿಮ್ ಪಂಘಲ್ ಅವರು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಪದಕ ತಮ್ಮದಾಗಿಸಿಕೊಂಡರು. ಈ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ದೊರೆತ ಮೊದಲ ಪದಕ ಇದಾಗಿದೆ.

2023ರ ಆವೃತ್ತಿಯಲ್ಲಿ ಕಂಚಿನ ಪದಕ ಗೆದ್ದಿದ್ದ 21 ವರ್ಷದ ಅಂತಿಮ್, ಗುರುವಾರ ನಡೆದ ಮಹಿಳೆಯರ 53 ಕೆ.ಜಿ. ವಿಭಾಗದ ಕಂಚಿನ ಪದಕದ ಸ್ಪರ್ಧೆಯಲ್ಲಿ 9–1 ಅಂತರದಿಂದ ಸ್ವೀಡನ್‌ನ ಎಮ್ಮಾ ಜೊನ್ನಾ ಡೆನಿಸ್ ಮಾಲ್ಮ್‌ಗ್ರೆನ್ ಅವರನ್ನು ಸುಲಭವಾಗಿ ಮಣಿಸಿದರು. ಎಮ್ಮಾ ಅವರು 23 ವರ್ಷದೊಳಗಿನ ವಿಭಾಗದಲ್ಲಿ ವಿಶ್ವ ಚಾಂಪಿಯನ್ ಆಗಿದ್ದಾರೆ.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎರಡು ಪದಕ ಗೆದ್ದ ಭಾರತದ ಎರಡನೇ ಮಹಿಳಾ ಕುಸ್ತಿಪಟು ಎಂಬ ಹಿರಿಮೆಗೆ ಅಂತಿಮ್ ಪಾತ್ರವಾದರು. ವಿನೇಶ್ ಫೋಗಟ್ ಎರಡು ಪದಕ ಗೆದ್ದ ಮೊದಲ ಕುಸ್ತಿಪಟುವಾಗಿದ್ದಾರೆ.

ಪುರುಷರಿಗೆ ನಿರಾಸೆ: ಭಾರತದ ಗ್ರೀಕೊ ರೋಮನ್ ಕುಸ್ತಿಪಟುಗಳು ಮತ್ತೆ ವೈಫಲ್ಯ ಅನುಭವಿಸಿದರು. 55 ಕೆ.ಜಿ ವಿಭಾಗದಲ್ಲಿ ಅನಿಲ್ ಮೋರ್ ಕೇವಲ 13 ಸೆಕೆಂಡ್‌ಗಳಲ್ಲಿ ಸೋಲೊಪ್ಪಿಕೊಂಡರು. ವಿಶ್ವದ ಅಗ್ರಮಾನ್ಯ ಕುಸ್ತಿಪಟು ಎಲ್ಡಾನಿಜ್ ಅಜಿಜ್ಲಿ (ಅಜರ್‌ಬೈಜಾನ್) ಅವರಿಗೆ ಅನಿಲ್ ಸುಲಭವಾಗಿ ಶರಣಾದರು.

77 ಕೆ.ಜಿ ವಿಭಾಗದಲ್ಲಿ ಅಮನ್ ತಾಂತ್ರಿಕ ಶ್ರೇಷ್ಠತೆಯ ಆಧಾರದಲ್ಲಿ ಜಪಾನ್‌ನ ನವೋ ಕುಸಾಕಾ ವಿರುದ್ಧ ಸೋತರು. 82 ಕೆ.ಜಿ ವಿಭಾಗದಲ್ಲಿ ರಾಹುಲ್ 1–7ರಿಂದ ಕಜಾಕಿಸ್ತಾನದ ಅಲ್ಮಿರ್ ಟೊಲೆಬಾಯೆವ್ ವಿರುದ್ಧ ಪರಾಭವಗೊಂಡರು. 130 ಕೆ.ಜಿ ವಿಭಾಗದಲ್ಲಿ ಸೋನು 0-8ರಿಂದ ಕ್ರೊವೇಷ್ಯಾದ ಮಾರ್ಕೊ ಕೊಸ್ವೆವಿಕ್ ವಿರುದ್ಧ ಸೋಲುಂಡರು.

ಡ್ರಾ ಹಾದಿಯಲ್ಲಿ ಆಸ್ಟ್ರೇಲಿಯಾ ಎ ವಿರುದ್ಧದ 'ಟೆಸ್ಟ್'

ಜುರೇಲ್–ಪಡಿಕ್ಕಲ್ ಜುಗಲ್‌ಬಂದಿ

ಲಖನೌ (ಪಿಟಿಐ): ವಿಕೆಟ್ ಕೀಪರ್ ಧ್ರುವ್ ಜುರೇಲ್ ಅವರ ಅಜೇಯ ಶತಕ (112*) ಮತ್ತು ದೇವದತ್ತ ಪಡಿಕ್ಕಲ್ ಅವರ ಅಜೇಯ 86 ರನ್‌ಗಳ ನೆರವಿನಿಂದ ಭಾರತ 'ಎ' ತಂಡ, ಆಸ್ಟ್ರೇಲಿಯಾ ಎ ವಿರುದ್ಧದ ನಾಲ್ಕು ದಿನಗಳ ಕ್ರಿಕೆಟ್ 'ಟೆಸ್ಟ್' ಪಂದ್ಯದ ಮೂರನೇ ದಿನವಾದ ಗುರುವಾರ 4 ವಿಕೆಟ್‌ಗೆ 403 ರನ್ ಗಳಿಸಿತು.

ಆಸ್ಟ್ರೇಲಿಯಾ ಎ ತಂಡ ಮೊದಲ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗೆ 532 ರನ್ ಗಳಿಸಿ ಇನಿಂಗ್ಸ್ ಡಿಕ್ಲೇರ್ಡ್ ಮಾಡಿಕೊಂಡಿತ್ತು. ಇನ್ನು ಒಂದು ದಿನದ ಆಟ ಉಳಿದಿದ್ದು ಪಂದ್ಯ ಡ್ರಾ ಹಾದಿಯಲ್ಲಿದೆ.

1 ವಿಕೆಟ್‌ಗೆ 116 ರನ್‌ಗಳೊಡನೆ ದಿನದಾಟ ಮುಂದುವರಿಸಿದ ಆತಿಥೇಯ ತಂಡ ನಿನ್ನೆಯ ಅಜೇಯ ಆಟಗಾರ ಎನ್. ಜಗದೀಶನ್ (64) ಅವರನ್ನು 137 ರನ್ ಆಗಿದ್ದಾಗ ಕಳೆದುಕೊಂಡಿತು. ರಾತ್ರಿಯ ಮಳೆಯಿಂದಾಗಿ ಪಂದ್ಯ ತಡವಾಗಿ ಆರಂಭವಾಯಿತು. ಲಂಚ್ ಮೊದಲು ಅರ್ಧ ಗಂಟೆಯ ಆಟವಷ್ಟೇ ಸಾಧ್ಯವಾಗಿತ್ತು.

ಲಂಚ್ ನಂತರ ಬಿ.ಸಾಯಿ ಸುದರ್ಶನ್ (73) ಮತ್ತು ನಾಯಕ ಶ್ರೇಯಸ್ ಅಯ್ಯರ್ (8) ಅವರು 9 ರನ್‌ಗಳ ಅಂತರದಲ್ಲಿ ನಿರ್ಗಮಿಸಿದಾಗ ತಂಡದ ಮೊತ್ತ 4 ವಿಕೆಟ್‌ಗೆ 222. ಈ ವೇಳೆ ಪಡಿಕ್ಕಲ್ ಅವರ ಜೊತೆಗೂಡಿದ ಜುರೆಲ್ ಬಿರುಸಿನ ಆಟವಾಡಿ ತಂಡಕ್ಕೆ ಆಸರೆಯಾದರು. ಮುರಿಯದ ಐದನೇ ವಿಕೆಟ್‌ಗೆ ಇವರಿಬ್ಬರು 181 ರನ್ ಸೇರಿಸಿ ಆಸ್ಟ್ರೇಲಿಯಾ ಎ ತಂಡಕ್ಕೆ ಯಶಸ್ಸು ನಿರಾಕರಿಸಿದರು.

ಆಕ್ರಮಣಕಾರಿಯಾಗಿ ಆಡಿದ ಜುರೆಲ್ 132 ಎಸೆತಗಳ ಇನಿಂಗ್ಸ್‌ನಲ್ಲಿ ಹತ್ತು ಬೌಂಡರಿ, ನಾಲ್ಕು ಸಿಕ್ಸರ್‌ಗಳನ್ನು ಬಾರಿಸಿದರೆ, ತಾಳ್ಮೆಯಿಂದ ಆಡಿದ ದೇವದತ್ತ 178 ಎಸೆತಗಳನ್ನು ಎದುರಿಸಿ ಎಂಟು ಬೌಂಡರಿಗಳನ್ನು ಹೊಡೆದಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ ಎ: 98 ಓವರುಗಳಲ್ಲಿ 6 ವಿಕೆಟ್‌ಗೆ 532 ಡಿ; ಭಾರತ ಎ: 103 ಓವರುಗಳಲ್ಲಿ 4 ವಿಕೆಟ್‌ಗೆ 403 (ಎನ್.ಜಗದೀಶನ್ 64, ಸಾಯಿ ಸುದರ್ಶನ್ 73, ದೇವದತ್ತ ಪಡಿಕ್ಕಲ್ ಔಟಾಗದೇ 86, ಧ್ರುವ್ ಜುರೇಲ್ ಔಟಾಗದೇ 113)

ಧ್ರುವ್ ಜುರೇಲ್

ದೇವದತ್ತ ಪಡಿಕ್ಕಲ್

ಬ್ಯಾಡ್ಮಿಂಟನ್: ಕ್ವಾರ್ಟರ್‌ಗೆ ಸಿಂಧು

ಶೆಂಜೆನ್ (ಚೀನಾ), (ಪಿಟಿಐ): ಭಾರತದ ಅಗ್ರ ಸಿಂಗಲ್ಸ್ ಆಟಗಾರ್ತಿ ಪಿ.ವಿ.ಸಿಂಧು ಅವರು ಚೀನಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಎರಡನೇ ಸುತ್ತಿನ ಪಂದ್ಯದಲ್ಲಿ ಆರನೇ ಶ್ರೇಯಾಂಕದ ಪೊರ್ನ್‌ಪೊವಿ ಚೊಚುವಾಂಗ್ ಅವರನ್ನು ಗುರುವಾರ ನೇರ ಗೇಮ್‌ಗಳಿಂದ ಸೋಲಿಸಿ ಕ್ವಾರ್ಟರ್‌ಫೈನಲ್ ತಲುಪಿದರು.

ಪುರುಷರ ಡಬಲ್ಸ್‌ನಲ್ಲಿ ಎಂಟನೇ ಶ್ರೇಯಾಂಕದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿ ಸಹ ನೇರ ಗೇಮ್‌ಗಳ ಗೆಲುವಿನೊಡನೆ ಎಂಟರ ಘಟ್ಟಕ್ಕೆ ಮುನ್ನಡೆಯಿತು.

ವಿಶ್ವ ಕ್ರಮಾಂಕದಲ್ಲಿ 14ನೇ ಸ್ಥಾನದಲ್ಲಿರುವ ಸಿಂಧು 21–15, 21–15 ರಿಂದ ಥಾಯ್ಲೆಂಡ್‌ನ ಆಟಗಾರ್ತಿಯನ್ನು 41 ನಿಮಿಷಗಳಲ್ಲಿ ಸೋಲಿಸಿದರು. ಸಿಂಧು ಅವರು ಕ್ವಾರ್ಟರ್‌ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಆಟಗಾರ್ತಿ ಆ್ಯನ್ ಸೆ ಯಂಗ್ ಅವರನ್ನು ಎದುರಿಸಲಿದ್ದಾರೆ. ದಕ್ಷಿಣ ಕೊರಿಯಾದ ಆ್ಯನ್ ಅವರು ಡೆನ್ಮಾರ್ಕ್‌ನ ಮಿಯಾ ಬ್ಲಿಚ್‌ಫೆಲ್ಡ್ ಅವರನ್ನು 23–21, 21–14 ರಿಂದ ಹಿಮ್ಮೆಟ್ಟಿಸಿದರು.

ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಜೋಡಿ 21–13, 21–12 ರಿಂದ ತೈವಾನ್‌ನ ಚಿಯಿ ಸಿಯಾಂಗ್ ಚಿ– ವಾಂಗ್ ಚಿ ಲಿನ್ ಜೋಡಿಯನ್ನು ಸೋಲಿಸಿ ಡಬಲ್ಸ್‌ನಲ್ಲಿ ಎಂಟರ ಘಟ್ಟ ತಲುಪಿತು.

ವಾಲಿಬಾಲ್: ಸೆಮಿಗೆ ಆಳ್ವಾಸ್

ಬೆಂಗಳೂರು: ಆಳ್ವಾಸ್ ಕಾಲೇಜು ಮತ್ತು ಸ್ಪೋರ್ಟ್ಸ್ ಹಾಸ್ಟೆಲ್ ಬೆಂಗಳೂರು ತಂಡಗಳು ರಾಜ್ಯ ವಾಲಿಬಾಲ್ ಸಂಸ್ಥೆಯ ಆಶ್ರಯದಲ್ಲಿ ಎ. ಲೋಕೇಶ್ ಗೌಡ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಸೀನಿಯರ್ ವಾಲಿಬಾಲ್ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದಲ್ಲಿ ಸೆಮಿಫೈನಲ್ ಪ್ರವೇಶಿಸಿದವು.

ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಆಳ್ವಾಸ್ ತಂಡವು 3–0 (25-16 ,25-13, 25-13)ಯಿಂದ ಎಜಿಒಆರ್‌ಸಿ ತಂಡವನ್ನು ಮಣಿಸಿತು. ಮತ್ತೊಂದು ಪಂದ್ಯ ದಲ್ಲಿ ಸ್ಪೋರ್ಟ್ಸ್ ಹಾಸ್ಟೆಲ್ ತಂಡವು 3–0 (25-21, 25-12, 25-23) ಸ್ಪೋರ್ಟ್ಸ್ ಹಾಸ್ಟೆಲ್ ಬೆಳಗಾವಿ ತಂಡವನ್ನು ಸೋಲಿಸಿತು.

ಮಹಿಳೆಯರ ಲೀಗ್ ಹಂತದ ಪಂದ್ಯದಲ್ಲಿ ಎಸ್‌ಡಿಎಂ ಉಜಿರೆ 3–1 ರಿಂದ ಜೆಎಸ್‌ಎಸ್ ಧಾರವಾಡ ವಿರುದ್ಧ; ಆದಾಯ ತೆರಿಗೆ 3–0ಯಿಂದ ಬಿಎಂಎಸ್ ತಂಡದ ವಿರುದ್ಧ; ಪೋಸ್ಟಲ್ 3–0 ಯಿಂದ ಸ್ಪೋರ್ಟ್ಸ್ ಹಾಸ್ಟೆಲ್ ಬೆಳಗಾವಿ ತಂಡದ ವಿರುದ್ಧ ಗೆಲುವು ಸಾಧಿಸಿದವು.

ಪ್ರೊ ಕಬಡ್ಡಿ ಲೀಗ್: ನಿತಿನ್ ಕುಮಾರ್ ಮಿಂಚು • ದೇವಾಂಕ್ ಮತ್ತೆ 'ಸೂಪರ್ ಟೆನ್'

ಜೈಪುರ ಪಿಂಕ್ ಪ್ಯಾಂಥರ್ಸ್ ಜಯಭೇರಿ

ಜೈಪುರ: ಆತಿಥೇಯ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು ಗುರುವಾರ ಪ್ರೊ ಕಬಡ್ಡಿ ಟೂರ್ನಿಯ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಸವಾಯಿ ಮಾನಸಿಂಗ್ ಕ್ರೀಡಾಂಗಣದ ಒಳಾಂಗಣದಲ್ಲಿ ನಡೆದ 'ರೈವಲ್ರಿ' ವಾರದ ಹಣಾಹಣಿಯಲ್ಲಿ ಜೈಪುರ ತಂಡವು 45–41ರಿಂದ ಬೆಂಗಾಲ್ ವಾರಿಯರ್ಸ್ ವಿರುದ್ಧ ರೋಚಕ ಜಯ ಸಾಧಿಸಿತು. ನಿತಿನ್ ಕುಮಾರ್ (13) ದಾಳಿ ಬಲದಿಂದ ಜೈಪುರ ತಂಡವು ಮುನ್ನಡೆ ಗಳಿಸಿತು.

ಪ್ರಥಮಾರ್ಧದಲ್ಲಿ 24–18ರಿಂದ ಜೈಪುರ ತಂಡವು ಮುನ್ನಡೆಯಲ್ಲಿತ್ತು. ಆದರೆ, ವಿರಾಮದ ನಂತರದ ಹಣಾಹಣಿಯಲ್ಲಿ ಭಾರಿ ಪೈಪೋಟಿ ನಡೆಯಿತು. ಈ ಅವಧಿಯಲ್ಲಿ ಬೆಂಗಾಲ್ ತಂಡವು 23–21ರಿಂದ ಮೇಲುಗೈ ಸಾಧಿಸಿತು. ಆದರೆ ಮೊದಲ ಅವಧಿಯಲ್ಲಿ ಸಾಧಿಸಿದ್ದ ಮುನ್ನಡೆಯು ಜೈಪುರ ತಂಡಕ್ಕೆ ಗೆಲುವು ತಂದುಕೊಟ್ಟಿತು. ನಿತಿನ್ ಕುಮಾರ್ ಅವರು 24 ಬಾರಿ ದಾಳಿ ನಡೆಸಿದರು. ಅದರಲ್ಲಿ ಅವರು 9 ಟಚ್ ಪಾಯಿಂಟ್ಸ್ ಮತ್ತು 4 ಬೋನಸ್ ಅಂಕ ಗಳಿಸಿದರು. ಅಲಿ ಚೌಬಾತರಶ್ ಅವರೂ 12 ಅಂಕ ಗಳಿಸಿದರು.

ಬೆಂಗಾಲ್ ನಾಯಕ ದೇವಾಂಕ್ ಅವರು ಚುರುಕಾದ ದಾಳಿಯ ಮೂಲಕ 16 ಅಂಕ ಗಳಿಸಿದರು. ದೇವಾಂಕ್ ಅವರು ಪ್ರೊ ಕಬಡ್ಡಿಯಲ್ಲಿ ಒಟ್ಟು 400 ಅಂಕಗಳನ್ನು ಗಳಿಸಿದ ಸಾಧನೆ ಮೆರೆದರು. ಮನ್‌ಪ್ರೀತ್ 10 ಅಂಕಗಳ ಕಾಣಿಕೆ ನೀಡಿದರು.

ಮತ್ತೊಂದು ಪಂದ್ಯದಲ್ಲಿ ಪುಣೇರಿ ಪಲ್ಟನ್ ತಂಡವು 40–22ರಿಂದ ಯು ಮುಂಬಾ ತಂಡವನ್ನು ಮಣಿಸಿತು.

ಇಂದಿನ ಪಂದ್ಯಗಳು
ಪುಣೇರಿ ಪಲ್ಟನ್– ಹರಿಯಾಣ ಸ್ಟೀಲರ್ಸ್ (ರಾತ್ರಿ 8)
ತೆಲುಗು ಟೈಟನ್ಸ್– ತಮಿಳು ತಲೈವಾಸ್ (ರಾತ್ರಿ 9)

ಬೆಂಗಾಲ್ ವಾರಿಯರ್ಸ್‌ನ ರೇಡರ್ ದೇವಾಂಕ್ ಅವರನ್ನು ಟ್ಯಾಕಲ್ ಮಾಡಲು ಯತ್ನಿಸಿದ ಪಿಂಕ್ ಪ್ಯಾಂಥರ್ಸ್ ಆಟಗಾರರು

ಕೆಎಸ್‌ಸಿಎ ಕೋಲ್ಟ್ಸ್‌ಗೆ ರೋಚಕ ಜಯ

ಪ್ರಜಾವಾಣಿ ವಾರ್ತೆ

ಮೈಸೂರು: ಸ್ಪಿನ್ನರ್‌ಗಳ ಕೈಚಳಕದ ನೆರವಿನಿಂದ ಕೆಎಸ್‌ಸಿಎ ಕೋಲ್ಟ್ಸ್ ತಂಡವು ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ರೋಚಕ ಪಂದ್ಯದಲ್ಲಿ ಗುರುವಾರ ಬರೋಡ ಕ್ರಿಕೆಟ್ ಸಂಸ್ಥೆ ತಂಡವನ್ನು 10 ರನ್‌ಗಳಿಂದ ಮಣಿಸಿತು.

ಇಲ್ಲಿನ ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಗೆಲ್ಲಲು 358 ರನ್‌ಗಳ ಗುರಿ ಬೆನ್ನತ್ತಿದ ಬರೋಡ ತಂಡ (ಬುಧವಾರ: 2 ವಿಕೆಟ್‌ಗೆ 142) ಕೊನೆಯ ದಿನ ಭೋಜನ ವಿರಾಮದ ವೇಳೆಗೆ ಪಂದ್ಯ ಗೆಲ್ಲುವಂತೆ ಕಂಡಿತ್ತು. ಆದರೆ ಕಡೆಯ ಅವಧಿಯಲ್ಲಿ ಮೊಹ್ಸಿನ್ ಖಾನ್ (89ಕ್ಕೆ 5) ಹಾಗೂ ಶಿಖರ್ ಶೆಟ್ಟಿ (94ಕ್ಕೆ 4) ಎದುರಾಳಿಗಳನ್ನು ಸ್ಪಿನ್ ಬಲೆಗೆ ಕೆಡವಿದರು. ಕೇವಲ 47 ರನ್‌ಗಳಿಗೆ ಕಡೆಯ ಆರು ವಿಕೆಟ್‌ಗಳನ್ನು ಕಳೆದುಕೊಂಡ ಬರೋಡ ನಿರಾಶೆ ಅನುಭವಿಸಿತು.

ಬರೋಡ ಪರ ಆರಂಭ ಆಟಗಾರ ಜ್ಯೋತ್ಸ್ನಿಲ್ ಸಿಂಗ್ ಶತಕ (156) ಹೊಡೆದು ಹೋರಾಟದ ಆಟ ಪ್ರದರ್ಶಿಸಿದರು. ವಿಕೆಟ್ ಕೀಪರ್ ಅಕ್ಷಯ್ ಮೋರೆ (43) ಸಾಥ್ ನೀಡಿದರು.

ಈ ಪಂದ್ಯದ ಅಂತ್ಯಕ್ಕೆ 'ಡಿ' ಗುಂಪಿನಲ್ಲಿ ಹಿಮಾಚಲ ಪ್ರದೇಶ ತಂಡವು ಒಟ್ಟು 16 ಅಂಕದೊಂದಿಗೆ ಅಗ್ರಸ್ಥಾನ ಪಡೆದಿದ್ದು, ಕೆಎಸ್‌ಸಿಎ ಕೋಲ್ಟ್ಸ್ 12 ಅಂಕದೊಂದಿಗೆ ಎರಡನೇ ಸ್ಥಾನಕ್ಕೆ ಇಳಿಯಿತು. ಬರೋಡ 4 ಅಂಕ ಹಾಗೂ ಆಂಧ್ರ ಪ್ರದೇಶ ಕೇವಲ ಒಂದು ಅಂಕ ಪಡೆದಿವೆ.

ಸಂಕ್ಷಿಪ್ತ ಸ್ಕೋರ್: ಎಸ್‌ಡಿಎನ್‌ಆರ್‌ಡಬ್ಲ್ಯು ಕ್ರೀಡಾಂಗಣ: ಮೊದಲ ಇನಿಂಗ್ಸ್: ಕೆಎಸ್‌ಸಿಎ ಕೋಲ್ಟ್ಸ್: 47.3 ಓವರ್‌ಗಳಲ್ಲಿ 184; ಬರೋಡ ಕ್ರಿಕೆಟ್ ಸಂಸ್ಥೆ: 59 ಓವರ್‌ಗಳಲ್ಲಿ 209; ಎರಡನೇ ಇನಿಂಗ್ಸ್: ಕೆಎಸ್‌ಸಿಎ ಕೋಲ್ಟ್ಸ್: ಓವರ್‌ಗಳಲ್ಲಿ 92.3 ಓವರ್‌ಗಳಲ್ಲಿ 382; ಬರೋಡ ಕ್ರಿಕೆಟ್ ಸಂಸ್ಥೆ: 134.1 ಓವರ್‌ಗಳಲ್ಲಿ 347 (ಜ್ಯೋತ್ಸ್ನಿಲ್ ಸಿಂಗ್ 156, ಅಕ್ಷಯ್ ಮೋರೆ 43, ಶಿವಾಲಿಕ್ ಶರ್ಮ 37; ಮೊಹ್ಸಿನ್ ಖಾನ್ 89ಕ್ಕೆ5, ಶಿಖರ್ ಶೆಟ್ಟಿ 94ಕ್ಕೆ 4).

ಎಸ್‌ಜೆಸಿಇ ಕ್ರೀಡಾಂಗಣ, ಮೈಸೂರು: ಮೊದಲ ಇನಿಂಗ್ಸ್: ಆಂಧ್ರ ಕ್ರಿಕೆಟ್ ಸಂಸ್ಥೆ: 23.2 ಓವರ್‌ಗಳಲ್ಲಿ 87; ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ: 105.1 ಓವರ್‌ಗಳಲ್ಲಿ 455; ಎರಡನೇ ಇನಿಂಗ್ಸ್: ಆಂಧ್ರ ಕ್ರಿಕೆಟ್ ಸಂಸ್ಥೆ: 129.2 ಓವರ್‌ಗಳಲ್ಲಿ 500; ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ: 27.1 ಓವರ್‌ಗಳಲ್ಲಿ 6 ವಿಕೆಟ್‌ಗೆ 134 (ಏಕಾಂತ್ ಸೇನ್ 42, ಸಿದ್ಧಾಂತ್ ಪುರೋಹಿತ್ 37. ಕೆ.ಸಾಯಿತೇಜ 24ಕ್ಕೆ 4)

ಕೆಎಸ್‌ಸಿಎ ಕೋಲ್ಟ್ಸ್ ಪರ 5 ವಿಕೆಟ್ ಪಡೆದ ಮೊಹ್ಸಿನ್ ಖಾನ್ ಪ್ರಜಾವಾಣಿ ಚಿತ್ರ/ಅನೂಪ್ ರಾಘು.ಟಿ.

ಕೊಡಗು ತಂಡಕ್ಕೆ ಮಣಿದ ರೂಟ್ಸ್

ಬೆಂಗಳೂರು: ಕೊಡಗು ಎಫ್‌ಸಿ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಗುರುವಾರ 2–0 ಗೋಲುಗಳಿಂದ ರೂಟ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಕೊಡಗು ಪರ ಲಾಲ್‌ಕ್ರಾಸ್ ಮಾವಿಯಾ (41ನೇ ಮತ್ತು 87ನೇ) ಎರಡು ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು 1–0 ಗೋಲಿನಿಂದ ರೆಬೆಲ್ಸ್ ಎಫ್‌ಸಿ ತಂಡವನ್ನು ಸೋಲಿಸಿತು. ಅರ್ಜುನ್ ಗೌಡ ಎಂ. (59ನೇ) ಅವರು ಸ್ಪೋರ್ಟಿಂಗ್ ತಂಡದ ಪರ ಗೆಲುವಿನ ಗೋಲು ದಾಖಲಿಸಿದರು.

ಇನ್ನೊಂದು ಪಂದ್ಯದಲ್ಲಿ ಸೌತ್ ಯುನೈಟೆಡ್ ಎಫ್‌ಸಿ ತಂಡವು 1–0 ಗೋಲಿನಿಂದ ಎಚ್‌ಎಎಲ್ ಎಫ್‌ಸಿ ತಂಡವನ್ನು ಸೋಲಿಸಿತು. ಯುನೈಟೆಡ್ ಪರ ಮುಸ್ತಫಾ ಶೇಖ್ (66ನೇ) ಗೋಲು ತಂದಿತ್ತರು.

TATA MOTORS
Connecting Aspirations
TATA
FESTIVAL OF GST
GREATEST SAVINGS FROM TATA MOTORS
ಹಬ್ಬಗಳ ಈ ಸಮಯದಲ್ಲಿ,
TATA MOTORS ಆರಿಸಿಕೊಳ್ಳಿ ನಿಮಗೆ ಅವಶ್ಯವಿರುವ ಎಲ್ಲವನ್ನೂ ಇದು ಒಳಗೊಂಡಿದೆ
Trusted by ~60 Lakh families
#1 EV brand with WIDEST portfolio of EVs - 6 cars
25 Lakh* SUVs sold, widest range of SUVs - 5 SUVs
Widest Range of Powertrain - Petrol, Diesel, CNG & EV
SAFEST car Range - 14 5-Star Safety Ratings since 2018
India's safest hatchback car - Altroz
60+ Best in Segment features◊
India's MOST POWERFUL home grown car with 500Nm Torque & QWD - Harrier.ev
India's FASTEST homegrown car: 0-100 kmph in 6.3sec - Harrier.ev
India's safest CNG car - Altroz
India's only CNG cars with Auto Transmission - Tiago, Tigor
India's first and widest twin cylinder CNG range
Wide and fast growing service network with 1100+ workshops
ಇಂದೇ ಬುಕ್ ಮಾಡಿ
ಹಬ್ಬದ ಸಮಯದಲ್ಲಿ ಡೆಲಿವರಿ ಕಾಯ್ದಿರಿಸಿಕೊಳ್ಳಲಿಕ್ಕಾಗಿ. ₹1.55** ಲಕ್ಷದವರೆಗಿನ, 100% GST ಪ್ರಯೋಜನಗಳು.
PUNCH
HARRIER
SAFARI
NEXON
PUNCH
#1 Selling Car in CY'24
Estimated Starting Price after GST 2.0 ₹5.67 Lakh^^
You save up to ₹85,000*
HARRIER
Built on JLR Pedigree
Estimated Starting Price after GST 2.0 ₹14.18 Lakh^^
You save up to ₹1.4 Lakh*
SAFARI
Powerful KRYOTEC Engine
Estimated Starting Price after GST 2.0 ₹14.66 Lakh^^
You save up to ₹1.5 Lakh*
NEXON
India's most fuel-efficient Diesel car : 24 kmpl~
Estimated Starting Price after GST 2.0 ₹7.31 Lakh^^
You save up to ₹1.55 Lakh*
◊To discover features scan the code
book TATA Motors
BHARAT NCAP
GLOBAL NCAP
KHT MOTORS
Whitefield: 7506023988;
Domlur: 7506024006,
Kolar: 9731149668
KEY MOTORS
JP Nagar Kanakapura Road: 7506023980,
Mysore Road: 9167395034, Kanakapura City: 8879145649,
BG Road: 9167395164, Nelamangala: 9167881890,
Sunkadakatte Magadi Road: 9167882027
KROPEX AUTO
Hosur Road: 7506024016,
Koramangala: 9167395364,
Sarjapur road: 8291202713,
Mahadevapura: 8291052641
PRERANA MOTORS
Lalbagh Road: 7506024020;
BTM Layout: 7506024118;
Rajajinagar: 7506024039;
Yelahanka: 9619489334
BELLAD ENTERPRISES PVT LTD
Bommsandra
8238883535, 9035354160;
Sarajpura: 8879932503
CAUVERY MOTORS:
Avalahalli: 8879156068;
Mekhri Circle: 8422849049;
Devanahalli: 8879078454
ADISHAKTI CARS
Hebbal: 7506023837;
Dasarahalli: 9167982568;
Kalyana Nagar: 9167163087
SREE AUTO
Tumkur: 7506024318,Tiptur: 9619050469,
Chitradurga: 9619033465, Kunigal: 8879046819,
Chikkaballapur: 9167082428, Chintamani: 8291927028
Images and Illustrations are indicative and for information purposes only. All features/specifications are not available in all variants and may vary for different variants. Specifications/features are subject to change without prior information. Colours may vary due to printing limitations. Benefits up to differs from model to model and is inclusive of consumer offer, exchange bonus and maximum corporate offer. **Please confirm the exact price of your preferred car/SUV variant from an authorized Tata Motors showroom near you. ^^Prices mentioned is Punch Pure MT, ex showroom Delhi. Punch is the highest selling car in calendar year 2024 as per SIAM data. ^^Price mentioned is Harrier and Safari Smart MT, ex-showroom Delhi Local taxes extra. Harrier and Safari GNCAP test in 2023 & BCAP tested in 2023 Harrier is available in diesel and EV in India. Safari is available in diesel in India. ^^Price mentioned is Nexon Smart MT Petrol, ex showroom Delhi Local taxes extra. TATA Nexon scored highest adult occupant score as per test conducted by Bharat NCAP and Global NCAP in category of SUV less than 4 meter & engine less than 1.5L as per GNCAP & BNCAP test result. ~The mileage figures quoted 24.07 kmpl for the Nexon diesel AMT are ARAI-certified test figures under controlled conditions. Actual mileage may vary significantly as per driving conditions. Considered in the compact SUV segment. *25L SUV sold consist of all Tata motors SUV since 1998. Safari-Legandary Legacy of 27 years. ^^Altroz price mentioned is Smart MT CNG , ex showroom Delhi. Altroz is 5 star BNCAP rated hatchback as per 2025 test. Altroz is the only hatchback to get 5 star rating across powertrain of petrol, diesel and CNG. As per Bharat NCAP results 2025. T & C apply.

ಶುಕ್ರವಾರ, ಸೆಪ್ಟೆಂಬರ್ 19, 2025| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಜಾವೆಲಿನ್: ಸಚಿನ್‌ಗೆ 4ನೇ ಸ್ಥಾನ

ಟೋಕಿಯೊದಲ್ಲಿ ಗುರುವಾರ ನಡೆದ ವಿಶ್ವ ಅಥ್ಲೆಟಿಕ್ಸ್‌ನ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ನಾಲ್ಕನೇ ಸ್ಥಾನ ಪಡೆದ ಭಾರತದ ಸಚಿನ್ ಯಾದವ್

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ.

iPhone 17
PRO

Go to IndiaiStore.com to find Apple Authorised stores near you.

Available from today with benefits up to ₹11000*

₹4000* Instant cashback on credit cards of
ICICI Bank | SBI card
+
Exchange bonus up to ₹7000*

*Terms and conditions apply.
Please scan the QR Code for terms and conditions.

INDIA iSTORE
INGRAM MICRO | Redington

iPhone 17

Magichromatic.



Go to IndiaiStore.com to find Apple Authorised stores near you.

Available from today at an Exchange Effective Price of ₹49900*

Inclusive of ₹6000* instant cashback on credit cards of ICICI Bank | SBI card

+

Exchange bonus up to ₹7000*

	iPhone 17
MRP (incl. of all taxes) (256 GB, 1N)	₹82900.00
Instant Cashback*	₹6000.00
Exchange value of your old smartphone*	₹20000.00
Exchange bonus*	₹7000.00
Exchange Effective Price*	**₹49900.00**

*Terms and conditions apply.
Please scan the QR Code for terms and conditions.

INDIA iSTORE

INGRAM MICRO | Redington

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ನವರಾತ್ರಿಯ ದುರ್ಗೆ
ನವರಾತ್ರಿ ಹಬ್ಬ ಸಮೀಪಿಸುತ್ತಿದ್ದು, ದೇವಿ ದುರ್ಗಾ ಮೂರ್ತಿಗೆ ಹೈದರಾಬಾದ್‌ನಲ್ಲಿ ಕಲಾವಿದರು ಗುರುವಾರ ಅಂತಿಮ ಸ್ಪರ್ಶ ನೀಡಿದರು

ಕ್ವಾರ್ಟರ್‌ಗೆ ಸಿಂಧು
ಭಾರತದ ಪಿ.ವಿ. ಸಿಂಧು ಅವರು ಚೀನಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಗುರುವಾರ ಥಾಯ್ಲೆಂಡ್‌ನ ಪೋರ್ನ್‌ಪೊವಿ ಚೊಚುವಾಂಗ್ ಅವರಿಗೆ ಆಘಾತ ನೀಡಿ ಕ್ವಾರ್ಟರ್‌ಫೈನಲ್ ತಲುಪಿದರು

ಆಳಂದ ಮತಕಳವು: ಆಯೋಗಕ್ಕೆ ರಾಹುಲ್ ಗಡುವು 3

ಒಂದೇ ಹಂತದ ತೆರಿಗೆ ವ್ಯವಸ್ಥೆ? 6

ಮುಂಬಡ್ತಿಗೆ ತರಬೇತಿ ಕಡ್ಡಾಯ

ಕರ್ನಾಟಕ ನಾಗರಿಕ ಸೇವಾ ನಿಯಮಗಳಿಗೆ ತಿದ್ದುಪಡಿ: ಸಂಪುಟ ಸಭೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಧಿಕಾರಿಗಳು (ಸಿ ಮತ್ತು ಡಿಶ್ರೇಣಿಗೆ ಮೇಲ್ಪಟ್ಟವರು) ಮುಂಬಡ್ತಿ ಪಡೆಯಬೇಕಾದರೆ ಇನ್ನು ಮುಂದೆ ತರಬೇತಿ ಪಡೆಯುವುದನ್ನು ಕಡ್ಡಾಯಗೊಳಿಸಲು ಸರ್ಕಾರ ತೀರ್ಮಾನಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಕುರಿತ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು ಈ ವಿವರ ನೀಡಿದರು.

ಕರ್ನಾಟಕ ರಾಜ್ಯ ನಾಗರಿಕ ಸೇವಾ (ಮುಂಬಡ್ತಿ ತರಬೇತಿ ಕಡ್ಡಾಯ) ನಿಯಮಗಳು, 2025ರ ಕರಡು ನಿಯಮ ಪ್ರಕಟಿಸಲಾಗುವುದು. ಆಕ್ಷೇಪಣೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಲಾಗುವುದು. ಒಂದು ವೇಳೆ ಕರಡು ನಿಯಮಗಳಿಗೆ ಯಾವುದೇ ಆಕ್ಷೇಪಣೆ, ಸಲಹೆಗಳು ಬಾರದಿದ್ದರೆ ನಿಯಮದ ಜಾರಿಗೆ ಅಧಿಕೃತ ಆದೇಶ ಹೊರಡಿಸಲಾಗುವುದು ಎಂದರು.

ಕರಡು ಹೇಳುವುದೇನು?: ಸರ್ಕಾರದಲ್ಲಿ ಸಚಿವಾಲಯ ಸೇರಿ 100ಕ್ಕೂ ಹೆಚ್ಚು ಇಲಾಖೆ, ನಿಗಮ, ಮಂಡಳಿ ಮತ್ತು ಪ್ರಾಧಿಕಾರಗಳು ಕಾರ್ಯನಿರ್ವಹಿಸುತ್ತಿವೆ. ಅಧಿಕಾರಿಗಳು ತಾವು ಕಾರ್ಯ ನಿರ್ವಹಿಸುತ್ತಿರುವ ಹುದ್ದೆಯಿಂದ ನಂತರದ ಹುದ್ದೆಗೆ ಮುಂಬಡ್ತಿ ಪಡೆಯಲು ಆಯಾ ಇಲಾಖೆಗಳು ನಿಗದಿಪಡಿಸಿರುವ ತರಬೇತಿ ಮಾಡ್ಯೂಲ್‌ಗಳಲ್ಲಿ ಕನಿಷ್ಠ 15 ದಿನಗಳ ತರಬೇತಿ ಪಡೆಯಬೇಕು. ಅಲ್ಲದೇ, ಪ್ರತಿ ಉದ್ಯೋಗಿಯು ಇಲಾಖಾ ಮುಖ್ಯಸ್ಥರು ನಿರ್ದೇಶಿಸಿದ ಕೋರ್ಸ್‌ಗಳಲ್ಲಿ ಪ್ರತಿ ವರ್ಷ ನಿಗದಿಪಡಿಸಿದ ಕನಿಷ್ಠ ಆನ್‌ಲೈನ್ ತರಬೇತಿ ಪಡೆಯಬೇಕು ಎಂದು ಪಾಟೀಲ ತಿಳಿಸಿದರು.

ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳಿಗೆ ಲಾಲ್ ಬಹದ್ದೂರ್ ಶಾಸ್ತ್ರಿ ನ್ಯಾಷನಲ್ ಅಕಾಡೆಮಿ ಆಫ್ ಅಡ್ಮಿನಿಸ್ಟ್ರೇಷನ್‌ನಲ್ಲಿ 'ಮಿಡ್ ಟರ್ಮ್ ಕರಿಯರ್ ಟ್ರೈನಿಂಗ್' ವ್ಯವಸ್ಥೆ ಇದೆ. ರಾಜ್ಯದಲ್ಲೂ ಸರ್ಕಾರಿ ಅಧಿಕಾರಿಗಳ ಕಾರ್ಯಕ್ಷಮತೆಯನ್ನು ನಿರಂತರವಾಗಿ ಹೆಚ್ಚಿಸಲು ಅದೇ ರೀತಿ ತರಬೇತಿ ಕಡ್ಡಾಯ ಮಾಡಲು ತೀರ್ಮಾನಿಸಲಾಗಿದೆ ಎಂದರು. ಕರ್ನಾಟಕ ಆಡಳಿತ ಸುಧಾರಣಾ ಆಯೋಗ–2 ತನ್ನ 7ನೇ ವರದಿಯಲ್ಲೂ ಪದೋನ್ನತಿಗೆ ಕಡ್ಡಾಯವಾಗಿ ತರಬೇತಿ ನೀಡಬೇಕು ಎಂದು ಶಿಫಾರಸು ಮಾಡಿದೆ. ತರಬೇತಿಯು ಸಿಬ್ಬಂದಿ ಸಾಮರ್ಥ್ಯ ವರ್ಧನೆಯ ಪ್ರಮುಖ ಭಾಗವಾಗಿದೆ. ಇದರಿಂದ ಅಧಿಕಾರಿ– ಸಿಬ್ಬಂದಿ ತಮ್ಮ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಹಾಯ ಮಾಡುತ್ತದೆ. ಪ್ರತಿ ವರ್ಷ ಹೊಸ ಕಾನೂನುಗಳು, ನಿಯಮಗಳು, ಯೋಜನೆಗಳು, ಕಾರ್ಯಕ್ರಮಗಳು, ಮಾಹಿತಿ ತಂತ್ರಜ್ಞಾನ ಇತ್ಯಾದಿಗಳನ್ನು ಪರಿಚಯಿಸಲಾಗುತ್ತಿದೆ. ಇದನ್ನು ತಿಳಿದುಕೊಂಡು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಮತ್ತು ನಾಗರಿಕರಿಗೆ ಸೇವೆಗಳನ್ನು ಸುಲಭವಾಗಿ ತಲುಪಿಸಲು ನಾಗರಿಕ ಸೇವಾ ಸಿಬ್ಬಂದಿ ಹೊಸ ಬೆಳವಣಿಗೆಗಳ ಬಗ್ಗೆ ತಿಳಿದುಕೊಳ್ಳುವುದು ಮತ್ತು ತರಬೇತಿ ಪಡೆಯುವುದು ಅವಶ್ಯ ಎಂದರು.

ಲೋಕಸೇವಾ ಆಯೋಗದ ವರದಿ ಮಂಡನೆ: ಕರ್ನಾಟಕ ಲೋಕಸೇವಾ ಆಯೋಗ ತನ್ನ 2024–25 ನೇ ಸಾಲಿನ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಅದನ್ನು ವಿಧಾನಮಂಡಲ ಅಧಿವೇಶನದಲ್ಲಿ ಮಂಡಿಸಲು ಸಂಪುಟ ಸಭೆ ಒಪ್ಪಿಗೆ ನೀಡಿದೆ ಎಂದು ಹೇಳಿದರು.

8 ಕಾರಾಗೃಹಗಳಿಗೆ ಕಾಲ್ ಬ್ಲಾಕಿಂಗ್ ಟವರ್

ಬಳ್ಳಾರಿ, ವಿಜಯಪುರ, ಧಾರವಾಡ, ಶಿವಮೊಗ್ಗ, ಬೆಳಗಾವಿ, ಮೈಸೂರು, ಕಲಬುರಗಿ ಮತ್ತು ತುಮಕೂರು ಜಿಲ್ಲಾ ಕಾರಾಗೃಹಗಳಿಗೆ ಒಟ್ಟು ₹16.75 ಕೋಟಿ ವೆಚ್ಚದಲ್ಲಿ 10 ಕಾಲ್ ಬ್ಲಾಕಿಂಗ್ ಮೊಬೈಲ್ ಟವರ್‌ಗಳನ್ನು ಅಳವಡಿಸಲು ಒಪ್ಪಿಗೆ ನೀಡಲಾಗಿದೆ.

ಪರಿಶಿಷ್ಟರಿಗೆ ಅನುಕಂಪದ ಆಧಾರದ ಹುದ್ದೆ

ದೌರ್ಜನ್ಯಕ್ಕೊಳಗಾಗಿ ಮೃತಪಟ್ಟ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ವ್ಯಕ್ತಿಗಳ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ಒಂದು ಬಾರಿಗೆ ಸರ್ಕಾರಿ ಉದ್ಯೋಗ ನೀಡಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಈ ತೀರ್ಮಾನ 87 ಪ್ರಕರಣಗಳಿಗೆ ಮಾತ್ರ ಅನ್ವಯವಾಗಲಿದೆ ಎಂದು ಎಚ್‌.ಕೆ.ಪಾಟೀಲ ತಿಳಿಸಿದರು.

ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಗ್ರೂಪ್–ಸಿ ಮತ್ತು ಗ್ರೂಪ್–ಡಿ ವೃಂದ ಹುದ್ದೆಗಳಿಗೆ ನೇಮಕಾತಿ ಮಾಡಲಾಗುವುದು ಎಂದು ಹೇಳಿದರು.

18 ವರ್ಷದೊಳಗಿನವರಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಮುಂದೆ ನೇಮಕ ಮಾಡಲು ಅನುಕೂಲ ಮಾಡಿಕೊಡುವ ಉದ್ದೇಶದಿಂದ ಕರ್ನಾಟಕ ನಾಗರಿಕ ಸೇವಾ (ದೌರ್ಜನ್ಯದಿಂದ ಮೃತಪಟ್ಟ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ವ್ಯಕ್ತಿಗಳ ಕುಟುಂಬದ ಸದಸ್ಯರಿಗೆ ಅನುಕಂಪ ಆಧಾರಿತ ನೇಮಕಾತಿ) (ವಿಶೇಷ) (ತಿದ್ದುಪಡಿ) ನಿಯಮಗಳು 2022 ರ ನಿಯಮ 4(1)ಕ್ಕೆ ತಿದ್ದುಪಡಿ ಮಾಡಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸೂಚನೆ ನೀಡಲಾಗಿದೆ ಎಂದರು.

ಮೂರು ಎಪಿಎಂಸಿಗಳಿಗೆ ಬಯೊ ಸಿಎನ್‌ಜಿ ಘಟಕ

ಎಪಿಎಂಸಿ ಮಾರುಕಟ್ಟೆ ಪ್ರಾಂಗಣದಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ಬಳಸಿ ಜೈವಿಕ ಅನಿಲ ತಯಾರಿಸಲು ಬೆಂಗಳೂರಿನ ದಾಸನಪುರ, ಕೋಲಾರ ಮತ್ತು ಮೈಸೂರು ಎಪಿಎಂಸಿಗಳಲ್ಲಿ ತಲಾ 50 ಟಿಪಿಡಿ ಬಯೊ ಸಿಎನ್‌ಜಿ ಉತ್ಪಾದನಾ ಘಟಕ ಸ್ಥಾಪಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಸಂಪುಟ ಸಭೆಯ ಬಳಿಕ ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಇದರಿಂದ ಮಾರುಕಟ್ಟೆ ಪ್ರಾಂಗಣದಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಸಹಾಯಕವಾಗುತ್ತದೆ. ಅಲ್ಲದೇ, ನಿಸರ್ಗದ ಮೇಲೆ ಪ್ರತಿಕೂಲ ಪರಿಣಾಮ ಬೀರುವುದನ್ನು ತಪ್ಪಿಸಲು ಸಾಧ್ಯವಾಗುತ್ತದೆ. ಜತೆಗೆ ಆದಾಯವೂ ಬರುತ್ತದೆ. ಈ ಯೋಜನೆಯ ಅಂದಾಜು ವೆಚ್ಚ ₹74.88 ಕೋಟಿ. ಪ್ರತಿ ಘಟಕ ಸ್ಥಾಪನೆಗೆ ₹24.96 ಕೋಟಿ ವೆಚ್ಚವಾಗುತ್ತದೆ ಎಂದು ಅವರು ಹೇಳಿದರು.

ಈ ಮೂರು ಎಪಿಎಂಸಿಗಳಲ್ಲಿ ಪ್ರತಿ ದಿನ 20 ರಿಂದ 30 ಟನ್ ತ್ಯಾಜ್ಯ ಸಂಗ್ರಹವಾಗುತ್ತಿದೆ. ಈ ತ್ಯಾಜ್ಯವನ್ನು ಬಳಕೆ ಮಾಡಿಕೊಂಡು ಬಯೊ ಸಿಎನ್‌ಜಿ ಘಟಕ ಸ್ಥಾಪನೆ ಮಾಡುವುದರಿಂದ ಎಪಿಎಂಸಿಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಸುದ್ದಿಗಾರರಿಗೆ ತಿಳಿಸಿದರು.

ಪ್ರಮುಖ ತೀರ್ಮಾನಗಳು:

- ವಿಜಯಪುರ ಜಿಲ್ಲೆಯಲ್ಲಿ ಅಭಿವೃದ್ಧಿಪಡಿಸುತ್ತಿರುವ ವಿಜಯಪುರ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣದ ಅಭಿವೃದ್ಧಿ ಕಾಮಗಾರಿಗಳ ಒಟ್ಟು ₹618.75 ಕೋಟಿ ಮೊತ್ತ ಪರಿಷ್ಕೃತ ಅಂದಾಜಿಗೆ ಅನುಮೋದನೆ

- ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಹೃದ್ರೋಗ ವಿಭಾಗ ಸ್ಥಾಪಿಸಲು ಅಗತ್ಯವಿರುವ ವೈದ್ಯಕೀಯ ಉಪಕರಣಗಳನ್ನು ₹10.89 ಕೋಟಿ ಮೊತ್ತದಲ್ಲಿ ಖರೀದಿಗೆ ಒಪ್ಪಿಗೆ
- ಗದಗದಲ್ಲಿರುವ ಮಹಾತ್ಮಾ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕಾರ್ಯ ಚಟುವಟಿಕೆಗಳಿಗೆ ಅಗತ್ಯವಿರುವ ಕಟ್ಟಡ ಮತ್ತು ಮೂಲಸೌಲಭ್ಯ ಒದಗಿಸಲು ₹48.43 ಕೋಟಿ ಪರಿಷ್ಕೃತ ಅಂದಾಜಿಗೆ ಅನುಮೋದನೆ

- ಗದಗ ಜಿಲ್ಲೆ ರೋಣ ತಾಲ್ಲೂಕಿನ 9 ಸಣ್ಣ ನೀರಾವರಿ ಮತ್ತು ಜಿಲ್ಲಾ ಪಂಚಾಯತ್ ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ₹43.50 ಕೋಟಿ. ಮಲಪ್ರಭ ಬಲದಂಡೆ ಕಾಲುವೆಯ ವಿತರಣಾ ಕಾಲುವೆಗಳ ಆಧುನೀಕರಣ ಕಾಮಗಾರಿಗೆ ₹31.08 ಕೋಟಿ
- ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಅನುಷ್ಠಾನಗೊಂಡಿರುವ ಫಿಟ್ಟರ್ ಮತ್ತು ಎಲೆಕ್ಟ್ರಿಷಿಯನ್ ವೃತ್ತಿಗಳಿಗೆ ಡಿಜಿಟಿ ಪಠ್ಯಕ್ರಮದಂತೆ ಅಗತ್ಯವಿರುವ ಉಪಕರಣ ಮತ್ತು ಯಂತ್ರೋಪಕರಣಗಳನ್ನು ₹50 ಕೋಟಿಯಲ್ಲಿ ಖರೀದಿಸಲು ಒಪ್ಪಿಗೆ
- ಬೆಂಗಳೂರಿನ ಗಾಂಧಿನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವೈಟ್ ಟಾಪಿಂಗ್‌ಗೆ ₹58.44 ಕೋಟಿ
- ಕೋಲಾರ ಜಿಲ್ಲೆ ಬಂಗಾರಪೇಟೆ ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಒಪ್ಪಿಗೆ
- ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕು ಕರ್ನಾಳ್ ಏತನೀರಾವರಿ ಯೋಜನೆಗೆ ₹50.75 ಕೋಟಿ

- ರಾಜ್ಯದ 9,337 ಶಾಲೆಗಳಲ್ಲಿ ಬಿಸಿಯೂಟ ಸಿದ್ಧಪಡಿಸಲು ಹೊಸ ಪಾತ್ರೆ ಪರಿಕರಗಳನ್ನು ಖರೀದಿಸಲು ₹21.55 ಕೋಟಿಯನ್ನು ಕ್ಷೀರಭಾಗ್ಯ ಯೋಜನೆಯ ಅನುದಾನದಿಂದ ಭರಿಸಲು ಒಪ್ಪಿಗೆ

ದಸರಾ ಮಹೋತ್ಸವ

ಪ್ರಜಾವಾಣಿ ಚಿತ್ರ: ಅನೂಪ್ ರಾಘ. ಟಿ.

ಮೈಸೂರಿನಲ್ಲಿ ಜಿಲ್ಲಾಡಳಿತ ಹಾಗೂ ಯುವ ಸಂಭ್ರಮ ಉಪಸಮಿತಿ ದಸರಾ ಅಂಗವಾಗಿ ಆಯೋಜಿಸಿದ್ದ ಯುವ ಸಂಭ್ರಮ 25 ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಯುವಸ್ತೋಮ

ಸೆ.22ರಿಂದ ಮೊಸರು, ತುಪ್ಪದ ದರ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹಾರ ಉತ್ಪನ್ನಗಳ ಮೇಲಿನ ಜಿಎಸ್‌ಟಿಯನ್ನು ಶೇ 12ರಿಂದ 5ಕ್ಕೆ ಇಳಿಕೆ ಮಾಡಿರುವುದರಿಂದ ಸೆ.22ರಿಂದ ಮೊಸರು, ತುಪ್ಪ, ಬೆಣ್ಣೆ, ಲಸ್ಸಿ ಸೇರಿದಂತೆ 'ನಂದಿನಿ'ಯ ವಿವಿಧ ಉತ್ಪನ್ನಗಳ ದರ ಕಡಿಮೆಯಾಗಲಿದೆ.



ಸೆ.22ರಿಂದಲೇ ನಂದಿನಿ ಉತ್ಪನ್ನಗಳ ದರ ಶೇ 7ರಷ್ಟು ಕಡಿಮೆಯಾಗಲಿದೆ. ಪರಿಷ್ಕೃತ ದರ ಜಾರಿ ಸಂಬಂಧ ಆದೇಶ ಹೊರಡಿಸಲಾಗುತ್ತದೆ.

ಬಿ.ಶಿವಸ್ವಾಮಿ, ವ್ಯವಸ್ಥಾಪಕ ನಿರ್ದೇಶಕ, ಕೆಎಂಎಫ್

ಕೇಂದ್ರ ಸರ್ಕಾರದ ಸೂಚನೆಯಂತೆ ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳಿ (ಕೆಎಂಎಫ್) ಜಿಎಸ್‌ಟಿ ಕಡಿಮೆ ಮಾಡಲು ಮುಂದಾಗಿದ್ದು, ಮೊಸರಿನ ದರ ಲೀಟರ್‌ಗೆ ₹4ರವರೆಗೆ ಕಡಿಮೆ ಆಗುವ ನಿರೀಕ್ಷೆಯಿದೆ.

ದರ ಇಳಿಕೆ ಸಂಬಂಧ ಕೆಎಂಎಫ್‌ನ ಹಿರಿಯ ಅಧಿಕಾರಿಗಳ ಸಭೆ ಶುಕ್ರವಾರ ನಡೆಯಲಿದ್ದು, ಸೋಮವಾರದಿಂದಲೇ ಪರಿಷ್ಕೃತ ದರ ಜಾರಿಗೊಳಿಸುವಂತೆ ಮಾರಾಟಗಾರರಿಗೆ ಸೂಚಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

'ಜಿಎಸ್‌ಟಿ ಇಳಿಕೆ ಸಂಬಂಧ ಸೂಚನೆ ಬಂದಿದೆ. ಈ ಬಗ್ಗೆ ಅಂತಿಮ ತೀರ್ಮಾನ ಕೈಗೊಂಡು ಆದೇಶ ಜಾರಿ ಮಾಡಲಾಗುತ್ತದೆ' ಎಂದು ಮಹಾಮಂಡಳಿ ತಿಳಿಸಿದೆ.

2017ರಲ್ಲಿ ಹಾಲಿನ ಉತ್ಪನ್ನಗಳ ಮೇಲೆ ಜಿಎಸ್‌ಟಿ ಜಾರಿಗೊಳಿಸಲಾಗಿತ್ತು. ಇದಾದ ಬಳಿಕ 2022ರಲ್ಲಿ ಜಿಎಸ್‌ಟಿಯನ್ನು ಶೇ 12ಕ್ಕೆ ಹೆಚ್ಚಿಸಲಾಗಿತ್ತು. ಈಗ ತೆರಿಗೆ ದರ ಕಡಿಮೆ ಮಾಡಿರುವುದರಿಂದ ಗ್ರಾಹಕರಿಗೆ ಸ್ವಲ್ಪಮಟ್ಟಿಗೆ ಹೊರೆ ಕಡಿಮೆಯಾಗಲಿದೆ.

ದಸರಾಗೆ ಬಾನು: ಇಂದು 'ಸುಪ್ರೀಂ' ವಿಚಾರಣೆ

ಪ್ರಜಾವಾಣಿ ವಾರ್ತೆ

ಬಾನು ಮುಷ್ತಾಕ್

ನವದೆಹಲಿ: ಮೈಸೂರು ದಸರಾ ಉತ್ಸವದ ಉದ್ಘಾಟನೆಗೆ ಸಾಹಿತಿ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವುದನ್ನು ಪ್ರಶ್ನಿಸಿ ಸಲ್ಲಿಸಲಾದ ವಿಶೇಷ ಮೇಲ್ಮನವಿ ಅರ್ಜಿಯನ್ನು ಪರಿಶೀಲಿಸಲು ಸುಪ್ರೀಂ ಕೋರ್ಟ್ ಗುರುವಾರ ನಿರ್ಧರಿಸಿದೆ.

ಅರ್ಜಿದಾರ ಎಚ್‌.ಎಸ್‌.ಗೌರವ್ ಪರವಾಗಿ ವಕೀಲ ಸುಘೋಷ್ ಸುಬ್ರಹ್ಮಣ್ಯಂ ಅವರು ಭಾರತದ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ನೇತೃತ್ವದ ಪೀಠದ ಮುಂದೆ ಈ ಅರ್ಜಿಯನ್ನು ಉಲ್ಲೇಖಿಸಿದರು.

▶6



Exclusive Pre-GST benefits now make buying a Kia even more rewarding. Add in our ongoing festive offers, and the savings get even better. It's the perfect time to bring home the Kia you've always wanted.

Model	Pre-GST benefits (up to)	Additional festive benefits (up to)	Total benefits* (up to)
Seltos	₹ 58 000	₹ 1 52 000	₹ 2 10 000
Carens Clavis	₹ 53 650	₹ 35 000	₹ 88 650
Carens	₹ 43 500	₹ 67 000	₹ 1 10 500

*Benefits available on other Kia cars as per applicability.

For more information, visit our dealership or contact:

1800 108 5000 | 093195 91407 | www.kia.com | Book Kia | kiacare@kiaindia.net | Look for "Kia India" @

*Terms & condition apply. Pre- GST benefits and additional festive benefits are at the sole discretion of the dealership. The product shown is for representation purposes only. Benefits may vary from model to model & region to region. Actual features, colors, and specifications may not be part or standard fitment and may vary. Kia India Pvt. Ltd. reserves the right to make any changes with respect to the trims, colors, specifications, and other details of any model as mentioned or to modify/ discontinue any offer/scheme/service without prior notice. Kia urges you to follow traffic rules, these are meant to keep you safe on the roads. Visit your nearest Kia dealership for more details. Benefits applicable only in the state of Karnataka.

Bangalore: **Advaith Kia:** Lalbagh, Tel: 9611006006, Magadi Road, Tel: 6364871023, Banashankari, Tel: 6364871022, Basaweshwar Nagar, Tel: 6364871024; **JSP Kia:** Bellandur, Tel: 9071077717; Hosur Road, Tel: 9606011244; Sarjapur, Tel: 9513138856; **VST Kia:** Palace Cross, Tel: 9606988123, Yeshwanthpur, Tel: 9606988124 **Naara Kia:** JP Nagar, Tel: 7406528200, Kanakpura Road, Tel: 907010099; **Epitome Kia:** Whitefield, Tel: 9606970216, Yelahanka, Tel: 7406343339, Varthur, Tel: 9844240044, Avalahalli, Tel: 7022317666; **PPS Kia:** Mysore Road, Tel: 6309990010; **Taapasi Kia:** Kalyan Nagar, Tel: 8095537777; Koramangala, Tel: 9071177333; Tumkur: **PPS Kia:** Tel: 6303622210; Kolar: **Epitome Kia**: Tel: 8951903224

ಕಮಲ್ ಶ್ರೀದೇವಿ
ಕಿಶೋರ್

‘ನಟ ಪ್ರೇಕ್ಷಕರಿಗೆ ಉತ್ತರದಾಯಿ’

ಭಿನ್ನ ಪಾತ್ರಗಳ ಮೂಲಕ ಪ್ರೇಕ್ಷಕರೆದುರಿಗೆ ಬರುವ ನಟ ಕಿಶೋರ್ ನಟನೆಯ ‘ಕಮಲ್ ಶ್ರೀದೇವಿ’ ಇಂದು(ಸೆ.19) ತೆರೆಕಂಡಿದೆ. ಪಾತ್ರಗಳ ಆಯ್ಕೆ, ಸಿನಿಮಾ ಟಿಕೆಟ್ ದರ ಮಿತಿ ಮುಂತಾದ ವಿಷಯಗಳ ಬಗ್ಗೆ ಅವರು ಇಲ್ಲಿ ಮಾತನಾಡಿದ್ದಾರೆ.

• ಅಭಿಲಾಷ್ ಪಿ.ಎಸ್.

• ಪೊಲೀಸ್ ಪಾತ್ರಗಳು ಹುಡುಕಿಕೊಂಡು ಬರುತ್ತಿವೆಯಲ್ಲಾ...

(ನಗುತ್ತಾ...) ಪೊಲೀಸ್ ಹುಡುಕಿಕೊಂಡು ಬರುತ್ತಿಲ್ಲ, ಪೊಲೀಸ್ ಪಾತ್ರಗಳು ಹುಡುಕಿಕೊಂಡು ಬರುತ್ತಿವೆಯಲ್ಲ ಎಂದು ಖುಷಿಪಡಬೇಕು. ಕಥೆ ಹೇಳುವ ನಿರ್ದೇಶಕ ಯಾವ ಪಾತ್ರಗಳು ಕಥೆ ಹೇಳುವುದಕ್ಕೆ ಅನುಕೂಲವಾಗುತ್ತದೆಯೋ ಆ ಪಾತ್ರಗಳನ್ನು ಆಯ್ಕೆ ಮಾಡಿಕೊಳ್ಳುತ್ತಾನೆ. ಅದೇ ರೀತಿ ಕಲಾವಿದರ ಆಯ್ಕೆಯಲ್ಲೂ ತಂಡಗಳು ಯಾವ ಕಲಾವಿದ ಈ ಕಥೆಯನ್ನು ಪರಿಣಾಮಕಾರಿಯಾಗಿ ದಾಟಿಸಬಲ್ಲ ಎಂದು ನೋಡುತ್ತಿರುತ್ತಾರೆ. ಹೀಗಿರುವಾಗ ಇಂಥ ಪಾತ್ರಕ್ಕೆ ಒಗ್ಗಿಕೊಂಡಿರುವವರನ್ನು, ಇಮೇಜ್ ಇರುವವರನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಅಥವಾ ಈ ಮಾದರಿಯನ್ನು ಬಿಟ್ಟು ಹೊಸ ಮುಖಗಳನ್ನು ನೋಡುತ್ತಾರೆ. ಹೊಸ ಮುಖಗಳು ಕೆಲವೊಮ್ಮೆ ಪರಿಣಾಮಕಾರಿಯಾಗಿ ಇರುತ್ತವೆ. ‘ಏಳುಮಲೆ’ ಹಾಗೂ ‘ಕಮಲ್ ಶ್ರೀದೇವಿ’ ಸಿನಿಮಾಗಳನ್ನು ಆಯ್ಕೆ ಮಾಡಿಕೊಳ್ಳಲು ಕಥೆಯೇ ಮುಖ್ಯ ಕಾರಣ. ‘ಏಳುಮಲೆ’ಯಲ್ಲಿ ಜಾತಿ ವೈಷಮ್ಯ, ದ್ವೇಷದ ಕಥೆಯಿತ್ತು. ನಕಾರಾತ್ಮಕ ಅಂತ್ಯವಿದ್ದರೆ ಮಾಡುವುದಿಲ್ಲ ಎಂದು ‘ಏಳುಮಲೆ’ ನಿರ್ದೇಶಕ ಪುನೀತ್ ಅವರಿಗೆ ಮೊದಲೇ ಹೇಳಿದ್ದೆ. ಈ ರೀತಿಯ ವಿಷಯಗಳನ್ನು ಇಟ್ಟುಕೊಂಡು ಸಿನಿಮಾ ಮಾಡಿದಾಗ ಪ್ರೇಕ್ಷಕರ ಮನಸ್ಸಿನಲ್ಲಿ ಒಂದು ಭರವಸೆ ಮೂಡಿಸಬೇಕಾಗುತ್ತದೆ. ದುರಂತ ಅಂತ್ಯದ ಮೂಲಕ ಪರಿಣಾಮಕಾರಿಯಾಗಿ ಪ್ರೇಕ್ಷಕರ ಮನಸ್ಸಿನಲ್ಲಿ ಉಳಿಯುವುದು ಒಂದು ಕಡೆಯಾದರೆ, ಭರವಸೆಯನ್ನು ಮನಸ್ಸಿನಲ್ಲಿ ಉಳಿಸುವುದು ಅದಕ್ಕಿಂತ ಮುಖ್ಯ.

ಪೊಲೀಸ್ ಪಾತ್ರಗಳ ಆಯ್ಕೆಯಲ್ಲೂ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ನಾವು ಜನಗಳಿಗಾಗಿ ಸಿನಿಮಾ ಮಾಡುತ್ತಿರುವಾಗ, ಅವರಿಗೆ ನಾವು ಉತ್ತರದಾಯಿತ್ವರಾಗಿರುತ್ತೇವೆ. ಅವರ ಕಡೆಗಿನ ಬದ್ಧತೆ ಎಚ್ಚರಿಕೆಯಿಂದ ಪಾತ್ರಗಳ ಮಾಡಿಕೊಳ್ಳುವಂತೆ ಮಾಡುತ್ತದೆ.

• ‘ಕಮಲ್ ಶ್ರೀದೇವಿ’ಯ ಕಥೆಯೇನು?

‘ಕಮಲ್ ಶ್ರೀದೇವಿ’ ಒಂದು ಹೆಣ್ಣಿನ ಕೊಲೆಯ ಸುತ್ತ ನಡೆಯುವ ಕಥೆ. ಇವತ್ತಿಗೆ ಬಹಳ ಪ್ರಸ್ತುತವಾದ ವಿಷಯ ಈ ಸಿನಿಮಾದಲ್ಲಿದೆ. ನನಗೆ ಇದರಲ್ಲಿ ಕುತೂಹಲಕಾರಿಯಾಗಿ ಅನಿಸಿದ್ದು, ಇದರಲ್ಲಿ ಶಂಕಿತರಾಗಿ ಬರುವವರೆಲ್ಲರೂ ಸಮಾಜದ ಬೇರೆ ಬೇರೆ ವರ್ಗದಿಂದ ಬಂದವರು. ಇವರೆಲ್ಲರೂ ಒಂದು ಹೆಣ್ಣನ್ನು ಹೇಗೆ ನೋಡುತ್ತಾರೆ, ಒಂದು ಹೆಣ್ಣನ್ನು ಕೇವಲ ಭೋಗದ ವಸ್ತುವನ್ನಾಗಿ ನೋಡಿದಾಗ ಏನೇನಾಗುತ್ತದೆ?, ‘ಶ್ರೀದೇವಿ’ ಕೊಲೆಯಾಗುವ ಮಟ್ಟಕ್ಕೆ ಘಟನೆಗಳು ಏಕೆ ಹೋಗುತ್ತವೆ? ಎನ್ನುವುದು ಕಥೆ. ಮುಖ್ಯವಾಗಿ ಸಮಾಜವು ಹೆಣ್ಣನ್ನು ನೋಡುವ ದೃಷ್ಟಿಕೋನದ ಬಗ್ಗೆ ಜನರನ್ನು ಎಚ್ಚರಗೊಳಿಸಿ, ಯೋಚನೆಗೆ ಹಚ್ಚುವ ಕಥೆ ಇದು. ನಟಿ ಸಂಗೀತಾ ಭಟ್ ಮೂಲಕ ಈ ಸಿನಿಮಾ ಒಪ್ಪಿಕೊಂಡೆ. ಸ್ನೇಹಕ್ಕಾಗಿ ಸಿನಿಮಾ ಒಪ್ಪಿಕೊಳ್ಳುವವನು ನಾನಲ್ಲ. ಕಥೆ ಇಷ್ಟವಾದ ಕಾರಣ ನಟಿಸಿದೆ. ಸಂಗೀತಾ ಅವರಿಗೆ ಬಹಳ ಸವಾಲಿನ ಪಾತ್ರ ಇದರಲ್ಲಿತ್ತು. ಇಂತಹ ಸೂಕ್ಷ್ಮವಾದ ಪಾತ್ರವನ್ನು ನಿಭಾಯಿಸುವ ಸಾಮರ್ಥ್ಯ ಅವರಿಗೆ ಇದೆ. ಹೊಸ ನಿರ್ದೇಶಕರಾದರೂ ಸುನಿಲ್‌ಗೆ ಬಹಳ ಸ್ಪಷ್ಟತೆ ಇತ್ತು. ಸೂರಿ ಗರಡಿಯಿಂದ ಬಂದಿರುವ ಕಾರಣ ಅವರ ಸ್ಟೈಲ್, ಪ್ರಭಾವವೂ ಸಿನಿಮಾದಲ್ಲಿ ಕಾಣಿಸುತ್ತದೆ.

• ‘ಕೊಸ್ಟಾವೊ’ ಬಳಿಕ ಹಿಂದಿಯಿಂದ ಪ್ರತಿಕ್ರಿಯೆ ಹೇಗಿದೆ?

ಹಿಂದಿಯಿಂದ ಆಫರ್‌ಗಳು ಬರುತ್ತಲೇ ಇರುತ್ತವೆ. ಆದರೆ ಕುತೂಹಲಕಾರಿಯಾದ ಕಥೆಗಳು ಬಂದಿಲ್ಲ. ಕರೆ ಮಾಡಿದವರೆಲ್ಲರೂ ‘ಫ್ಯಾಮಿಲಿ ಮ್ಯಾನ್’ ಜ್ಞಾಪಕದಲ್ಲಿ ಇಟ್ಟುಕೊಂಡು ಮಾತನಾಡುತ್ತಾರೆ.

• ರಂಗಭೂಮಿಯಲ್ಲಿ ಸಕ್ರಿಯರಾಗಿದ್ದೀರಿ...

ಹೌದು. ಹಲವು ಹೊಸ ವಿಷಯಗಳನ್ನು ಈ ವೇದಿಕೆ ಮೂಲಕ ಕಲಿಯುತ್ತಿದ್ದೇನೆ. ಇದು ಸವಾಲುಗಳನ್ನೂ ಒಡ್ಡಿದೆ. ‘ಲವ್ ಲೆಟರ್ಸ್’ಗೆ ಹೆಚ್ಚಿನ ಪೂರ್ವತಯಾರಿ ಅಗತ್ಯವಿಲ್ಲ. ಆರಂಭದಲ್ಲಷ್ಟೇ ಒಂದಿಷ್ಟು ವರ್ಕ್‌ಶಾಪ್‌ಗಳನ್ನು ಮಾಡಿದ್ದೆವು. ಹೀಗಾಗಿ ನನ್ನ ಸಿನಿಮಾಗಳ ಒತ್ತಡದ ನಡುವೆ ಇದನ್ನೂ ನಿಭಾಯಿಸಿದೆ. ಬೇರೆ ಮಾದರಿಯ ನಾಟಕಗಳನ್ನು ಮಾಡಲು ಸಾಧ್ಯವೇ ಎನ್ನುವುದು ನನಗೆ ಗೊತ್ತಿಲ್ಲ. ಸಿನಿಮಾ–ರಂಗಭೂಮಿಯಲ್ಲಿ ಜೊತೆಯಾಗಿ ಹೆಜ್ಜೆ ಇಡುವ ಆಸೆ ಇದೆ. ‘ಲವ್ ಲೆಟರ್ಸ್’ಗೆ ಜನರ ಪ್ರತಿಕ್ರಿಯೆಯೂ ಅದ್ಭುತವಾಗಿತ್ತು. ರಂಗಮಂದಿರಗಳು, ಚಿತ್ರಮಂದಿರಗಳು ತುಂಬುವುದು ಸಮಾಜದ ಸ್ವಾಸ್ಥ್ಯವನ್ನು ಹೇಳುತ್ತದೆ. ಒಳ್ಳೆಯ ಸಿನಿಮಾಗಳಿಗೆ ಜನರು ಬಂದು ನೋಡಿದಾಗ ಅವರ ಆಲೋಚನೆ ಆರೋಗ್ಯಕರವಾಗಿದೆ ಎಂದರ್ಥ. ಇವತ್ತಿನ ದ್ವೇಷ ರಾಜಕಾರಣ ನಡೆಯುತ್ತಿರುವ ಸಂದರ್ಭದಲ್ಲಿ ಜನ ತೆರೆದ ಮನಸ್ಸಿನಿಂದ ಇರುವುದು ಖುಷಿ ಕೊಡುತ್ತದೆ, ಭರವಸೆಯನ್ನೂ ನೀಡುತ್ತದೆ.

• ಹೊಸ ಪ್ರಾಜೆಕ್ಟ್‌ಗಳು...

ಬರಗೂರು ರಾಮಚಂದ್ರಪ್ಪ ಅವರ ಜೊತೆಗೊಂದು ಸಿನಿಮಾ ಮಾಡುತ್ತಿದ್ದೇನೆ. ಸಂಗೀತ ನಿರ್ದೇಶಕ ಹಂಸಲೇಖ ಅವರು ನಿರ್ದೇಶಿಸುತ್ತಿರುವ ‘ಒಕೆ’ ಸಿನಿಮಾದಲ್ಲಿ ನಟಿಸುತ್ತಿದ್ದೇನೆ. ಈ ಹಿಂದೆ ‘ಲಂಕೆ’ ಎಂಬ ಸಿನಿಮಾ ಮಾಡಿದ್ದ ರಾಮ್ ಪ್ರಸಾದ್ ಅವರೊಂದಿಗೆ ‘ಡಿಟಾಕ್ಸ್’ ಎಂಬ ಸಿನಿಮಾವಿದೆ. ತಮಿಳಿನಲ್ಲಿ ಹೊಸ ನಿರ್ದೇಶಕರೊಬ್ಬರ ಜೊತೆಗೊಂದು ಸಿನಿಮಾವಿದೆ. ಇದರಲ್ಲಿ ಪೊಲೀಸ್ ಪಾತ್ರ ಮಾಡುತ್ತಿದ್ದೇನೆ. ತಮಿಳಿನ ವೆಬ್ ಸರಣಿಯೊಂದರಲ್ಲಿ ಅತಿಥಿ ಪಾತ್ರದಲ್ಲಿ ನಟಿಸುತ್ತಿದ್ದೇನೆ. ತೆಲುಗಿನಿಂದಲೂ ಅವಕಾಶಗಳು ಬರುತ್ತಿವೆ.

ದೊಡ್ಡ ಪ್ರಾಜೆಕ್ಟ್‌ಗಳು ಸದ್ಯಕ್ಕೆ ಯಾವುದೂ ಇಲ್ಲ. ಕನ್ನಡದಲ್ಲೇ ಹಲವು ಸಿನಿಮಾಗಳನ್ನು ಮಾಡುತ್ತಿದ್ದೇನೆ.

• ಸಿನಿಮಾ ಟಿಕೆಟ್ ದರ ಮಿತಿಯ ಬಗ್ಗೆ ನಿಮ್ಮ ಅನಿಸಿಕೆ ಏನು?

ಇದೊಂದು ಒಳ್ಳೆಯ ನಡೆ. ಮನೆಯಲ್ಲಿ ಕುಳಿತು ಸಿನಿಮಾ ನೋಡಿದರೆ ಅದರ ಸಂಪೂರ್ಣ ಅನುಭವ ಸಿಗಲು ಸಾಧ್ಯವೇ ಇಲ್ಲ. ಸಿನಿಮಾ ಮಾಡುವವರು, ಸಿನಿಮಾದೊಳಗೆ ಇರುವವರು ಏನೇನೋ ವಿಷಯಗಳನ್ನು ಹೇಳಬೇಕು ಎಂದು ಪ್ರಾಮಾಣಿಕವಾಗಿ ಶ್ರಮಪಟ್ಟಿರುತ್ತಾರೆ. ಪ್ರೇಕ್ಷಕನೊಬ್ಬ ಸಿನಿಮಾದೊಳಗೆ ಸಂಪೂರ್ಣವಾಗಿ ಹೊಕ್ಕರಷ್ಟೇ ನಿರ್ದೇಶಕರು ಹೇಳಬಯಸುವ ಎಲ್ಲಾ ಅಂಶಗಳು ಆತನಿಗೆ ತಲುಪುತ್ತವೆ. ಹೀಗಾದರಷ್ಟೇ ನಿರ್ದೇಶಕ–ಪ್ರೇಕ್ಷಕನ ನಡುವೆ ಅತ್ಯಂತ ಪರಿಣಾಮಕಾರಿಯಾದ ಸಂಭಾಷಣೆಯೊಂದು ನಡೆಯುತ್ತದೆ. ಈ ಅನುಭವಕ್ಕೆ ಯಾವುದೂ ಅಡೆತಡೆಯಾಗಬಾರದು. ಇಂತಹ ವಾತಾವರಣ ಚಿತ್ರಮಂದಿರದೊಳಗಷ್ಟೇ ಸಿಗಲು ಸಾಧ್ಯ. ಹಿಂದೆಲ್ಲಾ ಸಿನಿಮಾ ಕ್ಲಬ್ ಇರುತ್ತಿದ್ದವು, ಮಕ್ಕಳನ್ನು ಶಾಲೆಯಿಂದ ಸಿನಿಮಾಗೆ ಕರೆದೊಯ್ಯುತ್ತಿದ್ದರು. ಈಗ ಇದ್ಯಾವುದೂ ಇಲ್ಲ. ಸಿನಿಮಾಗಳನ್ನು ನೋಡಿ ಅವುಗಳ ಅನುಭವಗಳನ್ನು, ವಿಷಯಗಳನ್ನು ಮಾತುಗಳಲ್ಲಿ ಬಳಸುತ್ತಿದ್ದೆವು.

ಪ್ರಸ್ತುತ ಸಿನಿಮಾ ನೋಡುವುದು ದುಬಾರಿಯಾಗಿದೆ. ಒಂದು ಕುಟುಂಬ ಹೋದರೆ ಮೂರ್ನಾಲ್ಕು ಸಾವಿರ ಖರ್ಚು ಆಗುತ್ತಿದೆ. ಒಂದು ಅದ್ಭುತವಾದ, ಅಮೂಲ್ಯವಾದ ಅನುಭವವನ್ನು ಜನರು ಕಳೆದುಕೊಳ್ಳುತ್ತಿದ್ದಾರೆ.

ಜನರ ಆರ್ಥಿಕ ಸ್ಥಿತಿಯೂ ಕುಗ್ಗಿದೆ. ಸಿನಿಮಾ ಅಥವಾ ಕಲೆ ಎನ್ನುವುದು ಕೇವಲ ಮನರಂಜನೆಯಲ್ಲ. ಅದು ಹೃದಯದೊಂದಿಗಿನ ಸಾಮಾಜಿಕ ಸಂವಹನ. ಇದರೊಂದಿಗೆ ಸಮಾಜದ ಮುಖಾಮುಖಿ ಆಗುತ್ತಲೇ ಇರಬೇಕು. ಬರಹಗಾರ, ಕಥೆಗಾರ, ನಿರ್ದೇಶಕ, ರಂಗಕರ್ಮಿ ಜನರ ಪ್ರತಿನಿಧಿಯಾಗಿ ಈ ವೇದಿಕೆಯನ್ನು ಬಳಸಿಕೊಳ್ಳುತ್ತಿರುತ್ತಾನೆ. ದೇಶ ಸುತ್ತಿ ನೋಡು, ಕೋಶ ಓದಿ ನೋಡು ಎನ್ನುತ್ತಾರೆ. ಈ ಸಿನಿಮಾ ಅಥವಾ ಉಳಿದ ಕಲೆಗಳೆಲ್ಲವೂ ಕೋಶದ ಭಾಗವೇ. ದುಬಾರಿಯಾದ ಟಿಕೆಟ್ ದರದಿಂದ ದುಡ್ಡಿದ್ದವರಷ್ಟೇ ಸಿನಿಮಾಗೆ ತೆರೆದುಕೊಳ್ಳುವ ಅಪಾಯವೂ ಇತ್ತು. ಒಬ್ಬನ ಆರ್ಥಿಕ ಸ್ಥಿತಿಯು ಸಮಾಜದ ಜೊತೆಗಿನ ಸಂವಹನದ ಅವಕಾಶವನ್ನು ನಿರ್ಧರಿಸುತ್ತದೆ ಎಂದರೆ ಇದು ಹೆಚ್ಚು ಅಪಾಯಕಾರಿ. ಟಿಕೆಟ್ ದರ ಮಿತಿಯಿಂದ ಜನ ಇದೀಗ ದುಡ್ಡಿನ ಬಗ್ಗೆ ಯೋಚನೆ ಮಾಡಬೇಕಾಗಿಲ್ಲ. ಸಿನಿಮಾ ನಿರ್ಮಾಣ ಮಾಡುವವರೂ ಒಳ್ಳೆಯ ಕಥೆಗಳ ಮೂಲಕ ಈ ಅವಕಾಶವನ್ನು ಬಳಸಿಕೊಳ್ಳಬೇಕು. ಇದಾಗದೇ ಇದ್ದಲ್ಲಿ ಪ್ರಾಮಾಣಿಕವಾಗಿ ಸಿನಿಮಾ ಮಾಡುವವರನ್ನೂ ಜನ ನಂಬದ ಸ್ಥಿತಿ ಎದುರಾಗಲಿದೆ. ❖

ರಮೇಶ್ ಅರವಿಂದ್

‘ದೈಜಿ’ಯಲ್ಲಿ ರಮೇಶ್ ಭಿನ್ನ ಅವತಾರ

ರಮೇಶ್ ಅರವಿಂದ್ ನಟನೆಯ 106ನೇ ಚಿತ್ರ, ಆಕಾಶ್ ಶ್ರೀವತ್ಸ ನಿರ್ದೇಶನದ ‘ದೈಜಿ’ಯ ಟೀಸರ್ ಇತ್ತೀಚೆಗೆ ಬಿಡುಗಡೆಗೊಂಡಿತು.

‘ದೈಜಿ’ ಥ್ರಿಲ್ಲರ್ ಹಾರರ್ ಚಿತ್ರವಾಗಿದೆ. ಈ ಹಿಂದೆ ರಮೇಶ್ ಅವರು ನಟಿಸಿದ್ದ ‘ಶಿವಾಜಿ ಸುರತ್ಕಲ್’ ಸಿನಿಮಾ ಸರಣಿಯನ್ನು ಆಕಾಶ್ ನಿರ್ದೇಶಿಸಿದ್ದರು. ಇದು ರಮೇಶ್ ಅವರ ಸಿನಿಪಯಣಕ್ಕೆ ಹೊಸ ತಿರುವು ನೀಡಿತ್ತು. ಇವರ ಕಾಂಬಿನೇಷನ್‌ನ ಮೂರನೇ ಸಿನಿಮಾವಾಗಿ ‘ದೈಜಿ’ ಪ್ರೇಕ್ಷಕರ ಎದುರಿಗೆ ಬರಲಿದೆ.

‘ಹತ್ತು ವರ್ಷಗಳ ಹಿಂದೆ ನಾನು, ಆಕಾಶ್ ಶ್ರೀವತ್ಸ ಅವರಿಗೆ ಈ ಚಿತ್ರದ ಕಥೆ ಬಗ್ಗೆ ಹೇಳಿದ್ದೆ. ಇದು ವಿದೇಶದಲ್ಲಿ ನಾನು ಕಂಡಿರುವ ನೈಜ ಘಟನೆ ಆಧರಿತ ಚಿತ್ರ. ಇದನ್ನು ನಾನು ಅಂದುಕೊಂಡಂತೆ ತೆರೆಗೆ ತಂದಿರುವ ತಂತ್ರಜ್ಞರಿಗೆ ಹಾಗೂ ಕಲಾವಿದರಿಗೆ ಧನ್ಯವಾದ’ ಎಂದರು ಚಿತ್ರದ ನಿರ್ಮಾಪಕ ರವಿ ಕಶ್ಯಪ್.

ಆಕಾಶ್ ಶ್ರೀವತ್ಸ ಮಾತನಾಡಿ, ‘ಈ ಕಥೆಗೆ ರಮೇಶ್ ಅರವಿಂದ್ ಅವರೇ ಸೂಕ್ತ ಎನಿಸಿ ಅವರಿಗೆ ಕಥೆ ಹೇಳಿದೆ. ಅವರು ನಟಿಸಲು ಒಪ್ಪಿಕೊಂಡರು. ‘ಸೂರ್ಯ’ ಎಂಬ ಪಾತ್ರದಲ್ಲಿ ರಮೇಶ್ ಅವರು ಕಾಣಿಸಿಕೊಂಡಿದ್ದಾರೆ. ರಾಧಿಕಾ ನಾರಾಯಣ್ ‘ಭೂಮಿ’ ಪಾತ್ರದಲ್ಲಿ ಹಾಗೂ ರಮೇಶ್ ಅವರ ತಮ್ಮನಾಗಿ ನಟ ದಿಗಂತ್ ‘ಗಗನ್’ ಎನ್ನುವ ಪಾತ್ರದಲ್ಲಿ ನಟಿಸಿದ್ದಾರೆ. ‘ದೈಜಿ’ ಎಂದರೆ ಪ್ರೇತಾತ್ಮಗಳ ದೈವ ಎಂದರ್ಥ. ಸದ್ಯದಲ್ಲೇ ಟ್ರೇಲರ್ ಬರಲಿದ್ದು, ವರ್ಷದ ಕೊನೆ ಅಥವಾ 2026ರ ಆರಂಭಕ್ಕೆ ಸಿನಿಮಾ ತೆರೆಕಾಣಲಿದೆ’ ಎಂದರು.

‘ಸಾಮಾನ್ಯ ಹಾರಾರ್ ಚಿತ್ರಗಳಿಗಿಂತ ಭಿನ್ನವಾದ ಕಥೆ ಈ ಸಿನಿಮಾದಲ್ಲಿದೆ. ವಿಭಿನ್ನವಾಗಿ ಈ ಕಥೆಯನ್ನು ಶ್ರೀವತ್ಸ ತೆರೆಗೆ ತಂದಿದ್ದಾರೆ. ನಾನು ಕೆ.ಬಾಲಚಂದರ್ ಅವರಂತಹ ಹೆಸರಾಂತ ನಿರ್ದೇಶಕರ ಜೊತೆಗೆ ಹತ್ತು ಸಿನಿಮಾ ಮಾಡಿದ್ದೇನೆ. ಮುಂದೆ ಶ್ರೀವತ್ಸ ಅವರ ಜೊತೆಗೂ ಇದೇ ರೀತಿ ಸಿನಿಮಾ ಮಾಡಲಿದ್ದೇನೆ. ದಿಗಂತ್ ಅವರ ಲವಲವಿಕೆ ನನಗೆ ಬಹಳ ಇಷ್ಟ. ಈ ಚಿತ್ರದಲ್ಲಿ ವಿದೇಶದ ಪ್ರಸಿದ್ಧ ಕಲಾವಿದರೊಂದಿಗೂ ನಟಿಸಿದ್ದೇನೆ’ ಎಂದರು ರಮೇಶ್ ಅರವಿಂದ್.

ನಿರ್ದೇಶಕ, ನಟ ಬಿ.ಎಂ.ಗಿರಿರಾಜ್ ಚಿತ್ರದಲ್ಲಿ ನಟಿಸಿದ್ದಾರೆ. ಶ್ರೀಶ ಕುದುವಳ್ಳಿ ಛಾಯಾಚಿತ್ರಗ್ರಹಣ, ಜ್ಯೂಡ ಸ್ಯಾಂಡಿ ಅವರ ಹಿನ್ನೆಲೆ ಸಂಗೀತ ಚಿತ್ರಕ್ಕಿದೆ. ಆಕಾಶ್ ಶ್ರೀವತ್ಸ ಅವರೇ ಚಿತ್ರಕ್ಕೆ ಸಂಕಲನ ಮಾಡಿದ್ದಾರೆ ❖

ಆಕಾಶ್ ಶ್ರೀವತ್ಸ, ರಾಧಿಕಾ, ರಮೇಶ್ ಅರವಿಂದ್, ರವಿ ಕಶ್ಯಪ್, ದಿಗಂತ್

ಪ್ರೈಮ್‌ನಲ್ಲಿ ‘ಹೆಬ್ಬುಲಿ ಕಟ್’



ಭೀಮರಾವ್ ಪಿ. ನಿರ್ದೇಶನದ ‘ಹೆಬ್ಬುಲಿ ಕಟ್’ ಸಿನಿಮಾ ಸೆ.19 ರಿಂದ ಅಮೆಜಾನ್ ಪ್ರೈಮ್‌ನಲ್ಲಿ ವೀಕ್ಷಿಸಬಹುದಾಗಿದೆ.

‘ಹೆಬ್ಬುಲಿ’ ಸಿನಿಮಾದಲ್ಲಿ ನಟ ಸುದೀಪ್ ಅವರು ಮಾಡಿಕೊಂಡಿದ್ದ ಕೇಶವಿನ್ಯಾಸ ಚಿತ್ರದ ನಾಯಕಿಗೆ ಇಷ್ಟ. ಇದನ್ನರಿತ ನಾಯಕ ಆ ರೀತಿ ಕೇಶವಿನ್ಯಾಸ ಮಾಡಿಸಿಕೊಳ್ಳಲು ಮುಂದಾಗುತ್ತಾನೆ. ಮುಂದಿನ ಘಟನೆಗಳೇ ಚಿತ್ರದ ಕಥಾಹಂದರ. ನಟ ನೀನಾಸಂ ಸತೀಶ್ ಪ್ರಸ್ತುತಪಡಿಸಿದ್ದ ಈ ಸಿನಿಮಾದಲ್ಲಿ ಮೌನೇಶ್ ನಟರಂಗ, ಅನನ್ಯ, ಮಹಾದೇವ ಹಡಪದ, ಉಮಾ ವೈ.ಜಿ., ವಿನಯ್ ಮಹಾದೇವನ್, ಮಹಂತೇಶ್ ಹಿರೇಮಠ, ಪುನೀತ್ ಶೆಟ್ಟಿ ಮತ್ತಿತರರು ನಟಿಸಿದ್ದಾರೆ. ಅಸ್ಪೃಶ್ಯತೆ, ಜಾತಿ ತಾರತಮ್ಯ, ದಬ್ಬಾಳಿಕೆಯ ಘಟನೆಗಳ ಚಿತ್ರಣಗಳಿಗೆ ಕಮರ್ಷಿಯಲ್ ಸ್ಪರ್ಶ ನೀಡಿ ‘ಹೆಬ್ಬುಲಿ ಕಟ್’ ಸಿನಿಮಾ ಹೆಣೆಯಲಾಗಿದೆ. ❖

ಕ್ಯಾಸೆಟ್‌ನಲ್ಲಿ ಬಂತು ‘ಫುಲ್ ಮೀಲ್ಸ್’ ಹಾಡು



ತೇಜಸ್ವಿನಿ ಶರ್ಮಾ

‘ಸಂಕಷ್ಟಕರ ಗಣಪತಿ’ ಸಿನಿಮಾ ಖ್ಯಾತಿಯ ನಟ ಲಿಖಿತ್ ಶೆಟ್ಟಿ, ನಟಿ ತೇಜಸ್ವಿನಿ ಶರ್ಮಾ ಹಾಗೂ ಖುಷಿ ರವಿ ನಟಿಸಿರುವ ‘ಫುಲ್ ಮೀಲ್ಸ್’ ಚಿತ್ರ ಬಿಡುಗಡೆಗೆ ಸಜ್ಜಾಗುತ್ತಿದ್ದು, ಇತ್ತೀಚೆಗೆ ಚಿತ್ರದ ಹಾಡೊಂದು ಕ್ಯಾಸೆಟ್‌ನಲ್ಲಿ ಬಿಡುಗಡೆಯಾಗಿದೆ.

ಹಿಂದೆಲ್ಲಾ ಆಡಿಯೊ ಹಿಟ್ ಆಯಿತೋ ಇಲ್ಲವೋ ಎನ್ನುವುದು ನಿರ್ಧಾರವಾಗುತ್ತಿದ್ದಿದ್ದು ಕ್ಯಾಸೆಟ್‌ಗಳ ಮಾರಾಟ ಸಂಖ್ಯೆಯಿಂದ. ಈ ಡಿಜಿಟಲ್ ಯುಗದಲ್ಲಿ ಕ್ಯಾಸೆಟ್‌ಗಳು ಮರೆಯಾಗಿವೆ. ಇದೀಗ ಮತ್ತೆ ಆ ಯುಗಕ್ಕೆ ಕರೆದೊಯ್ಯುವ ಪ್ರಯತ್ನವನ್ನು ಚಿತ್ರತಂಡ ಮಾಡಿದೆ. ಚಿತ್ರದ ಸಂಗೀತ ನಿರ್ದೇಶಕ ಗುರುಕಿರಣ್, ಲಿಖಿತ್ ಶೆಟ್ಟಿ, ನಿರ್ದೇಶಕ ಎನ್. ವಿನಾಯಕ, ನಾಯಕಿಯರಾದ ಖುಷಿ ರವಿ ಮತ್ತು ತೇಜಸ್ವಿನಿ ಶರ್ಮಾ ಹಾಡಿನ ಕ್ಯಾಸೆಟ್ ಪ್ರದರ್ಶಿಸಿದರು. ಟೇಪ್ ರೆಕಾರ್ಡರ್‌ನಲ್ಲಿ ಕ್ಯಾಸೆಟ್ ಹಾಕಿ ಗುರುಕಿರಣ್ ‘ವಾಹ್ ಏನೋ ಹವಾ’ ಎಂಬ ಹಾಡು ಲೋಕಾರ್ಪಣೆಗೊಳಿಸಿದರು.

ಕವಿರಾಜ್ ಸಾಹಿತ್ಯ ಈ ಹಾಡಿಗಿದೆ. ವಿಜೇತ್ ಅರಸ್ ಮತ್ತು ಸುನಿಧಿ ಗಣೇಶ್ ಹಾಡಿಗೆ ದನಿಯಾಗಿದ್ದಾರೆ. ‘ಸಂಗೀತವನ್ನು ಪ್ರಸ್ತುತಪಡಿಸುವ ರೀತಿ ಬದಲಾಗಬಹುದು. ಆದರೆ ಸಂಗೀತ ಎಂದಿಗೂ ಬದಲಾಗುವುದಿಲ್ಲ. ಈಗಿನ ಪೀಳಿಗೆಯ ಟ್ರೆಂಡ್‌ಗೆ ತಕ್ಕಂತೆ ಮಾಡಿರುವ ‘ಫುಲ್ ಮೀಲ್ಸ್’ನ ಹಾಡುಗಳು ಪ್ರೇಕ್ಷಕರಿಗೆ ಮೆಚ್ಚುಗೆಯಾಗಲಿವೆ’ ಎನ್ನುತ್ತಾರೆ ಗುರುಕಿರಣ್.

ನ.21ಕ್ಕೆ ಸಿನಿಮಾ ಬಿಡುಗಡೆಯಾಗಲಿದ್ದು, ಮುಂದಿನ ದಿನಗಳಲ್ಲಿ ಉಳಿದ ಹಾಡುಗಳು ಹಾಗೂ ಟ್ರೇಲರ್ ಬಿಡುಗಡೆಗೊಳಿಸಲಾಗುವುದು ಎಂದಿದೆ ಚಿತ್ರತಂಡ. ಚಿತ್ರದುರ್ಗದ ಎನ್. ವಿನಾಯಕ ಕಥೆ, ಚಿತ್ರಕಥೆ ಬರೆದು ಈ ಸಿನಿಮಾವನ್ನು ನಿರ್ದೇಶಿಸಿದ್ದಾರೆ. ದೀಪು ಎಸ್. ಕುಮಾರ್ ಸಂಕಲನ, ಮನೋಹರ್ ಜೋಷಿ ಛಾಯಾಚಿತ್ರಗ್ರಹಣ, ಹರೀಶ್ ಗೌಡ ಸಂಭಾಷಣೆ, ವಿಶ್ವಾಸ್ ಕಶ್ಯಪ್ ಕಲಾ ನಿರ್ದೇಶನ, ಅರ್ಜುನ್ ರಾಜ್ ಸಾಹಸ ನಿರ್ದೇಶನ ಚಿತ್ರಕ್ಕಿದೆ. ರಂಗಾಯಣ ರಘು, ಸೂರಜ್, ವಿಜಯ್ ಚಂಡೂರ್, ರವಿಶಂಕರ್ ಗೌಡ, ರಾಜೇಶ್ ನಟರಂಗ, ಸುಜಯ್ ಶಾಸ್ತ್ರಿ, ಚಂದ್ರಕಲಾ ಮೋಹನ್, ಹೊನ್ನವಳ್ಳಿ ಕೃಷ್ಣ, ರಮೇಶ್ ಪಂಡಿತ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ❖

ಗೆರಿಲ್ಲಾ ವಾರ್‌ನಲ್ಲಿ ಉಪೇಂದ್ರ

ನಟ ಉಪೇಂದ್ರ ಜನ್ಮದಿನದಂದು(ಸೆ.18) ಅವರ ಹೊಸ ಸಿನಿಮಾ ‘ಗೆರಿಲ್ಲಾ ವಾರ್’ ಘೋಷಣೆಯಾಗಿದೆ. ಸಿನಿಮಾವನ್ನು ಖ್ಯಾತ ನಿರ್ದೇಶಕ ಓಂಪ್ರಕಾಶ್ ರಾವ್ ನಿರ್ದೇಶಿಸಲಿದ್ದು, ಸದ್ಯದಲ್ಲೇ ಚಿತ್ರೀಕರಣ ಆರಂಭವಾಗಲಿದೆ.

ಓಂಪ್ರಕಾಶ್ ರಾವ್

‘ಎಕೆ 47’, ‘ಲಾಕಪ್‌ಡೆತ್’, ‘ಕಲಾಸಿಪಾಳ್ಯ’, ‘ಹುಚ್ಚ’ ಸೇರಿದಂತೆ ಹಲವು ಸಿನಿಮಾಗಳನ್ನು ನಿರ್ದೇಶಿಸಿರುವ ಓಂಪ್ರಕಾಶ್ ರಾವ್ ಅವರ ನಿರ್ದೇಶನದ 50ನೇ ಸಿನಿಮಾವಾಗಿ ಇದು ಸೆಟ್ಟೇರಲಿದೆ. ಓಂಪ್ರಕಾಶ್ ರಾವ್ ನಿರ್ದೇಶನದ ‘ತ್ರಿಶೂಲಂ’ ಚಿತ್ರದಲ್ಲೂ ಉಪೇಂದ್ರ ಅವರು ನಟಿಸಿದ್ದು, ‘ಗೆರಿಲ್ಲಾ ವಾರ್’ ಇವರಿಬ್ಬರ ಕಾಂಬಿನೇಶನ್‌ನಲ್ಲಿ ಮೂಡಿಬರುತ್ತಿರುವ ಎರಡನೇ ಚಿತ್ರವಾಗಿದೆ.

ಬೇಬಿ ಇಂಚರ ಅರ್ಪಿಸುವ, ಎನ್.ಎಸ್.ರಾವ್ ಸಿನಿ ಕ್ರಿಯೇಷನ್ಸ್ ಲಾಂಛನದಲ್ಲಿ ಓಂಪ್ರಕಾಶ್ ರಾವ್ ಹಾಗೂ ಆರ್. ವಾಸುದೇವ ರೆಡ್ಡಿ ಈ ಸಿನಿಮಾವನ್ನು ನಿರ್ಮಾಣ ಮಾಡಲಿದ್ದಾರೆ. ಡೆನ್ನಿಸಾ ಪ್ರಕಾಶ್ ಬರೆದಿರುವ ಕಥೆಗೆ ಓಂಪ್ರಕಾಶ್ ಅವರೇ ಚಿತ್ರಕಥೆ ಬರೆದಿದ್ದಾರೆ. ಹಂಸಲೇಖ ಅವರು ಹಾಡುಗಳನ್ನು ಬರೆದು ಸಂಗೀತ ಸಂಯೋಜಿಸುತ್ತಿದ್ದಾರೆ. ರವಿಕುಮಾರ್ ಛಾಯಾಚಿತ್ರಗ್ರಹಣ, ಲಕ್ಷ್ಮಣ್ ರೆಡ್ಡಿ ಸಂಕಲನ, ದೀಪು ಪಿ.ಆರ್. ಸಂಭಾಷಣೆ ಹಾಗೂ ರವಿವರ್ಮ ಸಾಹಸ ನಿರ್ದೇಶನ ಚಿತ್ರಕ್ಕಿದೆ.

ಉಪೇಂದ್ರ ಅವರಿಗೆ ನಾಯಕಿಯಾಗಿ ನಿಮಿಕಾ ರತ್ನಾಕರ್ ನಟಿಸಲಿದ್ದು, ರಂಗಾಯಣ ರಘು, ಸ್ವಸ್ತಿಕ್ ಶಂಕರ್, ಅಚ್ಯುತ್ ರಾವ್, ಭಾಸ್ಕರ್ ಶೆಟ್ಟಿ, ಆರಾಧ್ಯ, ಶ್ವೇತ ವೀರೇಶ್ ಮುಂತಾದವರು ತಾರಾಬಳಗದಲ್ಲಿದ್ದಾರೆ.



ಉಪೇಂದ್ರ

‘ಗೆರಿಲ್ಲಾ ವಾರ್’ ಒಂದು ರೀತಿಯ ಯುದ್ಧ. ಅಲ್ಲಿ ಒಂದು ಸಣ್ಣ ಗುಂಪು ದೊಡ್ಡ ಸಂಖ್ಯೆಯ ಶತ್ರುಗಳ ವಿರುದ್ಧ ಅಸಾಂಪ್ರದಾಯಿಕ ತಂತ್ರಗಳನ್ನು ಬಳಸುತ್ತದೆ. ಹಿಂದೆ ಈ ರೀತಿಯ ಯುದ್ಧಗಳು ಆಗಿರುವ ಅನೇಕ ಉದಾಹರಣೆಗಳಿವೆ. ಹಾಗೆಂದು ನಮ್ಮದು ಐತಿಹಾಸಿಕ ಚಿತ್ರವಲ್ಲ. ಈ ವಿಷಯವನ್ನಿಟ್ಟುಕೊಂಡು ಪ್ರಸಕ್ತ ನಾವು ಎದುರಿಸುತ್ತಿರುವ ಅನೇಕ ಸಮಸ್ಯೆಗಳ ಬಗ್ಗೆ ತೋರಿಸುವ ಪ್ರಯತ್ನ ಮಾಡಲಾಗುವುದು. ಉಪೇಂದ್ರ ಈ ಚಿತ್ರದಲ್ಲಿ ಸೈನಿಕನ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಆದರೆ ಈ ಸೈನಿಕ ಗಡಿಯನ್ನು ಮಾತ್ರ ಕಾಯುವ ಸೈನಿಕನಲ್ಲ. ಪ್ರಸ್ತುತ ಇರುವ ಸಮಸ್ಯೆಗಳನ್ನು ಪರಿಹರಿಸುವ ನಾಯಕ. ಈಗಿನ ನೂತನ ತಂತ್ರಜ್ಞಾನಗಳನ್ನು ಬಳಸಿಕೊಂಡು ಅದ್ದೂರಿಯಾಗಿ ಈ ಚಿತ್ರ ಮೂಡಿಬರಲಿದೆ’ ಎನ್ನುತ್ತಾರೆ ಓಂಪ್ರಕಾಶ್ ರಾವ್. ❖

‘ಡ್ಯಾಡ್’ ಚಿತ್ರದ ಎರಡನೇ ಹಂತದ ಶೂಟಿಂಗ್

ಶಿವರಾಜ್‌ಕುಮಾರ್

ತೆಲುಗಿನ ನಿರ್ದೇಶಕ ಅನಿಲ್ ಕನ್ನೆಗಂಟಿ ನಿರ್ದೇಶನದ, ಶಿವರಾಜ್‌ಕುಮಾರ್ ನಟಿಸುತ್ತಿರುವ ‘ಡ್ಯಾಡ್’ ಚಿತ್ರದ ಎರಡನೇ ಹಂತದ ಚಿತ್ರೀಕರಣ ಬೆಂಗಳೂರಿನ ಸಮೀಪದ ನಂದಿಬೆಟ್ಟದಲ್ಲಿ ನಡೆಯುತ್ತಿದೆ.

ಮೈಸೂರಿನಲ್ಲಿ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಳಿಸಿ ಚಿತ್ರತಂಡ ಇದೀಗ ನಂದಿ ಬೆಟ್ಟದಲ್ಲಿ ಶೂಟಿಂಗ್ ಮುಂದುವರಿಸಿದೆ. ಈ ಚಿತ್ರದಲ್ಲಿ ವೈದ್ಯನಾಗಿ ಶಿವರಾಜ್‌ಕುಮಾರ್ ನಟಿಸಿದ್ದು, ಬೇಬಿ ನಕ್ಷತ್ರ ಮುಂತಾದವರು ಈ ಹಂತದ ಚಿತ್ರೀಕರಣದಲ್ಲಿ ಭಾಗಿಯಾಗಿದ್ದಾರೆ. ಹರೀಶ್ ಪೆದ್ದಿ ಅವರು ಮೈರಾ ಕ್ರಿಯೇಷನ್ಸ್ ಲಾಂಛನದಡಿ ನಿರ್ಮಾಣ ಮಾಡುತ್ತಿರುವ ಈ ಚಿತ್ರಕ್ಕೆ ಅನಿಲ್ ಕನ್ನೆಗಂಟಿ ಕಥೆ, ಚಿತ್ರಕಥೆ ಬರೆದಿದ್ದಾರೆ. ಶರ್ಮಿಳಾ ಮಾಂಡ್ರೆ, ಬಾಬು, ಮಲಯಾಳ ನಟ ಸುರಾಜ್ ವೆಂಜಾರಮೂಡು ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಕನ್ನಡ, ತೆಲುಗು ಮತ್ತು ಮಲಯಾಳದಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ ನಿರ್ದೇಶನ ಹಾಗೂ ಬಿ.ರಾಜಶೇಖರ್ ಛಾಯಾಚಿತ್ರಗ್ರಹಣವಿದೆ. ❖

‘ಶುಭಕೃತ್ ನಾಮ ಸಂವತ್ಸರ’ದಲ್ಲಿ ಧನಂಜಯ್



ಧನಂಜಯ

‘ಲಕ್ಷ್ಮೀ ನಿವಾಸ’ ಧಾರಾವಾಹಿಯ ‘ಸಿದ್ದೇಗೌಡ್ರು’ ಪಾತ್ರದ ಮೂಲಕ ಗುರುತಿಸಿಕೊಂಡಿರುವ ನಟ ಧನಂಜಯ್ ಬೆಳ್ಳಿತೆರೆಯಲ್ಲಿ ಹೀರೊ ಆಗಿ ಮೊದಲ ಹೆಜ್ಜೆ ಇಡಲಿದ್ದಾರೆ.

ಈ ಹಿಂದೆ ‘ಫ್ಲೋರ್ ವಾಲ್ಸ್’ ಎಂಬ ಸಿನಿಮಾ ನಿರ್ದೇಶಿಸಿದ್ದ ಎಸ್.ಎಸ್.ಸಜ್ಜನ್ ‘ಶುಭಕೃತ್ ನಾಮ ಸಂವತ್ಸರ’ ಎಂಬ ಸಿನಿಮಾ ನಿರ್ದೇಶಿಸಲಿದ್ದು, ಇದರಲ್ಲಿ ಧನಂಜಯ್ ನಾಯಕನಾಗಿ ನಟಿಸಲಿದ್ದಾರೆ.

ಡಬ್ಬಿಂಗ್ ಕಲಾವಿದ, ಡಾನ್ಸರ್ ಆಗಿರುವ ಧನಂಜಯ್ ‘ವಾಸಂತಿ ನಲಿದಾಗ’, ‘ಥಗ್ ಆಫ್ ರಾಮಘಡ’ ಎಂಬ ಚಿತ್ರಗಳಲ್ಲಿ ನಟಿಸಿದ್ದರು.

ಶೀರ್ಷಿಕೆಯೇ ಹೇಳುವಂತೆ ಇದೊಂದು ಹಬ್ಬದ ಹಿನ್ನೆಲೆಯಲ್ಲಿ ನಡೆಯುವ ಕಥೆ. ಅದಕ್ಕೆ ಕ್ರೈಮ್ ಥ್ರಿಲ್ಲರ್ ಸ್ಪರ್ಶ ನೀಡಿದ್ದಾರೆ ಸಜ್ಜನ್. ಎಸ್.ವಿ ಪಿಕ್ಚರ್ಸ್ ಬ್ಯಾನರ್‌ನಲ್ಲಿ ‘ಶುಭಕೃತ್ ನಾಮ ಸಂವತ್ಸರ’ ತೆರೆಗೆ ಬರಲಿದೆ. ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ಶೂಟಿಂಗ್ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ತೆಲುಗಿನ ‘ರುದ್ರಮದೇವಿ’, ‘ಗರುಡವೇಗ’ ಸಿನಿಮಾಗಳಲ್ಲಿ ಕಾರ್ಯನಿರ್ವಹಿಸಿರುವ ದೇವೇಂದ್ರ ವಡ್ಡೆ ಛಾಯಾಚಿತ್ರಗ್ರಹಣ, ಸುಧಾ ಶ್ರೀನಿವಾಸ್ ಸಂಗೀತ ನಿರ್ದೇಶನವಿರಲಿದೆ. ನವೆಂಬರ್‌ನಿಂದ ಶೂಟಿಂಗ್ ಆರಂಭವಾಗಲಿದೆ. ❖

ಆರು ಸಿನಿಮಾಗಳು ತೆರೆಗೆ

ಕಳೆದ ನಾಲ್ಕು ಶುಕ್ರವಾರಗಳಲ್ಲಿ ರಾಜ್ಯದ ಚಿತ್ರಮಂದಿರಗಳಲ್ಲಿ 28 ಕನ್ನಡ ಸಿನಿಮಾಗಳು ತೆರೆಕಂಡಿವೆ. ಇಂದು (ಸೆ.19) ಆರು ಸಿನಿಮಾಗಳು ಈ ಪಟ್ಟಿಗೆ ಸೇರ್ಪಡೆಯಾಗಲಿವೆ.

ಕಮಲ್ ಶ್ರೀದೇವಿ

ಸಂಗೀತಾ ಭಟ್

ವಿ.ಎ.ಸುನೀಲ್ ಕುಮಾರ್ ನಿರ್ದೇಶಿಸಿರುವ ಈ ಚಿತ್ರದಲ್ಲಿ ಸಚಿನ್ ಚಲುವರಾಯಸ್ವಾಮಿ, ಸಂಗೀತಾ ಭಟ್, ಕಿಶೋರ್, ರಮೇಶ್ ಇಂದಿರಾ ಮುಂತಾದವರು ನಟಿಸಿದ್ದಾರೆ. ಎನ್. ಚಲುವರಾಯಸ್ವಾಮಿ ಅರ್ಪಿಸಿ, ಸ್ವರ್ಣಾಂಬಿಕ ಪಿಕ್ಚರ್ಸ್ ಬ್ಯಾನರ್‌ನಡಿಯಲ್ಲಿ ಬಿ.ಕೆ ಧನಲಕ್ಷ್ಮೀ ಈ ಸಿನಿಮಾ ನಿರ್ಮಿಸಿದ್ದಾರೆ. ನಟ ರಾಜವರ್ಧನ್ ಅವರು ಈ ಸಿನಿಮಾಗೆ ಕ್ರಿಯೇಟಿವ್ ಹೆಡ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಶ್ರೀದೇವಿ ಎಂಬಾಕೆಯ ಕೊಲೆಯ ಸುತ್ತ ಈ ಚಿತ್ರದ ಕಥೆಯಿದೆ. ಕಮಲ್ ಪಾತ್ರದಲ್ಲಿ ಸಚಿನ್ ಹಾಗೂ ಶ್ರೀದೇವಿಯಾಗಿ ಸಂಗೀತಾ ಭಟ್ ನಟಿಸಿದ್ದಾರೆ.

ಜೊತೆಯಾಗಿ ಹಿತವಾಗಿ

ಹೊಸಬರಿಂದಲೇ ಕೂಡಿರುವ ಈ ಸಿನಿಮಾವನ್ನು ಎ.ಆರ್.ಕೃಷ್ಣ ಕಥೆ ಬರೆದು ನಿರ್ದೇಶಿಸಿದ್ದಾರೆ. ಪ್ರೇಮ ಕಥೆ ಹೊಂದಿರುವ ಈ ಚಿತ್ರದಲ್ಲಿ, ಮನೆಯಲ್ಲಿ ಅತಿಯಾದ ಸ್ವತಂತ್ರವಿದ್ದರೆ ಅಥವಾ ತುಂಬಾ ಕಡಿವಾಣ ಹಾಕಿದರೆ ಮಕ್ಕಳು ಏನಾಗುತ್ತಾರೆ ಎಂಬುದನ್ನು ತೋರಿಸಲಾಗಿದೆ ಎಂದಿದೆ ಚಿತ್ರತಂಡ. ಅಗಸ್ತ್ಯ ಚಿತ್ರದ ನಾಯಕ. ಸುವಾರ್ತಾ ನಾಯಕಿ. ಆನಂದ್ ನೀನಾಸಂ, ಚೇತನ್ ದುರ್ಗಾ, ಬಳ್ಳಾರಿ ಅರ್ಜುನ್, ಸಲೋಮಿ ಡಿಸೋಜ, ಭೂಮಿಕಾ ದೇಶಪಾಂಡೆ ಮುಂತಾದವರು ಚಿತ್ರದಲ್ಲಿದ್ದಾರೆ.

ಅರಸಯ್ಯನ ಪ್ರೇಮಪ್ರಸಂಗ

ಮಹಾಂತೇಶ್ ಹಿರೇಮಠ

ಮೇಘಶ್ರೀ ರಾಜೇಶ್ ನಿರ್ಮಾಣದ, ಜೆ.ವಿ.ಆರ್ ದೀಪು ನಿರ್ದೇಶನದ ಚಿತ್ರವಿದು. ‘ಫ್ರೆಂಚ್ ಬಿರಿಯಾನಿ’ ಖ್ಯಾತಿಯ ಮಹಾಂತೇಶ್ ಹಿರೇಮಠ ನಾಯಕನಾಗಿ ನಟಿಸಿರುವ ಗ್ರಾಮೀಣ ಸೊಗಡಿನ ಕಾಮಿಡಿ ಕಥಾಹಂದರದ ಈ ಸಿನಿಮಾದಲ್ಲಿ ರಶ್ಮಿತಾ ಆರ್.ಗೌಡ ನಾಯಕಿಯಾಗಿ ನಟಿಸಿದ್ದಾರೆ. ಪಿ.ಡಿ.ಸತೀಶ್, ವಿಜಯ್ ಚೆಂಡೂರ್, ಸುಜಿತ್, ಸುಧಾ, ಚಿಲ್ಲರ್ ಮಂಜು, ಮಹದೇವ್ ಲಾಲಿಪಾಳ್ಯ ತಾರಾಬಳಗದಲ್ಲಿದ್ದಾರೆ. ಪ್ರವೀಣ್, ಪ್ರದೀಪ್ ಸಂಗೀತ ನಿರ್ದೇಶನ, ಗುರುಪ್ರಸಾದ್ ನಾರ್ನಾಡ್ ಛಾಯಾಚಿತ್ರಗ್ರಹಣ, ಸುನೀಲ್ ಕಶ್ಯಪ್ ಸಂಕಲನ ಚಿತ್ರಕ್ಕಿದೆ.

ರಶ್ಮಿತಾಗೌಡ

ಖಾಲಿಡಬ್ಬ

ಈ ಸಿನಿಮಾವೂ ಹೊಸಬರ ಪ್ರಯತ್ನ. ಪ್ರಕಾಶ್ ಕೆ.ಅಂಬ್ಳೆ ನಿರ್ದೇಶನದ ಈ ಚಿತ್ರದಲ್ಲಿ ನಾಯಕನಾಗಿ ರಾಮ್ ಗುಡಿ ಅಭಿನಯಿಸಿದ್ದಾರೆ. ಪ್ರಕಾಶ್ ಅವರ ಚೊಚ್ಚಲ ಸಿನಿಮಾವಿದು. ವಿ.ನಾಗೇಂದ್ರಪ್ರಸಾದ್ ಅವರು ಸಾಹಿತ್ಯ, ಸಂಗೀತ ನೀಡಿ ನಟಿಸಿದ್ದಾರೆ. ‘ಸರಿಯಾದ ಸಮಯದಲ್ಲಿ ಸರಿಯಾದ ನಿರ್ಧಾರ ತೆಗೆದುಕೊಂಡರೆ ಜೀವನ ಡಬ್ಬ ತುಂಬುತ್ತದೆ ಎಂಬ ಎಳೆ ಚಿತ್ರದ್ದು’ ಎಂದಿದೆ ಚಿತ್ರತಂಡ. ಆದ್ಯಾ ಪ್ರಿಯಾ, ಹರಿತಾ ನಾಯಕಿಯರಾಗಿ ಬಣ್ಣ ಹಚ್ಚಿದ್ದಾರೆ. ಕುರಿ ಪ್ರತಾಪ್, ‘ಮಜಾಭಾರತ’ ಸೀತಾರಾಮ್, ಸುಧಾ, ಹನುಮಕ್ಕ ತಾರಾಬಳಗದಲ್ಲಿದ್ದಾರೆ.

ಧರ್ಮ ಕೀರ್ತಿರಾಜ್ ಹಾಗೂ ಅಪೂರ್ವ ನಟಿಸಿರುವ **‘ರೂಮ್ ನಂ–111’** ಸಿನಿಮಾವೂ ತೆರೆಕಾಣುತ್ತಿದೆ. ❖

ಸೋಲ್‌ಮೇಟ್ಸ್

ಹಂಸಲೇಖ ಸಂಗೀತ ನೀಡಿರುವ ಈ ಸಿನಿಮಾವನ್ನು ಪಿ.ವಿ. ಶಂಕರ್ ನಿರ್ದೇಶಿಸಿದ್ದಾರೆ. ಜಿ.ಆರ್. ಅರ್ಚನಾ ಹಾಗೂ ಪಿ.ವಿ.ಶಂಕರ್ ಈ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ‘ರಂಗ್ ಬಿರಂಗ್’ ಖ್ಯಾತಿಯ ಶ್ರೀಜಿತ್ ಸೂರ್ಯ, ಪ್ರಸನ್ನ ಶೆಟ್ಟಿ, ರಜನಿ, ಯಶ್ವಿಕಾ ನಿಷ್ಕಲ, ಅಲ್ಮಾಸ್, ಯಶ್ ಶೆಟ್ಟಿ, ಅರವಿಂದ್ ರಾವ್, ಶರತ್ ಲೋಹಿತಾಶ್ವ, ಅರುಣಾ ಬಾಲರಾಜ್, ಪ್ರಶಾಂತ್ ನಟನ, ನವೀನ್ ಡಿ. ಪಡೀಲ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಒಂದು ಸಂದೇಶದೊಡನೆ ರೊಮ್ಯಾನ್ಸ್, ಆ್ಯಕ್ಷನ್, ಥ್ರಿಲ್ಲರ್ ಅಂಶಗಳನ್ನು ಸಿನಿಮಾ ಒಳಗೊಂಡಿದೆ.

ಶ್ರೀಜಿತ್ ಸೂರ್ಯ
ಯಶ್ವಿಕ ನಿಷ್ಕಲ

ಮತಕಳವು: ಆಯೋಗಕ್ಕೆ ರಾಹುಲ್ ಗಡುವು

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ಆರೋಪ • ನೆಪ ಹೇಳುವುದನ್ನು ನಿಲ್ಲಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಆಳಂದ ವಿಧಾನಸಭಾ ಕ್ಷೇತ್ರದ ಮತಕಳವು ಯತ್ನ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿಗೆ ಕೇಂದ್ರ ಚುನಾವಣಾ ಆಯೋಗವು ಅಗತ್ಯ ಸಾಕ್ಷ್ಯಗಳನ್ನು ವಾರದೊಳಗೆ ಒದಗಿಸಬೇಕು ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಗಡುವು ವಿಧಿಸಿದ್ದಾರೆ.

ಮತಕಳ್ಳತನದ ಕುರಿತು ಗುರುವಾರ ಇಲ್ಲಿ ಎರಡನೇ ಮಾಧ್ಯಮಗೋಷ್ಠಿ ನಡೆಸಿದ ರಾಹುಲ್ ಅವರು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿದರು. ಸಾಕ್ಷ್ಯಗಳನ್ನು ಒದಗಿಸುವಂತೆ ತನಿಖಾ ಸಂಸ್ಥೆಯು 18 ತಿಂಗಳಲ್ಲಿ 18 ಪತ್ರಗಳನ್ನು ಬರೆದರೂ ಆಯೋಗ ಸ್ಪಂದಿಸಿಲ್ಲ ಎಂದು ಅವರು ದೂರಿದರು. ಮತಕಳವಿನ ಕುರಿತು ಆಯೋಗದ ಕೆಲವರು ತಮಗೆ ಮಾಹಿತಿ ನೀಡುತ್ತಿದ್ದಾರೆ ಎಂದು ಅವರು ಹೇಳಿದರು.

‘ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ನಾಶಪಡಿಸುತ್ತಿರುವ ಶಕ್ತಿಗಳ ಜತೆಗೆ ಜ್ಞಾನೇಶ್ ಕುಮಾರ್ ಕೈಜೋಡಿಸಿದ್ದಾರೆ. ಅವರು ನೆಪಗಳನ್ನು ಹೇಳುವುದನ್ನು ನಿಲ್ಲಿಸಬೇಕು. ಮತಕಳ್ಳತನ ಮಾಡುವವರ ರಕ್ಷಣೆ ಮಾಡುವ ಕೆಲಸವನ್ನು ಕೂಡಲೇ ಕೈಬಿಡಬೇಕು’ ಎಂದೂ ಅವರು ಆಗ್ರಹಿಸಿದರು.

‘ಐಪಿ ಲಾಗ್‌ಗಳು, 6,108 ಮತದಾರರ ಹೆಸರನ್ನು ಅಳಿಸಲು ಅರ್ಜಿ ಸಲ್ಲಿಸಲು ಬಳಸಿದ ಮೊಬೈಲ್‌ಗಳ ಒಟಿಪಿ ಕುರಿತ ಮಾಹಿತಿಗಳನ್ನು ತನಿಖಾಧಿಕಾರಿಗಳೊಂದಿಗೆ ಹಂಚಿಕೊಳ್ಳಬೇಕು. ಇಲ್ಲದಿದ್ದರೆ, ಮತಕಳವು ಮಾಡುತ್ತಿರುವವರನ್ನು ಕುಮಾರ್ ರಕ್ಷಿಸುತ್ತಿದ್ದಾರೆ ಎಂಬುದಕ್ಕೆ ಜನರಿಗೆ ಖಚಿತ ಪುರಾವೆ ಸಿಕ್ಕಂತಾಗುತ್ತದೆ’ ಎಂದು ಅವರು ಹೇಳಿದರು.

‘ಮತದಾರರ ಪಟ್ಟಿಯಿಂದ ಹೆಸರುಗಳನ್ನು ಅಳಿಸಲು ಆನ್‌ಲೈನ್ ಅರ್ಜಿಗಳನ್ನು ಸ್ವಯಂಚಾಲಿತವಾಗಿ ಸಲ್ಲಿಸುವ ಮೂಲಕ ಮತಗಳನ್ನು ಕದಿಯಲು ಯಾರೋ ಕೇಂದ್ರೀಕೃತ ವ್ಯವಸ್ಥೆ ರೂಪಿಸಿದ್ದಾರೆ’ ಎಂದು ರಾಹುಲ್ ಹೇಳಿದರು.

ಕ್ಷೇತ್ರದಲ್ಲಿರುವ ಮತದಾರರ ಗುರುತನ್ನು ಬಳಸಿಕೊಂಡು ಹೊರ ರಾಜ್ಯದ ಮೊಬೈಲ್‌ಗಳ ಸಹಕಾರದಿಂದ ಅರ್ಜಿ ಭರ್ತಿ ಮಾಡಿ ಈ ಕೃತ್ಯಗಳನ್ನು ಎಸಗಲಾಗಿದೆ. ಮಹಾರಾಷ್ಟ್ರದ ರಾಜೌರ ಕ್ಷೇತ್ರದ ಮತಕಳವಿಗೆ ಇದೇ ಮಾದರಿಯ ಕಾರ್ಯಾಚರಣೆ ನಡೆಸಲಾಗಿದೆ. ನಕಲಿ ಹೆಸರು ಹಾಗೂ ವಿಳಾಸಗಳ ಮೂಲಕ ಮತದಾರರ ಪಟ್ಟಿಗೆ 6,850 ನಕಲಿ ಮತದಾರರನ್ನು ಸೇರಿಸಲಾಗಿದೆ ಎಂದು ಅವರು ಆರೋಪಿಸಿದರು.

‘ಆಳಂದದಲ್ಲಿ ಮತಗಟ್ಟೆ ಮಟ್ಟದ ಅಧಿಕಾರಿಯೊಬ್ಬರು ತಮ್ಮ ಚಿಕ್ಕಪ್ಪನ ಮತವನ್ನು ಅಳಿಸಲಾಗಿದೆ ಎಂದು ಗಮನಿಸಿದ ಬಳಿಕ ಈ ಹಗರಣ ಬಯಲಿಗೆ ಬಂದಿತ್ತು. ಆ ಮತವನ್ನು ಅಳಿಸಲು ಅರ್ಜಿ ಸಲ್ಲಿಸಿದವರು ನೆರೆಮನೆಯ ವ್ಯಕ್ತಿ (ಸೂರ್ಯಕಾಂತ್) ಎಂಬುದು ಆಕೆಯ ಗಮನಕ್ಕೆ ಬಂದಿತ್ತು. ಈ ಬಗ್ಗೆ ಪ್ರಶ್ನಿಸಿದಾಗ ನಾನು ಯಾವುದೇ ಅರ್ಜಿ ಸಲ್ಲಿಸಿಲ್ಲ ಹಾಗೂ ಯಾವುದೇ ಮಾಹಿತಿ ಇಲ್ಲ ಎಂದು ಅವರು ಪ್ರತಿಕ್ರಿಯಿಸಿದ್ದರು. ಯಾರೋ ಎಲ್ಲೋ ಕೂತು ಈ ದುಷ್ಕೃತ್ಯಗಳನ್ನು ಎಸಗುತ್ತಿದ್ದರು’ ಎಂದು ರಾಹುಲ್ ವಿವರ ನೀಡಿದರು. ಸೂರ್ಯಕಾಂತ್ ಅವರು ಘಟನೆಯ ವಿವರಗಳನ್ನು ನೀಡಿದರು. ಆಳಂದ ಶಾಸಕ ಬಿ.ಆರ್.ಪಾಟೀಲ ಹಾಜರಿದ್ದರು.

ಆರೋಪ ಆಧಾರರಹಿತ: ಆಯೋಗ

ಆಳಂದ ಕ್ಷೇತ್ರದ ಮತಕಳವು ಕುರಿತು ರಾಹುಲ್ ಹೇಳಿಕೆಯನ್ನು ಆಯೋಗ ತಳ್ಳಿ ಹಾಕಿದೆ. ಈ ಆರೋಪ ತಪ್ಪು ಹಾಗೂ ಆಧಾರರಹಿತ ಎಂದು ಹೇಳಿದೆ.

ರಾಹುಲ್ ಗಾಂಧಿ ತಪ್ಪಾಗಿ ಭಾವಿಸಿದಂತೆ ಯಾವುದೇ ಸಾರ್ವಜನಿಕರು ಯಾವುದೇ ಮತವನ್ನು ಅಳಿಸಲು ಸಾಧ್ಯವಿಲ್ಲ ಎಂದು ಆಯೋಗ ಹೇಳಿದೆ. ‘2023 ರಲ್ಲಿ ಕ್ಷೇತ್ರದಲ್ಲಿ ಮತದಾರರ ಹೆಸರನ್ನು ಅಳಿಸಲು ಕೆಲವು ವಿಫಲ ಪ್ರಯತ್ನಗಳು ನಡೆದವು. ಈ ವಿಷಯದ ಬಗ್ಗೆ ತನಿಖೆ ನಡೆಸುವಂತೆ ಚುನಾವಣಾ ಆಯೋಗದ ಅಧಿಕಾರಿಗಳೇ ದೂರು ದಾಖಲಿಸಿದ್ದರು’ ಎಂದು ಆಯೋಗ ಸ್ಪಷ್ಟಪಡಿಸಿದೆ.

ಈ ಕ್ಷೇತ್ರದಲ್ಲಿ 2018ರಲ್ಲಿ ಸುಭಾಷ್ ಗುತ್ತೇದಾರ್ (ಬಿಜೆಪಿ) ಮತ್ತು 2023 ರಲ್ಲಿ ಬಿ.ಆರ್. ಪಾಟೀಲ (ಕಾಂಗ್ರೆಸ್) ಗೆದ್ದಿದ್ದಾರೆ ಎಂದು ಆಯೋಗ ತಿಳಿಸಿದೆ. ಸಿಐಡಿಗೆ ಸಾಕ್ಷ್ಯಗಳನ್ನು ಒದಗಿಸಿಲ್ಲ ಎಂಬ ಆರೋಪದ ಬಗ್ಗೆ ಆಯೋಗ ಪ್ರತಿಕ್ರಿಯಿಸಿಲ್ಲ.

2023ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಅಲ್ಪಸಂಖ್ಯಾತ, ಪರಿಶಿಷ್ಟ ಜಾತಿ ಹಾಗೂ ಹಿಂದುಳಿದ ವರ್ಗಗಳ ಮತದಾರರ ಹೆಸರನ್ನು ಅಳಿಸಲು ಯತ್ನಿಸಲಾಗಿತ್ತು
ಬಿ.ಆರ್.ಪಾಟೀಲ, ಆಳಂದ ಶಾಸಕ

ಎಸ್‌ಸಿ,ಎಸ್‌ಟಿ ಹಾಗೂ ಒಬಿಸಿಗಳ ಮೀಸಲಾತಿಯನ್ನು ಬಿಜೆಪಿ ತೆಗೆದು ಹಾಕಲಿದೆ ಎಂಬುದಾಗಿ ರಾಹುಲ್ ಗಾಂಧಿ ಈ ಹಿಂದೆ ಆರೋಪಿಸಿದ್ದರು. ಈಗ, ಮತ ಕಳವು ಎಂಬ ‘ಸುಳ್ಳು ಸಂಕಥನ’ ತಂತ್ರದ ಮೊರೆಹೋಗಿದ್ದಾರೆ
ಅಮಿತ್ ಶಾ, ಕೇಂದ್ರ ಗೃಹ ಸಚಿವ

ಮತಕಳವಿನ ಬಗ್ಗೆ ಈಗ ಒದಗಿಸಿರುವ ಮಾಹಿತಿಗಳು ನಾನು ಹೇಳಿರುವ ಹೈಡ್ರೋಜನ್ ಬಾಂಬ್‌ನ ಭಾಗ ಅಲ್ಲ. ಅದು ಶೀಘ್ರದಲ್ಲಿ ಬರಲಿದೆ. ಮತ ಕಳವಿನ ಕುರಿತ ಸಮಗ್ರ ಸಂಶೋಧನೆ, ಪ್ರಸ್ತುತಿಗೆ 2–3 ತಿಂಗಳು ಬೇಕಾಗಬಹುದು
ರಾಹುಲ್ ಗಾಂಧಿ, ವಿಪಕ್ಷ ನಾಯಕ

‘36 ಸೆಕೆಂಡುಗಳಲ್ಲೇ ಎರಡು ಅರ್ಜಿ ಭರ್ತಿ’

- ಆಳಂದದಲ್ಲಿ ಕಾಂಗ್ರೆಸ್ ಮತದಾರರನ್ನೇ ಗುರಿಯಾಗಿಸಿಕೊಂಡು 6018 ಮತದಾರರನ್ನು ಮತದಾರರ ಪಟ್ಟಿಯಿಂದ ಹೊರದಬ್ಬಲು ಪ್ರಯತ್ನಿಸಿದ್ದರು
- 12 ಮತದಾರರ ಹೆಸರನ್ನು ಅಳಿಸಲು 63 ವರ್ಷದ ಗೋದಾಬಾಯಿ ಹೆಸರಿನಲ್ಲಿ ನಕಲಿ ಲಾಗಿನ್‌ಗಳನ್ನು ಸೃಷ್ಟಿಸಿದ್ದರು
- 12 ನೆರೆಹೊರೆಯವರ ಹೆಸರುಗಳನ್ನು ಅಳಿಸಲು ವಿವಿಧ ರಾಜ್ಯಗಳ ಮೊಬೈಲ್ ಸಂಖ್ಯೆಗಳನ್ನು ಉಪಯೋಗಿಸಲಾಗಿತ್ತು
- ಸೂರ್ಯಕಾಂತ್ ಎಂಬವರ ಹೆಸರನ್ನು 14 ನಿಮಿಷಗಳಲ್ಲೇ 12 ಮತದಾರರ ಹೆಸರನ್ನು ಅಳಿಸಲು ಬಳಸಲಾಗಿತ್ತು. ಅವರಿಗೆ ಆ ವಿಷಯವೇ ಗೊತ್ತಿರಲಿಲ್ಲ
- ಎರಡು ಅರ್ಜಿಗಳನ್ನು 36 ಸೆಕೆಂಡುಗಳಲ್ಲೇ ಭರ್ತಿ ಮಾಡಿ ಸಲ್ಲಿಸಲಾಗಿತ್ತು. ಅದು ಸಹ ಮುಂಜಾನೆ 4.07ರಿಂದ 4.08ರ ನಡುವೆ. ಇದನ್ನು ಸಾಮಾನ್ಯ ಮನುಷ್ಯರಿಂದ ಮಾಡಲು ಸಾಧ್ಯವಿಲ್ಲ
- ಮತಗಟ್ಟೆಯ ಮೊದಲ ಮತದಾರರನ್ನೇ ಗುರಿಯಾಗಿಸಿಕೊಂಡು ಈ ಅಪರಾಧ ಎಸಗಲಾಗುತ್ತಿದೆ
- ಆಳಂದದಲ್ಲಿ ಕಾಂಗ್ರೆಸ್ ಪ್ರಬಲವಾಗಿರುವ ಮತಗಟ್ಟೆಗಳಲ್ಲೇ ಮತಕಳವಿಗೆ ಯತ್ನ ನಡೆದಿತ್ತು. ಕಾಂಗ್ರೆಸ್ ಭದ್ರಕೋಟೆ ಆಗಿರುವ 10 ಮತಗಟ್ಟೆಗಳಲ್ಲಿಯೇ ಗರಿಷ್ಠ ಸಂಖ್ಯೆಯ ಮತದಾರರ ಹೆಸರನ್ನು ಕಿತ್ತು ಹಾಕುವ ಪ್ರಯತ್ನ ಆಗಿತ್ತು
- 2018ರಲ್ಲಿ 10 ಬೂತ್‌ಗಳಲ್ಲಿ 8ರಲ್ಲಿ ಕಾಂಗ್ರೆಸ್‌ಗೆ ಮುನ್ನಡೆ ಸಿಕ್ಕಿದೆ. ಇದು ಆಕಸ್ಮಿಕ ಅಲ್ಲ. ಇದೊಂದು ಯೋಜಿತ ಕಾರ್ಯಾಚರಣೆ

ಅಸಹಕಾರದಿಂದ ಸಿಐಡಿ ತನಿಖೆ ಸ್ಥಗಿತ

- ಮತಕಳವು ಯತ್ನದ ವಿರುದ್ಧ ದೂರು
- 2023ರ ಫೆಬ್ರುವರಿಯಲ್ಲಿ ಎಫ್‌ಐಆರ್ ದಾಖಲು
- ಪ್ರಕರಣ ಸಿಐಡಿಗೆ ಹಸ್ತಾಂತರ
- ಎಲ್ಲ ಮಾಹಿತಿ ಒದಗಿಸುವಂತೆ ಸಿಐಡಿಯಿಂದ ಚುನಾವಣಾ ಆಯೋಗಕ್ಕೆ 2023ರ ಮಾರ್ಚ್‌ನಲ್ಲಿ ಪತ್ರ
- 2023ರ ಆಗಸ್ಟ್‌ನಲ್ಲಿ ಭಾಗಶಃ ಮಾಹಿತಿ ಒದಗಿಸಿದ ಆಯೋಗ
- ಸಮಗ್ರ ಮಾಹಿತಿ ಒದಗಿಸುವಂತೆ ಸಿಐಡಿಯಿಂದ ಆಯೋಗಕ್ಕೆ 2024ರ ಜನವರಿಯಲ್ಲಿ ಪತ್ರ
- ಮಾಹಿತಿ ಒದಗಿಸುವಂತೆ ಕರ್ನಾಟಕ ಚುನಾವಣಾ ಆಯೋಗದಿಂದಲೂ ಕೇಂದ್ರ ಆಯೋಗಕ್ಕೆ ಹಲವು ಸಲ ಮನವಿ
- ಹಲವು ಸಲ ಪತ್ರ ಬರೆದರೂ 2024ರ ಜನವರಿಯಿಂದ ಇಲ್ಲಿಯವರೆಗೆ ಯಾವುದೇ ಮಾಹಿತಿ ಒದಗಿಸದ ಆಯೋಗ
- ಆಯೋಗದ ಅಸಹಕಾರದಿಂದ ತನಿಖೆ ಸ್ಥಗಿತ

‘ಶೇ 100 ಪುರಾವೆ ಇಲ್ಲದೆ ಆರೋಪ ಮಾಡಲ್ಲ’

‘ನಾನು ವಿಪಕ್ಷ ನಾಯಕ. ಶೇ 100ರಷ್ಟು ಪುರಾವೆಗಳು ಇಲ್ಲದೇ ಯಾವುದೇ ಆರೋಪ ಮಾಡುವುದಿಲ್ಲ. ನಾನು ನನ್ನ ದೇಶವನ್ನು ಪ್ರೀತಿಸುವ ವ್ಯಕ್ತಿ. ನಾನು ಸಂವಿಧಾನ ಪ್ರೀತಿಸುತ್ತೇನೆ, ನಾನು ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಪ್ರೀತಿಸುತ್ತೇನೆ ಮತ್ತು ಆ ಪ್ರಕ್ರಿಯೆಯನ್ನು ರಕ್ಷಿಸುತ್ತಿದ್ದೇನೆ’ ಎಂದು ರಾಹುಲ್ ಹೇಳಿದರು.



‘ಚುನಾವಣಾ ವ್ಯವಸ್ಥೆಯಲ್ಲಿನ ಅಕ್ರಮದ ಬಗ್ಗೆ ಬೆಳಕು ಚೆಲ್ಲಲು ನಾನು ಅಡಿಪಾಯ ಹಾಕುತ್ತಿದ್ದೇನೆ. ಇದು 10-15 ವರ್ಷಗಳಿಂದ ನಡೆಯುತ್ತಿದೆ. ಭಾರತದ ಪ್ರಜಾಪ್ರಭುತ್ವವನ್ನು ಅಪಹರಿಸಲಾಗಿದೆ. ಪ್ರಜಾಪ್ರಭುತ್ವವನ್ನು ಭಾರತದ ಜನರು ಮಾತ್ರ ಉಳಿಸಬಹುದು. ರಾಹುಲ್ ಗಾಂಧಿ ಸತ್ಯವನ್ನು ತೋರಿಸಬಹುದು. ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ಕದಿಯಲಾಗಿದೆ ಎಂದು ಜನರು ಅರಿತುಕೊಂಡ ದಿನ ನನ್ನ ಕೆಲಸ ಮುಗಿಯುತ್ತದೆ’ ಎಂದು ರಾಹುಲ್ ಹೇಳಿದರು.

ಮತಕಳವಿನ ವಿರುದ್ಧ ಪಕ್ಷವು ನ್ಯಾಯಾಲಯದ ಮೊರೆ ಹೋಗಲಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ಸ್ಪಷ್ಟವಾಗಿ ಹೇಳಬೇಕೆಂದರೆ, ನಾನು ಇಲ್ಲಿ ಮಾಡುತ್ತಿರುವುದು ನನ್ನ ಕೆಲಸವಲ್ಲ. ನನ್ನ ಕೆಲಸ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಭಾಗವಹಿಸುವುದು. ನನ್ನ ಕೆಲಸ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ರಕ್ಷಿಸುವುದು ಅಲ್ಲ. ಅದು ಭಾರತದಲ್ಲಿನ ಸಾಂವಿಧಾನಿಕ ಸಂಸ್ಥೆಗಳ ಕೆಲಸ. ಆದರೆ, ಅವರು ಆ ಕೆಲಸ ಮಾಡುತ್ತಿಲ್ಲ. ಹಾಗಾಗಿ, ನಾನು ಆ ಕೆಲಸ ಮಾಡುತ್ತಿದ್ದೇನೆ’ ಎಂದರು.

‘ಅಕ್ರಮ ಜಾಲದ ಕೊಂಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆಳಂದ ವಿಧಾನಸಭಾ ಕ್ಷೇತ್ರದ ಪ್ರಕರಣವು ಈ ಒಂದು ಕ್ಷೇತ್ರಕ್ಕೆ ಸೀಮಿತವಾದದ್ದಲ್ಲ. ಇದು ಬೃಹತ್ ಚುನಾವಣಾ ಅಕ್ರಮ ಜಾಲದ ಒಂದು ಕೊಂಡಿಯಷ್ಟೇ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ತಮ್ಮ ‘ಎಕ್ಸ್’ ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ, ‘ಇದೇ ಮಾದರಿಯಲ್ಲಿ ಇಡೀ ದೇಶದಲ್ಲಿ ಚುನಾವಣಾ ಪ್ರಕ್ರಿಯೆಯ ದುರುಪಯೋಗದ ಮೂಲಕ ಭಾರತೀಯರನ್ನು ಅವರ ಮತದಾನದ ಹಕ್ಕಿನಿಂದ ವಂಚಿಸಲಾಗುತ್ತಿದೆ’ ಎಂದು ದೂರಿದ್ದಾರೆ.

ಆಳಂದ ಪ್ರಕರಣದಲ್ಲಿ ಭಾಗಿಯಾದವರು ಯಾರು? ಯಾವ ಸ್ಥಳದಿಂದ ಈ ಕೃತ್ಯಗಳು ನಡೆದಿದ್ದವು ಎಂದು ಪತ್ತೆಹಚ್ಚಲು ತಾಂತ್ರಿಕ ಮಾಹಿತಿಗಳಾದ ಐಪಿ ಅಡ್ರೆಸ್, ಬಳಕೆಯಾದ ಡಿವೈಸ್‌ಗಳು ಮತ್ತು ಒಟಿಪಿ ಪಡೆದವರ ವಿವರಗಳಿಗಾಗಿ ಸಿಐಡಿ ಕಡೆಯಿಂದ 18 ನಿರಂತರ ಮನವಿಗಳನ್ನು ಸಲ್ಲಿಸಿದ ಹೊರತಾಗಿಯೂ ಚುನಾವಣಾ ಆಯೋಗ ನೀಡದಿರಲು ಕಾರಣವೇನು ಎಂಬ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿದಿದೆ’ ಎಂದಿದ್ದಾರೆ.

‘ರಾಹುಲ್ ಗಾಂಧಿ ಅವರು ಬಹಿರಂಗಪಡಿಸಿರುವ ಚುನಾವಣಾ ಅಕ್ರಮಗಳಿಗೆ ಸಂಬಂಧಿಸಿದ ಸತ್ಯಾಂಶಗಳು ಆಘಾತಕಾರಿಯಾಗಿವೆ. ಅವರು ಮುಂದಿಟ್ಟಿರುವ ಸಾಕ್ಷ್ಯಗಳ ಆಧಾರದಲ್ಲಿ ನೋಡುವುದಾದರೆ ಇದು ಸ್ಥಳೀಯವಾಗಿ ನಡೆದ ಅಕ್ರಮವಲ್ಲ ಎಂಬುದು ಸ್ಪಷ್ಟ. ಪ್ರತಿ ಬೂತ್‌ನ ಮೊದಲ ಮತದಾರನ ಹೆಸರಲ್ಲಿ ಅರ್ಜಿ ಸಲ್ಲಿಕೆಯಾಗಿದೆ. ನಕಲಿ ಮೊಬೈಲ್ ನಂಬರ್‌ಗಳು ಸೇರ್ಪಡೆಗೊಂಡಿವೆ ಮತ್ತು ಕಾಂಗ್ರೆಸ್ ಪ್ರಾಬಲ್ಯವಿರುವ ಬೂತ್‌ಗಳಲ್ಲಿ ಮತದಾರರ ಹೆಸರು ಡಿಲೀಟ್ ಮಾಡುವ ಪ್ರಕ್ರಿಯೆಯು ಕೇಂದ್ರೀಕೃತವಾಗಿ ನಡೆದಿದೆ’ ಎಂದಿದ್ದಾರೆ.

‘ಆಳಂದ ಮತಕ್ಷೇತ್ರ ದೊಡ್ಡ ಅಕ್ರಮದ ಸಣ್ಣ ಕುರುಹು ಇರಬಹುದೇ? 2018ರಲ್ಲಿ ಇದೇ ಕ್ಷೇತ್ರದಲ್ಲಿ ಬಿಜೆಪಿ ಅಲ್ಪ ಅಂತರದಲ್ಲಿ ಜಯಿಸಿತ್ತು. 2023ರಲ್ಲಿ ಸುಮಾರು 6 ಸಾವಿರ ಹೆಸರನ್ನು ಡಿಲೀಟ್ ಮಾಡುವ ಪ್ರಯತ್ನ ನಡೆದಿತ್ತು. 2024ರಲ್ಲಿ ಬಿಜೆಪಿ ಮತ್ತದೇ ಪ್ರಯತ್ನಕ್ಕೆ ಕೈಹಾಕಿತ್ತು. ದೇಶದಾದ್ಯಂತ ಇಂತಹ ಎಷ್ಟು ಅಕ್ರಮಗಳು ಗಮನಕ್ಕೆ ಬಾರದೆಯೇ ನಡೆದಿರಬಹುದು? ಎಷ್ಟು ಫಲಿತಾಂಶಗಳು ಇದರಿಂದ ಅದಲು ಬದಲಾಗಿರಬಹುದು ಎಂಬ ಪ್ರಶ್ನೆಗಳು ಸಹಜವಾಗಿ ಮೂಡುತ್ತಿವೆ’ ಎಂದೂ ಹೇಳಿದ್ದಾರೆ.

‘ಆಳಂದ ಮತಕ್ಷೇತ್ರದ ಪ್ರಕರಣಕ್ಕೆ ಸಂಬಂಧಿಸಿದಂತೆ ಡಿಜಿಟಲ್ ಸಾಕ್ಷ್ಯಗಳನ್ನು ಒಂದು ವಾರದ ಒಳಗೆ ಸಿಐಡಿಗೆ ಚುನಾವಣಾ ಆಯೋಗ ಒದಗಿಸಬೇಕು’ ಎಂದು ಆಗ್ರಹಿಸಿದ ಮುಖ್ಯಮಂತ್ರಿ, ‘ಒದಗಿಸಲು ಚುನಾವಣಾ ಆಯೋಗ ವಿಫಲವಾದರೆ ಚುನಾವಣಾ ಅಕ್ರಮಗಳ ಮೂಲಕ ಪ್ರಜಾಪ್ರಭುತ್ವವನ್ನು ಧ್ವಂಸ ಮಾಡುತ್ತಿರುವ ದುಷ್ಟರ ರಕ್ಷಣೆಗೆ ಆಯೋಗ ನಿಂತಿದೆ ಎಂಬುದು ಸಾಬೀತಾಗುತ್ತದೆ’ ಎಂದಿದ್ದಾರೆ.

‘ಸಿಐಡಿ ತನಿಖೆಗೆ ಸಹಕರಿಸದ್ದಕ್ಕೆ ಅನುಮಾನ’

‘ಆಳಂದ ಕ್ಷೇತ್ರದ ಮತ ಅಕ್ರಮದ ಬಗ್ಗೆ ಸಿಐಡಿ ತನಿಖೆಗೆ ಚುನಾವಣಾ ಆಯೋಗ ಸಹಕಾರ ನೀಡದಿರುವುದನ್ನು ನೋಡಿದರೆ, ಆಯೋಗದವರೂ ಷಡ್ಯಂತ್ರದಲ್ಲಿ ಭಾಗಿ ಆಗಿದ್ದಾರೆಂಬ ಅನುಮಾನ ಸಹಜವಾಗಿ ಮೂಡುತ್ತದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ‘ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕುವಂತಹ ಪರಿಶಿಷ್ಟರು, ಅಲ್ಪಸಂಖ್ಯಾತರು, ಸಾಮಾನ್ಯ ವರ್ಗದವರು ಸೇರಿದಂತೆ ಎಲ್ಲ ಜನಸಾಮಾನ್ಯರ ಹೆಸರನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ. ಗಡಿಭಾಗದಲ್ಲಿರುವ ಬೇರೆ ರಾಜ್ಯದವರ ಹೆಸರನ್ನು ಸೇರಿಸಲಾಗಿತ್ತು. ಇವೆಲ್ಲವನ್ನೂ ಪೂರ್ವಯೋಜಿತವಾಗಿ ಮಾಡಲಾಗಿತ್ತು. ಹೀಗಾಗಿ, ರಾಹುಲ್ ಗಾಂಧಿ ಅವರು ಈ ವಿಚಾರವನ್ನು ಪ್ರಸ್ತಾಪಿಸಿದ್ದು, ಅವರು ಮಾಡಿರುವ ಆರೋಪಗಳೆಲ್ಲವೂ ನಿಜ’ ಎಂದರು.

ಬೈಕ್ ಟ್ಯಾಕ್ಸಿ ವಿರುದ್ಧ 1 ಲಕ್ಷ ಅಂಚೆ ಕಾರ್ಡ್ ರವಾನೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ರಾಜ್ಯದಲ್ಲಿ ಯಾವುದೇ ಕಾರಣಕ್ಕೂ ಬೈಕ್ ಟ್ಯಾಕ್ಸಿಗಳಿಗೆ ಅನುಮತಿ ನೀಡಬಾರದು. ಬೈಕ್ ಟ್ಯಾಕ್ಸಿಗಳಿಗೆ ಅವಕಾಶ ಕಲ್ಪಿಸಿದ್ದಲ್ಲಿ, ಆಟೊರಿಕ್ಷಾ ಚಾಲಕರು ಅತಂತ್ರರಾಗುತ್ತಾರೆ’ ಎಂದು ಕರ್ನಾಟಕ ಆಟೊರಿಕ್ಷಾ ಚಾಲಕರ ಸಂಘಟನೆಗಳ ಒಕ್ಕೂಟದ (ಎಫ್‌ಕೆಎಆರ್‌ಡಿಯು) ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಕೆ.ಎಂ.ಸಂತೋಷ್ ಕುಮಾರ್ ತಿಳಿಸಿದರು.

ಬೈಕ್ ಟ್ಯಾಕ್ಸಿಗೆ ಅನುಮತಿ ನೀಡಿರು ವುದರ ವಿರುದ್ಧ ಹಂಪಿ ವಿರೂಪಾಕ್ಷೇಶ್ವರ ದೇವಾಲಯದ ಮುಂಭಾಗದಲ್ಲಿ ಗುರುವಾರ ಒಕ್ಕೂಟವು ಹಮ್ಮಿಕೊಂಡಿದ್ದ ಪ್ರತಿಭಟನೆ ಮತ್ತು ಮುಖ್ಯಮಂತ್ರಿ ಅವರಿಗೆ ಒಂದು ಲಕ್ಷ ಅಂಚೆ ಕಾರ್ಡ್ ರವಾನಿಸುವ ಚಳವಳಿಯಲ್ಲಿ ಮಾತನಾಡಿದರು.

‘ಓಲಾ, ಉಬರ್, ರ್‍ಯಾಪಿಡೊ ನಮ್ಮ ಯಾತ್ರಿಯಂತಹ ಖಾಸಗಿ ಕಂಪನಿಗಳಿಗೆ ಕೇಂದ್ರ ಸರ್ಕಾರದ ಮೋಟರ್ ವಾಹನ ತಿದ್ದುಪಡಿ ಕಾಯ್ದೆ (2019) ಅನ್ವಯ ರಾಜ್ಯ ಸರ್ಕಾರ ಕರ್ನಾಟಕ ಮೋಟಾರ್ ವಾಹನ ಕಾಯ್ದೆಗೆ ತಿದ್ದುಪಡಿ ಮಾಡಿ ಈ ಕಂಪನಿಗಳಿಗೆ ಅಗ್ರಿಗೇಟರ್ ಪರವಾನಗಿ ನೀಡುವ ಹುನ್ನಾರ ನಡೆದಿದೆ’ ಎಂದರು.

ಒಕ್ಕೂಟದ ರಾಜ್ಯ ಸಮಿತಿ ಸದಸ್ಯ ಎಸ್. ಅನಂತಶಯನ, ಹಂಪಿ ಘಟಕದ ಅಧ್ಯಕ್ಷ ರಾಘವೇಂದ್ರ, ಕಾರ್ಯದರ್ಶಿ ವಿರೂಪಾಕ್ಷಿ , ಸಿಐಟಿಯು ಟ್ಯಾಕ್ಸಿ ಚಾಲಕರ ಸಂಘದ ಮುಖಂಡ ಚನ್ನಬಸವನಗೌಡ ಇದ್ದರು.

ಹೊಸಪೇಟೆ ತಾಲ್ಲೂಕಿನ ಹಂಪಿ ವಿರೂಪಾಕ್ಷೇಶ್ವರ ದೇವಸ್ಥಾನ ಮುಂಭಾಗ ಅಂಚೆ ಕಾರ್ಡ್ ಚಳವಳಿ ನಡೆಯಿತು

14 ತೊಲೆ ಚಿನ್ನಾಭರಣ ಕಳವು

ಭಾಲ್ಕಿ (ಬೀದರ್ ಜಿಲ್ಲೆ): ಪಟ್ಟಣದ ಬಾಲಾಜಿ ನಗರದಲ್ಲಿರುವ ಶಿಕ್ಷಕ ಜಾಲೇಂದ್ರ ಭೀಮಣ್ಣ ಮೇತ್ರೆ ಅವರ ಮನೆಯ ಬೀಗ ಮುರಿದು 14 ತೊಲೆ ಚಿನ್ನ, 40 ತೊಲೆ ಬೆಳ್ಳಿ ಆಭರಣ ಕಳವು ಮಾಡಿರುವ ಘಟನೆ ಬುಧವಾರ ರಾತ್ರಿ ನಡೆದಿದೆ.

ಕೌಟುಂಬಿಕ ಕಾರ್ಯಕ್ರಮದ ನಿಮಿತ್ತ ಕುಟುಂಬದ ಸದಸ್ಯರು ಮನೆಗೆ ಬೀಗ ಹಾಕಿ ಹೋದಾಗ ಕಳ್ಳರು ತಮ್ಮ ಕೈಚಳಕ ತೋರಿಸಿದ್ದಾರೆ. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಸಿಪಿಐ ಬಿ. ಅಮರೇಶ ತಿಳಿಸಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75
ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 **editpage@prajavani.co.in**

ಅಭಿಮತ

ಸುಭಾಷಿತ

ನೀವು ರೆಕ್ಕೆಗಳೊಂದಿಗೆ ಹುಟ್ಟಿದ್ದೀರಿ. ಜೀವನವಿಡೀ ಏಕೆ ತೆವಳಲು ಬಯಸುತ್ತೀರಿ?

-ರೂಮಿ

ಸಂಪಾದಕೀಯ

‘ಕಲ್ಯಾಣ’ಕ್ಕೆ ಪ್ರತ್ಯೇಕ ಸಚಿವಾಲಯ ಜನರ ಆಶೋತ್ತರಗಳಿಗೆ ಸ್ಪಂದಿಸಲಿ

ಕಲ್ಯಾಣ ಕರ್ನಾಟಕದಲ್ಲಿ ರಾಜ್ಯ ಸರ್ಕಾರ ‘ಪ್ರಗತಿಯ ಹೊಳೆ’ ಹರಿಸುತ್ತಿದೆ ಎಂದು ಹೇಳಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ‘ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಸಚಿವಾಲಯ’ ಸ್ಥಾಪನೆಗೆ ವಾರದೊಳಗಾಗಿ ಅಧಿಸೂಚನೆ ಹೊರಡಿಸುವುದಾಗಿ ಹೇಳಿದ್ದಾರೆ. ‘ಹೈದರಾಬಾದ್ ಕರ್ನಾಟಕ ವಿಮೋಚನಾ ದಿನ’ದ ಅಂಗವಾಗಿ ಕಲಬುರಗಿಯಲ್ಲಿ ನಡೆದ ‘ಕಲ್ಯಾಣ ಕರ್ನಾಟಕ ಉತ್ಸವ’ದಲ್ಲಿ ಮಾತನಾಡಿರುವ ಅವರು, ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿ ಆಗದ ಹೊರತು ಸಂಪೂರ್ಣ ರಾಜ್ಯದ ಅಭಿವೃದ್ಧಿ ಅಸಾಧ್ಯ ಎಂದೂ ಹೇಳಿದ್ದಾರೆ. ಈ ಭಾಗದ ಜನರ ತಲಾದಾಯ ಹೆಚ್ಚಿಸುವುದರೊಂದಿಗೆ, ಶಿಕ್ಷಣ, ಆರೋಗ್ಯ, ಉದ್ಯೋಗ, ಮೂಲ ಸೌಕರ್ಯ ಸುಧಾರಣೆ ಸೇರಿ ಸರ್ವಾಂಗೀಣ ಅಭಿವೃದ್ಧಿಯೇ ಸರ್ಕಾರದ ಗುರಿ ಎಂದೂ ಮುಖ್ಯಮಂತ್ರಿ ಹೇಳಿರುವುದನ್ನು ನೋಡಿದರೆ, ‘ಕಲ್ಯಾಣ ಕರ್ನಾಟಕ’ದ ಭಾಗ್ಯದ ದಿನಗಳು ಹತ್ತಿರದಲ್ಲೇ ಇವೆ ಎಂದು ಭಾವಿಸಬಹುದಾಗಿದೆ. ಆದರೆ, ಪ್ರತಿ ವರ್ಷದ ಹೈದರಾಬಾದ್ ವಿಮೋಚನಾ ದಿನದ ಆಸುಪಾಸಿನಲ್ಲಿ ಆಯಾ ಕಾಲಘಟ್ಟದ ಮುಖ್ಯಮಂತ್ರಿಗಳು ಇದೇ ಬಗೆಯ ಮಾತುಗಳನ್ನಾಡಿರುವುದು ಹಾಗೂ ಅವುಗಳ ಪರಿಣಾಮವನ್ನು ಗಮನಿಸಿದರೆ, ಕಲ್ಯಾಣ ಕರ್ನಾಟಕದ ಅಭಿವೃದ್ಧಿಯ ಮಾತುಗಳ ಹಿಂದೆ ಇಚ್ಛಾಶಕ್ತಿಯ ಬದಲು ಔಪಚಾರಿಕತೆಯಷ್ಟೇ ಇರುವುದು ಸ್ಪಷ್ಟವಾಗುತ್ತದೆ. 1948ರ ಸೆಪ್ಟೆಂಬರ್ 17ರಂದು ಭಾರತ ಒಕ್ಕೂಟಕ್ಕೆ ಸೇರ್ಪಡೆಯಾದ ದಿನದಿಂದ ಇಂದಿನವರೆಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೈದರಾಬಾದ್ ಕರ್ನಾಟಕ ಪ್ರದೇಶಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ದೊರೆತಿಲ್ಲ ಎನ್ನುವ ದೂರುಗಳು ಕೇಳಿಬರುತ್ತಲೇ ಇವೆ. ಶೈಕ್ಷಣಿಕ ಕ್ಷೇತ್ರದಲ್ಲಿ ಹಿಂದುಳಿದಿರುವಿಕೆ, ಬಾಲ್ಯವಿವಾಹಗಳ ಹೆಚ್ಚಳ, ಕೃಷಿ ವಲಯದ ಸಂಕಷ್ಟ, ವ್ಯಾಪಕ ಗುಳೆ ಸೇರಿದಂತೆ ಹಲವು ಸಮಸ್ಯೆಗಳಿಂದ ಕಲ್ಯಾಣ ಕರ್ನಾಟಕದ ಜಿಲ್ಲೆಗಳು ತತ್ತರಿಸುತ್ತಿವೆ. ದೇಶದ ಎರಡನೇ ಅತಿ ಶುಷ್ಕ ಪ್ರದೇಶ ಎಂದು ಗುರ್ತಿಸಲಾಗಿರುವ ಈ ಭಾಗವನ್ನು ಸುಧಾರಿಸುವ ಪ್ರಯತ್ನಗಳು ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ವಿಯಾಗಿಲ್ಲ.



‘ಕಲ್ಯಾಣ ಕರ್ನಾಟಕ’ಕ್ಕೆ ಪ್ರತ್ಯೇಕ ಸಚಿವಾಲಯ ಸ್ಥಾಪಿಸುವ ನಿರ್ಧಾರ ಸ್ವಾಗತಾರ್ಹ. ಆದರೆ, ಉದ್ದೇಶಿತ ಸಚಿವಾಲಯ ಕಾಗದದ ಮೇಲಿನ ಸಾಧನೆಯಷ್ಟೇ ಆಗಬಾರದು.

ಪ್ರಾದೇಶಿಕ ಅಸಮತೋಲನದ ನಿವಾರಣೆಗಾಗಿ ವಿವಿಧ ಸರ್ಕಾರಗಳ ಅವಧಿಯಲ್ಲಿ ಹಲವು ಯೋಜನೆಗಳು ಜಾರಿಗೆ ಬಂದಿವೆ. ಡಿ.ಎಂ. ನಂಜುಂಡಪ್ಪ ಸಮಿತಿ ವರದಿಯಂತೆ ‘ವಿಶೇಷ ಅಭಿವೃದ್ಧಿ ಯೋಜನೆ’ ಜಾರಿಗೊಳಿಸಲಾಗಿದೆ. ಸಂವಿಧಾನದ ‘371 ಜೆ’ ಕಲಂನಡಿ ‘ಕಲ್ಯಾಣ ಕರ್ನಾಟಕ’ಕ್ಕೆ ವಿಶೇಷ ಸ್ಥಾನಮಾನ ನೀಡಲಾಗಿದ್ದು, ‘ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ’ ರೂಪುಗೊಂಡಿದೆ. ಪ್ರಸ್ತುತ ‘ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ’ ಎಂದು ಕರೆಯಲಾಗುವ ಈ ಮಂಡಳಿಗೆ, 2013ರಿಂದ ಇದುವರೆಗೆ ಒಟ್ಟು ₹24,780 ಕೋಟಿ ಅನುದಾನ ಹಂಚಿಕೆ ಮಾಡಲಾಗಿದ್ದು, ₹14,000 ಕೋಟಿ ವೆಚ್ಚ ಮಾಡಲಾಗಿದೆ. ಕಲಬುರಗಿಯಲ್ಲಿ ಕಳೆದ ವರ್ಷ ನಡೆದ ಸಚಿವ ಸಂಪುಟದ ಸಭೆಯಲ್ಲಿ ₹11,770 ಕೋಟಿ ಮೊತ್ತದಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿತ್ತು. ಈವರೆಗಿನ ಯೋಜನೆಗಳೆಲ್ಲ ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ಬಂದಿದ್ದಲ್ಲಿ ಕಲ್ಯಾಣ ಕರ್ನಾಟಕ ನಂದನದ ತುಣುಕಾಗಿ ಬದಲಾಗುತ್ತಿತ್ತು ಹಾಗೂ ದೇಶಕ್ಕೇ ಮಾದರಿ ಆಗುತ್ತಿತ್ತು. ರಾಜಕೀಯ ಪ್ರಾತಿನಿಧ್ಯದ ಮಾನದಂಡದಿಂದ ನೋಡಿದರೂ, ಈ ಭಾಗದ ಇಬ್ಬರು ನಾಯಕರು ಮುಖ್ಯಮಂತ್ರಿಗಳಾಗಿದ್ದಾರೆ. ಹಲವು ನಾಯಕರು ಕೇಂದ್ರ ರಾಜಕಾರಣದಲ್ಲೂ ಅವಕಾಶ ಪಡೆದಿದ್ದಾರೆ. ಇದೆಲ್ಲದರಿಂದ ಆಗಿರುವುದಾದರೂ ಏನು? ನಗರ ಪ್ರದೇಶಗಳಲ್ಲಿನ ಅಲ್ಪಸ್ವಲ್ಪ ಅಭಿವೃದ್ಧಿಯನ್ನು ಹೊರತುಪಡಿಸಿದರೆ ಗ್ರಾಮೀಣ ಪ್ರದೇಶಗಳು ಮೂಲ ಸೌಕರ್ಯಗಳಿಂದ ವಂಚಿತವಾಗಿಯೇ ಇವೆ. ಕುಡಿಯುವ ಶುದ್ಧನೀರು, ಅಗತ್ಯ ಸೌಲಭ್ಯಗಳನ್ನು ಒಳಗೊಂಡ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಗುಣಮಟ್ಟದ ಸರ್ಕಾರಿ ಶಾಲೆಗಳು ಕಲ್ಯಾಣ ಕರ್ನಾಟಕದ ಗ್ರಾಮೀಣರಿಗೆ ಐಷಾರಾಮಿಯಾಗಿಯೇ ಉಳಿದಿವೆ.

ಆಕರ್ಷಕ ಹಾಗೂ ಸುಂದರ ಹೆಸರುಗಳಿಂದ ಅನಭಿವೃದ್ಧಿಯನ್ನು ಮರೆಮಾಚುವುದು ಸಾಧ್ಯವಿಲ್ಲ. ‘ಕಲ್ಯಾಣ ಕರ್ನಾಟಕ’ದಲ್ಲಿನ ಕಲ್ಯಾಣ ಎನ್ನುವ ವಿಶೇಷಣ ಆ ಭಾಗದ ಸಾಂಸ್ಕೃತಿಕ ಹಾಗೂ ಸಾಮಾಜಿಕ ಪರಂಪರೆಯ ಔನ್ನತ್ಯವನ್ನು ಸೂಚಿಸುತ್ತದೆ; ಅಭಿವೃದ್ಧಿಗೆ ಸಂಬಂಧಿಸಿದಂತೆ ವ್ಯಂಗ್ಯ ಹಾಗೂ ವಿಷಾದದ ಧ್ವನಿಯನ್ನೂ ಒಳಗೊಂಡಿದೆ. ಪ್ರದೇಶವೊಂದರ ಅಭಿವೃದ್ಧಿಗೆ ಬೇಕಿರುವುದು ರಾಜಕೀಯ ಇಚ್ಛಾಶಕ್ತಿ ಹಾಗೂ ಪ್ರಾಮಾಣಿಕತೆ. ಇದೀಗ, ಕಲ್ಯಾಣ ಕರ್ನಾಟಕಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರಕಟಿಸಿರುವ ‘ಪ್ರತ್ಯೇಕ ಸಚಿವಾಲಯ’ ಕಾಗದದ ಮೇಲಿನ ಮತ್ತೊಂದು ಸಾಧನೆಯಷ್ಟೇ ಆಗಬಾರದು. ಈ ಸಚಿವಾಲಯ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಅಭಿವೃದ್ಧಿ ಚಟುವಟಿಕೆಗಳು ಕಾಲಮಿತಿಯೊಳಗೆ ಜಾರಿಗೊಳ್ಳುವಂತೆ ಮಾಡುವ ಬದ್ಧತೆ ಪ್ರದರ್ಶಿಸಬೇಕು; ಆ ಭಾಗದ ಜನರ ಆಶೋತ್ತರಗಳಿಗೆ ತಾಯಿಕರುಳಿನಿಂದ ಸ್ಪಂದಿಸಬೇಕು. ಇದರ ಜೊತೆಗೆ, ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಹಮ್ಮಿಕೊಂಡ ಯೋಜನೆಗಳ ಫಲಶ್ರುತಿಯ ಬಗ್ಗೆ ಗಂಭೀರ ಪರಾಮರ್ಶೆ ನಡೆಯಬೇಕು.

ಚುರುಮುರಿ

ಪುಸ್ತಕಕ್ಕಿಲ್ಲ ಉಡುಗೊರೆ

ಕೇಂದ್ರ ಸರ್ಕಾರವು ಜನಸಾಮಾನ್ಯರ ನಿತ್ಯಬಳಕೆಯ ವಸ್ತುಗಳು ಕಡಿಮೆ ಬೆಲೆಯಲ್ಲಿ ದೊರೆಯಲಿ ಎಂದು ಜಿಎಸ್‌ಟಿ ತಗ್ಗಿಸಿರುವುದಾಗಿ ಘೋಷಿಸಿ, ಅದನ್ನು ಹಬ್ಬದ ಉಡುಗೊರೆಯೆಂದು ಹೆಮ್ಮೆಯಿಂದ ಹೇಳಿದೆ. ಆದರೆ, ಪುಸ್ತಕದ ಒಳಪುಟ ಮತ್ತು ಮುಖಪುಟಕ್ಕೆ ಬಳಸುವ ಕಾಗದಗಳ ಜಿಎಸ್‌ಟಿಯನ್ನು ಶೇ 12ರಿಂದ 18ಕ್ಕೆ ಏರಿಸಿದೆ. ಪುಸ್ತಕ ಓದುವ ಸಂಸ್ಕೃತಿ ಜನಸಾಮಾನ್ಯರ ಬದುಕಿನ ಭಾಗವಲ್ಲ ಎನ್ನುವುದು ಸರ್ಕಾರದ ತಿಳಿವಳಿಕೆಯೆ?

ವಸುಧೇಂದ್ರ, ಲೇಖಕ, ‘ಫೇಸ್‌ಬುಕ್’ನಿಂದ

ಕಿಡಿನುಡಿ

ತೆರಿಗೆ ಹಾಕುವುದರಲ್ಲಿ ಸರ್ಕಾರದ್ದು ರಾಕೆಟ್ ವೇಗ. ಗುಂಡಿ ಮುಚ್ಚುವುದರಲ್ಲಿ ಆಮೆ ವೇಗವೂ ಇಲ್ಲ. ಕೊಳ್ಳೆ ಹೊಡೆಯುವುದರಲ್ಲಿ ಉನ್ಮಾದ; ಅಭಿವೃದ್ಧಿ ಯತ್ತ ವಿಪರೀತ ಉಪೇಕ್ಷೆ. ಚುನಾವಣಾ ಗ್ಯಾರಂಟಿಗಳಿಗೆ ರಾಜ್ಯದ ಅಭಿವೃದ್ಧಿ ಬಲಿಯಾಗಿದ್ದು, ಗ್ರೇಟರ್ ಬೆಂಗಳೂರು ಗಬ್ಬೆದ್ದು ನಾರುತ್ತಿದೆ.

ಎಚ್‌.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 19-9-2000

• ಡಿಸೆಂಬರ್‌ನಿಂದ ವಿದ್ಯುತ್ ವಿತರಣೆ ಖಾಸಗೀಕರಣ

ಬೆಂಗಳೂರು, ಸೆಪ್ಟೆಂಬರ್ 18– ವಿದ್ಯುತ್ ವಿತರಣೆ ಕ್ಷೇತ್ರದಲ್ಲಿ ಡಿಸೆಂಬರ್ ತಿಂಗಳಿನಿಂದ ಖಾಸಗೀಕರಣ ಪ್ರಕ್ರಿಯೆ ಪ್ರಾರಂಭವಾಗಲಿದೆ ಎಂದು ಇಂಧನ ಖಾತೆ ರಾಜ್ಯ ಸಚಿವ ವೀರಕುಮಾರ ಪಾಟೀಲ ಇಂದು ಇಲ್ಲಿ ತಿಳಿಸಿದರು.

ಹಂತ ಹಂತವಾಗಿ ವಲಯ ಮಟ್ಟದಲ್ಲಿ ಈ ಖಾಸಗೀಕರಣ ಪ್ರಕ್ರಿಯೆ ನಡೆಯಲಿದ್ದು, ಅದಕ್ಕಾಗಿ ಟೆಂಡರ್ ಕರೆಯಲಾಗುವುದು ಎಂದರು.

• ದರೋಡೆ: ನಗ–ನಾಣ್ಯ ಲೂಟಿ

ಬೆಂಗಳೂರು, ಸೆಪ್ಟೆಂಬರ್ 18– ಶಾಲಾ ಶಿಕ್ಷಕಿಯೊಬ್ಬರ ಮನೆಗೆ ನುಗ್ಗಿದ ಏಳು ಮಂದಿ ಡಕಾಯಿತರ ತಂಡ ಮನೆಯಲ್ಲಿದ್ದವರಿಗೆ ಮಾರಕಾಸ್ತ್ರಗಳಿಂದ ಬೆದರಿಸಿ ಸುಮಾರು ಒಂದು ಲಕ್ಷ ರೂಪಾಯಿ ಮೌಲ್ಯದ ನಗ–ನಾಣ್ಯ ಲೂಟಿ ಮಾಡಿರುವ ಘಟನೆ ಬೆಂಗಳೂರು ಗ್ರಾಮಾಂತರ ಜಿಲ್ಲೆ ಆನೇಕಲ್‌ನಲ್ಲಿ ಭಾನುವಾರ ನಡೆದಿದೆ. ಮಾರುತಿ ಬಡಾವಣೆಯ ಶಿಕ್ಷಕಿ ಭಾಗ್ಯ ಅವರ ಮನೆಯಲ್ಲಿ ಘಟನೆ ನಡೆದಿದೆ.

75 ವರ್ಷಗಳ ಹಿಂದೆ

ಮಂಗಳವಾರ, 19-9-1950

• ಅಣ್ಣನನ್ನು ಕೊಂದ ತಮ್ಮನಿಗೆ ಗಲ್ಲು ಶಿಕ್ಷೆ

ಬೆಂಗಳೂರು, ಸೆಪ್ಟೆಂಬರ್ 18– ಹಣಕಾಸು ವಿಚಾರಕ್ಕೆ ಸಂಬಂಧಿಸಿದಂತೆ ಅಣ್ಣನನ್ನು ಕೊಂದ ತಮ್ಮನಿಗೆ ನಗರದ ಹೆಚ್ಚುವರಿ ಮೊದಲ ಸೆಷನ್ಸ್ ನ್ಯಾಯಾಲಯವು ಗಲ್ಲುಶಿಕ್ಷೆ ವಿಧಿಸಿದೆ.

ಬಾಲು ಸಾ (26) ಶಿಕ್ಷೆಗೊಳಗಾದ ವ್ಯಕ್ತಿ. ಕಳೆದ ಜನವರಿ 19ರಂದು ತನ್ನ ಸಹೋದರ ಚಿಕ್ಕವೆಂಕು ಸಾ(40) ಎಂಬುವರನ್ನು ಕೊಲೆ ಮಾಡಿದ್ದ ಆರೋಪ ಈತನ ಮೇಲಿತ್ತು. ಈ ಕುರಿತು ಪ್ರಕರಣ ದಾಖಲಿಸಿಕೊಂಡಿದ್ದ ಹಲಸೂರು ಗೇಟ್ ಪೊಲೀಸರು ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು 69 ಸಾಕ್ಷ್ಯಗಳನ್ನು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಿದ್ದರು. ಈ ಪೈಕಿ 65 ಸಾಕ್ಷ್ಯಗಳ ವಿಚಾರಣೆ ನಡೆಸಲಾಗಿದೆ. ಆರೋಪ ಸಾಬೀತಾಗಿದ್ದರಿಂದ ಆಪಾದಿತನಿಗೆ ನ್ಯಾಯಾಲಯವು ಶಿಕ್ಷೆ ವಿಧಿಸಿದೆ.

ಹಾಕಿ: ರಾಜ್ಯದಲ್ಲೇಕೆ ಬರಗಾಲ?

ವಿಶ್ಲೇಷಣೆ

ಗಿರೀಶ ದೊಡ್ಡಮನಿ

ಮತದಾರರ ಪಟ್ಟಿಯ ‘ವಿಶೇಷ ಸಮಗ್ರ ಪರಿಷ್ಕರಣೆ’ಗೆ ಸಂಬಂಧಿಸಿದ ಗೊಂದಲ ಮತ್ತು ವಿವಾದಗಳ ಮೂಲಕ ಸುದ್ದಿಯಲ್ಲಿರುವ ಬಿಹಾರದಲ್ಲಿ ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತ ಹಾಕಿ ತಂಡವು ಏಷ್ಯಾ ಕಪ್ ಎತ್ತಿಹಿಡಿದು ಸಂಭ್ರಮಿಸಿತು. ಇದರೊಂದಿಗೆ ತಂಡವು ಮುಂದಿನ ವರ್ಷ ನಡೆಯಲಿರುವ ವಿಶ್ವಕಪ್ ಹಾಕಿ ಚಾಂಪಿಯನ್‌ಷಿಪ್‌ಗೂ ಅರ್ಹತೆ ಗಳಿಸಿತು.

ನೆದರ್ಲೆಂಡ್ಸ್ ಮತ್ತು ಬೆಲ್ಜಿಯಂ ದೇಶದ ಜಂಟಿ ಆತಿಥ್ಯದಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಅಭಿಮಾನಿಗಳ 50 ವರ್ಷಗಳ ಕನಸು (ಭಾರತ ಕೊನೆಯದಾಗಿ ವಿಶ್ವಕಪ್ ಗೆದ್ದದ್ದು 1975ರಲ್ಲಿ) ಈಡೇರುವ ನಿರೀಕ್ಷೆ ಮೂಡಿದೆ. ಈ ಸಾಧನೆಗೆ ಹೆಮ್ಮೆಪಡುತ್ತಲೇ ಗಮನಿಸಬೇಕಾದ ಕೆಲವು ಪ್ರಮುಖ ಅಂಶಗಳಿವೆ.

ಹಿಂದುಳಿದ ರಾಜ್ಯಗಳೆಂದು ಕರೆಸಿಕೊಳ್ಳುವ ಬಿಹಾರ ಮತ್ತು ಒಡಿಶಾ, ಪ್ರಸ್ತುತ ‘ರಾಷ್ಟ್ರೀಯ ಕ್ರೀಡೆ’ ಹಾಕಿಯ ಪುನರುತ್ಥಾನದಲ್ಲಿ ದೊಡ್ಡ ಪಾತ್ರ ವಹಿಸುತ್ತಿವೆ. ಆದರೆ, ಈ ಕ್ರೀಡೆಯೊಂದಿಗೆ ಹಲವು ದಶಕಗಳ ನಂಟು ಹೊಂದಿರುವ ಕರ್ನಾಟಕದ ಹಾಕಿ ಇವತ್ತು ಏನಾಗಿದೆ ಎಂಬ ಪ್ರಶ್ನೆಯೂ ಕಾಡುತ್ತದೆ. ಕಳೆದ ಕೆಲವು ವರ್ಷಗಳಿಂದ ಭಾರತ ತಂಡದಲ್ಲಿ ಕನ್ನಡಿಗರ ಆಟ ನೋಡಲು ಸಾಧ್ಯವೇ ಆಗಿಲ್ಲ. ಇತ್ತೀಚೆಗೆ ಮುಗಿದ ಏಷ್ಯಾ ಚಾಂಪಿಯನ್‌ಷಿಪ್ ಕೂಡ ಅದಕ್ಕೆ ಹೊರತಲ್ಲ. ದಶಕಗಳ ಹಿಂದೆ ಭಾರತದ ಹಾಕಿಯ ‘ಸ್ವರ್ಣಯುಗ’ದಲ್ಲಿ ಕನ್ನಡಿಗರ ಕಾಣಿಕೆಯೂ ಇತ್ತು. ಆದರೆ, ಈಗ ಏಕೆ ಬರಗಾಲ?

ಹಾಕಿ ಆಟದ ಬೇರುಮಟ್ಟದಿಂದ ಉನ್ನತ ಮಟ್ಟದವರೆಗಿನ ಬೆಳವಣಿಗೆಗೆ ಬೇಕಾದ ಕ್ರಾಂತಿಕಾರಕ ಹೆಜ್ಜೆಗಳನ್ನು ಇಡುವಲ್ಲಿ ಕರ್ನಾಟಕ ಹಿಂದುಳಿದಿರುವುದು ಇದಕ್ಕೆ ಕಾರಣ. ಒಡಿಶಾ ಮತ್ತು ಈಗ ಬಿಹಾರ ಅನುಸರಿಸುತ್ತಿರುವ ನೀತಿಗಳು ಕರ್ನಾಟಕದಲ್ಲಿ ಇಲ್ಲ. ರಾಜಕೀಯ ಇಚ್ಛಾಶಕ್ತಿಯ ಕೊರತೆ ಹಾಗೂ ಸರ್ಕಾರದ ನಿರ್ಲಕ್ಷ್ಯವೂ ಕರ್ನಾಟಕ ದಲ್ಲಿ ಹಾಕಿ ಪ್ರಗತಿ ಕುಂಠಿತಕ್ಕೆ ಪ್ರಮುಖ ಕಾರಣ.

ರಾಜ್ಯ ಸರ್ಕಾರವೊಂದು ಮನಸ್ಸು ಮಾಡಿದರೆ ಕ್ರೀಡೆಯನ್ನು ಎಷ್ಟು ಉನ್ನತ ಮಟ್ಟಕ್ಕೇರಿಸಬಹುದು ಎಂಬುದಕ್ಕೆ ಉದಾಹರಣೆಯಂತೆ, ದೇಶದ ‘ಹಾಕಿ ರಾಜಧಾನಿ’ಯಾಗಿ ಒಡಿಶಾ ಕಂಗೊಳಿಸುತ್ತಿದೆ. ಎರಡು ವರ್ಷಗಳ ಹಿಂದೆ ಭುವನೇಶ್ವರ ಮತ್ತು ರೂರ್ಕೆಲಾದಲ್ಲಿ ವಿಶ್ವಕಪ್ ಹಾಕಿ ಆಯೋಜಿಸಿತ್ತು. ಎಫ್‌ಐಎಚ್ ಪ್ರೊ ಲೀಗ್ ಟೂರ್ನಿಗಳನ್ನು ಆಯೋಜಿಸಿದೆ. ಅಷ್ಟೇ ಅಲ್ಲ, 2018ರಿಂದಲೇ ಭಾರತ ತಂಡಕ್ಕೆ ಒಡಿಶಾ ಸರ್ಕಾರವು ಪ್ರಾಯೋಜಕತ್ವ ನೀಡುತ್ತಿದೆ. ಆಗಿನ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ನೇತೃತ್ವದ ಒಡಿಶಾ ಸರ್ಕಾರವು ಅಲ್ಲಿಯ ಆದಿವಾಸಿ ಹಾಡಿಗಳಲ್ಲಿದ್ದ ಪ್ರತಿಭೆಗಳನ್ನು ಹುಡುಕಿ ಮುನ್ನೆಲೆಗೆ ತಂದಿದೆ. ಅವರಲ್ಲಿ ಅನೇಕರು ಪ್ರಸ್ತುತ ಅಂತರರಾಷ್ಟ್ರೀಯ ಆಟಗಾರರಾಗಿದ್ದಾರೆ. ಅಲ್ಲಿಯವರೇ ಆದ ದಿಲೀಪ್ ಟಿರ್ಕಿ ಅವರು ಹಾಕಿ ಇಂಡಿಯಾ ಅಧ್ಯಕ್ಷರಾಗಿರುವುದೂ ಒಡಿಶಾಕ್ಕೆ ವರದಾನವಾಗಿದೆ.

ಈಗ ಬಿಹಾರ ಕೂಡ ಅದೇ ಹಾದಿಯಲ್ಲಿದೆ. ಅಲ್ಲಿಯ ನಳಂದ ವಿಶ್ವವಿದ್ಯಾಲಯದ 90 ಎಕರೆ ಜಾಗದಲ್ಲಿ 17 ಕ್ರೀಡೆಗಳಿಗಾಗಿ ಮೂಲಸೌಲಭ್ಯಗಳು ಅಭಿವೃದ್ಧಿಯಾಗುತ್ತಿವೆ; ಎರಡು ಹಾಕಿ ಟರ್ಫ್ ಮೈದಾನಗಳು ಮತ್ತು ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣಗೊಳ್ಳುತ್ತಿವೆ. ‘ಪಿರಮಿಡ್’ ಮಾದರಿಯಲ್ಲಿ ಉನ್ನತಮಟ್ಟದಲ್ಲಿ ಆದ ಅಭಿವೃದ್ಧಿಯ ಪ್ರಭಾವವು ತಳಮಟ್ಟದವರೆಗೆ ಪಸರಿಸುತ್ತಿದೆ.

ಬಿಹಾರದ ಗ್ರಾಮೀಣ ಭಾಗಗಳ ಮಕ್ಕಳು ಕ್ರೀಡೆಗಳತ್ತ, ಅದರಲ್ಲೂ ಹಾಕಿ ಆಟದತ್ತ ಆಸಕ್ತಿ ತೋರುತ್ತಿದ್ದಾರೆ. ಅವರಿಗಾಗಿ ಪ್ರತಿ ಜಿಲ್ಲೆಯಲ್ಲಿಯೂ ಉಚಿತ ಕ್ರೀಡಾ ವಸತಿ ನಿಲಯಗಳು, ಮೈದಾನಗಳು ಮತ್ತು ತರಬೇತಿ ಸೌಲಭ್ಯಗಳು ಅಭಿವೃದ್ಧಿಯಾಗುತ್ತಿವೆ. ಈಚೆಗೆ ನಡೆದ ಏಷ್ಯಾ ಕಪ್ ಟೂರ್ನಿಯಲ್ಲಿ ಸ್ವಯಂ ಸೇವಕರಾಗಿ ಕಾರ್ಯ ನಿರ್ವಹಿಸಿದವರು ಗ್ರಾಮಾಂತರ ಕೇಂದ್ರಗಳಲ್ಲಿ ಹಾಕಿ ತರಬೇತಿ ಪಡೆಯುತ್ತಿರುವ ಮಕ್ಕಳೇ ಆಗಿದ್ದರು. ಅವರಿಗೆ ಒಲಿಂಪಿಯನ್ ಆಟಗಾರರೊಂದಿಗೆ ಒಡನಾಡುವ ಅವಕಾಶ ಸಿಕ್ಕಿತು. ಮುಂದೊಂದು ದಿನ ಆ ಮಕ್ಕಳಲ್ಲಿಯೇ ಕೆಲವರು ಅಂತರರಾಷ್ಟ್ರೀಯ ಮಟ್ಟದ ಆಟಗಾರರಾಗಲು ಇದು ಪ್ರೇರಣೆಯಾಗಬಹುದು ಎಂದು ಬಿಹಾರ ಕ್ರೀಡಾ ಪ್ರಾಧಿಕಾರದ ಮುಖ್ಯಸ್ಥ ರವೀಂದ್ರನ್ ಶಂಕರನ್ ಅಭಿಪ್ರಾಯಪಡುತ್ತಾರೆ. ತಮಿಳುನಾಡು ಮೂಲದ ಐಪಿಎಸ್ ಅಧಿಕಾರಿಯಾಗಿರುವ ರವೀಂದ್ರನ್, 2022ರಿಂದ ಬಿಹಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರ ಕ್ರಿಯಾಶೀಲ ಯೋಜನೆಗಳಿಂದಾಗಿ ಬಿಹಾರದ ಕ್ರೀಡೆಯಲ್ಲಿ ಬದಲಾವಣೆಯ ಗಾಳಿ ಬೀಸುತ್ತಿದೆ.

> ಭಾರತದ ಹಾಕಿ ಸುವರ್ಣ ಯುಗದಲ್ಲಿ ಕರ್ನಾಟಕದ ಹೊಳಪೂ ಸೇರಿಕೊಂಡಿತ್ತು. ಭಾರತೀಯ ಹಾಕಿಗೆ ಮಹತ್ವದ ಕೊಡುಗೆ ನೀಡಿರುವ ಕರ್ನಾಟಕ, ಈಗ ಹಾಕಿ ನಕಾಶೆಯಲ್ಲಿ ತನ್ನ ಸ್ಥಾನವನ್ನು ಒಡಿಶಾ ಹಾಗೂ ಬಿಹಾರಕ್ಕೆ ಬಿಟ್ಟುಕೊಟ್ಟಂತಿದೆ. ರಾಜ್ಯದ ಶ್ರೀಮಂತ ಹಾಕಿ ಪರಂಪರೆ ತನ್ನ ವೈಭವ ಕಳೆದುಕೊಂಡಿದೆ.

ಒಡಿಶಾ ಮತ್ತು ಬಿಹಾರಕ್ಕಿಂತಲೂ ಹಾಕಿ ಕ್ರೀಡೆಯೊಂದಿಗೆ ಅತ್ಯಂತ ಹಳೆಯ ಚಾರಿತ್ರಿಕ ನಂಟು ಹೊಂದಿರುವ ರಾಜ್ಯ ಕರ್ನಾಟಕ. 1964ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿದ್ದ ಭಾರತ ತಂಡದಲ್ಲಿ ಬೆಳಗಾವಿಯ ಬಂಡು ಪಾಟೀಲ, 1972ರಲ್ಲಿ ಮ್ಯೂನಿಕ್ ಒಲಿಂಪಿಕ್ಸ್‌ನಲ್ಲಿ ಕಂಚು ಜಯಿಸಿದ್ದ ಬಳಗದಲ್ಲಿ ಕೊಡಗಿನ ಎಂ.ಪಿ. ಗಣೇಶ್, ಬಿ.ಪಿ. ಗೋವಿಂದ ಹಾಗೂ 1980ರಲ್ಲಿ ಚಿನ್ನ ಗೆದ್ದ ಬಳಗದಲ್ಲಿ ಎಂ.ಎಂ. ಸೋಮಯ್ಯ ಇದ್ದರು. 1975ರಲ್ಲಿ ವಿಶ್ವಕಪ್ ಗೆದ್ದ ತಂಡದಲ್ಲಿಯೂ ಬಿ.ಪಿ. ಗೋವಿಂದ ಮತ್ತು ಪಿ.ಇ. ಕಾಳಯ್ಯ ಆಡಿದ್ದರು. ನಂತರವೂ ಭಾರತದ ಹಾಕಿ ಕ್ರೀಡೆಗೆ ಕರ್ನಾಟಕ ಕೊಡುಗೆ ಕೊಟ್ಟಿದೆ. ಎ.ಬಿ. ಸುಬ್ಬಯ್ಯ, ಸಿ. ಪೂಣಚ್ಚ, ರವಿ ನಾಯ್ಕರ್, ಆಶಿಶ್ ಬಲ್ಲಾಳ, ಜ್ಯೂಡ್ ಫೆಲಿಕ್ಸ್, ಅರ್ಜುನ್ ಹಾಲಪ್ಪ ಅವರ ಕೊಡುಗೆಯನ್ನು ಮರೆಯುವಂತಿಲ್ಲ. ಭಾರತ ತಂಡವು 2008ರಲ್ಲಿ ಒಲಿಂಪಿಕ್ ಅರ್ಹತೆಯನ್ನು ಗಿಟ್ಟಿಸಿರಲಿಲ್ಲ. 2012ರ ಲಂಡನ್ ಒಲಿಂಪಿಕ್ ಕೂಟದಲ್ಲಿ ಮರಳಿ ಸ್ಥಾನ ಪಡೆಯುವಲ್ಲಿ ಎಸ್‌.ವಿ. ಸುನೀಲ್, ವಿ.ಆರ್. ರಘುನಾಥ್, ಭರತ್ ಚೆಟ್ರಿ ಅವರ ಆಟವೇ ಪ್ರಮುಖವಾಗಿತ್ತು. ಅಂದು ಆರಂಭವಾದ ಪುನರುತ್ಥಾನದ ಫಲ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಲಭಿಸಿತು.

ಕಳೆದ ಎರಡು ದಶಕಗಳಿಂದ, ಭಾರತದ ಹಾಕಿ ತಂಡಗಳು ಒಲಿಂಪಿಕ್ಸ್ ಮತ್ತು ವಿಶ್ವಕಪ್ ಸೇರಿದಂತೆ ಪ್ರಮುಖ ಟೂರ್ನಿಗಳಲ್ಲಿ ಭಾಗವಹಿಸುವ ಮುನ್ನ ತರಬೇತಿ ಪಡೆಯುವುದು ಬೆಂಗಳೂರಿನ ಭಾರತ ಕ್ರೀಡಾ ಪ್ರಾಧಿಕಾರದ (ಎಸ್‌ಎಐ) ವಸತಿ ನಿಲಯದಲ್ಲಿ ಎಂಬುದು ಗಮನಾರ್ಹ. ಆಹ್ಲಾದಕರ ಹವಾಮಾನ ಮತ್ತು ಆಹಾರ ವೈವಿಧ್ಯದಿಂದಾಗಿ ಹಾಕಿ ತಂಡಗಳು ಬೆಂಗಳೂರಿನಲ್ಲಿ ಇರಲು ಇಷ್ಟಪಡುತ್ತವೆ.

ಇಷ್ಟೆಲ್ಲ ಇದ್ದರೂ ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಹಾಕಿ ಪಂದ್ಯ ನಡೆದು 28 ವರ್ಷಗಳು ಉರುಳಿಹೋಗಿವೆ. 1997ರಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವಣ ‘ಸ್ನೇಹಪರ ಪಂದ್ಯ’ ನಡೆದಿದ್ದೇ ಕೊನೆಯದು ಎಂದು ಕರ್ನಾಟಕ ರಾಜ್ಯ ಹಾಕಿ ಸಂಸ್ಥೆಯ (ಕೆಎಸ್‌ಎಚ್‌ಎ) ಪದಾಧಿಕಾರಿ ಕೃಷ್ಣಮೂರ್ತಿ ನೆನಪಿಸಿಕೊಳ್ಳುತ್ತಾರೆ.

ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ನಿಯಮಗಳ ಪ್ರಕಾರ, ಸೌಲಭ್ಯಗಳಿರುವ ಕ್ರೀಡಾಂಗಣ ನಿರ್ಮಿಸಬೇಕಾದ ಅಗತ್ಯ ಇದೆ. ಈಗ ರಾಜ್ಯದಲ್ಲಿರುವ ಕ್ರೀಡಾಂಗಣಗಳು ಎಫ್‌ಐಎಚ್ ಮಾನದಂಡಗಳಿಗೆ ಹೊಂದಾಣಿಕೆಯಾಗುವುದಿಲ್ಲ. ಆದ್ದರಿಂದ ಈಗಿರುವ ಕ್ರೀಡಾಂಗಣವನ್ನು ಮೇಲ್ದರ್ಜೆಗೇರಿಸಬೇಕು ಇಲ್ಲವೇ ಹೊಸದನ್ನು ನಿರ್ಮಿಸಬೇಕು ಎಂದೂ ಅವರು ಹೇಳುತ್ತಾರೆ.

ಕರ್ನಾಟಕದ ಹಾಕಿ ಅಂಗಳಕ್ಕೆ ಹೆಚ್ಚು ಆಟಗಾರರು ಬಂದಿರುವುದು ಕೊಡಗು, ಬೆಳಗಾವಿ, ಬಾಗಲಕೋಟೆ, ಹುಬ್ಬಳ್ಳಿ ಹಾಗೂ ಗದುಗಿನಿಂದ. ಹುಬ್ಬಳ್ಳಿ, ಬಾಗಲಕೋಟೆ ಮತ್ತು ಗದುಗಿನ ಸೆಟ್ಲಮೆಂಟ್ ಪ್ರದೇಶಗಳು ಹಾಕಿ ಕಣಜಗಳೇ ಆಗಿದ್ದವು. ಗದುಗಿನ ಬೇನು ಬಾಳು ಭಾಟ್, ಎಚ್‌.ವೈ. ಸಿದ್ಲಿಂಗ್, ರಾಚಯ್ಯ, ಮಾಣಿಕ್ ಭಾಟ್, ಸಿದ್ಧಪ್ಪ ಬಾಲೆಹೊಸೂರು, ಎಚ್‌.ಬಿ. ವೀರಾಪುರ, ಜಾಕ್ಸನ್ ಭಾಟ್, ಕೆ.ಆರ್. ಹಬೀಬ್, ಕಾರ್ಲಟನ್ ಗೋಮ್ಸ್ ರಾಷ್ಟ್ರಮಟ್ಟದಲ್ಲಿ ಆಡಿರುವವರು. ರಾಜು ಬಗಾಡೆ 90ರ ದಶಕದಲ್ಲಿ ಬೆಂಗಳೂರಿನ ಕ್ರೀಡಾ ಹಾಸ್ಟೆಲ್‌ನಲ್ಲಿ ಕೆಲವು ವರ್ಷ ಆಡಿದ್ದರು. ಈಚೆಗೆ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಚಿನ್ನದ ಪದಕ ಗೆದ್ದ ಭಾರತ ತಂಡದಲ್ಲಿದ್ದ ಹರೀಶ ಮುತಗಾರ ಗದುಗಿನವರು.

‘ರಾಜ್ಯದಲ್ಲಿ ಹಾಕಿ ಅಥವಾ ಯಾವುದೇ ಕ್ರೀಡೆಯಾಗಲಿ ಒಂದು ಜಿಲ್ಲೆ ಅಥವಾ ನಗರಕ್ಕೆ ಸೀಮಿತವಾಗಬಾರದು. ಪ್ರತಿ ಜಿಲ್ಲೆಗೊಂದರಂತೆ ವಸತಿ ನಿಲಯ ಇರಬೇಕು. ಅದರಲ್ಲೂ ಹಾಕಿ ಆಟಕ್ಕೆ ಹುಬ್ಬಳ್ಳಿ, ಧಾರವಾಡದಂತಹ ಊರಿನಲ್ಲಿ ಹಾಸ್ಟೆಲ್ ಇಲ್ಲದಿರುವುದು ವಿಪರ್ಯಾಸ. ಇದ್ದ ರಾಜ್ಯ ವಸತಿ ನಿಲಯವು 1991ರಲ್ಲಿ ಬಂದ್ ಆಗಿತ್ತು. ಇಲ್ಲಿ ಆಸ್ಟ್ರೋ ಟರ್ಫ್ ಕೂಡ ಇಲ್ಲ. ಗದಗ ಮತ್ತು ಬಳ್ಳಾರಿಯಲ್ಲಿ ಮಾತ್ರ ಟರ್ಫ್ ಆಗಿವೆ. ಸ್ಥಳೀಯ ಸಚಿವರು, ಶಾಸಕರು ಮತ್ತು ಅಧಿಕಾರಿಗಳಿಗೆ ಈ ಕುರಿತ ಮನವಿ ಪತ್ರಗಳನ್ನು ಹಲವು ಬಾರಿ ಸಲ್ಲಿಸಿದ್ದೇವೆ. ಪ್ರತಿಫಲ ಇಲ್ಲ’ ಎಂದು ಧಾರವಾಡದ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಸಮಿತಿಯ ಸಂಚಾಲಕರೂ ಆದ ನಿವೃತ್ತ ಹಾಕಿ ಕೋಚ್ ಪುಲಿಕೇಶಿ ಶೆಟ್ಟೆಪ್ಪನವರ ಬೇಸರ ವ್ಯಕ್ತಪಡಿಸುತ್ತಾರೆ.

ರಾಜ್ಯದಲ್ಲಿ ಇರುವ ಮೂಲಸೌಲಭ್ಯಗಳು ಸಾಲದು. ಗ್ರಾಮೀಣ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿರುವ ಪ್ರತಿಭಾವಂತರನ್ನು ಶೋಧಿಸುವ ಕೆಲಸ ಮಾಡಬೇಕು, ಪ್ರತಿ ಜಿಲ್ಲಾ ಕೇಂದ್ರಕ್ಕೂ ಸುಸಜ್ಜಿತ ಕ್ರೀಡಾಂಗಣ ಇರಬೇಕು ಎಂದು ‘ಹಾಕಿ ಕರ್ನಾಟಕ’ದ ಮಹಾಪ್ರಧಾನ ಕಾರ್ಯದರ್ಶಿ ಎ.ಬಿ. ಸುಬ್ಬಯ್ಯ ಹೇಳುತ್ತಾರೆ. ಈ ಕುರಿತು ಸರ್ಕಾರವನ್ನು ಒತ್ತಾಯಿಸಿರುವುದಾಗಿಯೂ ಅವರು ಹೇಳುತ್ತಾರೆ. ಆದರೆ, ಪ್ರತಿಫಲ ಶೂನ್ಯ.

ದಶಕಗಳ ಹಿಂದೆ ಪಂಜಾಬ್ ಮತ್ತು ಹರಿಯಾಣದೊಂದಿಗೆ ಕರ್ನಾಟಕದ ಹಾಕಿ ಪಟುಗಳ ಪೈಪೋಟಿ ನಡೆಸಬೇಕಿತ್ತು, ಈಗ ಆ ಸಾಲಿಗೆ ಒಡಿಶಾ, ಬಿಹಾರ ಸೇರಿವೆ. ಮುಂಬರುವ ದಿನಗಳಲ್ಲಿ ಮತ್ತಷ್ಟು ರಾಜ್ಯಗಳ ಸ್ಪರ್ಧೆಯೂ ಎದುರಾಗಬಹುದು.

ವಾಚಕರ ವಾಣಿ

‘ಅನುಕಂಪ’ ಮರೆತ ಶಿಕ್ಷಣ ಇಲಾಖೆ

ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರ ಕಚೇರಿ ವ್ಯಾಪ್ತಿಯಲ್ಲಿ ಸ್ವೀಕೃತಗೊಂಡ, ಅನುಕಂಪ ಆಧಾರದ ನೌಕರರ ಅರ್ಜಿಗಳನ್ನು 90 ದಿನಗಳೊಳಗೆ ಇತ್ಯರ್ಥಪಡಿಸಬೇಕು. ಇದು ಸರ್ಕಾರದ ಆದೇಶ. ಇದಕ್ಕೆ ಹೈಕೋರ್ಟ್ ಕೂಡ ಸಮ್ಮತಿಸಿದೆ. ಆದರೆ, ಆಯುಕ್ತರ ಕಚೇರಿಯಲ್ಲಿ 210 ದಿನಗಳಿಂದ ಅರ್ಜಿ ವಿಲೇವಾರಿ ಮಾಡದೆ ವಿಳಂಬ ಮಾಡಲಾಗುತ್ತಿದೆ. ಇದರಿಂದ ಅನುಕಂಪ ಆಧಾರಿತ ಉದ್ಯೋಗ ನಿಯಮ–1996ರ ಮೂಲ ಆಶಯವೇ ಮೂಲೆಗುಂಪಾಗಿದೆ. ಕುಟುಂಬಕ್ಕೆ ಆಸರೆಯಾಗಿರುವ ವ್ಯಕ್ತಿಯನ್ನು ಕಳೆದುಕೊಂಡಾಗ ಇಡೀ ಕುಟುಂಬ ಆಘಾತಕ್ಕೆ ಒಳಗಾಗುತ್ತದೆ. ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತದೆ. ಹಾಗಾಗಿ, ಪ್ರತಿ ಮೂರು ತಿಂಗಳಿಗೊಮ್ಮೆ ಅನುಕಂಪ ಆಧಾರದ ನೌಕರಿ ನೇಮಕಾತಿಯ ಕೌನ್ಸೆಲಿಂಗ್ ನಡೆಸಲು ಇಲಾಖೆಯ ಪ್ರಧಾನ ಕಾರ್ಯದರ್ಶಿ ಅವರು ಕ್ರಮವಹಿಸಬೇಕಿದೆ.

ಕೃಷ್ಣೇಗೌಡ ಎಂ.ಆರ್., ಮೈಸೂರು

ಭೂರಹಿತರಿಗೆ ಜಮೀನು ಬೇಡವೇ?

ರಾಜ್ಯದಲ್ಲಿ ಸಣ್ಣ ರೈತರು, ದಲಿತರು, ಹಿಂದುಳಿದವರು, ಭೂರಹಿತರು ಕಳೆದ ಐವತ್ತು ವರ್ಷಗಳಿಂದ ಸರ್ಕಾರಿ ಭೂಮಿಯಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವುದು ಸರಿಯಷ್ಟೆ. ಇಂತಹವರಿಗೆ ಸಾಗುವಳಿ ಭೂಮಿಯನ್ನು ನಿರ್ದಿಷ್ಟ ಎಕರೆಗೆ ಮಿತಿಗೊಳಿಸಿ ಬಗರ್‌ಹುಕುಂ ಹೆಸರಿನಡಿ ಮಂಜೂರು ಮಾಡಲು ಅವಕಾಶವಿದೆ. 2015ರಲ್ಲಿ ಹೈಕೋರ್ಟ್ ಕೂಡ ಸಣ್ಣ ಹಿಡುವಳಿದಾರರನ್ನು ಒಕ್ಕಲೆಬ್ಬಿಸಬಾರದು ಎಂದು ಆದೇಶಿಸಿದೆ. ಸರ್ಕಾರಿ ಭೂಮಿಯಲ್ಲಿ ವ್ಯವಸಾಯ ಮಾಡುವವರಿಗೆ ಉತ್ತರ ಪ್ರದೇಶ ಮತ್ತು ರಾಜಸ್ಥಾನದಲ್ಲಿ ಕಂದಾಯ ನಿಗದಿ ಮಾಡಿದ್ದಾರೆ. ಆ ಮಾದರಿಯಲ್ಲಿ ಅಥವಾ ಭೋಗ್ಯದ ಆಧಾರದಲ್ಲಿ ಸಾಗುವಳಿದಾರರಿಗೆ ನಮ್ಮಲ್ಲೂ ಜಮೀನು ಮಂಜೂರು ಮಾಡಲು ಸರ್ಕಾರ ಮುಂದಾಗಬೇಕಿದೆ.

ಎಸ್. ಮಂಜುನಾಥ, ಚಿತ್ರದುರ್ಗ

ಅಭಿವೃದ್ಧಿ ಹೆಸರಿನಲ್ಲಿ ಮರ ಕಡಿತ

ಹರಪನಹಳ್ಳಿಯಲ್ಲಿ ಕೊಟ್ಟೂರು–ಹರಪನಹಳ್ಳಿ ರಸ್ತೆಯ ವಿಸ್ತರಣೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ. ಇದಕ್ಕಾಗಿ ರಸ್ತೆಬದಿಯಲ್ಲಿದ್ದ ದೊಡ್ಡ ಮರಗಳನ್ನು ಧರೆಗುರುಳಿಸಲಾಗಿದೆ. ಪರಿಸರ ಸಂರಕ್ಷಣೆಯ ಬಗ್ಗೆ ನಿತ್ಯ ಪಾಠ ಕೇಳುವ, ಓದುವ ನಾವು ಈ ದೃಶ್ಯವನ್ನು ನೋಡಲಾಗುತ್ತಿಲ್ಲ. ಕಡಿದ ಮರಗಳಿಗೆ ಪರ್ಯಾಯವಾಗಿ ಗಿಡಗಳನ್ನು ನೆಟ್ಟು ಬೆಳೆಸಬೇಕಿದೆ.

ಮಹಮ್ಮದ್ ಅಯಾನ್ ಜಿ., ನಾಲ್ಕನೇ ತರಗತಿ, ಪರ್ಲ್ ಪಬ್ಲಿಕ್ ಸ್ಕೂಲ್, ಹರಪನಹಳ್ಳಿ

ಗೌರವಕ್ಕೆ ಚ್ಯುತಿ ತಂದ ಕ್ರಿಕೆಟಿಗರ ನಡೆ

ಬದುಕಿನಲ್ಲಿ ಕ್ರೀಡಾಸ್ಫೂರ್ತಿ ಮತ್ತು ಕ್ರೀಡಾ ಮನೋಭಾವ ಬೆಳೆಸಿಕೊಳ್ಳಬೇಕು. ಕ್ರೀಡೆಯಲ್ಲಿ ಸ್ಪರ್ಧಿಸುವ ಎರಡು ತಂಡಗಳು ಆಟದ ಮುಂಚೆ ಮತ್ತು ಮುಗಿದ ಬಳಿಕ ಪರಸ್ಪರ ಹಸ್ತಲಾಘವ ಮಾಡುವುದು ಸತ್ಸಂಪ್ರದಾಯವಾಗಿ ರೂಢಿಯಲ್ಲಿದೆ. ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಪಾಕಿಸ್ತಾನ ತಂಡದ ವಿರುದ್ಧ ಆಡಬೇಕಾಗಿ ಬರುವುದರಿಂದ ಸ್ಪರ್ಧೆಯಲ್ಲಿ ಭಾಗವಹಿಸುವ ಜರೂರಾದರೂ ಭಾರತದ ಕ್ರಿಕೆಟ್ ತಂಡಕ್ಕೆ ಏನಿತ್ತು? ಸ್ಪರ್ಧಿಸುವ ನಿರ್ಧಾರ ಮಾಡಿದ ಮೇಲೆ ಕ್ರೀಡಾಂಗಣದಲ್ಲಿ ಅನುಸರಿಸುವ ನಡವಳಿಕೆಗಳಿಗೆ ಅನುಗುಣವಾಗಿ ವರ್ತಿಸಬೇಕಿತ್ತು. ಇಷ್ಟಕ್ಕೂ ಪಂದ್ಯಾವಳಿಯು ಯುದ್ಧರಂಗವೇ? ನಮ್ಮ ಕ್ರಿಕೆಟಿಗರು ಈಗ ನಡೆದುಕೊಂಡ ರೀತಿ ಅವರಿಗೂ, ಕ್ರಿಕೆಟಿಗೂ ಮತ್ತು ದೇಶಕ್ಕೂ ಗೌರವ ತರುವಂಥದ್ದಲ್ಲ.

ಸಾಮಗ ದತ್ತಾತ್ರಿ, ಬೆಂಗಳೂರು

ಸೂರಿಲ್ಲದವರಿಗೆ ಮಠದ ಸಾರಥ್ಯವೆಲ್ಲಿ?

ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಪ್ರಚಾರದ ಕಾವು ಏರುತ್ತಿದ್ದಂತೆ ಕೆಲವು ಪ್ರಭಾವಿ ಮಠಾಧೀಶರು ತಮ್ಮ ಜಾತಿಗಳಿಗೆ ಉಚಿತವಾಗಿ ಸಲಹೆ ನೀಡಲಾರಂಭಿಸಿದ್ದಾರೆ. ‘ಸರ್ವ ಜನಾಂಗದ ಶಾಂತಿಯ ತೋಟ’ ಆಗಬೇಕಾದ ಕರ್ನಾಟಕವನ್ನು ಜಾತಿಗಳ ಕಿರು ಒರತೆಗಳಲ್ಲಿ ಮುಳುಗಿಸಿಡುವ ತಂತ್ರ ಸಾಗಿದೆ. ಜಾತಿಯಿಂದ ಮುಂದುವರಿದವರು ಮಠಮಾನ್ಯಗಳ ಮೂಲಕ ದೊಡ್ಡ ಪಾಲನ್ನು ಕಸಿದುಕೊಳ್ಳುವ ಧಾವಂತದಲ್ಲಿದ್ದಾರೆ. ಮಠಾಧೀಶರ ಮಾತಿಗೆ ಸರ್ಕಾರಗಳೇ ತಲೆದೂಗುವ ಕಾಲ ಬಂದಿದೆ. ಮಠಗಳೇ ಇಲ್ಲದ, ನಾಗರಿಕತೆಯ ಸ್ಪರ್ಶವೇ ಇಲ್ಲದೆ ಒಂದೊತ್ತಿನ ಅನ್ನಕ್ಕಾಗಿ ಊರೂರು ಅಲೆಯುವ ಅಲೆಮಾರಿಗಳಿಗೆ ಯಾವ ಗುರುವಿದ್ದಾನೆ, ಗುರುಪೀಠವಿದೆ? ಅಲೆಮಾರಿ ಗಿರಿಜನರ ಬವಣೆ ಕೇಳುವವರಾರು?

ಜಾತಿಜನಗಣತಿ ಹೆಸರಿನಲ್ಲಿ ಅಭಿವೃದ್ಧಿ ಬದಿಗೊತ್ತಿ, ಜನರ ಮನಸ್ಸನ್ನು ಎತ್ತೆತ್ತಲೋ ತೇಲಿಸುತ್ತಾ ಮಹಾಜಾಣರು ಆಡಳಿತದಲ್ಲಿ ಮೆರೆಯುವಂತಾಗಿದೆ.

ತಿರುಪತಿ ನಾಯಕ್, ಕಲಬುರಗಿ

ಡ್ರಗ್ ಪೆಡ್ಲರ್ ಜತೆ ಪೊಲೀಸರ ನಂಟು

ಬೆಂಗಳೂರಿನಲ್ಲಿ ಮಾದಕವಸ್ತು ಮಾರಾಟಗಾರರ ಜತೆಗೆ ಪೊಲೀಸರು ಶಾಮೀಲಾಗಿರುವ ಸುದ್ದಿ ಪ್ರಕಟವಾಗಿದೆ. ಇದು ಪೊಲೀಸ್ ಇಲಾಖೆ ತಲೆತಗ್ಗಿಸುವ ವಿಚಾರ. ದಂಧೆಕೋರರ ಜೊತೆಗೆ ಸಂಪರ್ಕ ಬೆಸೆದುಕೊಂಡಿರುವ ಪೊಲೀಸ್ ಅಧಿಕಾರಿಗಳನ್ನು ಸರ್ಕಾರವು ಕೂಡಲೇ ಸೇವೆಯಿಂದ ವಜಾ ಮಾಡಬೇಕಿದೆ.

ಬೆಂಗಳೂರಿಗಷ್ಟೇ ಮಾದಕವಸ್ತುಗಳ ಮಾರಾಟ ಜಾಲ ಸೀಮಿತವಾಗಿಲ್ಲ. ಶೈಕ್ಷಣಿಕವಾಗಿ ಮುಂದುವರಿದ ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರದಲ್ಲೂ ಈ ಜಾಲ ಸಕ್ರಿಯವಾಗಿದೆ. ಡ್ರಗ್ ಪೆಡ್ಲರ್‌ಗಳಿಗೆ ಕಾಲೇಜು ವಿದ್ಯಾರ್ಥಿಗಳೇ ಮುಖ್ಯ ಗುರಿ. ಕಾಲೇಜು ಆಡಳಿತ ಮಂಡಳಿಗಳು ಈ ದಂಧೆ ತಡೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿಲ್ಲ. ಪ್ರಕರಣ ಬಯಲಿಗೆ ಬಂದರೆ ಸಂಸ್ಥೆಯ ಮರ್ಯಾದೆ ಬೀದಿಗೆ ಬರಲಿದೆ ಎನ್ನುವುದು ಅವುಗಳಿಗಿರುವ ಭಯ. ಸರ್ಕಾರ ಮಾದಕವಸ್ತು ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಹಾಗೂ ದಂಧೆಗೆ ಸಂಪೂರ್ಣ ಕಡಿವಾಣ ಹಾಕಬೇಕು.

ನೇರಲಗುಡ್ಡ ಶಿವಕುಮಾರ್, ಶಿರಾ

ಚುರುಮುರಿ

ಗುಂಡಿ ಭಾಗ್ಯ!

• ಬಿ.ಎನ್. ಮಲ್ಲೇಶ್

‘ಲೇ ತೆಪರ, ಇದ್ಯಾಕೋ ಹಿಂಗೆ ಮೂತಿ ಚೂಪು ಮಾಡ್ಕಂಡು ಜೂಗರಿಸ್ತಾ ಕುಂತಿದೀಯ?’ ಹರಟೆಕಟ್ಟೆಯಲ್ಲಿ ತೆಪರೇಸಿಯನ್ನ ಗುಡ್ಡೆ ಕೇಳಿದ.

‘ಇವನ್ನ ನೋಡಿದ್ರೆ ಹಕ್ಕಿ ಜ್ವರಾನೋ ಹಂದಿ ಜ್ವರಾನೋ ಬಂದಂಗೆ ಕಾಣ್ಸುತ್ತಪ್ಪ. ಈಗ ಎಲ್ಲ ಕಡೆ ಹಂದಿ ಜ್ವರ ಜಾಸ್ತಿಯಾಗೇತಂತೆ...’ ಕೊಟ್ರ ಕಿಸಕ್ಕೆಂದ.

‘ಮಂಜಮ್ಮ ಶುಂಠಿ ಚಾ ಮಾಡು, ಪಾಪ ತೆಪರಂಗೆ ಹುಷಾರಿಲ್ಲ ಅನ್ಸುತ್ತೆ...’ ದುಬ್ಬೀರ ಕನಿಕರ ತೋರಿದ.

‘ನಂಗೇನೋ ಇದು ಮೂಳೆ ಜ್ವರ ಅನ್ಸುತ್ತಪ್ಪ. ಬಂಗ್ಲೆ ಗುಡ್ಡದಲ್ಲಿ ಈ ತೆಪರ ಅಸ್ಥಿಪಂಜರ ನೋಡಿ ಹೆದರ್ಕಂಡಿರಬೇಕು, ಒಂದು ತಾಯತ ಕಟ್ಟಿಸಿದ್ರೆ ಸರಿ ಹೋಗ್ತಾನೆ...’ ಗುಡ್ಡೆ ಸಲಹೆ.

‘ಅಲ್ಲ, ಈ ಜ್ವರಗಳಲ್ಲಿ ಎಷ್ಟ್ ನಮೂನಿ ಅದಾವು?’ ಮಂಜಮ್ಮ ಕೇಳಿದಳು.

‘ಒಂದು ಏಳೆಂಟು ಇರಬೇಕು. ಹಕ್ಕಿ ಜ್ವರ, ಹಂದಿ ಜ್ವರ, ಪ್ರೇಮ ಜ್ವರ, ಪರೀಕ್ಷೆ ಜ್ವರ, ಸಿ.ಡಿ. ಜ್ವರ, ಇ.ಡಿ ಜ್ವರ... ಸಾಕಾ?’

‘ಲೇ ಗುಡ್ಡೆ, ಅವೆಲ್ಲ ಏನಿಲ್ಲ, ಬೆಂಗ್ಳೂರಿನ ಗುಂಡಿಗಳಲ್ಲಿ ಬೈಕ್ ಓಡಿಸಿ ಮೈ ಕೈ ನೋವಾಗಿ ಜ್ವರ ಬಂದಿರಬೇಕು ಅಷ್ಟೆ...’

‘ಓ... ಅಂದ್ರೆ ಇದು ಗುಂಡಿ ಭಾಗ್ಯ! ಎಲ್ರು ಹುಷಾರಾಗಿ ನೋಡ್ಕಂಡು ಬೈಕ್ ಓಡಿಸ್ರಪ್ಪ, ಆಮೇಲೆ ಯಾವುದಾರ ಗುಂಡಿಗೆ ಬಿದ್ದು ಗೊಟಕ್ ಅಂದೀರ...’ ಮಂಜಮ್ಮ ನಕ್ಕಳು.

ಎಷ್ಟು ಕೀಟಲೆ ಮಾಡಿದ್ರೂ ಪಿಟಿಕ್ಕನ್ನದೆ ಕೂತಿದ್ದ ತೆಪರೇಸಿ. ‘ಏನಾದ್ರು ಮಾತಾಡೋ, ಏನು ಯೋಚಿಸ್ತಿದೀಯ?’ ದುಬ್ಬೀರ ಕೇಳಿದ.

‘ಏನಿಲ್ಲ, ಮನುಷ್ಯನಿಗೆ ಹಕ್ಕಿ ಜ್ವರ, ಹಂದಿ ಜ್ವರ ಬರ್ತಾವೆ ಓಕೆ, ಅದೇ ತರ ಅಕಸ್ಮಾತ್ ಹಂದಿಗಳಿಗೆ ಮನುಷ್ಯನ ಜ್ವರ ಬಂದ್ರೆ ಅವು ಹೆಂಗಾಡ್ತಿದ್ವು ಅಂತ ಯೋಚಿಸ್ತಿದ್ದೆ...’ ಎಂದ ತೆಪರ.

‘ಯಪ್ಪಾ , ಇದ್ನ ನಾವು ಯೋಚಿಸ್ಲೇ ಇಲ್ವಲ್ಲೋ...’ ಎಂದ ಕೊಟ್ರ.

‘ಇಂಥದೆಲ್ಲ ಟೀವಿ ಪತ್ರಕರ್ತರಿಗೇ ಹೊಳಿಯೋದು’ ಎಂದ ಗುಡ್ಡೆ.

ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಪ್ಯಾನ್–ಇಂಡಿಯಾ: ಸೌಹಾರ್ದದ ಸಿನಿಸೂತ್ರ!

ಪ್ಯಾನ್ ಇಂಡಿಯಾ ಸಿನಿಮಾಗಳನ್ನು ವಹಿವಾಟಿನ ದೃಷ್ಟಿಯಿಂದ ಯಶಸ್ವಿ ಪ್ರಯತ್ನಗಳನ್ನಾಗಿ ಗುರ್ತಿಸಲಾಗುತ್ತದೆ. ಆ ಸಿನಿಮಾಗಳು ಏಕತೆಯ ರಾಯಭಾರಿಗಳಾಗಿವೆ.

• ಶಿವಲಿಂಗಸ್ವಾಮಿ ಎಚ್.ಕೆ.

ತಮಿಳು, ತೆಲುಗು ಅಥವಾ ಮಲಯಾಳ ಚಿತ್ರಗಳು ಬೆಂಗಳೂರಿನಲ್ಲೂ ಯಶಸ್ವಿಯಾಗುವುದು ಸಹಜ. ಇಲ್ಲಿ ನೆಲಸಿರುವ ಪರ ಭಾಷಿಕರು ದೊಡ್ಡ ಸಂಖ್ಯೆಯಲ್ಲಿ ಇರುವುದರಿಂದ, ಅವರ ಭಾಷೆಯ ಸಿನಿಮಾಗಳಿಗೂ ಇಲ್ಲಿ ಮಾರುಕಟ್ಟೆ ರೂಪುಗೊಂಡಿದೆ. ಭಾಷೆಯ ಚೌಕಟ್ಟನ್ನು ಮೀರಿದ ಸೂಪರ್ ಸ್ಟಾರ್ ನಟರಿದ್ದಾಗ ಬೇರೆ ಭಾಷೆಯ ಸಿನಿಮಾಗಳನ್ನು ಕನ್ನಡಿಗರೂ ನೋಡುವುದಿದೆ. ಇದರ ಆಚೆಗೆ, ಒಂದು ಭಾಷೆಯ ಸಿನಿಮಾ ತನ್ನ ರಾಜ್ಯದ ಗಡಿ ದಾಟುವ ಸಾಧ್ಯತೆ ಇತ್ತೀಚಿನವರೆಗೂ ಕಡಿಮೆಯಿತ್ತು. ಇತ್ತೀಚಿನ ದಿನಗಳಲ್ಲಿ ‘ಪ್ಯಾನ್–ಇಂಡಿಯಾ’ ಪರಿಕಲ್ಪನೆ ಇಟ್ಟುಕೊಂಡು ದೇಶದಾದ್ಯಂತ ಬಿಡುಗಡೆ ಕಾಣುವ ಚಲನಚಿತ್ರಗಳು ಹೆಚ್ಚುತ್ತಿವೆ.

‘ಬಾಹುಬಲಿ’ ಸಿನಿಮಾದಲ್ಲಿ ಸುದೀಪ್, ‘ಜೈಲರ್’ನಲ್ಲಿ ಶಿವರಾಜ್‌ಕುಮಾರ್, ‘ಕೂಲಿ’ಯಲ್ಲಿ ಉಪೇಂದ್ರ ಮುಂತಾದ ಸೂಪರ್ ಸ್ಟಾರ್‌ಗಳು ಎಂಟ್ರಿ ಕೊಟ್ಟಾಗ ಚಿತ್ರಮಂದಿರಗಳಲ್ಲಿ ಕೇಳಿಬರುವ ಸೀಟಿ ಹಾಗೂ ಚಪ್ಪಾಳೆ ಸದ್ದು, ಸಿನಿಮಾಗಳನ್ನು ನೋಡುವ ಅಭ್ಯಾಸದಲ್ಲಿ ಆಗಿರುವ ಬದಲಾವಣೆಯನ್ನು ತೋರಿಸುತ್ತದೆ. ಏನಿದು, ‘ಪ್ಯಾನ್ ಇಂಡಿಯಾ’ ಸಿನಿಮಾ?

ಪ್ಯಾನ್–ಇಂಡಿಯಾ ಸಿನಿಮಾ ಅಂದರೆ, ಭಾರತದಲ್ಲಿ ಮಾಡಲಾದ ಯಾವುದೇ ಸಿನಿಮಾ, ಒಂದು ಭಾಷೆ ಅಥವಾ ಒಂದು ಪ್ರದೇಶಕ್ಕೆ ಮಾತ್ರ ಸೀಮಿತವಾಗದೇ, ಭಾರತದ ಎಲ್ಲೆಡೆ, ಎಲ್ಲ ಭಾಷೆಗಳ ಜನರು ನೋಡಲು ಮತ್ತು ಆನಂದಿಸಲು ಸಾಧ್ಯವಾಗುವಂತಹ ಸಿನಿಮಾ. ಉದಾಹರಣೆಗೆ: ‘ಬಾಹುಬಲಿ’, ‘ಆರ್‌ಆರ್‌ಆರ್’, ‘ಕೆ.ಜಿ.ಎಫ್.’, ‘ಪುಷ್ಪ’, ‘ಜೈಲರ್’, ‘ಕೂಲಿ’. ಈ ಸಿನಿಮಾಗಳು ತಮ್ಮ ಮೂಲಭಾಷೆಯ ಜೊತೆಗೆ ಹಲವು ಭಾಷೆಗಳಲ್ಲಿ ಬಿಡುಗಡೆಯಾಗಿ, ರಾಷ್ಟ್ರವ್ಯಾಪಿ ಯಶಸ್ಸು ಕಂಡವು. ಇವು ‘ಪ್ರಾದೇಶಿಕ’ ಸಿನಿಮಾಗಳಾಗಿದ್ದೂ, ‘ರಾಷ್ಟ್ರದ ಸಿನಿಮಾ’ ಆಗಿವೆ.

ಎಲ್ಲ ರಾಜ್ಯಗಳಿಗೂ ತಲಪಬೇಕಿರುವ ಸಿನಿಮಾ ಆದ್ದರಿಂದ ಪ್ಯಾನ್–ಇಂಡಿಯಾ ಸಿನಿಮಾಗಳ ಕಥೆಗಳು ಸಾಮಾನ್ಯವಾಗಿ ಕುಟುಂಬ, ಪ್ರೀತಿ, ಪ್ರತೀಕಾರ, ಶೌರ್ಯ, ನ್ಯಾಯ, ಮುಂತಾದ ಸಾರ್ವತ್ರಿಕ ವಿಷಯಗಳ ಮೇಲೆ ಆಧಾರಿತವಾಗಿರುತ್ತವೆ. ಹಾಗಾಗಿ, ಯಾವುದೇ ಪ್ರದೇಶದ ಜನರು ಈ ಸಿನಿಮಾಗಳೊಂದಿಗೆ ಸಂಬಂಧ ಕಲ್ಪಿಸಿಕೊಳ್ಳಬಹುದು. ಇಂತಹ ಸಿನಿಮಾಗಳು ದುಬಾರಿ ಬಜೆಟ್‌ನೊಂದಿಗೆ, ಭವ್ಯವಾದ ಸೆಟ್‌ಗಳು, ರೋಮಾಂಚಕ ಸಾಹಸ ದೃಶ್ಯಗಳು ಮತ್ತು ಸಮೃದ್ಧ ದೃಶ್ಯಮಾಧುರ್ಯ ಹೊಂದಿರುತ್ತವೆ.

ಪ್ರೇಕ್ಷಕನಿಗೆ ತನ್ನದೇ ಭಾಷೆಯಲ್ಲಿ ಪರಭಾಷಾ ಸಿನಿಮಾ ಲಭ್ಯವಾದಾಗ ಅದನ್ನು ಸುಲಭವಾಗಿ ಅರ್ಥ ಮಾಡಿಕೊಂಡು ಆನಂದಿಸಬಹುದು. ಅದಕ್ಕೂ ಮೀರಿದ ವಿಶೇಷ, ನಮ್ಮ ಭಾಷೆಯ ಸೂಪರ್ ಸ್ಟಾರ್, ಪರಭಾಷಾ ಸೂಪರ್ ಸ್ಟಾರ್ ಜೊತೆ ಸಮಪ್ರಮಾಣದಲ್ಲಿ ಬೆಳ್ಳಿತೆರೆಯನ್ನು ಹಂಚಿಕೊಳ್ಳುವುದು ಚಿತ್ರರಸಿಕರಿಗೆ ವರ್ಣಿಸಲಸದಳ ಆನಂದ ತರುತ್ತದೆ. ಚಲನಚಿತ್ರ ವಿಮರ್ಶಕರು ಪ್ಯಾನ್ ಇಂಡಿಯಾ ಪರಿಕಲ್ಪನೆಯನ್ನು ‘ಪ್ರಾದೇಶಿಕತೆ ಮೀರಿದ ಸಹಯೋಗ’ ಎಂದಿದ್ದಾರೆ. ಸಾಂಸ್ಕೃತಿಕ ಅಧ್ಯಯನಗಳ ದೃಷ್ಟಿಯಿಂದ ನಿಸ್ಸಿಂ ಮನ್ನತ್ತುಕ್ಕರೆನ್ ಮುಂತಾದವರು ಹೇಳುವಂತೆ, ಪ್ಯಾನ್ ಇಂಡಿಯಾ ಸಿನಿಮಾದ ಪರಿಕಲ್ಪನೆ ಮನರಂಜನೆಗಾಗಿ ಮಾತ್ರವಲ್ಲ, ಏಕತೆಗೂ ಸಂಕೇತ ಆಗಬಹುದು.

ಬೇರೆ ಬೇರೆ ಭಾಷೆಗಳ ತಾರೆಗಳು ಒಂದೇ ಪರದೆ ಮೇಲೆ ಕಾಣಿಸಿಕೊಳ್ಳುವುದು ಭಾಷೆಗಳ ನಡುವಿನ ಅಸಹಿಷ್ಣುತೆ ಕೊಂಚವಾದರೂ ಕಡಿಮೆಯಾಗಲು ಕಾರಣವಾಗಬಹುದು. ಅಂದರೆ, ಪ್ಯಾನ್ ಇಂಡಿಯಾ ಸಿನಿಮಾ ತಾರೆಯರ ಜನಪ್ರಿಯತೆಯನ್ನು ಬಳಸಿಕೊಂಡು ಪ್ರಾದೇಶಿಕ ಅಥವಾ ಸಾಮಾಜಿಕ ಅಂತರಗಳನ್ನು ಕಡಿಮೆ ಮಾಡುತ್ತ, ರಾಷ್ಟ್ರೀಯ ಅಸ್ಮಿತೆಯನ್ನು ಹೆಚ್ಚು ಸಾಧ್ಯಗೊಳಿಸುವಂತೆ ತೋರುತ್ತದೆ.

ಮೇಲ್ನೋಟಕ್ಕೆ, ಪ್ಯಾನ್–ಇಂಡಿಯಾ ಸಿನಿಮಾ ಹೆಚ್ಚಾಗಿ ಲಾಭ ಮಾಡುವತ್ತ ಮುಖ ಮಾಡಿರುವಂತೆ ತೋರುತ್ತದೆ. ಈ ಚಿತ್ರಗಳು ಬಹುಭಾಷೆಗಳಲ್ಲಿ ಬಿಡುಗಡೆಯಾಗಿ ಭಾರತದಾದ್ಯಂತ ಪ್ರೇಕ್ಷಕರಿಗೆ ತಲಪುವುದರಿಂದ, ಸಾಮಾನ್ಯ ಪ್ರಾದೇಶಿಕ ಚಿತ್ರಗಳಿಗಿಂತ ಹೆಚ್ಚಿನ ಹಣ ಗಳಿಸುತ್ತವೆ. ಹಣದ ಅಂಶವನ್ನು ಹೊರತುಪಡಿಸಿ ನೋಡಿದರೆ, ಕಲೆ ಅಥವಾ ಸಾಂಸ್ಕೃತಿಕ ಅಭಿವ್ಯಕ್ತಿಯನ್ನೂ ಪ್ಯಾನ್ ಇಂಡಿಯಾ ಸಿನಿಮಾ ಸಾಧ್ಯಗೊಳಿಸುವುದರಿಂದ ಉಳಿದ ಚಲನಚಿತ್ರಗಳಿಗಿಂತ ಹೆಚ್ಚು ಮಹತ್ವವನ್ನು ಪಡೆಯುತ್ತವೆ.

ಪ್ಯಾನ್ ಇಂಡಿಯಾ ಸಿನಿಮಾದ ಮತ್ತೊಂದು ಆಕರ್ಷಣೆ, ವಿವಿಧ ಭಾಷೆಗಳ ಸೂಪರ್ ಸ್ಟಾರ್‌ಗಳ ಜನಪ್ರಿಯತೆಯನ್ನು ಬಳಸಿಕೊಳ್ಳುವುದು. ವಿಭಿನ್ನ ಚಿತ್ರರಂಗಗಳ ಪ್ರಸಿದ್ಧ ನಟರನ್ನು ಒಟ್ಟಿಗೆ ತಂದು ಹಲವು ರಾಜ್ಯಗಳ ಪ್ರೇಕ್ಷಕರನ್ನು ಆಕರ್ಷಿಸುವುದು ಒಂದಾದರೆ, ಅದೇ ನಟರು ತಮ್ಮದೇ ಭಾಷೆಯಲ್ಲಿ ಒಂದೋ ಎರಡೋ ಸಾಲುಗಳನ್ನು ಹೇಳಿದಾಗ ಆಯಾ ರಾಜ್ಯಗಳ ಜನರಿಗೆ ರೋಮಾಂಚನವಾಗುತ್ತದೆ. ಹಾಗೆಯೇ, ಸಾಮೂಹಿಕ ಆಕರ್ಷಣೆಗೆ ಬೇಕಾದ ಹಾಡು, ಹೋರಾಟ, ಮತ್ತು ಇತರೆ ಅಂಶಗಳನ್ನು ಸೇರಿಸಿ ಪ್ರಚಾರ ಹಾಗೂ ಮಾರುಕಟ್ಟೆ ವ್ಯವಸ್ಥೆ ಪ್ರಾದೇಶಿಕ ಮಟ್ಟಕ್ಕೆ ಸೀಮಿತವಾಗದೇ ರಾಷ್ಟ್ರ ಮಟ್ಟದಲ್ಲಿ ನಡೆಯುತ್ತದೆ.

ಮೂಲತಃ ಒಂದು ಸಂಸ್ಕೃತಿಯ ಬೇರು ಹೊಂದಿದ್ದರೂ, ಪ್ಯಾನ್ ಇಂಡಿಯಾ ಸಿನಿಮಾ ಸಾಮಾನ್ಯವಾಗಿ ಬೇರೆ ಭಾಗಗಳ ಪ್ರೇಕ್ಷಕರಿಗೂ ಇಷ್ಟವಾಗುತ್ತದೆ. ಉದಾಹರಣೆಗೆ: ‘ಕಾಫಿ ವಿತ್ ಕರಣ್’ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಬಂದಿದ್ದ ಕರೀನಾ ಕಪೂರ್, ತಮ್ಮ ಆ ಸಮಯದಲ್ಲಿನ ನೆಚ್ಚಿನ ನಟ ಯಶ್ ಎಂದು ಹೇಳಿದ್ದರು. ಈ ರೀತಿಯಾಗಿ, ಪ್ಯಾನ್–ಇಂಡಿಯಾ ಸಿನಿಮಾ ಭಾಷೆ ಮತ್ತು ಸಂಸ್ಕೃತಿಯ ಅಂತರಗಳನ್ನು ಮೀರಿ ಚಲನಚಿತ್ರ ಲೋಕವನ್ನು ಚಲನಚಿತ್ರ ಅಭಿಮಾನಿಗಳಿಗೆ ನೀಡಲು ಪ್ರಯತ್ನಿಸುತ್ತದೆ.

ಸಿನಿಮಾ ಮಾಧ್ಯಮಕ್ಕೆ ಇರಬಹುದಾದ ಸಾಮಾಜಿಕ ಜವಾಬ್ದಾರಿಯ ಬಗೆಗಿನ ನಂಬಿಕೆಯನ್ನು ಚಿತ್ರೋದ್ಯಮವೇ ಕಳೆದುಕೊಂಡಿರುವ ಸಂದರ್ಭದಲ್ಲಿ, ‘ಪ್ಯಾನ್–ಇಂಡಿಯಾ ಸಿನಿಮಾ’ಗಳು ಏಕತೆಯ ಸಾಧ್ಯತೆಯೊಂದನ್ನು ಒಳಗೊಂಡಿರುವುದು ವಿಶೇಷ ಸಂಗತಿಯಾಗಿದೆ ಹಾಗೂ ಸಿನಿಮಾ ಮಾಧ್ಯಮಕ್ಕೆ ಸಾಮಾಜಿಕ ಹೊಣೆಗಾರಿಕೆಯ ಜವಾಬ್ದಾರಿಯನ್ನು ಕಸಿಮಾಡುವಂತಿದೆ. ಈ ಸಾಧ್ಯತೆಯನ್ನು ಮತ್ತಷ್ಟು ವ್ಯಾಪಕಗೊಳಿಸುವ ಬಗ್ಗೆ ಎಲ್ಲ ಭಾಷೆಗಳ ಚಿತ್ರೋದ್ಯಮಿಗಳು ಪ್ರಜ್ಞಾಪೂರ್ವಕ ಪ್ರಯತ್ನ ನಡೆಸಬೇಕಾಗಿದೆ.

ಜಾತಿವಾರು ಸಮೀಕ್ಷೆ: ಏನಿದರ ಕಕ್ಷೆ

• ಜಯಸಿಂಹ ಆರ್.

ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ನಡೆಸಲಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ (ಜಾತಿವಾರು ಸಮೀಕ್ಷೆ) ಪ್ರತಿ ವ್ಯಕ್ತಿಯ ವೈಯಕ್ತಿಕ ಹಾಗೂ ಕೌಟುಂಬಿಕ ವಿವರಗಳನ್ನು ಕಲೆಹಾಕಲಾಗುತ್ತದೆ.

ಎರಡು ಭಿನ್ನ ಪ್ರಶ್ನಾವಳಿಗಳ ಮೂಲಕ ಈ ವಿವರಗಳನ್ನು ಸಂಗ್ರಹಿಸಲಾಗುತ್ತದೆ. ಒಟ್ಟಾರೆ ರಾಜ್ಯದ ಜನರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಯನ್ನು ಅರಿಯಲು ಸಾಧ್ಯವಾಗಲು ಎಲ್ಲ ಸ್ವರೂಪದ ವಿವರಗಳನ್ನು ಸುಮಾರು 50 ಪ್ರಶ್ನೆಗಳ ಮೂಲಕ ಪಡೆಯಲಾಗುತ್ತದೆ.

ಪ್ರತಿಯೊಬ್ಬರೂ ಲಿಂಗ, ವಯಸ್ಸು, ವೈವಾಹಿಕ ಮಾಹಿತಿ, ಧರ್ಮ, ಜಾತಿ, ಉಪಜಾತಿಯ ವಿವರದ ಜತೆಗೆ ಅವರು ಪ್ರತಿನಿಧಿಸುವ ಜಾತಿಗೆ ಸಮಾನಾರ್ಥಕವಾದ ಬೇರೊಂದು ಹೆಸರು ಇದ್ದರೆ ಅದನ್ನು, ಮಾತೃಭಾಷೆ ಮತ್ತು ಅಂಗವೈಕಲ್ಯವಿದ್ದರೆ ಆ ಎಲ್ಲ ವಿವರಗಳನ್ನು ಒದಗಿಸಬೇಕು. ವೈವಾಹಿಕ ವಿವರದಲ್ಲಿ ಅಂತರ್ಜಾತಿ, ಅಂತರಧರ್ಮೀಯ ವಿವಾಹಗಳು, ವಿಧವಾ ಪುನರ್‌ವಿವಾಹ, ವಿಚ್ಛೇದನದ ವಿವರಗಳನ್ನೂ ದಾಖಲಿಸಬೇಕಿದೆ. ಕೃಷಿ ಜಮೀನು, ಮನೆ, ವಾಹನ, ಕೊಳವೆಬಾವಿ, ಸಾಲದ ವಿವರಗಳನ್ನೂ ಸಮೀಕ್ಷಾದಾರರು ಸಂಗ್ರಹಿಸುತ್ತಾರೆ.

ಪ್ರತಿಯೊಬ್ಬರೂ ತಮ್ಮ ಶಿಕ್ಷಣಕ್ಕೆ ಸಂಬಂಧಿಸಿದ ವಿವರಗಳನ್ನೂ ಸಮೀಕ್ಷಾದಾರರಿಗೆ ನೀಡಬೇಕಾಗುತ್ತದೆ. ಅನಕ್ಷರಸ್ಥರಾಗಿದ್ದರೆ, ಶಿಕ್ಷಣ ಪಡೆಯದೇ ಇರಲು ಕಾರಣಗಳೇನು ಎಂಬುದನ್ನು ನಮೂದಿಸಬೇಕಾಗುತ್ತದೆ. ಬಡತನ ಅಥವಾ ಶಾಲೆ ಲಭ್ಯವಿಲ್ಲದೇ ಇರುವುದು ಅಥವಾ ಜಾತಿ ಭೇದದ ಕಾರಣಕ್ಕೆ ಅಥವಾ ಕುಟುಂಬದ ವಲಸೆ ಅಥವಾ ಕುಟುಂಬದ ಜವಾಬ್ದಾರಿ ಹೊರಲು ಶಿಕ್ಷಣ ಪಡೆಯಲಾಗಲಿಲ್ಲ ಎಂಬುದನ್ನು ಸ್ಪಷ್ಟವಾಗಿ ನಮೂದಿಸಬೇಕಾಗುತ್ತದೆ. ಶಿಕ್ಷಣದ ಮಧ್ಯೆಯೇ ಶಾಲೆ ಬಿಟ್ಟಿದ್ದರೆ, ಅದಕ್ಕೂ ಕಾರಣಗಳನ್ನು ನಮೂದಿಸಬೇಕಿದೆ.



ಶಿಕ್ಷಣ ಪಡೆದವರು ಸರ್ಕಾರಿ ಶಾಲೆಯಲ್ಲಿ ಅಥವಾ ಖಾಸಗಿ ಶಾಲೆಯಲ್ಲಿ ಪಡೆಯಲಾಯಿತೇ, ಎಲ್ಲಿಯವರೆಗೆ ಶಿಕ್ಷಣ ಪಡೆಯಲಾಗಿದೆ, ಶಿಕ್ಷಣದ ಸ್ವರೂಪ, ಕಲಿಕೆ ಮಾಧ್ಯಮದ ವಿವರವನ್ನೂ ನೀಡಬೇಕು. ಇದರ ಜತೆಯಲ್ಲಿಯೇ ಉದ್ಯೋಗದ ವಿವರಗಳನ್ನು ಒದಗಿಸಬೇಕು. ಸರ್ಕಾರಿ ಉದ್ಯೋಗವೇ, ಖಾಸಗಿ ಉದ್ಯೋಗವೇ, ಅರೆಕಾಲಿಕ, ಸ್ವಂತ ಉದ್ಯೋಗ, ವ್ಯಾಪಾರ, ಕೃಷಿ, ದಿನಗೂಲಿ, ಕುಲಕಸುಬು ಮಾಡಲಾಗುತ್ತಿದೆಯೇ ಎಂಬುದನ್ನು ಸಮೀಕ್ಷೆದಾರರಿಗೆ ತಿಳಿಸಬೇಕಾಗುತ್ತದೆ. ಕುಲಕಸುಬಿನ ಕಾರಣಕ್ಕೆ ಅನಾರೋಗ್ಯದ ಉಂಟಾಗಿದ್ದರೆ, ಆ ವಿವರಗಳನ್ನೂ ಒದಗಿಸಬೇಕಾಗುತ್ತದೆ.

ಇದರ ಜತೆಯಲ್ಲಿ ಮೀಸಲಾತಿ ನೀತಿಯ ಕಾರಣದಿಂದ ಶಿಕ್ಷಣ, ಉದ್ಯೋಗ, ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ, ವಿದ್ಯಾರ್ಥಿ ವೇತನ, ಬಡ್ತಿ, ಗುತ್ತಿಗೆ ಮತ್ತು ಇತರೆ ಸವಲತ್ತುಗಳನ್ನು (ಗಂಗಾ ಕಲ್ಯಾಣ, ಹೈನುಗಾರಿಕೆ ಮತ್ತಿತರ ಚಟುವಟಿಕೆಗಳಿಗೆ ಸಹಾಯಧನ ಇತ್ಯಾದಿ) ಪಡೆದಿದ್ದರೆ, ಆ ವಿವರಗಳನ್ನು ಸ್ಪಷ್ಟವಾಗಿ ನಮೂದಿಸಬೇಕಾಗುತ್ತದೆ. ಕಡೆಗೆ ವಾರ್ಷಿಕ ಆದಾಯ, ಆದಾಯ ತೆರಿಗೆ ಪಾವತಿಸುತ್ತಿದ್ದರೆ ಅದರ ವಿವರ, ಬ್ಯಾಂಕ್ ಖಾತೆ, ಜೀವ ವಿಮೆಯ ವಿವರಗಳನ್ನು ಒದಗಿಸಬೇಕಾಗುತ್ತದೆ. ವ್ಯಕ್ತಿಯು ಚುನಾಯಿತ ಅಥವಾ ನಾಮನಿರ್ದೇಶಿತ ಪ್ರತಿನಿಧಿಯಾಗಿದ್ದರೆ ಆ ವಿವರಗಳನ್ನೂ ನೀಡಬೇಕಾಗುತ್ತದೆ.

ಒಟ್ಟಾರೆಯಾಗಿ ಜನರ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಪ್ರಾತಿನಿಧ್ಯದ ವಿವರಗಳನ್ನು ಕೋಡ್‌ಗಳ ರೂಪದಲ್ಲಿ ಸಂಗ್ರಹಿಸಲಾಗುತ್ತದೆ. ಸಮೀಕ್ಷೆ ವೇಳೆ ಸಮೀಕ್ಷಾದಾರರು ಒದಗಿಸುವ ಕೈಪಿಡಿಯಲ್ಲಿ ಈ ಕೋಡ್‌ಗಳು ಮತ್ತು ಅವುಗಳಿಗೆ ಸಂಬಂಧಿಸಿದ ವಿವರಗಳು ಇರುತ್ತವೆ. ಅವುಗಳನ್ನು ಸಾವಧಾನವಾಗಿ ಪರಿಶೀಲಿಸಿ, ಕೋಡ್ ಆಯ್ಕೆ ಮಾಡಬೇಕು ಎಂದು ಹಿಂದುಳಿದ ವರ್ಗಗಳ ಆಯೋಗವು ಕರೆ ನೀಡಿದೆ.

ಎಂಟು ಹಂತಗಳ ಪ್ರಕ್ರಿಯೆ

ಒಟ್ಟು ಎಂಟು ಹಂತಗಳಲ್ಲಿ ಸಮೀಕ್ಷೆಯನ್ನು ನಡೆಸಲು ಹಿಂದುಳಿದ ವರ್ಗಗಳ ಆಯೋಗವು ಯೋಜನೆ ರೂಪಿಸಿದೆ. ಒಂದು ಹಂತದ ಕಾರ್ಯ ಪೂರ್ಣಗೊಂಡ ನಂತರವೇ ಮತ್ತೊಂದು ಹಂತದ ಕಾರ್ಯ ಆರಂಭವಾಗಲಿದೆ. ಹಿಂದಿನ ಹಂತಗಳಲ್ಲಿ ಗುರುತಿಸಲಾದ, ಸಂಗ್ರಹಿಸಲಾದ ಮಾಹಿತಿ ಮತ್ತು ದತ್ತಾಂಶಗಳನ್ನು ಪ್ರತಿಹಂತದಲ್ಲೂ ಖಚಿತಪಡಿಸಿಕೊಂಡು ಮುಂದುವರಿಯಲಾಗುತ್ತದೆ. ಆ ಹಂತಗಳ ವಿವರ ಇಲ್ಲಿದೆ.

1. ಫೀಲ್ಡ್ ಲಿಸ್ಟಿಂಗ್/ಜಿಪಿಎಸ್ ಕ್ಯಾಪ್ಚರ್/ಮನೆ ಗುರುತಿಸುವುದು

ಎಸ್ಕಾಂಗಳ ಮೀಟರ್ ರೀಡರ್‌ಗಳು, ಗ್ರಾಮ ಆಡಳಿತಾಧಿಕಾರಿ ಹಾಗೂ ಇತರ ಸಿಬ್ಬಂದಿ ತಮಗೆ ವಹಿಸಲಾದ ವ್ಯಾಪ್ತಿಯಲ್ಲಿರುವ ಪ್ರತಿ ಮನೆಗೂ ಈಗಾಗಲೇ ಭೇಟಿ ನೀಡಿ, ಅವುಗಳ ಜಿಯೋ ಟ್ಯಾಗಿಂಗ್ ಮಾಡಿದ್ದಾರೆ. (ಜಿಪಿಎಸ್ ಕೋಆರ್ಡಿನೇಟ್ಸ್– ಅಕ್ಷಾಂಶ ಮತ್ತು ರೇಖಾಂಶವನ್ನು ನಿಖರವಾಗಿ ಗುರುತಿಸಬೇಕು).

ಆ ವಿವರಗಳನ್ನು ಆ್ಯಪ್‌ನಲ್ಲಿ ದಾಖಲಿಸಿದ ಕೂಡಲೇ, ಆ ಮನೆಗೆಂದೇ ಪ್ರತ್ಯೇಕ ವಿಶಿಷ್ಟ ಗುರುತಿನ ಸಂಖ್ಯೆಯನ್ನು (ಯೂನಿಕ್ ಹೌಸ್‌ಹೋಲ್ಡ್ ಐಡಿ–ಯುಎಚ್‌ಐಡಿ) ಸೃಷ್ಟಿಯಾಗುತ್ತದೆ. ಜತೆಗೆ ಕುಟುಂಬದ ಮುಖ್ಯಸ್ಥ, ವಿಳಾಸ, ವಿದ್ಯುತ್ ಸಂಪರ್ಕದ ಕೆಟಗರಿ ಇತ್ಯಾದಿ ಮಾಹಿತಿಗಳನ್ನ ದಾಖಲಿಸುತ್ತದೆ

2. ಮನೆಗೆ ಸ್ಟಿಕರ್ ಅಂಟಿಸುವುದು

ಯುಎಚ್‌ಐಡಿ ಸಂಖ್ಯೆ ಬರೆಯಲು ಅವಕಾಶವಿರುವ ಸ್ಟಿಕರ್ ಒಂದನ್ನು ಮನೆಯ ಮುಂಬಾಗಿಲಿಗೆ ಅಂಟಿಸಲಾಗುತ್ತದೆ. ಒಂದು ಕಟ್ಟಡದಲ್ಲಿರುವ ಎಲ್ಲ ಮನೆಗಳಿಗೂ ಪ್ರತ್ಯೇಕ ಸ್ಟಿಕರ್ ಅಂಟಿಸಲಾಗುತ್ತದೆ. ವಸತಿ ಸಮುಚ್ಚಯದ ಒಂದು ಕಟ್ಟಡಕ್ಕೆ ಒಂದು ಜಿಪಿಎಸ್ ಕೋಆರ್ಡಿನೇಟ್ಸ್ ಸೃಜಿಸಲಾಗುತ್ತದೆ. ಆದರೆ, ಪ್ರತಿ ಫ್ಲ್ಯಾಟ್‌ಗೆ ಪ್ರತ್ಯೇಕ ಯುಎಚ್‌ಐಡಿ ನೀಡಲಾಗುತ್ತದೆ ಮತ್ತು ಪ್ರತ್ಯೇಕ ಸ್ಟಿಕರ್ ಅಂಟಿಸಲಾಗುತ್ತದೆ

3. ಮನೆಪಟ್ಟಿಯ ರಚನೆ

ಜಿಯೋಟ್ಯಾಗ್ ವಿವರ ಮತ್ತು ಯುಎಚ್‌ಐಡಿ ವಿವರಗಳನ್ನು ಸಂಯೋಜಿಸಿ, ಒಂದು ಪ್ರದೇಶದಲ್ಲಿ ಇರುವ ಎಲ್ಲ ಮನೆಗಳ ವಿವರ ಇರುವ ಪಟ್ಟಿಯನ್ನು ರಚಿಸಲಾಗುತ್ತದೆ. ಅಗತ್ಯವಾದಲ್ಲಿ, ಮನೆಗೆ ಭೇಟಿ ನೀಡಿ ವಿವರಗಳನ್ನು ಪರಿಷ್ಕರಿಸಲಾಗುತ್ತದೆ

4. ಸಮೀಕ್ಷಾ ಬ್ಲಾಕ್‌ಗಳ ರಚನೆ

ಪ್ರತಿ 100ರಿಂದ 150 ಮನೆಗಳಿಗೆ (ಕಟ್ಟಡಗಳಲ್ಲ. ಒಂದು ಕಟ್ಟಡದಲ್ಲಿ ಒಂದೇ ಮನೆ ಇರಬಹುದು ಅಥವಾ ಹಲವು ಮನೆಗಳು ಇರಬಹುದು) ಒಂದರಂತೆ ಸಮೀಕ್ಷಾ ಬ್ಲಾಕ್‌ಗಳನ್ನು ರಚಿಸಲಾಗಿದೆ. ಪ್ರತಿ ಸಮೀಕ್ಷಾ ಬ್ಲಾಕ್‌ಗೂ ಪ್ರತ್ಯೇಕ ಕೋಡ್ ನೀಡಲಾಗಿದೆ

5. ಸಮೀಕ್ಷಾ ಅನುಸೂಚಿ ಸಿದ್ಧತೆ

4ನೇ ಹಂತದಲ್ಲಿ ರಚಿಸಲಾದ ಸಮೀಕ್ಷಾ ಬ್ಲಾಕ್‌ಗಳ ಆಧಾರದಲ್ಲಿ, ಆ ಬ್ಲಾಕ್‌ನ ನಕ್ಷೆಯನ್ನು ಸಿದ್ಧಪಡಿಸಲಾಗುತ್ತದೆ. ನಕ್ಷೆಯು ಡಿಜಿಟಲ್ ಮತ್ತು ಮುದ್ರಿತ ಸ್ವರೂಪ, ಎರಡೂ ರೀತಿ ಲಭ್ಯವಿರಲಿದೆ. ಆಯಾ ಬ್ಲಾಕ್‌ನಲ್ಲಿರುವ ಮನೆಗಳ ಪಟ್ಟಿ, ಅವುಗಳ ಯುಚ್‌ಐಡಿ ಸಂಖ್ಯೆ, ಜಿಪಿಎಸ್ ಕೋಆರ್ಡಿನೇಟ್ಸ್ ಇರುವ ಸಮೀಕ್ಷಾ ಸಾಮಗ್ರಿಯನ್ನು ರೂಪಿಸಲಾಗುತ್ತದೆ. ಅವುಗಳನ್ನು ಸಮೀಕ್ಷಾದಾರರಿಗೆ ಒದಗಿಸಲಾಗುತ್ತದೆ

6. ಪ್ರಶ್ನಾವಳಿಗೆ ಅನುಗುಣವಾಗಿ ಕುಟುಂಬಗಳ (ಮನೆಗಳ) ಪರಿಶೀಲನೆ, ಸಮೀಕ್ಷಾ ಐಡಿ ಸೃಜನೆ

ಸಮೀಕ್ಷಾದಾರರು ತಮಗೆ ವಹಿಸಲಾದ ಬ್ಲಾಕ್‌ನ ಪ್ರತಿ ಮನೆಗೆ ಭೇಟಿ ನೀಡಿ, ಅಲ್ಲಿ ಅಂಟಿಸಿರುವ ಸ್ಟಿಕರ್ ಅನ್ನು ಪರಿಶೀಲಿಸಬೇಕು. ಅದರಲ್ಲಿರುವ ಯುಎಚ್‌ಐಡಿಯನ್ನು ಆ್ಯಪ್‌ನಲ್ಲಿ ಎಂಟ್ರಿ ಮಾಡಬೇಕು. ಈ ಹಿಂದಿನ ಹಂತಗಳಲ್ಲಿ ಯಾವುದಾದರೂ ಮನೆಗಳು ಬಿಟ್ಟುಹೋಗಿದ್ದರೆ, ಅವುಗಳನ್ನು ಆ್ಯಪ್‌ನಲ್ಲಿ ಸೇರಿಸಬೇಕು

ಪರಿಶೀಲನೆಯ ವಿವರಗಳನ್ನು ದಾಖಲಿಸಿದ ನಂತರ ಪ್ರತಿ ಮನೆಯ ಯುಎಚ್‌ಐಡಿಯ ಜತೆಗೆ, ಹೊಸದಾಗಿ 'ಸಮೀಕ್ಷಾ ಐಡಿ' ಸಹ ಜನರೇಟ್ ಆಗಲಿದೆ. ಈ ಹಂತದಲ್ಲಿಯೇ ಪ್ರಶ್ನಾವಳಿಗಳಿಗೆ ಅನುಗುಣವಾಗಿ ಕುಟುಂಬದ ಸದಸ್ಯರ ವಿವರಗಳನ್ನು ದಾಖಲಿಸಿಕೊಳ್ಳುತ್ತಾರೆ

7. ಅಂತಿಮ ದೃಢೀಕರಣ

ಪ್ರಶ್ನಾವಳಿ ಆಧರಿಸಿದ ವಿವರ ದಾಖಲಿಸುವ ಕಾರ್ಯ ಪೂರ್ಣಗೊಂಡ ನಂತರ, ಮನೆಯ ಮುಂಬಾಗಿಲಿಗೆ ಅಂಟಿಸಲಾಗಿರುವ ಸ್ಟಿಕರ್‌ನಲ್ಲಿರುವ ಯುಎಚ್‌ಐಡಿ ಮತ್ತು ಸಮೀಕ್ಷಾ ಐಡಿಯನ್ನು ದೃಢಪಡಿಸಿಕೊಳ್ಳಬೇಕು. ಮೇಲ್ವಿಚಾರಣೆ ಮತ್ತು ಮರುಪರಿಶೀಲನೆಯಲ್ಲಿ ಇದು ನೆರವಿಗೆ ಬರಲಿದೆ

8. ಮೇಲ್ವಿಚಾರಣೆ ಮತ್ತು ಗುಣಮಟ್ಟ ನಿಯಂತ್ರಣ

ಪ್ರತಿ ಬ್ಲಾಕ್‌ನಲ್ಲಿರುವ ಮನೆಗಳ ಪೈಕಿ ಶೇ 5ರಿಂದ ಶೇ 10ರಷ್ಟು ಮನೆಗಳನ್ನು ಆಯ್ಕೆ ಮಾಡಿಕೊಂಡು ಮರುಪರಿಶೀಲನೆ ನಡೆಸಲಾಗುತ್ತದೆ. ಈ ಕೆಲಸವನ್ನು ಸಮೀಕ್ಷಾದಾರರ ಮೇಲ್ವಿಚಾರಕರು ಮಾಡುತ್ತಾರೆ. ಈ ಹಂತದಲ್ಲಿ ತಪ್ಪುಗಳನ್ನು ಸರಿಪಡಿಸಲಾಗುತ್ತದೆ

ಆರ್.ಆರ್ ಸಂಖ್ಯೆ ಜೋಡಣೆ ಹೇಗೆ?

ಎಸ್ಕಾಂಗಳು ಪ್ರತಿ ವಿದ್ಯುತ್ ಸಂಪರ್ಕಕ್ಕೂ ಪ್ರತ್ಯೇಕ ಮೀಟರ್ ನೀಡಿರುತ್ತವೆ ಮತ್ತು ಆ ಮೀಟರ್‌ಗಳಿಗೆ ಪ್ರತ್ಯೇಕ ಆರ್.ಆರ್ ಸಂಖ್ಯೆ ಇರುತ್ತದೆ. ಒಬ್ಬ ಮೀಟರ್ ರೀಡರ್‌ನ ವ್ಯಾಪ್ತಿಯಲ್ಲಿ 3,000 ಮೀಟರ್‌ಗಳು ಇರುತ್ತವೆ. ಈ ಮೂರು ಸಾವಿರ ಮೀಟರ್‌ಗಳನ್ನು ತಲಾ 150ರಂತೆ 20 ಬ್ಲಾಕ್‌ಗಳಾಗಿ ವಿಂಗಡಿಸಲಾಗುತ್ತದೆ. ಮೀಟರ್ ರೀಡರ್ ಜತೆಗೆ ಗ್ರಾಮ ಆಡಳಿತಾಧಿಕಾರಿಗಳು ಮತ್ತು ಇತರ ಸಿಬ್ಬಂದಿ ಸ್ಥಳಕ್ಕೆ ತೆರಳಿ, ಆರ್.ಆರ್ ಸಂಖ್ಯೆಯೊಂದಿಗೆ ಜಿಯೋಟ್ಯಾಗಿಂಗ್ ಮಾಡುತ್ತಾರೆ. ಪ್ರತಿ ಮನೆಗೆ ಯುಎಚ್‌ಐಡಿ ಸೃಜಿಸುವವರೆಗೂ ಸಮೀಕ್ಷಾ ಸಿಬ್ಬಂದಿಗೆ ನೆರವು ನೀಡುವ ಹೊಣೆಗಾರಿಕೆ ಮೀಟರ್ ರೀಡರ್‌ಗಳದ್ದು. ಮನೆಗಳಲ್ಲಿ ಯಾರೂ ವಾಸವಿಲ್ಲದೇ ಇದ್ದರೆ ಅಥವಾ ಮನೆ ಖಾಲಿ ಇದ್ದರೆ, ಅವುಗಳಿಗೂ ಯುಎಚ್‌ಐಡಿ ಸೃಜಿಸಲಾಗುತ್ತದೆ.

ವಿದ್ಯುತ್ ಸಂಪರ್ಕವೇ ಇಲ್ಲದ ಕುಗ್ರಾಮ, ಗುಡ್ಡಗಾಡು ಪ್ರದೇಶಗಳಲ್ಲಿ ಮನೆ-ಮನೆಗೆ ಭೇಟಿ ನೀಡಲಾಗುತ್ತದೆ. ಆ ಸ್ಥಳದಲ್ಲಿ ನಿಂತು ಜಿಪಿಎಸ್ ಕೋಆರ್ಡಿನೇಟ್‌ಗಳನ್ನು ಪತ್ತೆಮಾಡಿ, ಅದರ ಆಧಾರದಲ್ಲಿ ಯುಎಚ್‌ಐಡಿಗಳನ್ನು ಸೃಜಿಸಲಾಗುತ್ತದೆ.

ಗಮನಿಸಬೇಕಾದ ಅಂಶಗಳು

- ಒಂದೇ ಮನೆಯಲ್ಲಿ ಇದ್ದು, ಪ್ರತ್ಯೇಕವಾಗಿ ಅಡುಗೆ ಮಾಡಿಕೊಳ್ಳುತ್ತಿದ್ದರೆ ಅಂತಹವರನ್ನು ಪ್ರತ್ಯೇಕ ಕುಟುಂಬ ಎಂದೇ ಪರಿಗಣಿಸಿ ಸಮೀಕ್ಷೆ ನಡೆಸಬೇಕು
- ತಾತ್ಕಾಲಿಕ ಕೆಲಸ, ಶಿಕ್ಷಣ, ಚಿಕಿತ್ಸೆ ಮತ್ತಿತರ ಕಾರಣಗಳಿಗಾಗಿ ವಸತಿ ನಿಲಯಗಳು, ಹೋಟೆಲ್‌ಗಳು, ಪಿಜಿಗಳಲ್ಲಿ ವಾಸವಿರುವವರ ಸಮೀಕ್ಷೆ ನಡೆಸಬಾರದು. ಕುಟುಂಬದ ಸಮೀಕ್ಷೆ ನಡೆಸುವ ವೇಳೆಯೇ ಅವರ ಕುಟುಂಬದವರು, ಅಂತಹವರ ವಿವರ ನೀಡಬೇಕು
- ಅನಾಥಾಲಯ, ವೃದ್ಧಾಶ್ರಮ, ಭಿಕ್ಷುಕರ ಪುನರ್ವಸತಿ ಕೇಂದ್ರಗಳಲ್ಲಿ ಇರುವವರನ್ನು ಸಮೀಕ್ಷೆಗೆ ಒಳಪಡಿಸಬೇಕು
- ಅನಾಥಾಲಯಗಳಲ್ಲಿ ವಾಸವಿರುವ ಮಕ್ಕಳಿಗೆ ಅವರ ಜಾತಿ ಮತ್ತು ಉಪಜಾತಿ ಗೊತ್ತಿಲ್ಲದೇ ಇರುವ ಸಾಧ್ಯತೆ ಹೆಚ್ಚು. ಜಾತಿ ಉಪಜಾತಿ, ವಿವರ ನೀಡಲು ಒತ್ತಾಯಿಸಬಾರದು

ತೆಲಂಗಾಣ, ಬಿಹಾರದ ಹಾದಿ

ಪ್ರಜಾವಾಣಿ ವಾರ್ತೆ

ಭಾರತದಲ್ಲಿ 1931ರಲ್ಲಿ ಕೊನೆಯ ಬಾರಿಗೆ ಜಾತಿ ಗಣತಿ ನಡೆದಿತ್ತು. ಅದರ ನಂತರ ಪ್ರತಿ ಜನಗಣತಿ ಸಂದರ್ಭದಲ್ಲಿಯೇ ಎಸ್‌ಸಿ, ಎಸ್‌ಟಿ ಸಮುದಾಯಗಳ ಜಾತಿ ವಿವರಗಳನ್ನೂ ಸಂಗ್ರಹಿಸಲಾಗುತ್ತಿದೆ. ಆದರೆ, ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಜಾತಿ ಮತ್ತಿತರ ವಿವರಗಳು ದೀರ್ಘಕಾಲದಿಂದ ಅಲಭ್ಯವಾಗಿವೆ. ಒಬಿಸಿ ಸಮುದಾಯಗಳಿಗೆ ಮೀಸಲಾತಿ ಪ್ರಮಾಣ ಮರುನಿಗದಿ ಪಡಿಸುವುದೂ ಸೇರಿದಂತೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲು ಜಾತಿ ಸಮೀಕ್ಷೆ ಅಗತ್ಯ. ಈ ದಿಸೆಯಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ ಜಾತಿ ಗಣತಿ ನಡೆಸುವುದಾಗಿ ಲೋಕಸಭಾ ಚುನಾವಣೆ ಮತ್ತು ಹಲವು ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಭರವಸೆ ನೀಡಿತ್ತು.

ತೆಲಂಗಾಣದಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜಾತಿ ಸಮೀಕ್ಷೆ ನಡೆಸಿತ್ತು. ಸಮೀಕ್ಷೆಯು 2024ರ ನವೆಂಬರ್ ಆರರಿಂದ ಡಿಸೆಂಬರ್ 25ರವರೆಗೆ ನಡೆದಿತ್ತು. ಜಾತಿ ಸಮೀಕ್ಷೆ ಎಂದು ಸರಳವಾಗಿ ಕರೆದರೂ, ಅದು ಸಾಮಾಜಿಕ, ಶೈಕ್ಷಣಿಕ, ಉದ್ಯೋಗ, ಆರ್ಥಿಕ, ರಾಜಕೀಯ ಸಮೀಕ್ಷೆಯಾಗಿದೆ ಎಂದು ಸರ್ಕಾರ ಪ್ರತಿಪಾದಿಸಿತ್ತು. ಸಮೀಕ್ಷೆಗಾಗಿ 1.12 ಕೋಟಿ ಕುಟುಂಬಗಳನ್ನು ಸಂದರ್ಶಿಸಿ, 3.54 ಕೋಟಿ ಜನರ ಮಾಹಿತಿ ಸಂಗ್ರಹಿಸಲಾಗಿತ್ತು.

ಗಣತಿದಾರರು 50 ದಿನ ರಾಜ್ಯದ ಮನೆ ಮನೆಗೆ ಭೇಟಿ ನೀಡಿ, 57 ಪ್ರಶ್ನೆಗಳ ಮೂಲಕ ದತ್ತಾಂಶ ಸಂಗ್ರಹಿಸಿದ್ದರು. ಪ್ರಶ್ನಾವಳಿಯು ಸಾಮಾಜಿಕ, ಶೈಕ್ಷಣಿಕ, ಉದ್ಯೋಗ, ಆರ್ಥಿಕ, ರಾಜಕೀಯ ಮತ್ತು ಜಾತಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಒಳಗೊಂಡಿತ್ತು. 'ಜಾತಿ ಇಲ್ಲ', 'ಧರ್ಮ ಇಲ್ಲ' ಎನ್ನುವ ಆಯ್ಕೆಗಳೂ ಪ್ರಶ್ನಾವಳಿಯಲ್ಲಿದ್ದವು.

ವರದಿಗೆ ವಿರೋಧ: ಸಮೀಕ್ಷೆಯ ವರದಿ ಪ್ರಕಟವಾದ ನಂತರ ಹಲವು ರೀತಿಯ ಆಕ್ಷೇಪಣೆಗಳು ವ್ಯಕ್ತವಾದವು. ಹಿಂದುಳಿದ ವರ್ಗಗಳ (ಬಿ.ಸಿ.) ಜನಸಂಖ್ಯೆ ಶೇ 46.25, ಮುಸ್ಲಿಂ ಶೇ 12.56, ಎಸ್‌ಸಿ ಶೇ 17.43, ಎಸ್‌ಟಿ ಶೇ 10.45, ಇತರೆ ಸಮುದಾಯಗಳು ಶೇ 15.79ರಷ್ಟು ಜನಸಂಖ್ಯೆ ಹೊಂದಿವೆ ಎಂದು ವರದಿ ಹೇಳಿತ್ತು.

ವರದಿಯ ಬಗ್ಗೆ ವಿರೋಧ ಪಕ್ಷಗಳು ಸೇರಿದಂತೆ ಕೆಲವು ವಲಯಗಳಿಂದ ಆಕ್ಷೇಪಣೆಗಳು ವ್ಯಕ್ತವಾದವು. 2014ರಲ್ಲಿ ನಡೆದಿದ್ದ 'ಸಮಗ್ರ ಕುಟುಂಬ ಸಮೀಕ್ಷೆ'ಯಲ್ಲಿ ಬಿ.ಸಿ. ಸಮುದಾಯಗಳ ಜನಸಂಖ್ಯೆ ಶೇ 51ರಷ್ಟು ಇದ್ದದ್ದು 2024ರ ಹೊತ್ತಿಗೆ ಶೇ 46ಕ್ಕೆ ಕುಸಿದದ್ದು ಹೇಗೆ ಎಂದು ಪ್ರಶ್ನಿಸಿದ್ದರು.

ಮೀಸಲಾತಿ ಹೆಚ್ಚಳ: ಇದರ ನಡುವೆಯೇ, ಸಮೀಕ್ಷೆಯ ವರದಿ ಬಿಡುಗಡೆಯಾದ ನಂತರ ತೆಲಂಗಾಣ ಸರ್ಕಾರವು ಶಿಕ್ಷಣ, ಉದ್ಯೋಗ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿ.ಸಿ. ಸಮುದಾಯಗಳ ಮೀಸಲಾತಿಯನ್ನು ಶೇ 42ಕ್ಕೆ ಹೆಚ್ಚಿಸಿ ಮಸೂದೆ ಅಂಗೀಕರಿಸಿದೆ. ಅದನ್ನು ರಾಜ್ಯಪಾಲರು ರಾಷ್ಟ್ರಪತಿಗೆ ಕಳುಹಿಸಿದ್ದಾರೆ.

ಜಾತಿ ಸಮೀಕ್ಷೆಯ ವರದಿಯನ್ನಾಧರಿಸಿ ಮೀಸಲಾತಿಯ ಮಿತಿಯನ್ನು ಮೀರಿದ ಎರಡನೇ ರಾಜ್ಯ ತೆಲಂಗಾಣ. ಒಟ್ಟಾರೆ ಮೀಸಲಾತಿಯ ಪ್ರಮಾಣವು ಶೇ 50ರ ಮಿತಿಯನ್ನು ದಾಟಿರುವುದರಿಂದ, ಮಸೂದೆಗೆ ಕಾನೂನು ತೊಡಕು ಎದುರಾಗಿದೆ. ಎ.ರೇವಂತ್ ರೆಡ್ಡಿ ಸರ್ಕಾರವು ಜಾತಿ ಸಮೀಕ್ಷೆ ದತ್ತಾಂಶ ಮತ್ತು ಮೀಸಲಾತಿ ಹೆಚ್ಚಳದ ವಿಚಾರದಲ್ಲಿ ಕಾನೂನು ತಜ್ಞರ ನೆರವು ಪಡೆಯಲು ನಿವೃತ್ತ ನ್ಯಾಯಮೂರ್ತಿ ಸುದರ್ಶನ ರೆಡ್ಡಿ ಅವರ ನೇತೃತ್ವದಲ್ಲಿ ಸಮಿತಿ ರಚಿಸಿದೆ.

ಮುಗಿಯದ ಕಾನೂನು ಸಮರ

ಬಿಹಾರದಲ್ಲಿ 2023ರಲ್ಲಿ ಜಾತಿ ಸಮೀಕ್ಷೆ ನಡೆದಿತ್ತು. ರಾಜ್ಯದಲ್ಲಿರುವ ಜನರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗಳನ್ನು ಅರ್ಥೈಸಿಕೊಂಡು, ದುರ್ಬಲ ಸಮುದಾಯಗಳ ಜೀವನ ಮಟ್ಟ ಸುಧಾರಣೆಗಾಗಿ ಹೊಸ ಸರ್ಕಾರಿ ನೀತಿಗಳನ್ನು ರೂಪಿಸುವ ಉದ್ದೇಶದಿಂದ ಈ ಸಮೀಕ್ಷೆಯನ್ನು ನಿತೀಶ್ ಕುಮಾರ್ ನೇತೃತ್ವದ ಎನ್‌ಡಿಎ ಸರ್ಕಾರ ಕೈಗೊಂಡಿತ್ತು. ಎರಡು ಹಂತಗಳಲ್ಲಿ ನಡೆದ ಸಮೀಕ್ಷೆಗಾಗಿ ರಾಜ್ಯ ಸರ್ಕಾರ ₹500 ಕೋಟಿ ವೆಚ್ಚ ಮಾಡಿತ್ತು.

ಕಾನೂನು ಹೋರಾಟ: ಈ ಸಮೀಕ್ಷೆ ವಿವಾದಕ್ಕೂ ಕಾರಣವಾಗಿತ್ತು. ಇದು ಜಾತಿ ಸಮೀಕ್ಷೆ ಅಲ್ಲ, ಜಾತಿ ಆಧಾರಿತ ಗಣತಿ ಎಂದು ಕೆಲವು ಸಂಘಟನೆಗಳು ಆರೋಪಿಸಿದ್ದವು. 'ಇದು ಜಾತಿ ಗಣತಿ ಅಲ್ಲ, ಜಾತಿ ಸಮೀಕ್ಷೆ' ಎಂದು ಬಿಹಾರದ ಮುಖ್ಯಮಂತ್ರಿ ನಿತೀಶ್‌ಕುಮಾರ್ ಅವರು ಆಗ ಸ್ಪಷ್ಟಪಡಿಸಿದ್ದರು.

ಬಿಹಾರ ಜಾತಿ ಸಮೀಕ್ಷೆ: ಒಂದು ನೋಟ



ಎರಡನೇ ಹಂತದ ಸಮೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲಿ ಪಟ್ನಾ ಹೈಕೋರ್ಟ್ ತನ್ನ ಮಧ್ಯಂತರ ಆದೇಶದಲ್ಲಿ ಸಮೀಕ್ಷೆಗೆ ತಡೆ ನೀಡಿತ್ತು (ಮೇ 3, 2023). ಹೈಕೋರ್ಟ್ ಆದೇಶವನ್ನು ಬಿಹಾರ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿತ್ತು. ಪ್ರಕರಣ ಇನ್ನೂ ಪಟ್ನಾ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದ್ದುದರಿಂದ ಸುಪ್ರೀಂ ಕೋರ್ಟ್ ಇದರಲ್ಲಿ ಮಧ್ಯಪ್ರವೇಶಿಸಿರಲಿಲ್ಲ. ಆಗಸ್ಟ್ 1ರಂದು ಜಾತಿ ಸಮೀಕ್ಷೆಯನ್ನು ಸಮರ್ಥಿಸಿಕೊಂಡಿದ್ದ ಹೈಕೋರ್ಟ್, ಸಮೀಕ್ಷೆಯ ಪುನರಾರಂಭಕ್ಕೆ ಹಸಿರು ನಿಶಾನೆ ತೋರಿತ್ತು.

ಪಟ್ನಾ ಹೈಕೋರ್ಟ್‌ನ ತೀರ್ಮಾನವನ್ನು ಪ್ರಶ್ನಿಸಿ 'ಯೂಥ್ ಫಾರ್ ಈಕ್ವಾಲಿಟಿ', 'ಏಕ್ ಸೋಚ್ ಏಕ್ ಪ್ರಯಾಸ್' ಸಂಘಟನೆ ಹಾಗೂ ಇತರರು ಆಗಸ್ಟ್ 3ರಂದು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಸಮೀಕ್ಷೆಗೆ ತಡೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿತ್ತು. 2024 ಜನವರಿಯಲ್ಲಿ ಸಮೀಕ್ಷೆಯ ವಿವರಗಳನ್ನು ಪ್ರಕಟಿಸುವಂತೆ ಕೋರ್ಟ್ ಬಿಹಾರ ಸರ್ಕಾರಕ್ಕೆ ಸೂಚಿಸಿತ್ತು.

ಮೀಸಲಾತಿ ಹೆಚ್ಚಳ, ರದ್ದು: ಸಮೀಕ್ಷೆಯ ಆಧಾರದಲ್ಲಿ, ಸರ್ಕಾರಿ ಉದ್ಯೋಗ ಮತ್ತು ಉನ್ನತ ಶಿಕ್ಷಣದಲ್ಲಿ ಮೀಸಲಾತಿ ಪ್ರಮಾಣವನ್ನು ಶೇ 50ರಿಂದ ಶೇ 65ಕ್ಕೆ ಹೆಚ್ಚಿಸಿ ಬಿಹಾರ ಸರ್ಕಾರ 2023ರ ನವೆಂಬರ್‌ನಲ್ಲಿ ಆದೇಶ ಹೊರಡಿಸಿತ್ತು. ಅದಕ್ಕಾಗಿ ಎರಡು ಮಸೂದೆಗಳನ್ನು ರೂಪಿಸಿತ್ತು. ಅತಿ ಹಿಂದುಳಿದ ವರ್ಗಗಳಿಗೆ (ಇಬಿಸಿ) ಶೇ 18, ಪರಿಶಿಷ್ಟ ಜಾತಿಯವರಿಗೆ (ಎಸ್‌ಸಿ) ಶೇ 20, ಪರಿಶಿಷ್ಟ ಪಂಗಡಗಳಿಗೆ (ಎಸ್‌ಟಿ) ಶೇ 2, ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) ಶೇ 25ರಷ್ಟು ಹಂಚಿಕೆ ಮಾಡಲಾಗಿತ್ತು (ಇದರ ಜೊತೆಗೆ ಆರ್ಥಿಕವಾಗಿ ದುರ್ಬಲ ವರ್ಗದವರಿಗೆ (ಇಡಬ್ಲ್ಯುಎಸ್) ಶೇ 10 ಮೀಸಲಾತಿ ನೀಡಲಾಗಿತ್ತು). ಆದರೆ, ಪಟ್ನಾ ಹೈಕೋರ್ಟ್, 2024ರ ಜೂನ್ 20ರಂದು ಈ ಆದೇಶವನ್ನು ರದ್ದು ಮಾಡಿತ್ತು. ಈ ತೀರ್ಪನ್ನು ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

2024-25ನೇ ಸಾಲಿನ ಆದಾಯ ಲೆಕ್ಕಪತ್ರ ವಿವರ (ಐಟಿಆರ್) ಸಲ್ಲಿಕೆಯ ಗಡುವನ್ನು ಇದೇ ತಿಂಗಳ 30ರವರೆಗೆ ವಿಸ್ತರಿಸಿರುವ ಬಗ್ಗೆ ಕೇಂದ್ರ ಪರೋಕ್ಷ ತೆರಿಗೆ ಮಂಡಳಿಯು (ಸಿಬಿಡಿಟಿ) ಹೊರಡಿಸಿದೆ ಎನ್ನಲಾದ ಸುತ್ತೋಲೆಯನ್ನು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ಇಂತಹ ಸುತ್ತೋಲೆಯನ್ನು ಹೊರಡಿಸಲಾಗಿದೆಯೇ ಎಂಬುದನ್ನು ತಿಳಿಯುವುದಕ್ಕಾಗಿ ಆದಾಯ ತೆರಿಗೆ ಇಲಾಖೆಯ ವೆಬ್‌ಸೈಟ್ ಮತ್ತು ಸಾಮಾಜಿಕ ಜಾಲತಾಣಗಳ ಇಲಾಖೆಯ ಖಾತೆಗಳಿಗೆ ಭೇಟಿ ನೀಡಿ ಪರಿಶೀಲಿಸಲಾಯಿತು. ಆದಾಯ ತೆರಿಗೆ ಇಲಾಖೆಯು ತನ್ನ ಅಧಿಕೃತ 'ಎಕ್ಸ್' ಖಾತೆಯಲ್ಲಿ ಸೆ.15ರಂದು ಒಂದು ಸುತ್ತೋಲೆಯನ್ನು ಪೋಸ್ಟ್ ಮಾಡಿತ್ತು. ಅದರಲ್ಲಿ ಸಿಬಿಡಿಟಿಯು ಆದಾಯ ಲೆಕ್ಕಪತ್ರ ಸಲ್ಲಿಕೆ ವಿವರಗಳನ್ನು ಸಲ್ಲಿಸುವ ಗಡುವನ್ನು ಸೆ.16ರವರೆಗೆ ವಿಸ್ತರಿಸಲಾಗಿದೆ ಎಂದು ಹೇಳಿತ್ತು. ಆ ಬಳಿಕ ಗಡುವವನ್ನು ಇನ್ನಷ್ಟು ವಿಸ್ತರಿಸಿರುವ ಬಗ್ಗೆ ಯಾವುದೇ ಸುತ್ತೋಲೆಯನ್ನು ಪ್ರಕಟಿಸಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಸುತ್ತೋಲೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಅದರಲ್ಲಿ ಕೆಲವು ತಪ್ಪುಗಳಿದ್ದು, ವಾಕ್ಯಗಳಲ್ಲಿ ಹೊಂದಾಣಿಕೆ ಸಮಸ್ಯೆಯೂ ಇದೆ. ಇದು ತಿರುಚಿದ ಸುತ್ತೋಲೆ ಎಂಬುದಕ್ಕೆ ಇದು ಪುಷ್ಟಿ ನೀಡುತ್ತದೆ. ಹಾಗಾಗಿ, ಗಡುವನ್ನು ಸೆ.30ರವರೆಗೆ ವಿಸ್ತರಿಸಲಾಗಿದೆ ಎಂದು ಹೇಳಿಕೊಂಡಿರುವ ಸುತ್ತೋಲೆ ನಕಲಿ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ಪ್ರಕಟಿಸಿದೆ.

ನಂಬದೇ, ನೆಚ್ಚದೇ

ನುಡಿ ಬೆಳಗು

ರೇಣುಕಾ ನಿಡಗುಂದಿ

ಹಿಂದಿಯಲ್ಲೊಂದು ನಾಣ್ಣುಡಿಯಿದೆ. 'ನೇಕಿ ಕರ್ ಕುಂವೆ ಮೆ ಡಾಲ್' (ಒಳ್ಳೆಯದನ್ನು ಮಾಡಿ ಬಾವಿಗೆ ಎಸೆಯಿರಿ). 'ಒಳ್ಳೆಯದನ್ನು ಮಾಡಿ. ಆದರೆ ಪ್ರತಿಫಲದ ಆಸೆ ಇಟ್ಟುಕೊಳ್ಳಬೇಡಿ' ಎಂಬುದು ಇದರರ್ಥ. ಮನುಷ್ಯ ಸಂಘಜೀವಿ. ಸಮಾಜದಲ್ಲಿ ನೆರೆಹೊರೆ, ಬಂಧುಬಳಗ ಎಲ್ಲರೂ ಬೇಕಾಗುತ್ತಾರೆ.

ನಾವು ಪರವೂರಿಗೆ ಹೋದಾಗ ಅಕ್ಕಪಕ್ಕದ ಜನರಿಗೆ ಮನೆಕಡೆ ನೋಡಿಕೊಳ್ಳಲು ಹೇಳೋದು ಸ್ವಾಭಾವಿಕ. ಅದು ಒಬ್ಬರನ್ನೊಬ್ಬರ ಸಹಾಯ, ಸಹಕಾರ ಅಗತ್ಯವಷ್ಟೇ ಅಲ್ಲ, ಅನಿವಾರ್ಯವೂ ಹೌದು. ಆದರೆ ವಿಶ್ವಾಸದ ದುರುಪಯೋಗ ಒಳ್ಳೆಯದಲ್ಲ. ನೆರೆಹೊರೆಯಲ್ಲಿ ಒಳ್ಳೆಯವರಿದ್ದಾಗಲೇ ಬದುಕು ನೆಮ್ಮದಿಯದಾಗಿರುತ್ತದೆ. ಹಾಗೇ 'ನೆಮ್ಮದಿಯ ಬದುಕಿಗೆ ಉತ್ತಮರ ಸಂಗವೂ ಬೇಕಾಗಿರುತ್ತದೆ' ಎಂದೂ ವ್ಯಾಖ್ಯಾನಿಸಬಹುದು. ಇತ್ತೀಚೆಗೆ ಈ ಅನುಭವವಾಯಿತು.

ಮಾರ್ಚ್ ತಿಂಗಳ ರಣ ಬೇಸಿಗೆಯಲ್ಲಿ ಊರಿಗೆ ಹೋದಾಗ ಮೂರು ತಿಂಗಳುಗಳಿಂದ ಬೀಗಹಾಕಿದ್ದ ಮನೆ ಹೊರಗೆಲ್ಲ ಕಸದ ರಾಶಿ ಬಿದ್ದಿತ್ತು. ಮಹಾನಗರದಲ್ಲಿ ಸಿಗುವಂತೆ ಸಣ್ಣ ಊರುಗಳಲ್ಲಿ ಕೆಲಸದವರು ಸಿಗುವುದಿಲ್ಲ. ಯಾರನ್ನಾದರೂ ಸ್ವಚ್ಛಗೊಳಿಸಲು ನೆರವಾಗುವಂತೆ ಕರೆದರೂ ಅದವರ ಚಿತ್ತದ ಮೇಲೆ ಅವಲಂಬಿಸಿರುತ್ತದೆ. ಬಂದರೆ ನಮ್ಮ ಪುಣ್ಯ. ಹತ್ತಿರದ ಒಬ್ಬ ಕೂಲಿ ಹೆಂಗಸನ್ನು ಕರೆದಿದ್ದೆ. ಹೇಳಿದ ಸಮಯಕ್ಕೆ ಬರಲಿಲ್ಲ. ಕಸ ಗುಡಿಸಿ ಅಂಗಳ ತೊಳೆಯೋಣವೆಂದು ನಲ್ಲಿ ತಿರುಗಿಸಿದರೆ ಒಂದು ಹನಿ ನೀರೂ ಬರುತ್ತಿಲ್ಲ. ಮೇಲೆ ಹೋಗಿ ನೀರಿನ ಟ್ಯಾಂಕ್ ನೋಡಿದರೆ ತಳದಲ್ಲಿ ಒಂದು ಹನಿಯೂ ನೀರಿಲ್ಲ. ಬದಲಿಗೆ ರಣಬಿಸಿಲಿಗೆ ಸಿಡಿದು ಹೋಗುವಂತೆ ಮುಚ್ಚಳ ಹಾರಿಹೋಗಿ ಬಾಯ್ದೆರೆದು ಬಿದ್ದಿದೆ.

ನಮ್ಮ ಟೆರೇಸ್‌ನಿಂದ ಪಕ್ಕದವರ ಟೆರೇಸ್ ಒಂದೇ ಗೇಣು ಅಂತರ. ಅಲ್ಲಿಂದ ಮಕ್ಕಳು, ಮನೆಯವರು ಎಲ್ಲ ನಮ್ಮ ಟೆರೇಸ್ ಅನ್ನೇ ಬಳಸುತ್ತಾರೆ. ಮೆಣಸಿನಕಾಯಿ ಒಣ ಹಾಕಲು, ಸಂಡಿಗೆ ಇಡಲು, ಸಂಜೆ ಮಕ್ಕಳು ಕ್ರಿಕೆಟ್ ಆಡಲು ಇತ್ಯಾದಿ. ಅದು ಗೊತ್ತಿದ್ದರೂ ನಾವು ಇರುವುದಿಲ್ಲವಲ್ಲ, ಬಳಸಿಕೊಳ್ಳಲಿ ಎಂದು ನಾವೂ ಸುಮ್ಮನಿದ್ದೆವು. ಇಲ್ಲಿ ನೋಡಿದರೆ ಹನಿ ನೀರಿಲ್ಲ. ಟ್ಯಾಂಕಿನ ನೀರನ್ನು ಬಳಸಿದ್ದಾರೆಂಬುದು ನಿಜ. ಬಳಸಿಕೊಂಡರೆ ಬಳಸಿಕೊಳ್ಳಲಿ, ಆದರೆ ಖಾಲಿಯಾದ ಸಿಂಟೆಕ್ಸ್ ಟ್ಯಾಂಕ್ ಸೀಳಿಹೋಗದಂತೆ ಒಂದೆರಡು ಬಕೆಟ್ ನೀರು ತುಂಬಿಸಿಡಬೇಕೆಂಬ ಸಾಮಾನ್ಯ ತಿಳಿವಳಿಕೆಯೂ ಇರಬೇಕಲ್ಲವೇ? ತಮ್ಮ ಮನೆಯ ವಸ್ತುಗಳನ್ನು ಜತನವಾಗಿಡುವ ಜನ ಇನ್ನೊಬ್ಬರ ವಸ್ತುಗಳಿಗಷ್ಟೇ ಅಲ್ಲ ಸಂಬಂಧಗಳಿಗೂ ಬೆಲೆ ಕೊಡುವುದಿಲ್ಲ. ಯಾವುದೇ ಸಂಬಂಧವಾಗಲಿ ಅದು ನಂಬಿಕೆಯ ತಳಪಾಯವನ್ನು ಅವಲಂಬಿಸಿದೆ. ತಳಪಾಯ ಭದ್ರವಾಗಿದ್ದರೆ ಸಂಬಂಧಗಳೂ ಗಟ್ಟಿಯಾಗಿರುತ್ತವೆ.

ಇನ್ನೊಬ್ಬರಿಂದ ಒಳ್ಳೆಯದನ್ನು ನಿರೀಕ್ಷಿಸುವುದಕ್ಕಿಂತ ನಮ್ಮ ಸುರಕ್ಷತೆಯಲ್ಲಿ ನಾವಿರಬೇಕು ಎಂದು ಮೇಲಿನ ಟೆರೇಸ್ ಮತ್ತು ಕೆಳಗಿನ ಕಾಂಪೌಂಡಿಗೆ ಕಬ್ಬಿಣದ ಬೇಲಿ ಹಾಕಿಸಿದೆವು. ಇಷ್ಟಕ್ಕೇ ಅವರು ಮಾತಾಡುವುದನ್ನೇ ನಿಲ್ಲಿಸಿದರು. ನೀರು, ಅಡುಗೆ ಸಿಲಿಂಡರ್, ಇಡೀ ಮನೆಯನ್ನೇ ಬಳಸುತ್ತಿದ್ದ ಜನ ಹಠಾತ್ ಬದಲಾಗಿ ಹೋದರು. ಸಂಬಂಧಗಳು ಚೆನ್ನಾಗಿರಬೇಕಾದರೆ ಎರಡೂ ಕಡೆಯಿಂದ ವಿಶ್ವಾಸಕ್ಕೆ ಧಕ್ಕೆಯಾಗದಂತೆ ನಡೆದುಕೊಳ್ಳಬೇಕು. ಯಾರೇ ಆಗಲಿ ತಮ್ಮ ತಪ್ಪನ್ನು ಒಪ್ಪಿಕೊಂಡು ಪಶ್ಚಾತ್ತಾಪ ಪಟ್ಟರೂ ಸಾಕು ಸಂಬಂಧಗಳು ಮಾಧುರ್ಯವನ್ನು ಕಳೆದುಕೊಳ್ಳುವುದಿಲ್ಲ. ತಪ್ಪು ಒಪ್ಪಿಕೊಂಡಾಗ ಅವರ ಬಗ್ಗೆ ಗೌರವವೂ ಇಮ್ಮಡಿಯಾಗುತ್ತದೆ. ❖

ಗುಂಡಣ್ಣ

ಪದಬಂಧ 6169

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ದೇಶದ ಒಂದು ವಿಭಾಗ (3)
3.ದೈನ್ಯಕ್ಕೆ ಒಳಗಾಗಿರುವೆನೆಂಬ ಭಾವ (4)
6.ನೂರು ವರ್ಷದ ಅವಧಿ (4)
7.ರಜದಲ್ಲಿ ಖರೀದಿಸಿದ ಬೆಳ್ಳಿ (3)
10.ಬಿಡದಿ ಬಳಿ ಬಂದಿರುವ ಹೆಂಡತಿ (3)
12.ಇದಿನ್ನೂ ಎಳೆ ಮಗು (4)
15.ಮನುಜ ಹಿಡಿದಿರುವ ಶ್ರೀಗಂಧ (4)
16.ಕತ್ತು ಮೇಲೆತ್ತಿದಾಗ ಪಿತ್ತಕೋಶ ಕಾಣಿಸಿತೇ? (3)

ಮೇಲಿಂದ ಕೆಳಕ್ಕೆ

1.ವೇದಗಳಿಂದ ಸಂಗ್ರಹಿಸಿದ ಭಾಗ (3))
2.ಹೊಳೆಯ ದಡವಿದು (4)
4.ಅಧೀನತೆಗೊಳಪಟ್ಟಿದ್ದು ತಿರುವುಮುರುವಾದರೆ ಕಳೇಬರ (2)
5.ಅತ್ರಿ ಮಹರ್ಷಿಯ ಹೆಂಡತಿ (4)
8.ಕನ್ನಡ ಸಂಸ್ಕೃತಗಳೆರಡಕ್ಕೂ ಸಮಾನವಾದ ಶಬ್ದ (3)
9.ಮರದೊಳಗೆ ಚಲುವಾದುದು ಕಂಡಿದೆ (4)
11.ಎಲ್ಲದಿಕ್ಕುಗಳಲ್ಲಿರುವ ರಾಜ್ಯಗಳನ್ನು ಗೆಲ್ಲುವುದು (4)
13.ಸುಗಮವಾಗಿ ಕಿತ್ತು ಮುಡಿದಿರುವ ಹೂವು (2)
14.ಐಶ್ವರ್ಯ ಇಲ್ಲಿ ಕಾಣುತ್ತಿದೆ (3)

6168ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಥನ 2.ಗುದಾಮು 5.ದ್ರವ 6.ತಡಬಡ 7.ಲಡಿ 9.ಸಂಘರ್ಷ 10. ಮುದ 12.ಬಹಿಷ್ಕಾರ 13.ರಿದಾ 14.ನದವ 15.ದುಮ್ಮಾನ

ಮೇಲಿಂದ ಕೆಳಕ್ಕೆ:
1.ಮನೆತನ 2.ಗುರುತ್ವಾಕರ್ಷಣಬಲ 3.ಮುದ್ರಣಾಲಯ 4.ಕೂಡಲಸಂಗಮದೇವ 8.ಪದವೀದಾನ 11.ವದನ

ಸುಡೊಕು 6553

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2	4	1		8	3		7	5
			2		7		1	
7		3		9		8		2
	5				1			
6		7		5		2		8
	3		9					1
	2				8		6	
				3				
1		8	5			3		4

6552 ಸುಡೊಕು

9	4	3	8	5	1	7	2	6
8	1	7	6	3	2	4	5	9
6	2	5	4	7	9	1	8	3
1	6	2	9	4	5	3	7	8
5	7	4	1	8	3	9	6	2
3	9	8	2	6	7	5	4	1
7	8	9	3	2	4	6	1	5
2	5	1	7	9	6	8	3	4
4	3	6	5	1	8	2	9	7

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

19 ಸೆಪ್ಟೆಂಬರ್ 2025 ಶುಕ್ರವಾರ ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣತ್ರಯೋದಶಿ ಗಂ. 23-38 **ನಕ್ಷತ್ರ:** ಆಶ್ಲೇಷ ಗಂ. 7-06 **ಯೋಗ:** ಸಿದ್ಧ ಗಂ. 20-41 **ಕರಣ:** ಗರ ಗಂ. 11-28 ಕನ್ಯಾ ಮಾಸದ 02 ನೇ ದಿನ. **ಮಳೆ ನಕ್ಷತ್ರ :** ಉತ್ತರ 2 ನೇ ಪಾದ. **ರಾಹುಕಾಲ :** ಬೆಳಿಗ್ಗೆ 10-30 12-00 **ಸೂರ್ಯೋದಯ :** 06-23 **ಸೂರ್ಯಾಸ್ತ :** 06-26 **ಮುಸ್ಲಿಂ ದಿನಾಂಕ :** 26 ರಬಿಉಲ್ಲಾವಲ್ **ದಿನ ವಿಶೇಷ :** ಪಕ್ಷ ಪ್ರದೋಷ **ಅದೃಷ್ಟ ಸಂಖ್ಯೆ :** 7, 11

ಮೇಷ: ಸ್ವಯಂ ಬುದ್ಧಿವಂತಿಕೆ ಇದ್ದರೂ ಅನುಭವ ಹೊಂದಿದವರ ಸಲಹೆ ಸಹಕಾರ ಪಡೆಯುವುದರಿಂದ ಲಾಭ ಹೆಚ್ಚುತ್ತದೆ. ಯಾವ ವ್ಯಕ್ತಿಯನ್ನೂ ತಿರಸ್ಕರಿಸಬೇಡಿ, ಮುಂದಿನ ದಿನಗಳಲ್ಲಿ ಅವರ ಸಹಾಯವೇ ಮುಖ್ಯವಾಗಬಹುದು.

ವೃಷಭ: ಕುಟುಂಬದವರ ಜೊತೆ ಸಂಭಾಷಿಸಲು ಸಮಯ ಮಾಡಿಕೊಳ್ಳಿ. ಸಾಮಾಜಿಕ ವಲಯದ ಅಭಿವೃದ್ಧಿಗೆ ರಾಜಕೀಯ ವ್ಯಕ್ತಿಯನ್ನು ಸಂಪರ್ಕಿಸಬೇಕಾಗುತ್ತದೆ. ತಂದೆ ಆರೋಗ್ಯ ಸುಧಾರಿಸಲು ಆಯುರ್ವೇದ ಔಷಧಿ ನೆರವಾಗಲಿದೆ.

ವೃಷಭ: ಐಹಿಕ ಸುಖಗಳನ್ನು ಆದಷ್ಟು ಬಿಟ್ಟುಬಿಡುವ ಮನಸ್ಥಿತಿ ಹಿರಿಯ ನಾಗರಿಕರಲ್ಲಿ ಉಂಟಾಗುತ್ತದೆ. ಸಂಧಾನ ಅಥವ ಮಧ್ಯಸ್ಥಿಕೆ ವಹಿಸುವಂತಹ ಕೆಲಸ ಮಾಡುವಿರಿ. ಅಂಥ ವೇಳೆ ವಸ್ತು ನಿಷ್ಠವಾಗಿ ಮತ್ತು ಸತ್ಯದ ಪರವಾಗಿರಿ.

ಕರ್ಕಾಟಕ: ಪರೋಪಕಾರದ ಫಲ ಮತ್ತು ಆತ್ಮವಿಶ್ವಾಸ ನಿಮ್ಮನ್ನು ರಕ್ಷಿಸಲಿದೆ. ವಿವಾಹದಂತಹ ಶುಭಕಾರ್ಯಗಳ ನಿರೀಕ್ಷೆ ಮಾಡಬಹುದು. ವದಂತಿಗಳಿಗೆ ಕಿವಿಗೊಡದೆ ನಿಮ್ಮ ಕೆಲಸವನ್ನು ಮುಂದುವರೆಸಿಕೊಂಡು ಹೋಗುವುದು ಶುಭ.

ಸಿಂಹ: ಸಂಪರ್ಕ ಸಾಧನದಂತಹ ಉದ್ಯೋಗದಲ್ಲಿ ನಿರತರಾದ ವ್ಯಕ್ತಿಗಳಿಗೆ ಸನ್ಮಾನ ಅಥವಾ ವಿಶೇಷ ಗೌರವಗಳು ಲಭಿಸುವುದು. ನೆರೆ ಹೊರೆಯರಿಗೆ ನೀವು ಕೊಡುವಂತಹ ಅತಿಯಾದ ಸಲುಗೆಯು ದುರುಪಯೋಗಗೊಳ್ಳಬಹುದು.

ಕನ್ಯಾ: ಪ್ರಾಪಂಚಿಕ ಅನುಭವಕ್ಕಾಗಿ ಕಾನೂನಿನ ಬಗ್ಗೆ ಅಧ್ಯಯನ ಮಾಡುವ ಮನಸ್ಸಾಗುತ್ತದೆ. ಇಂದು ನೀವು ಅನುಭವಿಸಬೇಕಾದ ಅಪಾಯವು ಭಗವಂತ ಶ್ರೀ ಮಲ್ಲಿಕಾರ್ಜುನನ ಅನುಗ್ರಹದಿಂದ ಕೂದಲೆಳೆಯಲ್ಲಿ ತಪ್ಪಿಹೋಗುತ್ತದೆ.

ತುಲಾ: ಅಧಿಕಾರಿಗಳಿಂದ ಹೊಗಳಿಕೆ ಪಡೆಯಲು ಪರಿಸ್ಥಿತಿ ಅವಲೋಕಿಸಿ ಮುಂದಿನ ಹೆಜ್ಜೆ ಇಡಿ. ಇಂದಿನ ನಿಮ್ಮ ನಡೆಯಲ್ಲಿ ಮೂಲ ಉದ್ದೇಶ ಬಿಡದೇ ಇರುವುದು ಕಷ್ಟ. ಹೊಟ್ಟೆಗೆ ಸಂಬಂಧಿಸಿದ ಅನಾರೋಗ್ಯ ನಿರ್ಲಕ್ಷಿಸಬೇಡಿ.

ವೃಶ್ಚಿಕ: ಮನೆ ಸಮಸ್ಯೆ ತನ್ನಂತಾನೇ ಬಗೆಹರಿಯುವುದು ಎಂದುಕೊಂಡರೆ ಒಂದಕ್ಕೆ ಎರಡಾಗುತ್ತದೆ. ಅದರ ಬಗ್ಗೆ ಕಾರ್ಯ ಪ್ರವೃತ್ತರಾಗಿ ಪರಿಹರಿಸಿ. ಸರ್ಕಾರಿ ಗುತ್ತಿಗೆ ಪಡೆದು ಕೊಳ್ಳಲು ನಾನಾ ಉಪಾಯಗಳು ಬೇಕಾಗುತ್ತವೆ.

ಧನು: ಹೊಸ ಉದ್ಯೋಗ ಹುಡುಕುವ ನಿಮ್ಮ ಆಲೋಚನೆ ಇಂದು ಸರಿಯಲ್ಲ. ವೃತ್ತಿಗೆ ಸಂಬಂಧ ಪಟ್ಟ ವಿಷಯಗಳಲ್ಲಿ ತೀರ್ಮಾನ ತೆಗೆದುಕೊಳ್ಳುವ ಮುನ್ನ ಚರ್ಚೆ ನಡೆಸುವುದು ಉಚಿತವೆನಿಸಲಿದೆ. ಅಡಿಗೆ ಎಣ್ಣೆ ವ್ಯಾಪಾರಿಗಳಿಗೆ ಲಾಭ.

ಮಕರ : ಕ್ರಿಯಾಶೀಲ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳಿದೆ. ಜೀವನದ ಪ್ರಯಾಣದಲ್ಲಿ ವಿಘ್ನಗಳು ಬಂದರೂ ಧೈರ್ಯದಿಂದ ಮುನ್ನಡೆದರೆ ಯಶಸ್ಸು ಸಾಧಿಸುತ್ತೀರಿ. ಕಾರಣವಿಲ್ಲದೆ ಮಾಡಿದ ಕೋಪವೂ ನಷ್ಟ ತರಲಿದೆ.

ಕುಂಭ: ಅನಿರೀಕ್ಷಿತವಾಗಿ ನಡೆದ ಕೆಟ್ಟ ಘಟನೆಗೆ ಹೆಚ್ಚು ಪ್ರಾಶಸ್ತ್ಯ ಕೊಡುವ, ಭಯ ಪಡುವ ಅಗತ್ಯವಿಲ್ಲ. ವೃತ್ತಿ ತರಬೇತಿ ಪಡೆದವರಿಗೆ ವಿಶೇಷವಾಗಿ ನರ್ಸಿಂಗ್ ಟ್ರೈನಿಂಗ್ ಮುಗಿಸಿದವರಿಗೆ ಉದ್ಯೋಗ ದೊರಕಿದ್ದಕ್ಕೆ ಸಂತೋಷವಾಗಲಿದೆ.

ಮೀನ: ನಿಶ್ಚಿತವಾದ ಗುರಿ ತಲುಪುವ ವಿಚಾರದಲ್ಲಿ ಅಡೆತಡೆ, ವಿಘ್ನ ಎದುರಾಗುತ್ತದೆ. ಷೇರು ವ್ಯಾಪಾರ, ವ್ಯವಹಾರದಲ್ಲಿ ಲಾಭವಾಗಲಿದೆ. ಅನಿವಾರ್ಯವಾಗಿ ಕೂಡಿಟ್ಟ ಹಣ ವಿನಿಯೋಗ ಮಾಡಬೇಕಾದ ಸ್ಥಿತಿ ಬರಲಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,330
ಇಂದಿನ ಅಂತ್ಯ:	25,423
ದಿನದ ಗರಿಷ್ಠ:	25,448
	93

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹580
	12 ಕ್ಕೆ	₹80
ಮೈಸೂರು:	100 ಕ್ಕೆ	₹585

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹378-660
ದ್ವಿತಳಿ (ಬಿ.ವಿ)	₹452-803

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹183
ಆರ್‌ಎಸ್‌ಎಸ್-5	₹178
ಗುಡ್ ಲಾಟ್	₹163

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1000-1500
ಮಧ್ಯಮ	₹600-1000
ಸಣ್ಣ	₹200-600

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1340 (1340)
ಸೋಯಾ (ರಿಫೈನ್ಡ್)	₹1295 (1295)
ಸೂರ್ಯಕಾಂತಿ (ರಿಫೈನ್ಡ್)	₹1425 (1425)
ಪಾಮೋಲಿನ್	₹1295 (1295)

ಅಡಿಕೆ ಧಾರಣೆ

ಪುತ್ತೂರು	
ಕೋಕ	32500-49000
ಹೊಸತು	32500-53000
ಕುಮಟಾ	
ಚಾಲಿ	42798-42998
ಚಿಪ್ಪು	20100-33369
ಕೋಕ	9400-27698
ಹೊಸಚಾಲಿ	35899-43739
ಸಾಗರ	
ಬಿಳಿಗೋಟು	18122-32599
ಚಾಲಿ	29199-40170
ಕೋಕ	10100-29599
ಕೆಂಪುಗೋಟು	18989-37369
ರಾಶಿ	33621-60449
ಸಿಪ್ಪೆಗೋಟು	10022-22100
ಶಿವಮೊಗ್ಗ	
ಬೆಟ್ಟೆ	55299-66899
ಗೊರಬಲು	19010-38069
ಹೊಸತು	53899-55199
ರಾಶಿ	46009-60899
ಸರಕು	50069-92696
ಸಿದ್ದಾಪುರ	
ಬಿಳಿಗೋಟು	25699-33000
ಚಾಲಿ	34419-43099
ಕೋಕ	20319-26089
ಕೆಂಪುಗೋಟು	26260-26260
ರಾಶಿ	42899-49399
ತಟ್ಟಿಬೆಟ್ಟೆ	33099-41499
ಶಿರಸಿ	
ಬೆಟ್ಟೆ	36000-41000
ಬಿಳಿಗೋಟು	32859-37599
ಚಾಲಿ	39218-44499
ಕೆಂಪುಗೋಟು	26018-30899
ರಾಶಿ	47699-50598

ಸೆನ್ಸೆಕ್ಸ್ 320 ಅಂಶ ಹೆಚ್ಚಳ

ಮುಂಬೈ (ಪಿಟಿಐ): ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತ ಮಾಡಿರುವುದರಿಂದ, ಮುಂದಿನ ದಿನಗಳಲ್ಲಿ ಇನ್ನೂ ಎರಡು ಬಾರಿ ದರವನ್ನು ತಗ್ಗಿಸುವ ಸೂಚನೆ ನೀಡಿರುವುದರಿಂದ ದೇಶದ ಷೇರುಪೇಟೆಗಳಲ್ಲಿ ಗುರುವಾರ ತೇಜಿ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 320 ಅಂಶ ಹೆಚ್ಚಳವಾಗಿ, 83,013ಕ್ಕೆ ವಹಿವಾಟು ಕೊನೆಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 93 ಅಂಶ ಏರಿಕೆಯಾಗಿ, 25,423ಕ್ಕೆ ಅಂತ್ಯಗೊಂಡಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.56ರಷ್ಟು ಇಳಿಕೆಯಾಗಿದೆ. ಪ್ರತೀ ಬ್ಯಾರೆಲ್ ದರವು 67.57 ಡಾಲರ್ ಆಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬುಧವಾರದ ವಹಿವಾಟಿನಲ್ಲಿ ₹1,124 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

'ಅಮೆರಿಕದ ಫೆಡರಲ್ ರಿಸರ್ವ್ ಶೇ 0.25ರಷ್ಟು ಬಡ್ಡಿ ದರ ಕಡಿಮೆ ಮಾಡಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಇಳಿಕೆ ಮಾಡುವುದಾಗಿ ಸೂಚನೆ ನೀಡಿದೆ. ಇದು ಜಾಗತಿಕವಾಗಿ ಷೇರುಪೇಟೆ ಸೂಚ್ಯಂಕಗಳ ಏರಿಕೆಗೆ ಕಾರಣವಾಗಿದೆ' ಎಂದು ಜಿಯೊಜಿತ್ ಇನ್ವೆಸ್ಟ್‌ಮೆಂಟ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

18-09-2025	
ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	9800-9900
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1340 (1350)
ಒಂದು ವಾರದ ಡೆಲಿವರಿ	1335 (1345)
ಪಾಮ್ ವಾರದ ಡೆಲಿವರಿ	1283 (1293)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1350)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,09,200 (1,09,700)
ಬೆಳ್ಳಿ ಕೆ.ಜಿಗೆ	1,26,900 (1,27,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ತಿಪಟೂರು	₹26000-28100
ತುಮಕೂರು	₹24100-26200

ಬೆಂಗಳೂರಿನಿಂದ ಬ್ಯಾಂಕಾಕ್‌ಗೆ ನೇರ ವಿಮಾನ

ಬೆಂಗಳೂರು (ಪಿಟಿಐ): ವಿಮಾನಯಾನ ಸಂಸ್ಥೆ ಏರ್ ಇಂಡಿಯಾ ಎಕ್ಸ್‌ಪ್ರೆಸ್ ಬೆಂಗಳೂರಿನಿಂದ ಬ್ಯಾಂಕಾಕ್‌ಗೆ ನೇರ ವಿಮಾನ ಸೇವೆಯನ್ನು ಗುರುವಾರದಿಂದ ಆರಂಭಿಸಿದೆ. ಹೊಸ ಸೇವೆಯು ಪ್ರತಿದಿನವೂ ಇರಲಿದೆ.

ವಿಶೇಷ ಪರಿಚಯಾತ್ಮಕ ಬೆಲೆ ದ್ವಿಮುಖ ಸಂಚಾರಕ್ಕೆ ₹16,800 ಇದೆ. ಬೆಂಗಳೂರಿನಿಂದ ಬ್ಯಾಂಕಾಕ್‌ಗೆ ₹9 ಸಾವಿರ ಮತ್ತು ಬ್ಯಾಂಕಾಕ್‌ನಿಂದ ಬೆಂಗಳೂರಿಗೆ ₹8,850 ಇದೆ. ಪ್ರಯಾಣಿಕರು ಕಂಪನಿಯ ವೆಬ್‌ಸೈಟ್, ಮೊಬೈಲ್ ಆ್ಯಪ್ ಮೂಲಕ ಬುಕಿಂಗ್ ಮಾಡಿಕೊಳ್ಳಬಹುದಾಗಿದೆ.

ಬೆಂಗಳೂರಿನಿಂದ ಪ್ರತಿನಿತ್ಯ ಬೆಳಿಗ್ಗೆ 11ಕ್ಕೆ ಹೊರಟು, ಬ್ಯಾಂಕಾಕ್‌ಗೆ ಸಂಜೆ 4.45ಕ್ಕೆ ತಲುಪಲಿದೆ. ಬ್ಯಾಂಕಾಕ್‌ನಿಂದ ಸಂಜೆ 5.45ಕ್ಕೆ ಹೊರಟು ಬೆಂಗಳೂರಿಗೆ 8.30ಕ್ಕೆ ತಲುಪಲಿದೆ ಎಂದು ತಿಳಿಸಿದೆ.

ಒಂದೇ ಹಂತದ ತೆರಿಗೆ ವ್ಯವಸ್ಥೆ?

'ಹೊಸ ವ್ಯವಸ್ಥೆಗೆ ದೇಶ ಸಜ್ಜಾಗಿಲ್ಲ, ಆದರೆ ಮುಂದೊಂದು ದಿನ ಆಗಬಹುದು'

ಜಿಎಸ್‌ಟಿ ಸುಧಾರಣಾ ಕ್ರಮಗಳು ಬಡವರು ಮತ್ತು ಮಧ್ಯಮ ವರ್ಗದವರಿಗೆ ವ್ಯವಸ್ಥೆಯನ್ನು ಸರಳ ಹಾಗೂ ನ್ಯಾಯಸಮ್ಮತ ಆಗಿಸುವುದರತ್ತ ಗಮನ ನೀಡಿವೆ

ನಿರ್ಮಲಾ ಸೀತಾರಾಮನ್, ಕೇಂದ್ರ ಹಣಕಾಸು ಸಚಿವೆ

ಕೋಲ್ಕತ್ತ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅಡಿಯಲ್ಲಿ ಒಂದೇ ಹಂತದ ತೆರಿಗೆ ವ್ಯವಸ್ಥೆಯನ್ನು ಜಾರಿಗೆ ತರಲು ದೇಶವು 'ಇನ್ನೂ ಸಜ್ಜಾಗಿಲ್ಲ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಆದರೆ ಜಿಎಸ್‌ಟಿ ಅಡಿಯಲ್ಲಿ ಒಂದೇ ಹಂತದ ತೆರಿಗೆ ವ್ಯವಸ್ಥೆಯನ್ನು ಭವಿಷ್ಯದಲ್ಲಿ ಜಾರಿಗೆ ತರುವ ಸಾಧ್ಯತೆ ಇದೆ ಎಂದು ಕೂಡ ಅವರು ಹೇಳಿದ್ದಾರೆ.

ಕೋಲ್ಕತ್ತದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, 'ಈ ಹಿಂದೆ ಜಿಎಸ್‌ಟಿ ಅಡಿಯಲ್ಲಿ ನಾಲ್ಕು ತೆರಿಗೆ ಹಂತಗಳನ್ನು ಚರ್ಚಿಸದೆಯೇ ನಿಗದಿ ಮಾಡಿರಲಿಲ್ಲ. ಬೇರೆ ಬೇರೆ ರಾಜ್ಯಗಳಲ್ಲಿ ಇದ್ದ ಭಿನ್ನ ತೆರಿಗೆ ಪ್ರಮಾಣಗಳನ್ನು ಸನಿಹದ ಹಂತಕ್ಕೆ ಜೋಡಿಸಲು ವ್ಯಾಪಕ ಕೆಲಸ ಆಗಿತ್ತು' ಎಂದು ಹೇಳಿದ್ದಾರೆ.

'ಜಿಎಸ್‌ಟಿ ದರಗಳ ಪರಿಶೀಲನೆ ನಡೆಸಿದಾಗ, ನಾಲ್ಕು ಹಂತಗಳ ತೆರಿಗೆ ವ್ಯವಸ್ಥೆಯು ಜಿಎಸ್‌ಟಿ ಮಂಡಳಿಗೆ ಸದಸ್ಯರಿಗೆ ಬೇಕಾಗಿಲ್ಲ ಎಂಬುದು ಗೊತ್ತಾಯಿತು. ಆದರೆ, ಒಂದೇ ಹಂತದ ತೆರಿಗೆ ವ್ಯವಸ್ಥೆಗೆ ಸಾಗಲು ಸಿದ್ಧರಿದ್ದಾರೆಯೇ ಎಂಬ ಪ್ರಶ್ನೆಗೆ ಇನ್ನೂ ಇಲ್ಲ ಎನ್ನುವ ಉತ್ತರ ಬಂತು. ಭವಿಷ್ಯದಲ್ಲಿ ಬಹುಶಃ ಅದು ಸಾಧ್ಯವಾಗಬಹುದು' ಎಂದು ನಿರ್ಮಲಾ ತಿಳಿಸಿದ್ದಾರೆ.

ಜಿಎಸ್‌ಟಿ ವ್ಯವಸ್ಥೆಯಲ್ಲಿ ಈಗ ಆಗುತ್ತಿರುವ ಸುಧಾರಣೆಗಳನ್ನು ನಿರ್ಮಲಾ ಅವರು 'ಮುಂದಿನ ತಲೆಮಾರಿನ ಸುಧಾರಣಾ ಕ್ರಮಗಳು' ಎಂದು ಬಣ್ಣಿಸಿದ್ದಾರೆ.

ಜಿಎಸ್‌ಟಿ ವಿಚಾರವಾಗಿ ಏನಾದರೂ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಎಂಟು ತಿಂಗಳ ಹಿಂದೆ ಸೂಚಿಸಿದ್ದರು ಎಂದು ನಿರ್ಮಲಾ ನೆನಪು ಮಾಡಿಕೊಂಡಿದ್ದಾರೆ.

ಜಿಎಸ್‌ಟಿ ಅಡಿ ಇರುವ ನಾಲ್ಕು ಹಂತಗಳ ತೆರಿಗೆ ವ್ಯವಸ್ಥೆಯನ್ನು, ಎರಡು ಹಂತಗಳ ತೆರಿಗೆ ವ್ಯವಸ್ಥೆಯನ್ನಾಗಿ ಪರಿವರ್ತಿಸಲು ಈಚೆಗೆ ನಡೆದ ಜಿಎಸ್‌ಟಿ ಮಂಡಳಿ ಸಭೆಯು ತೀರ್ಮಾನಿಸಿದೆ. ಎರಡು ಹಂತಗಳ ತೆರಿಗೆ ವ್ಯವಸ್ಥೆಯು (ಶೇ 5 ಹಾಗೂ ಶೇ 18ರಷ್ಟು ತೆರಿಗೆ) ಸೆಪ್ಟೆಂಬರ್ 22ರಿಂದ ಜಾರಿಗೆ ಬರುತ್ತಿದೆ. ತಂಬಾಕು ಹಾಗೂ ಐಷಾರಾಮಿ ಉತ್ಪನ್ನಗಳಿಗೆ ಶೇ 40ರಷ್ಟು ತೆರಿಗೆ ನಿಗದಿ ಮಾಡಲಾಗಿದೆ.

ಮಾರುತಿ ಸುಜುಕಿ ವಾಹನ ಬೆಲೆ ಇಳಿಕೆ

ನವದೆಹಲಿ (ಪಿಟಿಐ): ವಾಹನ ತಯಾರಿಕಾ ಕಂಪನಿ ಮಾರುತಿ ಸುಜುಕಿ ಇಂಡಿಯಾ, ಜಿಎಸ್‌ಟಿ ಪರಿಷ್ಕರಣೆಯಿಂದಾಗಿ ತನ್ನ ವಾಹನಗಳ ಬೆಲೆ ಎಷ್ಟರಮಟ್ಟಿಗೆ ಇಳಿಕೆ ಆಗುತ್ತದೆ ಎನ್ನುವುದನ್ನು ಪ್ರಕಟಿಸಿದೆ.

ಜಿಎಸ್‌ಟಿ ಪರಿಷ್ಕರಣೆಯ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಲು ಕಂಪನಿ ಮುಂದಾಗಿದೆ. ವಾಹನಗಳ ಬೆಲೆ ₹46,400ರಿಂದ ₹1.29 ಲಕ್ಷದವರೆಗೆ ಇಳಿಕೆ ಆಗಲಿದೆ. ಪರಿಷ್ಕೃತ ದರವು ಸೆಪ್ಟೆಂಬರ್ 22ರಿಂದ ಜಾರಿಗೆ ಬರಲಿದೆ ಎಂದು ಕಂಪನಿ ಗುರುವಾರ ಷೇರುಪೇಟೆಗೆ ತಿಳಿಸಿದೆ.

ಕಂಪನಿಯ ಎಸ್-ಪ್ರೆಸ್ಸೊ ವಾಹನದ ಬೆಲೆ ₹1,29,600ವರೆಗೆ ಕಡಿಮೆ ಆಗಲಿದೆ. ಆಲ್ಟೋ ಕೆ10 ₹1,07,600, ಸೆಲೆರಿಯೊ ₹94,100, ವ್ಯಾಗನ್-ಆರ್ ₹79,600 ಮತ್ತು ಇಗ್ನಿಸ್ ದರ ₹71,300ವರೆಗೆ ತಗ್ಗಲಿದೆ.

ಪ್ರೀಮಿಯಂ ಹ್ಯಾಚ್‌ಬ್ಯಾಕ್ ಸ್ವಿಫ್ಟ್ ಬೆಲೆ ₹84,600, ಬಲೆನೊ ₹86,100, ಟೂರ್ ಎಸ್ ₹67,200, ಡಿಜೈರ್ ₹87,700, ಫ್ರಾಂಕ್ಸ್ ₹1,12,600, ಬ್ರೆಜಾ ₹1,12,700, ಗ್ರ್ಯಾಂಡ್ ವಿಟಾರಾ ₹1.07 ಲಕ್ಷ, ಜಿಮ್ನಿ ₹51,900, ಎರ್ಟಿಗಾ ₹46,400 ಮತ್ತು ಎಕ್ಸ್‌ಎಲ್6 ₹52 ಸಾವಿರದವರೆಗೆ ಕಡಿಮೆ ಆಗಲಿದೆ.

ಇನ್ವಿಕ್ಟೊ ₹61,700, ಇಕೊ ₹68 ಸಾವಿರದವರೆಗೆ ಮತ್ತು ಸೂಪರ್ ಕ್ಯಾರಿ ಎಲ್‌ಸಿವಿ ₹52,100ವರೆಗೆ ತಗ್ಗಲಿದೆ ಎಂದು ಕಂಪನಿ ತಿಳಿಸಿದೆ.

ಚಾರ್ಲ್ಸ್, ಸ್ಟಾರ್ಮರ್ ಭೇಟಿಯಾದ ಟ್ರಂಪ್

ಬ್ರಿಟನ್‌ನಲ್ಲಿ 205 ಬಿಲಿಯನ್ ಡಾಲರ್ ಹೂಡಿಕೆ ಘೋಷಿಸಿದ ಅಮೆರಿಕ

ಲಂಡನ್ (ರಾಯಿಟರ್ಸ್): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಗುರುವಾರ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಕಿಂಗ್ ಚಾರ್ಲ್ಸ್ -3 ಆಹ್ವಾನದ ಮೇರೆಗೆ ಟ್ರಂಪ್ ಬ್ರಿಟನ್‌ಗೆ ಭೇಟಿ ನೀಡಿದ್ದು, ಇದು ಬ್ರಿಟನ್‌ಗೆ ಅವರ ಎರಡನೆಯ ಭೇಟಿಯಾಗಿದೆ.

'ಉಕ್ರೇನ್ -ರಷ್ಯಾ ಯುದ್ಧ ಕೊನೆಗಾಣಿಸುವ ನಿಟ್ಟಿನಲ್ಲಿ ಟ್ರಂಪ್ ನಡೆಸಿರುವ ಪ್ರಯತ್ನವನ್ನು ಇತ್ತೀಚೆಗೆ ಸ್ಟಾರ್ಮರ್ ಶ್ಲಾಘಿಸಿದ್ದರು. ಈ ವಿಚಾರವೂ ಸೇರಿದಂತೆ, ಗಾಜಾ-ಪಟ್ಟಿಯಲ್ಲಿನ ಸಮಸ್ಯೆ, 'ನ್ಯಾಟೊ' ಮೈತ್ರಿಕೂಟದ ಭವಿಷ್ಯದ ಬಗ್ಗೆ ಸ್ಟಾರ್ಮರ್-ಟ್ರಂಪ್ ಚರ್ಚೆ ನಡೆಸ ಬಹುದು ಎಂದು ನಿರೀಕ್ಷಿಸಲಾಗಿತ್ತು. ಆದರೆ, ಉಭಯ ಮುಖಂಡರು ಈ ವಿಚಾರವಾಗಿ ಅಧಿಕೃತ ಹೇಳಿಕೆ ನೀಡಿಲ್ಲ.

ಅಮೆರಿಕ - ಬ್ರಿಟನ್ ಕಂಪನಿಗಳನ್ನು ಒಳಗೊಂಡ ದೊಡ್ಡ ಮಟ್ಟದ ಉದ್ಯಮ ಪಾಲುದಾರಿಕೆ, ವಿದೇಶಾಂಗ ವ್ಯವಹಾರ, ಹೂಡಿಕೆ ಬಗ್ಗೆ ಉಭಯ ನಾಯಕರು ಮಾತುಕತೆ ನಡೆಸಿದರು ಎಂದು ಮೂಲಗಳು ತಿಳಿಸಿವೆ.

ತಂತ್ರಜ್ಞಾನ, ಇಂಧನ, ಜೀವ ವಿಜ್ಞಾನ ಕ್ಷೇತ್ರ ಸೇರಿ ಬ್ರಿಟನ್‌ನಲ್ಲಿ ಮುಂದಿನ ಒಂದು ದಶಕದಲ್ಲಿ 205 ಬಿಲಿಯನ್ ಡಾಲರ್ (ಅಂದಾಜು ₹18 ಲಕ್ಷ ಕೋಟಿ) ಹೂಡಿಕೆ ಮಾಡುವುದಾಗಿ ಅಮೆರಿಕ ಘೋಷಿಸಿದೆ.

ಗುರುವಾರ ಬೆಳಿಗ್ಗೆ ವಿಂಡ್ಸರ್ ಕ್ಯಾಸಲ್‌ನಿಂದ ಹೊರಟ ಟ್ರಂಪ್, ಬ್ರಿಟನ್ ಪ್ರಧಾನಿ ನಿವಾಸದಲ್ಲಿ ಕಿಂಗ್ ಚಾರ್ಲ್ಸ್ -3 ಅವರನ್ನು ಭೇಟಿಯಾದರು. ಬ್ರಿಟಿಷ್ ರಾಜಮನೆತನದ ವತಿಯಿಂದ ಟ್ರಂಪ್‌ಗೆ ಅದ್ಧೂರಿ ಸ್ವಾಗತ ಕೋರಲಾಯಿತು. 'ಕಿಂಗ್ ಚಾರ್ಲ್ಸ್-3' ಅವರು 'ಒಬ್ಬ ಶ್ರೇಷ್ಠ ವ್ಯಕ್ತಿ, ಮಹಾನ್ ರಾಜ' ಎಂದು ಬಣ್ಣಿಸಿದ ಟ್ರಂಪ್, 'ಬ್ರಿಟನ್‌ನಲ್ಲಿ ಲಭಿಸಿರುವುದು ನನ್ನ ಜೀವನದ ಅತ್ಯುನ್ನತ ಗೌರವಗಳಲ್ಲಿ ಒಂದು ಎಂದು' ಧನ್ಯವಾದ ಸಲ್ಲಿಸಿದರು.

ಅಮೆರಿಕದ ಪ್ರಥಮ ಮಹಿಳೆ, ಟ್ರಂಪ್ ಅವರ ಪತ್ನಿ ಮೆಲಾನಿಯಾ ಟ್ರಂಪ್ 'ವಿಂಡ್ಸರ್ ಕ್ಯಾಸಲ್'ನಲ್ಲೇ ಉಳಿದುಕೊಂಡು ರಾಣಿ ಕಮಿಲಾ, ಕ್ಯಾಥರೀನ್ ಅವರೊಂದಿಗೆ ಸಮಯ ಕಳೆದರು.

ಡೊನಾಲ್ಡ್ ಟ್ರಂಪ್ (ಬಲ) ಅವರು ಕಿಂಗ್ ಚಾರ್ಲ್ಸ್ -3 ಅವರೊಂದಿಗೆ ಮಾತುಕತೆ ನಡೆಸಿದರು —ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- ಬ್ರಿಟಿಷ್ ರಾಜಮನೆತನದಿಂದ ಟ್ರಂಪ್‌ಗೆ ಅದ್ದೂರಿ ಸ್ವಾಗತ
- ರಾಣಿ ಕಮಿಲಾ ಅವರೊಂದಿಗೆ ಸಮಯ ಕಳೆದ ಮೆಲಾನಿಯಾ

ಪ್ರಮುಖ ಒಪ್ಪಂದಗಳು

- ಅಮೆರಿಕದ ಮೈಕ್ರೊಸಾಫ್ಟ್, ಓಪನ್‌ಎಐ, ಬ್ಲ್ಯಾಕ್‌ಸ್ಟೋನ್ ಕಂಪನಿಗಳು ಬ್ರಿಟನ್‌ನಲ್ಲಿ ಎ.ಐ, ಕ್ವಾಂಟಂ ಕಂಪ್ಯೂಟಿಂಗ್, ಅಣು ಇಂಧನ ಕ್ಷೇತ್ರದಲ್ಲಿ 42 ಬಿಲಿಯನ್ ಡಾಲರ್ (₹3.70 ಲಕ್ಷ ಕೋಟಿ) ಹೂಡಿಕೆ ಮಾಡಲಿವೆ
- ಬ್ರಿಟನ್‌ನ ಪ್ರಮುಖ ಔಷಧ ತಯಾರಿಕಾ ಕಂಪನಿ 'ಜಿಎಸ್‌ಕೆ' ಅಮೆರಿಕದಲ್ಲಿ ಹೂಡಿಕೆ ಮಾಡುವುದಾಗಿ ಹೇಳಿದೆ. ಆದರೆ ಹೂಡಿಕೆ ಮೊತ್ತವನ್ನು ಬಹಿರಂಗಪಡಿಸಿಲ್ಲ
- ಬ್ರಿಟನ್‌ನಲ್ಲಿ ಅಣುಶಕ್ತಿ ಸ್ಥಾವರಗಳನ್ನು ನಿರ್ಮಿಸಲು, ಇದಕ್ಕೆ ತ್ವರಿತ ಗತಿಯ ಅನುಮೋದನೆ ನೀಡಲು ಉಭಯ ದೇಶಗಳ ನಡುವೆ ಒಪ್ಪಂದ ಏರ್ಪಟ್ಟಿದೆ

ದಸರಾಗೆ ಬಾನು: ಇಂದು 'ಸುಪ್ರೀಂ' ವಿಚಾರಣೆ

ಒಂದನೇ ಪುಟದಿಂದ...

'ಇದೇ 22ರಂದು ದಸರಾ ಆರಂಭವಾಗಲಿದ್ದು, ತುರ್ತಾಗಿ ಅರ್ಜಿ ವಿಚಾರಣೆ ನಡೆಸಬೇಕು' ಎಂದು ಅವರು ಕೋರಿದರು. ಪ್ರಕರಣದ ವಿಚಾರಣೆಯನ್ನು ಶುಕ್ರವಾರಕ್ಕೆ ಪಟ್ಟಿ ಮಾಡಲಾಗುವುದು ಎಂದು ಸಿಜೆಐ ತಿಳಿಸಿದರು. ಈ ಪ್ರಕರಣವು ನ್ಯಾಯಾಲಯ-3ರಲ್ಲಿ 55ನೇ ವಿಷಯವಾಗಿ ಶುಕ್ರವಾರ ವಿಚಾರಣೆಗೆ ಬರಲಿದೆ. ರಾಜ್ಯ ಸರ್ಕಾರದ ಪರವಾಗಿ ಹಿರಿಯ ವಕೀಲ ಕಪಿಲ್ ಸಿಬಲ್, ಅಡ್ವೊಕೇಟ್ ಜನರಲ್ ಶಶಿಕಿರಣ್ ಶೆಟ್ಟಿ ಮತ್ತು ವಕೀಲ ಡಿ.ಎಲ್.ಚಿದಾನಂದ ವಾದ ಮಂಡಿಸಲಿದ್ದಾರೆ.

'ಚಾಮುಂಡೇಶ್ವರಿ ದೇವಸ್ಥಾನದಲ್ಲಿ ದೀಪ ಬೆಳಗಿಸುವುದು, ಪೂಜೆ ಮಾಡುವುದು ಮತ್ತು ಪುಷ್ಪಾರ್ಚನೆಯಂತಹ ಆಚರಣೆಗಳಲ್ಲಿ ಹಿಂದೂಯೇತರ ವ್ಯಕ್ತಿ ಭಾಗಿಯಾದರೆ ಸಂವಿಧಾನದ 25 ಮತ್ತು 26ನೇ ವಿಧಿಗಳ ಉಲ್ಲಂಘನೆಯಾಗುತ್ತದೆ. ಇದರಿಂದ ಹಿಂದೂ ಭಾವನೆಗಳಿಗೆ ನೋವುಂಟು ಆಗಲಿದೆ ಮತ್ತು ಕಾರ್ಯಕ್ರಮದ ಧಾರ್ಮಿಕ ಪಾವಿತ್ರ್ಯಕ್ಕೆ ಧಕ್ಕೆ ಉಂಟಾಗಲಿದೆ' ಎಂದು ಅರ್ಜಿಯಲ್ಲಿ ವಾದಿಸಲಾಗಿದೆ.

ಈ ಸಂಬಂಧ ಮಾಜಿ ಸಂಸದ ಪ್ರತಾಪ್ ಸಿಂಹ ಮತ್ತಿತರರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ಹೈಕೋರ್ಟ್ ಇದೇ 15ರಂದು ವಜಾಗೊಳಿಸಿತ್ತು.